"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

6ನೇ ಮಾರ್ಚ್ 2020
ಶುಕ್ರವಾರ

## ವಿಷಯಾನುಕ್ರಮಣಿಕೆ

**1. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ.**

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಅರಬೈಲು ಹೆಬ್ಬಾರ ಶಿವರಾಂ(ಕಾರ್ಮಿಕ ಮತ್ತು ಸಕ್ಕರೆ ಸಚಿವರು)
- ಶ್ರೀ ಗೋವಿಂದ ಎಂ.ಕಾರಜೋಳ(ಉಪಮುಖ್ಯಮಂತ್ರಿಗಳು, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ)
- ಡಾ॥ ತೇಜಸ್ವಿನಿ ಗೌಡ
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಸಿ.ಟಿ.ರವಿ(ಪ್ರವಾಸೋದ್ಯಮ ಮತ್ತು ಕನ್ನಡ ಸಂಸ್ಕೃತಿ, ಯುವಜನ ಸಬಲೀಕರಣ ಹಾಗೂ ಕ್ರೀಡಾ ಸಚಿವರು)
- ಶ್ರೀ ಎನ್.ರವಿಕುಮಾರ್
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಹೆಚ್.ಎಂ.ರೇವಣ್ಣ
- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು)
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ)
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಟಿ.ಎ.ಶರವಣ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)
- ಶ್ರೀ ಅ.ದೇವೇಗೌಡ

**2. ಪ್ರಶ್ನೋತ್ತರಗಳು.**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**373 – ಹಂಪಿ ಉತ್ಸವಕ್ಕೆ ಅನುದಾನ ಬಿಡುಗಡೆ ಕುರಿತು**

- ಶ್ರೀ ಅಲ್ಲಂ ವೀರಭದ್ರಪ್ಪ
- ಶ್ರೀ ಸಿ.ಟಿ.ರವಿ(ಪ್ರವಾಸೋದ್ಯಮ ಮತ್ತು ಕನ್ನಡ ಸಂಸ್ಕೃತಿ, ಯುವಜನ ಸಬಲೀಕರಣ ಹಾಗೂ ಕ್ರೀಡಾ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**454 – ಬಿ.ಎಂ.ಟಿ.ಸಿ. ಬಸ್ ಅಪಘಾತಗಳಿಗೆ ಹಳೆ ಬಸ್ಸುಗಳ ಕಾರಣದ ಕುರಿತು**

– ಡಾ॥ ವೈ.ಎ.ನಾರಾಯಣಸ್ವಾಮಿ

– ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ)

**398- ಸಾರಿಗೆ ಸಂಸ್ಥೆಗಳ ಬಸ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಬಸ್‌ಪಾಸ್ ವಿತರಣೆ ಕುರಿತು**

– ಶ್ರೀ ಮರಿತಿಬ್ಬೇಗೌಡ

–ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ)

**462 – ಗ್ರಾಮೀಣ ಪ್ರದೇಶಗಳಲ್ಲಿ ಅಂತರ್ಜಲ ಮತ್ತು ಕುಡಿಯುವ ನೀರಿನ ಬಗ್ಗೆ**

– ಶ್ರೀ ಪಿ.ಆರ್.ರಮೇಶ್

– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಪರವಾಗಿ)

**438 + 362 – ರಾಜ್ಯದ ಅಂಗನವಾಡಿ ಕೇಂದ್ರಗಳ ಬಗ್ಗೆ**

– ಶ್ರೀ ಟಿ.ಎ.ಶರವಣ

– ಶ್ರೀಮತಿ ಜಯಮ್ಮ

– ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು)

**387 – ಕೊಡಗು ಜಿಲ್ಲೆಯಲ್ಲಿ ಕ್ರಿಕೇಟ್ ಸ್ಟೇಡಿಯಂ ಕಾಮಗಾರಿ ನಿರ್ಮಾಣ**

– ಶ್ರೀಮತಿ ಎಸ್.ವೀಣಾ ಅಚ್ಚಯ್ಯ

– ಶ್ರೀ ಸಿ.ಟಿ.ರವಿ(ಪ್ರವಾಸೋದ್ಯಮ ಮತ್ತು ಕನ್ನಡ ಸಂಸ್ಕೃತಿ, ಯುವಜನ ಸಬಲೀಕರಣ ಹಾಗೂ ಕ್ರೀಡಾ ಸಚಿವರು)

**406 – ಕೆಟ್ಟು ನಿಂತ ಶುದ್ಧ ಕುಡಿಯುವ ನೀರಿನ ಘಟಕಗಳು**

– ಶ್ರೀ ರಘುನಾಥರಾವ್ ಮಲ್ಕಾಪೂರೆ

– ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

**383 – ಸ್ವಚ್ಛ ಭಾರತ ಯೋಜನೆಯಡಿ ಕಾರ್ಯಕ್ರಮಗಳು**

– ಶ್ರೀ ಕೆ.ಎ.ತಿಪ್ಪೇಸ್ವಾಮಿ

– ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

**460 – B.R.C./C.R.C. ಸೇವೆಯನ್ನು ಮುಂದುವರೆಸುವ ಬಗ್ಗೆ.**

– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ ಪರವಾಗಿ)

– ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

**338 – ಗ್ರಾಮ ಪಂಚಾಯಿತಿಗಳ ಕ್ರಿಯಾ ಯೋಜನೆ ವಿಳಂಬವಾಗುತ್ತಿರುವ ಬಗ್ಗೆ**

– ಶ್ರೀ ಆರ್.ಪ್ರಸನ್ನಕುಮಾರ್

– ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**380 – ಪ್ರವಾಸೋದ್ಯಮ ಇಲಾಖೆಯಲ್ಲಿನ ಕಳೆದ 3 ವರ್ಷಗಳ ಅನುದಾನ ಕುರಿತು**

– ಶ್ರೀ ಹೆಚ್.ಎಂ.ರಮೇಶ್‌ಗೌಡ

– ಶ್ರೀ ಸಿ.ಟಿ.ರವಿ(ಪ್ರವಾಸೋದ್ಯಮ ಮತ್ತು ಕನ್ನಡ ಸಂಸ್ಕೃತಿ, ಯುವಜನ ಸಬಲೀಕರಣ ಹಾಗೂ ಕ್ರೀಡಾ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**3. ದಿನಾಂಕ 04-03-2020ರಂದು ಶೂನ್ಯವೇಳೆಯಲ್ಲಿ ಹಾಗೂ 20-2-2020ರಂದು ನಿಯಮ 330ಎ ಅಡಿಯಲ್ಲಿ ಪ್ರಸ್ತಾಪಿಸಲಾದ ವಿಷಯಗಳಿಗೆ ಸಚಿವರಿಂದ ಲಿಖಿತ ಹೇಳಿಕೆಗಳ ಮಂಡನೆ.**

**ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇತ್ತೀಚೆಗೆ ಶೇಕಡ 12ರಷ್ಟು ಪ್ರಯಾಣದರ ಏರಿಕೆ ಮಾಡಿರುವ ಕುರಿತು.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ರಿಕ್ಷಾ ಚಾಲಕರು ತಮ್ಮ ರಿಕ್ಷಾಗಳನ್ನು ಮಾರಾಟ ಮಾಡಲು ಅಥವಾ ವರ್ಗಾವಣೆ ಮಾಡಲು ತೊಂದರೆಯಾಗುತ್ತಿರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ಉಚಿತ ಲ್ಯಾಪ್‌ಟ್ಯಾಪ್‌ನಲ್ಲಿ ಹಲವು ನ್ಯೂನತೆಗಳಿರುವ ಕುರಿತು.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಈ) ಕರ್ನಾಟಕ ರಸ್ತೆ ಸಾರಿಗೆ ನಿಗಮದ ನೌಕರರನ್ನು ರಾಜ್ಯ ಸರ್ಕಾರಿ ನೌಕರರನ್ನಾಗಿ ಪರಿಗಣಿಸಲು ಕೋರಿರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಉ) ಮಲೆನಾಡು ಭಾಗದಲ್ಲಿ ಸಹಕಾರಿ ಸಂಚಾರ ಸಾರಿಗೆ ಸ್ಥಗಿತಗೊಂಡಿರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**4. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.**

**ಅ) ಕಾರವಾರ ಜಿಲ್ಲೆಯ ಜೋಯಿಡಾ ತಾಲ್ಲೂಕಿನಲ್ಲಿ ಸಿವಿಲ್ ನ್ಯಾಯಾಲಯ ಸ್ಥಾಪಿಸುವ ಬಗ್ಗೆ.**

– ಶ್ರೀ ಶ್ರೀಕಾಂತ್ ಎಲ್.ಘೋಟ್ನೇಕರ್

– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)

**ಆ) ಪತ್ರಿಕಾ ಸಂಸ್ಥೆಯಲ್ಲಿನ ಹಾಲಿ ಮತ್ತು ನಿವೃತ್ತ ಪತ್ರಕರ್ತರಿಗೆ ರಾಜ್ಯ ಸರ್ಕಾರ ವಿಶ್ರಾಂತಿ ವೇತನ, ಇತ್ಯಾದಿ ಸೌಲಭ್ಯ ನೀಡಿದಂತೆ ಇತರೆ ವಿಭಾಗದ ಉದ್ಯೋಗಿಗಳಿಗೆ ಸರ್ಕಾರದಿಂದ ಸಹಾಯ ಸವಲತ್ತುಗಳನ್ನು ಮಂಜೂರು ಮಾಡುವ ಕುರಿತು.**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**5. ಸದಸ್ಯರುಗಳ ಖಾಸಗಿ ಕಾರ್ಯಕಲಾಪಗಳು.**

**ಖಾಸಗಿ ವಿಧೇಯಕ**

**ಕರ್ನಾಟಕ ಅಸಲು ಹಣಕ್ಕಿಂತ ಹೆಚ್ಚು ಬಡ್ಡಿ ವಿಧಿಸುವಿಕೆ ನಿಷೇಧ ವಿಧೇಯಕ –2018.**

– ಶ್ರೀ ಶರಣಪ್ಪ ಮಟ್ಟೂರ
– ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)
– ಶ್ರೀ ಮರಿತಿಬ್ಬೇಗೌಡ

<><><>

(172) 6.3.2020 10.40 ಪಿಕೆ:ಕೆಎಸ್

**<u>ಕರ್ನಾಟಕ ವಿಧಾನ ಪರಿಷತ್ತು</u>**

**ಶುಕ್ರವಾರ, 6ನೇ ಮಾರ್ಚ್ 2020**

**ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**
**ಬೆಳಗ್ಗೆ 10 ಗಂಟೆ 47 ನಿಮಿಷಕ್ಕೆ**
**ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ)ಯವರು**
**ಸಭಾಪೀಠದಲ್ಲಿ ಉಪಸ್ಥಿತರಿದ್ದರು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1. **ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ಸಂವಿಧಾನದ 176ನೇ ವಿಧಿಯ ಪ್ರಕಾರ ಎಲ್ಲಾ ರಾಜ್ಯಗಳ ರಾಜ್ಯಪಾಲರುಗಳು ಉಭಯ ಸದನಗಳನ್ನು ಉದ್ದೇಶಿಸಿ ಮಾತನಾಡುವುದು ಒಂದು ಸಂಪ್ರದಾಯ. ಕೇಂದ್ರದಲ್ಲಿ ರಾಷ್ಟ್ರಪತಿಗಳು ಮತ್ತು ರಾಜ್ಯಗಳಲ್ಲಿ ರಾಜ್ಯಪಾಲರುಗಳು ಮಾತನಾಡುತ್ತಾರೆ. ನಿನ್ನೆ ಬಜೆಟ್ ಮಂಡನೆ ಆದಮೇಲೆ ರಾಜ್ಯಪಾಲರ ಭಾಷಣದ ಮೇಲೆ ನಾವು ಮಾತನಾಡುವುದು ಎಷ್ಟರಮಟ್ಟಿಗೆ ಅರ್ಥಪೂರ್ಣ ಎನ್ನುವ ಸಮಸ್ಯೆ ನನ್ನನ್ನು ತೀವ್ರವಾಗಿ ಕಾಡುತ್ತಿದೆ. ಇಂಥದ್ದೇ ಸಂದರ್ಭ ಹಿಂದೆ ಒಮ್ಮೆ ಕೇಂದ್ರದಲ್ಲಿ ಬಂದಾಗ ಮಾನ್ಯ ಆರ್.ವಿ.ವೆಂಕಟರಾಮನ್‌ರವರು, ನಾನು ಪುಸ್ತಕವನ್ನು ಓದುವುದಿಲ್ಲ ಎಂದು ಹೇಳಿ ಪುಸ್ತಕವನ್ನು ಪಕ್ಕಕ್ಕಿಟ್ಟು ಭಾಷಣ ಮಾಡಿದ್ದರು. ಯಾವಾಗಲೂ ಜಂಟಿ ಅಧಿವೇಶನಕ್ಕೂ ಬಜೆಟ್ ಅಧಿವೇಶನಕ್ಕೂ ಅಂತರ ಇರಬೇಕು. ರಾಜ್ಯಪಾಲರ ಭಾಷಣದ ಮೇಲೆ ಸರ್ಕಾರದ ಆಶಯಗಳ ಬಗ್ಗೆ ನಾವು ಮಾತನಾಡಿ, ಸರ್ಕಾರ ಯಾವರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನುವ ಚರ್ಚೆ ಆದಮೇಲೆ, ಆ ಚರ್ಚೆಯ ಆಧಾರದ ಮೇಲೆ ಬಜೆಟ್‌ನ ನಿರ್ಧಾರ ಆಗಬೇಕು. ಈಗ ನಾವು ತವಡು ಕುಟ್ಟುವ ಕೆಲಸ ಮಾಡಬೇಕಾಗಿದೆ ಅಷ್ಟೆ. ನಾವು ಮಾತನಾಡುವುದರಿಂದ ಬಜೆಟ್‌ನ ಮೇಲೆ ಯಾವುದೇ ಪರಿಣಾಮ ಆಗುವುದಿಲ್ಲ; ಬಜೆಟ್ ಮಂಡನೆ ಆಗಿ ಹೋಗಿದೆ. ಬಜೆಟ್ ಮಂಡನೆಯ ಪೂರ್ವದಲ್ಲೇ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರವನ್ನು ಕೊಡಬೇಕಾಗಿತ್ತು. ಆ ರೀತಿ ಉತ್ತರ ಕೊಟ್ಟಿದ್ದರೆ ನಾವು ಕ್ಲ್ಯಾರಿಫಿಕೇಷನ್ ಕೇಳುತ್ತಿದ್ದೆವು. ಆದರೆ ಇವತ್ತು ಇನ್ನೂ ಉತ್ತರ ಆಗದೇ ಇರುವುದರಿಂದ; ಮಾನ್ಯ ಸಭಾಪತಿಗಳು ನನ್ನನ್ನು ಕರೆದಿರುವುದರಿಂದ ನಾನು ಒಂದಷ್ಟು ಮಾತನಾಡಲೇ ಬೇಕಿದೆ. ನೀವು ಕರೆದಿರುವ ಕಾರಣಕ್ಕಾಗಿ ಮಾತನಾಡಬೇಕಿದೆ.

ಸಭಾಪತಿಯವರು:- ಈಗೇನು ಮಾಡಬೇಕು ಹೇಳಿ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಮುಕ್ತಾಯ ಮಾಡಿ ಸರ್ಕಾರದ ವತಿಯಿಂದ ಉತ್ತರ ಕೊಡಿಸೋಣವೇ?

ಶ್ರೀ ಕೆ.ಟಿ.ಶ್ರೀಕಂಠೇಗೌಡ:- ಉತ್ತರ ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿ ಇರಬೇಕು ಅಲ್ಲವೇ?

ಸಭಾಪತಿಯವರು:- ಇದ್ದಾರೆ, ಬರುತ್ತಾರೆ. ಉತ್ತರ ರೆಡಿ ಇದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಇನ್ನೂ ಬಜೆಟ್ ಮೇಲೆ ಚರ್ಚೆಯಾಗಿ ನಮ್ಮ ವಿಚಾರಗಳನ್ನು ಹೇಳಿದ ನಂತರ ಮುಖ್ಯಮಂತ್ರಿಗಳು ಅದರ ಆಧಾರದ ಮೇಲೆ ಮಾರ್ಪಾಡು ಮಾಡುವಂತಹ ಅವಕಾಶಗಳಿರುತ್ತವೆ. ಹಾಗಾಗಿ ಈಗ ಅಂಥದ್ದೇನೂ ಆಗಿಲ್ಲ. ನಾವು ಮಾತನಾಡೋಣ.

ಶ್ರೀ ಕೆ.ಟಿ.ಶ್ರೀಕಂಠೇಗೌಡ:- ಆ ಸಮಾಧಾನದ ಮೇಲೆ ಮಾತನಾಡೋಣ.

ಶ್ರೀ ಎಸ್.ಆರ್.ಪಾಟೀಲ್:- ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ಗೆ ಸಂಬಂಧಪಟ್ಟಂತೆ ಉತ್ತರ ಕೊಡುವುದಕ್ಕೆ ಮುಂಚೆ, ನಾವು ಹೇಳಿದ ವಿಚಾರಗಳನ್ನು ಅಳವಡಿಸಿಕೊಳ್ಳುವ ಸಾಧ್ಯತೆ ಇದೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ಮಾನ್ಯ ಸಭಾಪತಿಗಳೇ, ಮೊದಲು ಆಕ್ಷೇಪ ಮಾಡುವುದು, ನಂತರ ತಮಗೆ ತಾವೇ ಸಮಾಧಾನ ಮಾಡಿಕೊಳ್ಳುವುದು, ಇದೇನೆಂದು ಗೊತ್ತಾಗುತ್ತಿಲ್ಲ. ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಾಗಿತ್ತು.

ಶ್ರೀ ಎಸ್.ಆರ್.ಪಾಟೀಲ್:- ಹಾಗಾದರೆ ಚರ್ಚೆ ಬೇಡ ಎಂದು ಹೇಳುತ್ತೀರಾ?

ಸಭಾಪತಿಯವರು:- ಮಾನ್ಯ ಶ್ರೀಕಂಠೇಗೌಡರೇ, ಈ ರೀತಿಯ ಪರಿಸ್ಥಿತಿ ಏಕಾಯಿತು ಎನುವುದು ನಿಮಗೆ ಗೊತ್ತಿಲ್ಲವೇ?

ಶ್ರೀ ಕೆ.ಟಿ.ಶ್ರೀಕಂಠೇಗೌಡ:- ನೀವು ಹೇಳುತ್ತಿರುವುದು ಅರ್ಥವಾಯಿತು.

(ಮುಂದು . . .)

(173)6-3-2020 10.50 ಡಿಎಸ್-ಜಿಆರ್

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು):-**

ಮಾನ್ಯ ಸಭಾಪತಿಯವರೇ, ಅರ್ಥವಾಯಿತು. ಆದರೆ, ಮುಂದಿನ ದಿನಗಳಲ್ಲಾದರೂ ಜಂಟಿ ಅಧಿವೇಶನಕ್ಕೂ ಬಜೆಟ್ ಅಧಿವೇಶನಕ್ಕೂ ಸ್ಪಷ್ಟವಾದ ಅಂತರವಿರಲಿ. ಇಲ್ಲದಿದ್ದರೆ ಅದು ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ. ಅದರ ಆಶಯವೇ ಹೊರಟುಹೋಗುತ್ತದೆ. ಹಾಗಾಗಿ ಆಳುವ ಸರ್ಕಾರ ಮುಂದಿನ ದಿನಮಾನಗಳಲ್ಲಿ ಜಂಟಿ ಅಧಿವೇಶನಕ್ಕೂ ಬಜೆಟ್ ಅಧಿವೇಶನಕ್ಕೂ ವ್ಯತ್ಯಾಸವನ್ನು ಇಟ್ಟುಕೊಳ್ಳುವುದು ಒಳ್ಳೆಯದು. ಘನವೆತ್ತ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಆಗುವಂತಹ ಎಲ್ಲಾ ಚರ್ಚೆಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾರಾಂಶವನ್ನು ಕೈಗೆತ್ತಿಕೊಂಡು ಬಜೆಟ್‌ನ್ನು ಸಿದ್ಧ ಮಾಡಿ ಮಂಡನೆ ಮಾಡತಕ್ಕಂಥದ್ದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

ಮಾನ್ಯ ಸಭಾಪತಿಯವರೇ, ನಿನ್ನೆ ಮಾನ್ಯ ಬೋಸ್‌ರಾಜ್‌ರವರು ಮಾತನಾಡುತ್ತಿದ್ದರು. ನಾನು 20 ಪುಟಗಳ ರಾಜ್ಯಪಾಲರ ಭಾಷಣವನ್ನು ಓದಿದ್ದೇನೆ. ಮಾನ್ಯ ರಾಜ್ಯಪಾಲರು "ಕ್ಷಿಪ್ರ ಕಾರ್ಯಾಚರಣೆಯನ್ನು ನಡೆಸಿ ಸಮಾರೋಪಾದಿಯಲ್ಲಿ ರಕ್ಷಣೆ ಹಾಗೂ ಪರಿಹಾರ ಕಾರ್ಯಕ್ರಮವನ್ನು ಕೈಗೊಂಡಿದೆ" ಎಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಸುಮಾರು 8 ದಿನಗಳ 'ವಿಜಯವಾಣಿ' ಪತ್ರಿಕೆಯ ವರದಿ, 'ಪ್ರಜಾವಾಣಿ' ಪತ್ರಿಕೆಯ ವರದಿ, 'ಕನ್ನಡ ಪ್ರಭ' ಪತ್ರಿಕೆಯ ವರದಿಗಳು ನನ್ನ ಕಡೆ ಇವೆ. ಈ ಪರಿಹಾರದಲ್ಲಿ ಎಷ್ಟೊಂದು ವ್ಯತ್ಯಾಸಗಳಾಗಿವೆ ಎಂದರೆ, 'ಕೋಟಿ ಕೋಟಿ ನೆರಪು ಅಧಿಕಾರಿಗಳಿಂದ ಗುಳುಂ, ಬೆಳೆ ಹಾನಿ ಪರಿಹಾರ ವಿತರಣೆಯಲ್ಲಿ ಅಕ್ರಮ, ಬರ–ಖನ್ನ, ಬಡಪಾಯಿ ಬಲಿಪಶು, ನೆರವಿಗೆ ಖನ್ನ–ತನಿಖೆ, ಏರ್‌ಟೆಲ್ ಖಾತೆಗೆ ರೈತರ ಹಣ, ಕೊಚ್ಚಿ ಹೋದ ಸೂರು–ನೀರಿಲ್ಲದ ಕಣ್ಣೀರು' ಮುಂತಾದ ಶೀರ್ಷಿಕೆಗಳ ಅಡಿಯಲ್ಲಿ ವರದಿಗಳು ಪ್ರಕಟವಾಗಿವೆ. ಅಷ್ಟೆ ಅಲ್ಲ, ಇಲ್ಲಿ ಚಿಕ್ಕಮಗಳೂರಿನ ಸಚಿವರು ಇದ್ದಾರೆ. 'ಸೂಕ್ತ ನೆರೆ ಪರಿಹಾರ ಸಿಗದೆ ಅಂಗವಿಕಲ ಆತ್ಮಹತ್ಯೆ', ಇದ್ದ ಮನೆ ದುರಸ್ತಿಗೆ ಹೆಚ್ಚಿನ ಪರಿಹಾರಕ್ಕಾಗಿ ಡಿಸಿ ಕಚೇರಿಗೆ ಅಲೆದಿದ್ದ ಮಂಜುಳ, ಪರಿಹಾರ ಸಿಗದಿದ್ದಕ್ಕೆ ಬೇಸತ್ತು ವಿಷ ಸೇವಿಸಿ ಆತ್ಮಹತ್ಯೆ, ಅಪ್ಪನಿಗೆ ಪಾಶ್ರುವಾಯು ಹೊಡೆದಿದೆ, ತಮ್ಮ ಕುಬ್ಜ, ತನ್ನಿಂದಲೇ ಸಂಸಾರ ನಿಂತಿದೆ. ಅವರ ಮನೆ ನಾಶ ಆಗಿದೆ, ಮನೆ ಕಟ್ಟಿಕೊಳ್ಳುವುದಕ್ಕೆ ಕಳೆದ ಆರು ತಿಂಗಳಿನಿಂದ ಸಾಧ್ಯವಾಗಿಲ್ಲವೆಂದು ಅಂಗವಿಕಲೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.' ಎಂಬ ವರದಿಗಳೂ ಪ್ರಕಟವಾಗಿವೆ. ನಾನು ಏಕೆ ಈ ಪತ್ರಿಕೆಗಳ ವಿವರ ಹೇಳುತ್ತಿದ್ದೇನೆಂದರೆ, ಸರ್ಕಾರ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಯೋಜನೆಗಳ ಬಗ್ಗೆ ವಿವರವಾಗಿ ತಿಳಿಸಿದೆ. ಪರಿಣಾಮಕಾರಿಯಾಗಿ ನೆರೆ ಹಾವಳಿಯನ್ನು ನಿಯಂತ್ರಿಸುವಂತಹ ಕೆಲಸ ಮಾಡಿದ್ದೇವೆ ಎಂದು ಹೇಳುತ್ತಾರೆ. ಅದೇ ರೀತಿ ಸಚಿವರಾದ ಬಸವರಾಜ ಬೊಮ್ಮಾಯಿಯವರು ಒಂದು ಹೇಳಿಕೆಯನ್ನು ಮಾಡಿದ್ದಾರೆ. ಹೌದು, ಈ ರೀತಿ ಅನ್ಯಾಯಗಳಾಗಿವೆ, ಈ ಅನ್ಯಾಯಗಳು ನಮ್ಮ ಗಮನಕ್ಕೆ ಬಂದಿವೆ. ಇದನ್ನು ಸರಿಪಡಿಸಿಕೊಳ್ಳುವಂತಹ ಕೆಲಸ ಮಾಡುತ್ತೇವೆಂದು ಹೇಳಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಇವತ್ತು ನೂರಾರು ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ ಎಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ, ಹಾಗಾದರೆ ಈ ಅವ್ಯವಹಾರ ಮಾಡಿದವರ ಮೇಲೆ ಏನು ಕ್ರಮ ಆಗಿದೆ? ಯಾವ ಅಧಿಕಾರಿಗಳ ಮೇಲೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದಾರೆ? ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ, ಸಣ್ಣ ಮಟ್ಟದಲ್ಲಿ password ಅನ್ನು ಕದ್ದು ಅಥವಾ ಖಾಸಗಿಯವರಿಗೆ password ನ್ನು ಕೊಟ್ಟು ಇಡೀ ರೈತರಿಗೆ ಹೋಗಬೇಕಾದ ಪರಿಹಾರದ ಹಣ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇರೆ ಬೇರೆಯವರ ಅಕೌಂಟ್‌ಗೆ ಹೋಗಿರತಕ್ಕಂಥಾದ್ದು ಇದೆ. ನಿನ್ನೆಯ ದಿವಸ ಮಾನ್ಯ ವಿ.ಸೋಮಣ್ಣನವರು ಹೇಳುತ್ತಿದ್ದರು. ಮನೆ ಪರಿಹಾರದ ಹಣ ಹಾಗೂ ಜಮೀನಿನ ಪರಿಹಾರದ ಹಣವೂ ಸಹ ಅದೇ ರೀತಿ ಆಗಿದೆ. ಅದೇ ರೀತಿ ಮನೆ ಕಟ್ಟುವುದಕ್ಕೆ ಕೊಡುವಂಥ ಹಣವೂ ಕೂಡ ಅದೇ ರೀತಿಯಾಗಿದೆ. ಇದು ಕೇವಲ ಒಂದೆರಡು ಕಡೆ ಮಾತ್ರವಲ್ಲ, ಬೆಳಗಾವಿ, ಹಾವೇರಿ, ಧಾರವಾಡ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಕಡೆ ಆಗಿದೆ. ಇವತ್ತಿಗೂ ಮಡಿಕೇರಿಯಲ್ಲಿ ಕಳೆದ 15-20 ದಿನಗಳಿಂದ ಧರಣಿ ಮಾಡುತ್ತಿದ್ದಾರೆ. ಮಡಿಕೇರಿಯ ಶ್ರೀಮತಿ ವೀಣಾ ಅಚ್ಚಯ್ಯನವರು ಸಹ ಇಲ್ಲಿದ್ದಾರೆ. ಕಳೆದ ಎರಡು ವರ್ಷಗಳಿಂದ ನಿರಾಶ್ರಿತರಾದಂಥ ಜನ ಸೂರಿಲ್ಲದೇ, ನೆಲೆ ಇಲ್ಲದೇ ಅವರು ದಿಕ್ಕಾಪಾಲಾಗಿದ್ದಾರೆ. ಅವರು ಮಡಿಕೇರಿಯಲ್ಲಿ ನಿರಂತರವಾಗಿ ಅಹೋರಾತ್ರಿ ಧರಣಿಯನ್ನು ಮಾಡುತ್ತಿದ್ದಾರೆ. ಕ್ಷಿಪ್ರ ಕಾರ್ಯಾಚರಣೆ ಎಂದರೆ ಇದರ ಅನುಷ್ಠಾನ ಏನೆಂದು ನನಗೆ ಅರ್ಥವಾಗುತ್ತಿಲ್ಲ.

ಇನ್ನು ಶಾಲೆಗಳ ಸ್ಥಿತಿ ಬಗ್ಗೆಯೂ ಸಹ ನಾನು ಮಾತನಾಡಿದ್ದೆ. ಈಗ ಬಜೆಟ್‌ನಲ್ಲಿ ಒಂದಷ್ಟು ಹಣವನ್ನು allocation ಮಾಡಿದ್ದಾರೆ. ನಮ್ಮ ಮಕ್ಕಳ ಪರಿಸ್ಥಿತಿ ಎಲ್ಲಿಗೆ ಹೋಗಿದೆ ಎಂದರೆ, ದೇಗುಲದಲ್ಲಿಯೇ ವಾಸ, ಬಯಲಲ್ಲೇ ಸ್ನಾನ. ಅಲ್ಲಿಯೇ ಅಡುಗೆ, ಊಟ, ನಿದ್ರೆ, ಕೊರೆಯುವ ಚಳಿಯಲ್ಲಿ ಬಯಲಲ್ಲೇ ಸ್ನಾನ ಮಾಡಬೇಕಾದ ದುಃಸ್ಥಿತಿ ಬಂದೊಗಿದೆ. ಶೌಚಕ್ರಿಯೆಗೆ ಕತ್ತಲಾಗುವುದನ್ನೇ ಕಾಯುತ್ತಾ ನಿತ್ಯವೂ ಮುಜುಗರ ಅನುಭವಿಸುವ ಮಹಿಳೆಯರು, ಅಸಹಾಯಕ ಪುರುಷರು. ಕಳೆದ ವರ್ಷ ಮಲಪ್ರಭಾ ನದಿ ಪ್ರವಾಹಕ್ಕೆ ತುತ್ತಾದ ರಾಮದುರ್ಗ ತಾಲ್ಲೂಕಿನ 4 ಕುಟುಂಬಗಳ ಶೋಚನೀಯ ಸ್ಥಿತಿ ಇದು. 6 ತಿಂಗಳಿನಿಂದ ಸರ್ಕಾರದಿಂದ ಪರಿಹಾರ ಸಿಗದೇ ಇರುವುದರಿಂದ ಇವರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಇದು ಬೆಳಗಾವಿ ಜಿಲ್ಲೆಯ ಘಟನೆ. ಇವರಿನ್ನೂ ದೇವಾಲಯದಲ್ಲಿಯೇ ವಾಸವಿದ್ದಾರೆ, ಮಹಿಳೆಯರು ತಮ್ಮ ಬಹಿರ್ದೆಸೆ ಕಾರ್ಯಕ್ರಮಕ್ಕೆ ಇನ್ನು ರಾತ್ರಿಯಾಗುವುದನ್ನೇ ಕಾಯುತ್ತಿದ್ದಾರೆ. ಇವತ್ತು ಸುಮಾರು 8,000 ಶಾಲೆಗಳು ಹಾನಿಗೆ ಒಳಗಾದವು. ಇವತ್ತು ಬಜೆಟ್‌ನಲ್ಲಿ ಒಪ್ಪಿಕೊಂಡಿರುವ ಹಾಗೆ ನಾವು 3,000 ಶಾಲೆಗಳನ್ನು ದರುಸ್ತಿ ಮಾಡಲಿಕ್ಕೆ 789 ಕೋಟಿ ರೂ. ಹಣವನ್ನು ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಆದರೆ ಅಲ್ಲಿನ ಪರಿಸ್ಥಿತಿ ಏನಾಗಿದೆ ಎಂದರೆ, ಕಳೆದ 7-8 ತಿಂಗಳಿನಿಂದ ವಿದ್ಯಾರ್ಥಿಗಳು ಶಾಲೆಗಳಿಗೆ.... ಪರಿಸ್ಥಿತಿ ಹೇಗಿದೆ ಕಾರವಾರದ ಅಂಕೋಲಾ ತಾಲ್ಲೂಕಿನ ಡೊಂಗ್ರಿ ಗ್ರಾಮದಲ್ಲಿ ಒಂದು ತೂಗು ಸೇತುವೆ ಇದೆ. ಅದು ಹಾಳಾಗಿ ಹೋಗಿದೆ. ತೂಗುಸೇತುವೆಯನ್ನು ರಿಪೇರಿ ಮಾಡಲು ಎಷ್ಟು ಹಣ ಬೇಕಾಗುತ್ತದೆ, ಎಷ್ಟು ತಿಂಗಳು ಬೇಕಾಗುತ್ತದೆ? ಇವತ್ತಿಗೂ ಜನ ಅಲ್ಲಿ ದೋಣಿಗಳಲ್ಲಿ ಹುಟ್ಟು ಹಾಕಿಕೊಂಡು ಹೋಗುತ್ತಿದ್ದಾರೆ. ಮಕ್ಕಳು ಬೇರೆ ಶಾಲೆಗಳಿಗೆ ಹೋಗಬೇಕು, ಆದರೆ ಅವರ ಪರಿಸ್ಥಿತಿಯನ್ನು ಹೇಳುವುದಕ್ಕಾಗುವುದಿಲ್ಲ. ಇನ್ನೊಂದು ಕಡೆ ಇಡೀ ಊರನ್ನೇ ವರ್ಗಾಯಿಸಿದ್ದಾರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ ಶಾಲೆ ಅಲ್ಲಿಯೇ ಇದೆ. ಮಕ್ಕಳು ಶಾಲೆಗೆ ಹೋಗಲಿಕ್ಕೆ ಸಾಧ್ಯವಾಗುತ್ತಿಲ್ಲ. ಹಾಜರಾತಿಯಲ್ಲಿ ಶೇಕಡ 30 ಭಾಗ ಅಷ್ಟೇ ಇದೆ. ಇಂತಹ ಪರಿಸ್ಥಿತಿ ಉತ್ತರ ಕರ್ನಾಟಕದ ನೆರೆ ಹಾವಳಿ ಪ್ರದೇಶದ ಎಲ್ಲಾ ಭಾಗಗಳಲ್ಲಿದೆ.

**ಶ್ರೀ ಅರಬೈಲು ಹೆಬ್ಬಾರ ಶಿವರಾಮ್(ಕಾರ್ಮಿಕ ಮತ್ತು ಸಕ್ಕರೆ ಸಚಿವರು):-** ಮಾನ್ಯ ಸಭಾಪತಿಯವರೆ, ಸದಸ್ಯರು ಅಂಕೋಲಾ ತಾಲ್ಲೂಕಿನ ಡೊಂಗ್ರಿ ಗ್ರಾಮದ ಬಗ್ಗೆ ಪ್ರಸ್ತಾಪ ಮಾಡಿದರು. ಅದು ನಮ್ಮ ಜಿಲ್ಲೆ. ಶಾಲೆ ಒಂದು ಕಡೆ ಇದೆ ಮತ್ತು ಮಕ್ಕಳು ಇನ್ನೊಂದು ಕಡೆ ಇದ್ದಾರೆಂದು ಹೇಳಿ ಸದನಕ್ಕೆ ತಪ್ಪು ಸಂದೇಶ ಹೋಗಬಾರದು. ಡೊಂಗ್ರಿ ಗ್ರಾಮಕ್ಕೆ ಗಂಗಾವಳಿ ಹೊಳೆಗೆ ಅಥವಾ ಬೇಡ್ತಿ ನದಿಗೆ ಸ್ವಾತಂತ್ರ ಬಂದಾಗಿನಿಂದಲೂ ಈಗ ಮೂರು ವರ್ಷಗಳ ಹಿಂದೆ ತೂಗು ಸೇತುವೆಯನ್ನು ಕಟ್ಟಿರತಕ್ಕಂಥಾದ್ದು. ಡೊಂಗ್ರಿ ಎನ್ನತಕ್ಕಂಥ ಗ್ರಾಮ ಪ್ರತ್ಯೇಕವಾಗಿದೆ. ಆ ಗ್ರಾಮಕ್ಕೆ ಶಾಲೆ ಬೇರೆ ಇದೆ. ಈ ಕಡೆ ಇರತಕ್ಕಂಥ ಮಕ್ಕಳು ಆ ಕಡೆಗೆ ಹೋಗತಕ್ಕಂಥ ಕಾಲ ಯಾವ ಕಾಲಕ್ಕೂ ಬಂದಿಲ್ಲ, ಬರುವುದೂ ಇಲ್ಲ. ಹೊಳೆಯ ಈ ಕಡೆ ಸುಂಕಸಾಲ ಎಂದು ಏನಿದೆ, ಇದು ಮನೆಗಳಿಲ್ಲದ ಪ್ರದೇಶ. ಸುಂಕಸಾಲ ಒಂದು ಊರು. ಇದಕ್ಕೂ ಅದಕ್ಕೂ ಸಂಬಂಧವಿಲ್ಲ. ಸದನಕ್ಕೆ ತಪ್ಪು ಸಂದೇಶ ಹೋಬಾರದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಶಾಲೆ ಪರಿಸ್ಥಿತಿ ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದ್ದು, ಸೇತುವೆ ಸಮಸ್ಯೆ ಜನರಿಗೆ ಸಂಬಂಧಿಸಿದ್ದು. ಅದನ್ನು ನಿಮ್ಮೂರಿಗೆ ಹೋಲಿಸಬೇಡಿ. ಅದು ನಿಮ್ಮೂರಿನ ವಿಚಾರ ಅಲ್ಲ.

**ಶ್ರೀ ಅರಬೈಲು ಹೆಬ್ಬಾರ ಶಿವರಾಮ್:-** ಮಾನ್ಯ ಸಭಾಪತಿಯವರೆ, ಅವರು ಈ ಕಡೆ ಮನೆ ಆ ಕಡೆ ಶಾಲೆ ಎಂದು ಹೇಳಿದರಲ್ಲಾ, ತಪ್ಪು ಸಂದೇಶ ಹೋಗಬಾರದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ತೂಗು ಸೇತುವೆಯ ಮೂಲ ಉದ್ದೇಶ ಪ್ರಾರಂಭವಾಗಿದ್ದು, ಕೊಪ್ಪ ತಾಲ್ಲೂಕಿನಲ್ಲಿ ಶಾಲೆಗೆ ಹೋಗತಕ್ಕಂಥ ಒಂದು ಮಗು ಬಿದ್ದು ತೀರಿಕೊಂಡಿತು. ಆಗ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ತೂಗು ಸೇತುವೆ ಮಾಡುವ ಪರಿಸ್ಥಿತಿ ಇದೆ ಅದನ್ನು ಮಾಡಬೇಕೆಂದು ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಕಾಲದಲ್ಲಿ ಆದೇಶವಾಗಿ ಅದು ಇಂಪ್ಲಿಮೆಂಟ್ ಆಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ನಾನು ಶಾಲೆಯ ಪ್ರಕರಣ ಹೇಳಿದ್ದು ಬೆಳಗಾವಿ ಜಿಲ್ಲೆಯದ್ದು. ಅಂಕೋಲಾ ಡೊಂಗ್ರಿ ಗ್ರಾಮದ ಬಗ್ಗೆ ತೂಗು ಸೇತುವೆಯ ವಿಚಾರವನ್ನು ಹೇಳಿದೆ. ಇನ್ನು ಬಾಗಲಕೋಟೆಯಲ್ಲಿ ಇಡೀ ಗ್ರಾಮ ಕೊಚ್ಚಿ ಹೋಗಿದೆ, ಆದರೆ ಅದು ದಾಖಲೆಯಲ್ಲಿ ಇಲ್ಲ. ಬಾದಾಮಿ ತಾಲ್ಲೂಕಿನ ಮುಮ್ಮರಡಿ ಕೊಪ್ಪ ಈ ಬಾರಿ ಮಲಪ್ರಭಾ ನದಿ ಹಾಗೂ ಬೆಣ್ಣೆಹಳ್ಳದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರವಾಹದಿಂದ ತೀವ್ರ ಬಾದಿತವಾಗಿದೆ. ವಿಶೇಷ ಎಂದರೆ ಸರ್ಕಾರಿ ದಾಖಲೆಯಲ್ಲಿ ಈ ಗ್ರಾಮ ಅಸ್ತಿತ್ವದಲ್ಲಿಯೇ ಇಲ್ಲ. ಹೀಗಾಗಿ ಗ್ರಾಮಸ್ಥರು ಅತಂತ್ರಗೊಂಡಿದ್ದಾರೆ. 10,000 ರೂ. ತುರ್ತು ನೆರವು ಬಿಟ್ಟರೆ ಬೇರೆ ಯಾವುದೇ ಪರಿಹಾರದ ಹಣ ಅವರಿಗೆ ಸಿಕ್ಕಿಲ್ಲ. 2008ರಲ್ಲಿ ಈ ಊರು ಪ್ರವಾಹದ ಅಬ್ಬರಕ್ಕೆ ಸಿಲುಕಿದಾಗಲೂ ಗ್ರಾಮಸ್ಥರನ್ನು ಸುಮಾರು ಮೂರು ಕಿ.ಮೀ. ದೂರದ ಆಶ್ರಯ ಕಾಲೋನಿಗೆ ಸ್ಥಳಾಂತರಿಸಲಾಗಿತ್ತು. ಹೀಗಾಗಿ ಇವತ್ತು ಅವರನ್ನು ಪರಿಹಾರಕ್ಕೆ ಅರ್ಹರಲ್ಲವೆಂದು ತೀರ್ಮಾನ ಮಾಡಿಬಿಟ್ಟಿದ್ದಾರೆ. ಹಾಗಾಗಿ ಇವತ್ತು ನೆರೆ ಹಾವಳಿಯನ್ನು ನಿಭಾಯಿಸುವಂಥ ವಿಚಾರದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಹೇಳಿದ ಮಾತು ನನಗೆ ಸಮಾಧಾನ ತಂದಿಲ್ಲ. ಏಕೆಂದರೆ ಪರಿಹಾರ ಕೊಡುವಲ್ಲಿ, ಮನೆಗಳನ್ನು ಕಟ್ಟುವಲ್ಲಿ, ಶಾಲೆಗಳನ್ನು ಸರಿಪಡಿಸುವಂಥಾದ್ದರಲ್ಲಿ ವ್ಯತ್ಯಾಸವಾಗಿದೆ. ಪ್ರಯತ್ನಗಳಾಗುತ್ತಿದೆ, ಆದರೆ ದೊಡ್ಡ ಪ್ರಮಾಣದಲ್ಲಿ ಲೋಪವಾಗಿದೆ. ನಾವ್ಯಾರು ನಿರೀಕ್ಷೆ ಮಾಡದೇ ಇರುವಷ್ಟು ಪ್ರಮಾಣದಲ್ಲಿ ಲೋಪವಾಗಿದೆ. ಲೋಪವಾಗಿದೆ ಎನ್ನುವುದನ್ನು ಎಲ್ಲಾ ಪತ್ರಿಕೆಗಳು, ಮಾಧ್ಯಮಗಳು ಬೆಳಕಿಗೆ ತಂದಿವೆ. ಆದರೆ ಅದರ ಮೇಲೆ ಯಾವುದೇ ರೀತಿಯ ಕ್ರಮ ಆಗದೇ ಇರುವಂಥಾದ್ದು ಸರ್ಕಾರದ ವೈಫಲ್ಯ. ನೂರಾರು ಕೋಟಿ ರೂಪಾಯಿಗಳನ್ನು ವ್ಯತ್ಯಾಸ ಮಾಡಿಕೊಂಡು ಯಾರ್‍ಯಾರದ್ದೋ ಖಾತೆಗೆ ಹಾಕಿಕೊಂಡಿದ್ದರ ಬಗ್ಗೆ ಕ್ರಮ ಆಗಬೇಕಲ್ಲ. ಯಾರಾದರೂ ಒಬ್ಬರ ಮೇಲೆ ಕ್ರಮ ಮಾಡಿದ್ದಾರಾ? ಒಬ್ಬ ಅಧಿಕಾರಿಗೆ ಅಮಾನತ್ತು ಅಥವಾ ಏಕೆ ಈ ರೀತಿ ಮಾಡಿದಿರಿ ಎಂದು ಕೇಳಿದರೇ? ಏಕೆ ರೈತರಿಗೆ ಮತ್ತು ಮನೆ ಕಳೆದುಕೊಂಡವರಿಗೆ ಹಣ ತಲುಪಿಲ್ಲವೆಂದು ಇವರು ಕೇಳಲೇ ಇಲ್ಲ. ತನಿಖೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಆದರೆ ಇನ್ನು ಯಾವುದೇ ಕ್ರಮವಾಗಿಲ್ಲ. ದಯಮಾಡಿ ಸರ್ಕಾರ ಏನು ಮಾಡುತ್ತದೆಯೋ ನನಗೆ ಗೊತ್ತಿಲ್ಲ. ನೆರೆ ಹಾವಳಿಯಲ್ಲಿ ವಿಶೇಷವಾಗಿ ಅಹೋರಾತ್ರಿ ಧರಣಿಯನ್ನು ಮಡಿಕೇರಿಯಲ್ಲಿ ಮಾಡುತ್ತಿದ್ದಾರಲ್ಲಾ, ಅವರನ್ನು ಮಾತನಾಡಿಸಬೇಕಲ್ಲಾ. ಅವರನ್ನು ಧರಣಿಯಿಂದ ಏಳಿಸಬೇಕಲ್ಲಾ. ಅವರು ಹಗಲು-ರಾತ್ರಿ ಅಲ್ಲಿಯೇ ಇದ್ದಾರೆ. ಸುಮಾರು ಎರಡು ವರ್ಷಗಳಿಂದ ಅವರಿಗೆ ಮನೆ ಇಲ್ಲ, ಇರಲು ಸೂರಿಲ್ಲ. ಅವರು ಮನೆ ಬಿಟ್ಟು ಎರಡು ವರ್ಷಗಳಾಗಿವೆ. ಅವರ ಜಮೀನು, ಮನೆ ಎಲ್ಲಿದೆ ಎಂದು ಅವರಿಗೆ ಗೊತ್ತಿಲ್ಲ. ಅವರು ಬದುಕುವುದು ಹೇಗೆ? ದಯಮಾಡಿ ಸರ್ಕಾರ ಇಂತಹ ಘಟನೆಗಳ ಬಗೆ ಗಂಭೀರವಾದ ಗಮನ ಹರಿಸಬೇಕು. ಅವರ ಸಮಸ್ಯೆಗಳಿಗೆ ಪರಿಹಾರವನ್ನು ಕೊಡುವಂಥ ಕೆಲಸವನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(174) 6-3-2020/11-00/ಬಿಕೆಪಿ-ಜಿಆರ್

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು. . .)**

ಇನ್ನು ನೀರಾವರಿ ವಿಚಾರದಲ್ಲಿ, ಸಕ್ಕರೆ ಕಾರ್ಖಾನೆಗಳ ವಿಚಾರದಲ್ಲಿ ನಮ್ಮ ಮಂಡ್ಯ ಜಿಲ್ಲೆಯ ರೈತಾಪಿ ಜನರ ಕಷ್ಟವನ್ನು ಹೇಳಲಿಕ್ಕೆ ಆಗುವುದಿಲ್ಲ. ಮಂಡ್ಯ ಜಿಲ್ಲೆಗೆ ಕಳೆದ ಬಾರಿಯ ಬಜೆಟ್‌ನಲ್ಲಿ 100 ಕೋಟಿ ರೂಪಾಯಿಗಳನ್ನು ಕೊಟ್ಟು ಮೈಸೂರು ಸಕ್ಕರೆ ಕಾರ್ಖಾನೆಯನ್ನು 1930 ರ ದಶಕದಲ್ಲಿ ಕನ್ನಂಬಾಡಿ ಕಟ್ಟೆಯನ್ನು ಕಟ್ಟಿದಂತಹ ಸಂದರ್ಭದಲ್ಲಿ ಬ್ರಿಟಿಷ್‌ನವರಾದ Leslie Charles Coleman ಎನ್ನುವವರು ಮಾಡಿದ್ದರು. ಆ ಸಂದರ್ಭದಲ್ಲಿ ಇಡೀ ಏಷ್ಯಾ ಖಂಡದಲ್ಲಿಯೇ ಇದು ಒಂದೇ ಒಂದು ಸಕ್ಕರೆ ಕಾರ್ಖಾನೆ. ಆದರೆ, ಅದನ್ನು ಉಳಿಸಿಕೊಳ್ಳುವಂತಹ ಕೆಲಸಕ್ಕೆ ಯಾವ ಸರ್ಕಾರಗಳೂ ಸಹ ಒಂದು ಗಟ್ಟಿಯಾದ ಹೆಜ್ಜೆಯನ್ನಿಡಲಿಲ್ಲ. ಆದರೆ, ಕಳೆದ ಬಾರಿ ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರ ನೇತೃತ್ವದ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಇದು ಹಳೆಯ ಕಾರ್ಖಾನೆ ಇದ್ದು, ಇದನ್ನು 250-300 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹೊಸ ಕಾರ್ಖಾನೆ ಮಾಡೋಣವೆಂದು, ಈಗ 100 ಕೋಟಿ ರೂಪಾಯಿಗಳನ್ನು ಈ ಬಜೆಟ್‌ನಲ್ಲಿ ಕೊಡುತ್ತೇವೆಂದು ಹೇಳಿ ಬಜೆಟ್‌ನಲ್ಲಿ ಘೋಷಣೆ ಮಾಡಿದರು. ಆ ಕುರಿತು ಯಾವ ಒಂದು ಕಾರ್ಯಕ್ರಮಗಳೂ ಸಹ ಕಳೆದ 10 ತಿಂಗಳುಗಳಿಂದ ಆಗಲಿಲ್ಲ. ಈಗ ನಮ್ಮಲ್ಲಿ ಪಾಂಡವಪುರ ಸಕ್ಕರೆ ಕಾರ್ಖಾನೆ ಕೆಟ್ಟು ನಿಂತಿದೆ. ರಿಪೇರಿ ಆಗಲಿಲ್ಲ. ಮೈಸೂರು ಸಕ್ಕರೆ ಕಾರ್ಖಾನೆಯನ್ನು ಮುಟ್ಟುವ ಗೋಜಿಗೆ ಹೋಗಲಿಲ್ಲ. ಇವತ್ತು ಲಕ್ಷಾಂತರ ಟನ್ ಕಬ್ಬನ್ನು ನಮ್ಮ ರೈತಾಪಿ ಜನರು ಬೆಳೆದು 18-20 ತಿಂಗಳು ಆಯಿತು. ಎರಡನೇ ಬೆಳೆ ಬೆಳೆಯಬೇಕಾಗಿತ್ತು. ಇನ್ನೂ ಸಹ 1ನೇ ಬೆಳೆಯೇ ಗದ್ದೆಯಲ್ಲಿದೆ. 12 ತಿಂಗಳಿಗೆ ಕಟಾವು ಆಗಬೇಕಾಗಿದ್ದ ಕಬ್ಬು 18-20 ತಿಂಗಳಾದರೂ ಸಹ ಇನ್ನೂ ಗದ್ದೆಯಲ್ಲಿಯೇ ಇದೆ. 2ನೇ ಬೆಳೆಯನ್ನು ಬೆಳೆಯಲಿಕ್ಕೆ ಇನ್ನೆರಡು ತಿಂಗಳು ಬೇಕಾಗಿತ್ತು. 1ನೇ ಬೆಳೆಯೇ ಉಳಿದಿದೆ ಎಂದರೆ ರೈತರು ಎಲ್ಲಿಗೆ ಹೋಗುತ್ತಾರೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ಸರ್ಕಾರದವರು ಈ ಕಬ್ಬನ್ನು ಬೇರೆ ರಾಜ್ಯಕ್ಕೆ ಕಳುಹಿಸಿಕೊಡುವಲ್ಲಿ ಸಾಗಾಣಿಕೆ ವೆಚ್ಚವನ್ನು ಕೊಡುತ್ತೇವೆಂದು ಹೇಳಿ ಇಲ್ಲಿಯೇ ನನಗೆ ಲಿಖಿತವಾಗಿ ಮಾನ್ಯ ಕಂದಾಯ ಸಚಿವರು ಮಾತು ಕೊಟ್ಟರು. ಆದರೆ, ಯಾರಿಗೂ ಸಹ ಸಾಗಾಣಿಕೆ ವೆಚ್ಚವನ್ನು ಭರಿಸಲಿಲ್ಲ. ಮತ್ತೆ ಅದನ್ನು ಬೇರೆ ಬೇರೆ ಜಿಲ್ಲೆಗಳಿಗಾದರೂ ಸಾಗಾಣಿಕೆ ಮಾಡುವಂತಹ ವ್ಯವಸ್ಥೆ ಮಾಡಲಿಲ್ಲ. ದಲ್ಲಾಳಿಗಳು 800-900 ರೂ.ಗಳಿಗೆ ಬಂದು ಖರೀದಿ ಮಾಡುತ್ತಾರೆ. ಅದಕ್ಕೂ ಸಾಧ್ಯವಾಗುತ್ತಿಲ್ಲ. ನನ್ನ ಪ್ರಶ್ನೆ ಏನೆಂದರೆ, ಮಂಡ್ಯದ ಆ ಸಕ್ಕರೆ ಕಾರ್ಖಾನೆಯ ವಿಚಾರವಾಗಿ ನಾನು ಪತ್ರಿಕೆಯಲ್ಲಿ ನೋಡಿದೆ. ಪಾಂಡವಪುರ ಸಕ್ಕರೆ ಕಾರ್ಖಾನೆಯನ್ನು lease out ಮಾಡಲಿಕ್ಕೆ ನಮ್ಮ

ತಕರಾರು ಇಲ್ಲ. ಆದರೆ, ಏಕೈಕ ಸರ್ಕಾರಿ ಸಕ್ಕರೆ ಕಾರ್ಖಾನೆಯನ್ನು ಉಳಿಸಿಕೊಳ್ಳದೇ ಹೋದರೆ ಈ ಲಾಭಿಯನ್ನು . . .

**ಶ್ರೀ ಅರಬೈಲು ಹೆಬ್ಬಾರ ಶಿವರಾಮ್(ಕಾರ್ಮಿಕ ಮತ್ತು ಸಕ್ಕರೆ ಸಚಿವರು):-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಯಾವುದೇ ಸರ್ಕಾರಗಳು ಇರಬಹುದು, ಮೈಷುಗರ್ ಕಾರ್ಖಾನೆಯನ್ನು ಉನ್ನತೀಕರಣ ಮಾಡಬೇಕು, ಅದನ್ನು ಉಳಿಸಿಕೊಳ್ಳಬೇಕೆಂದು ಹೇಳಿ, ಕಳೆದ 8 ವರ್ಷಗಳಿಂದ ಸರ್ಕಾರದ ಮಟ್ಟದಲ್ಲಿ ಸಾಕಷ್ಟು ದೊಡ್ಡ ಪ್ರಯತ್ನ ಮಾಡುವುದರ ಮೂಲಕ ಅದಕ್ಕೆ ಸರ್ಕಾರವು 410 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್‌ಮೆಂಟ್ ಮಾಡಿದೆ. ಈ 410 ಕೋಟಿ ರೂಪಾಯಿಗಳಿಗೆ ಒಂದು ಹೊಸ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಬಹುದಾಗಿತ್ತು. ಆದರೆ, ಪ್ರತಿ ವರ್ಷವೂ ಸಹ 50 ಕೋಟಿ, 100 ಕೋಟಿ ರೂಪಾಯಿಗಳಂತೆ ಇದುವರೆಗೆ ಒಟ್ಟು 410 ಕೋಟಿ ರೂಪಾಯಿಗಳನ್ನು ಹಾಕಿದರೂ ಕೂಡ ಯಾವ ಒಂದು ಫಲಪ್ರದವನ್ನು ಕಾಣಲಿಕ್ಕೆ ಸಾಧ್ಯವಾಗುತ್ತಿಲ್ಲ.

'ಪಾಂಡವಪುರ' ಮತ್ತು 'ಶ್ರೀರಾಮ' ಸಕ್ಕರೆ ಕಾರ್ಖಾನೆಗಳ ಬಗ್ಗೆ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದರು, ಈ ಎರಡು ಕಾರ್ಖಾನೆಗಳನ್ನು 40 ವರ್ಷದ PPP (Private-Public Participation) ಆಧಾರದ ಮೇಲೆ ಕೊಡಲಿಕ್ಕೆ ಈಗಾಗಲೇ ಕ್ಯಾಬಿನೆಟ್‌ನಿಂದ ಒಪ್ಪಿಗೆ ಸಿಕ್ಕಿದ್ದು, ಇವತ್ತು ಅಥವಾ ನಾಳೆಗೆ ತುರ್ತಾಗಿ ಇದನ್ನು ಖಾಸಗಿಯವರಿಗೆ ಕೊಡಬೇಕೆಂದು ಸರ್ಕಾರ ಈಗಾಗಲೇ ನಿರ್ಣಯ ಮಾಡಿದೆ. ಮತ್ತೆ ಮುಂದುವರಿದು ಮೈಷುಗರ್ ಕಾರ್ಖಾನೆಯ ವಿಚಾರದಲ್ಲಿ ಅನೇಕ ರೈತ ಮುಖಂಡರ ಜೊತೆ ಮಾತನಾಡಿದ್ದೇವೆ. ಈ ವಿಚಾರದಲ್ಲಿ ಜನಪ್ರತಿನಿಧಿಗಳಲ್ಲಿ ನಾವು ಪ್ರಾರ್ಥನೆ ಮಾಡುವುದೇನೆಂದರೆ, ರೈತರ ಕಬ್ಬನ್ನು ಅರೆಯುವುದಕ್ಕೆ ಅವಕಾಶ ಮಾಡಿಕೊಡುವುದು ನಮ್ಮೆಲ್ಲರ ಉದ್ದೇಶವಾಗಿರಬೇಕು. ಸರ್ಕಾರದ ಮಟ್ಟದಲ್ಲಿ ಇದನ್ನು ಮಾಡಲಿಕ್ಕೆ ಆಗುವುದಿಲ್ಲವೆನ್ನುವ ಹಂತಕ್ಕೆ ನಾವು ಬಂದಿದ್ದೇವೆ. ಆದ್ದರಿಂದ, ಈ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಗಳು ಕ್ಯಾಬಿನೆಟ್‌ನಿಂದ ಪೂರ್ವಾನುಮತಿಯನ್ನು ಕೊಟ್ಟಿದ್ದಾರೆ. ಆದ್ದರಿಂದ, ಆ ಕಾರ್ಖಾನೆಯನ್ನು ಕೂಡ ಖಾಸಗಿ ಸಹಭಾಗಿತ್ವದ ಆಧಾರದ ಮೇಲೆ 40 ವರ್ಷಗಳ PPP ಆಧಾರದ ಮೇಲೆ ಕೊಡಲಿಕ್ಕೆ ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ನಮ್ಮ ಈ ನಿರ್ಣಯ 10-15 ದಿವಸಗಳಲ್ಲಿ ಖಾಸಗಿಯವರಿಗೆ ಈ ಕಾರ್ಖಾನೆಗಳನ್ನು ಕೊಡಬೇಕು. ಜೂನ್ ತಿಂಗಳ ಒಳಗಡೆ ಮೂರು ತಿಂಗಳ ಕೆಲಸ ಇದೆ. ಕಬ್ಬನ್ನು ಅರೆಯುವುದಕ್ಕೆ 3 ತಿಂಗಳ ಒಳಗಡೆ ಕೊಟ್ಟರೆ ಆ ಕಾರ್ಖಾನೆ ಕಬ್ಬು ಅರೆಯಲು ಸಿದ್ಧವಾಗುತ್ತದೆ. ಮೂರು ತಿಂಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದರೆ, ಜೂನ್ ತಿಂಗಳಿನಲ್ಲಿ ಕಟಾವು ಪ್ರಾರಂಭವಾಗುತ್ತದೆ. ಜೂನ್ ತಿಂಗಳಲ್ಲಿ ರೈತರ ಕಬ್ಬನ್ನು ಅರೆಯುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕು. ಆ ಮೂಲಕ ರೈತರಿಗೆ ಇವತ್ತಿನಿಂದ ಶಾಶ್ವತವಾದಂತಹ ಸುಖ ಮತ್ತು ನೆಮ್ಮದಿ ಸಿಗಬೇಕೆನ್ನುವ ಸರ್ಕಾರದ ಯೋಜನೆ ಇದೆ. ಆ ನಿಟ್ಟಿನಲ್ಲಿ ಸರ್ಕಾರ ಈಗಾಗಲೇ ನಿರ್ಣಯ ತೆಗೆದುಕೊಂಡಿದೆ ಎನ್ನುವುದನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

**ಶ್ರೀ ಗೋವಿಂದ ಎಂ ಕಾರಜೋಳ (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ):-** ಮಾನ್ಯ ಸಭಾಪತಿಯವರೇ, ಈಗತಾನೇ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ವಿಶೇಷವಾದಂತಹ ಘೋಷಣೆಯನ್ನು ಕೆಳಮನೆಯಲ್ಲಿ ಪ್ರಕಟಿಸಿದರು. ಅದನ್ನು ಈ ಸದನದ ಗಮನಕ್ಕೆ ತರುವುದಕ್ಕಾಗಿ ಹೇಳಲಿಕ್ಕೆ ಬಯಸುತ್ತೇನೆ. ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಗಳಿಗೆ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಮಾಡಲಿಕ್ಕೆ 2020-21ನೇ ಸಾಲಿನ ಬಜೆಟ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು 10 ಸಾವಿರ ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದಾರೆ. 2020-21 ರಿಂದ 3 ವರ್ಷಗಳ ಅವಧಿಯೊಳಗಾಗಿ 20 ಹಳ್ಳಿಗಳ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಹಾಗೂ 1,32,000 ಎಕರೆ ಭೂಮಿಗೆ ಪರಿಹಾರ ಕೊಡತಕ್ಕಂತಹ ಕೆಲಸವನ್ನು ತ್ವರಿತವಾಗಿ ಮಾಡುವುದಾಗಿ ಘೋಷಣೆ ಮಾಡಿದ್ದಾರೆ. ಅದಕ್ಕೆ ನಾವು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಬರತಕ್ಕಂತಹ ಪ್ರತಿಯೊಬ್ಬ ರೈತರಿಗೆ ಮತ್ತು ಸಂತ್ರಸ್ತರಿಗೆಲ್ಲರಿಗೂ ಹೇಳಲಿಕ್ಕೆ ಬಯಸುವುದೇನೆಂದರೆ, ಈ ಸರ್ಕಾರ ಕೃಷ್ಣ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಗಳಿಗಾಗಿ ಈ ವರ್ಷ 10,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಅದಕ್ಕೋಸ್ಕರ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಮೈಸೂರು ಸಕ್ಕರೆ ಕಾರ್ಖಾನೆಯ ಬಗ್ಗೆ ನೂತನ ಸಕ್ಕರೆ ಸಚಿವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದರು. ಸರ್ಕಾರ ಪಾಂಡವಪುರ ಸಕ್ಕರೆ ಕಾರ್ಖಾನೆಯನ್ನು ಖಾಸಗೀಕರಣ ಮಾಡಲಿಕ್ಕೆ ನಮ್ಮ ರೈತರ ವಿರೋಧವಿಲ್ಲ.

**ಶ್ರೀ ಅರಬೈಲು ಹೆಬ್ಬಾರ ಶಿವರಾಮ್:-** ಮಾನ್ಯ ಸಭಾಪತಿಯವರೇ, ನಾನು ಸರ್ಕಾರದ ನಿರ್ಣಯವನ್ನು ಹೇಳಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸರ್ಕಾರದ ಒಂದು ಭಾಗವಾಗಿದ್ದು, ಈ ನಿರ್ಣಯದ ವಿಚಾರವಾಗಿ ಹೇಳಿದ್ದಾರೆ. ಶ್ರೀರಾಮ ಸಕ್ಕರೆ ಕಾರ್ಖಾನೆಯನ್ನು lease

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

out ಮಾಡಲಿಕ್ಕೆ ರೈತರ ತಕರಾರು ಇಲ್ಲ. ಆದರೆ, ಸರ್ಕಾರದ ಮೈಸೂರು ಸಕ್ಕರೆ ಕಾರ್ಖಾನೆಯನ್ನು lease out ಮಾಡಲಿಕ್ಕೆ ರೈತರ ಸಂಪೂರ್ಣ ವಿರೋಧವಿದೆ. ಏಕೆಂದರೆ, ಒಂದೇ ಒಂದು ಸಕ್ಕರೆ ಕಾರ್ಖಾನೆ ನಮ್ಮ ರಾಜ್ಯದಲ್ಲಿದೆ, ಅದರಲ್ಲೂ ಅದು ಸರ್ಕಾರಿ ಸ್ವಾಮ್ಯದಲ್ಲಿದೆ. ಅದು ಹಾಗೆಯೇ ಇದ್ದರೆ ಈ ಖಾಸಗಿ ಸಕ್ಕರೆ ಕಾರ್ಖಾನೆಗಳ ಲಾಭಿಯನ್ನು ಹತೋಟಿಗೆ ತರಲಿಕ್ಕೆ ಸಾಧ್ಯ ಇದೆ ಎನ್ನುವುದು ನಮ್ಮೆಲ್ಲರ ಮೊದಲನೆಯ ಅಭಿಪ್ರಾಯವಾಗಿದೆ. ಎರಡನೆಯದಾಗಿ ಅಲ್ಲಿ ರೈತರ ಷೇರು ಮತ್ತು ಸರ್ಕಾರದ ಷೇರು ಸಹ ಇದೆ. ಮತ್ತೆ ದೊಡ್ಡ ಆಸ್ತಿಯು ಇದೆ. ಈಗಾಗಲೇ ಈ ಒಂದು ಕಾರಣಕ್ಕಾಗಿಯೇ ಕಳೆದ ಬಾರಿಯ ಬಜೆಟ್‌ನಲ್ಲಿ ಹಳೆಯ ಕಾರ್ಖಾನೆಯಾಗಿರುವುದರಿಂದ ಹೊಸ ಕಾರ್ಖಾನೆಯನ್ನು ಅಲ್ಲಿ ಹಾಕಬೇಕೆನ್ನುವ ನಿರ್ಣಯವನ್ನು ಬಜೆಟ್‌ನಲ್ಲಿ ಮಾಡಿತ್ತು. ಬಜೆಟ್‌ನಲ್ಲಿ ನಿರ್ಣಯ ಮಾಡಿ ಹೊಸ ಕಾರ್ಖಾನೆಯನ್ನು ಸರ್ಕಾರಿ ಸ್ವಾಮ್ಯದಲ್ಲಿ ಹಾಕಬೇಕೆಂದು ನಿರ್ಧಾರ ಆಗಿರುವಾಗ ಮತ್ತೆ ಖಾಸಗಿಗೆ ಕೊಡುವಂತಹ ಪ್ರಯತ್ನಕ್ಕೆ ಇಡೀ ಜಿಲ್ಲೆಯ ಮತ್ತು ಆ ಭಾಗದ ಎಲ್ಲಾ ಜನರ ವಿರೋಧ ಇದೆ ಎನ್ನುವುದನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕು. ಉಳಿದ ಕಾರ್ಖಾನೆಗಳ ಬಗ್ಗೆ ಅಭ್ಯಂತರವಿಲ್ಲ.

**ಶ್ರೀ ಅರಬೈಲು ಹೆಬ್ಬಾರ ಶಿವರಾಮ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ 175 ಜನರು ವಿ.ಆರ್.ಎಸ್., ತೆಗೆದುಕೊಂಡಿದ್ದಾರೆ. ಇನ್ನು ಕೇವಲ 74 ಜನರು ಮಾತ್ರ ವಿ.ಆರ್.ಎಸ್. ತೆಗೆದುಕೊಳ್ಳುವವರಿದ್ದಾರೆ. ಕಾರ್ಖಾನೆಯಲ್ಲಿ ಹೊಸ ಸಿಬ್ಬಂದಿ ಇಲ್ಲ. 175 ಜನರಿಗೆ 30 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಈಗಾಗಲೇ ಅವರಿಗೆ 30 ಕೋಟಿ ರೂಪಾಯಿಗಳನ್ನು ಕೊಡಲು ಕ್ಯಾಬಿನೆಟ್‌ನಲ್ಲಿ ನಿರ್ಣಯ ತೆಗೆದುಕೊಂಡಿದೆ. ಆ ಕಾರಣಕ್ಕೆ ನಾನು ಸನ್ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ನಮ್ಮೆಲ್ಲರ ಹಿತದೃಷ್ಟಿಯಿಂದ ಎಲ್ಲಾ ಸರ್ಕಾರಗಳು ಸೇರಿ ಒಟ್ಟು 410 ಕೋಟಿ ರೂಪಾಯಿಗಳನ್ನು ಅದರ ಪುನಶ್ಚೇತನಕ್ಕಾಗಿ ತೊಡಗಿಸಿದರೂ ಸಹ ಆ ಕಾರ್ಖಾನೆಯನ್ನು ಪುನಶ್ಚೇತನ ಮಾಡಲಿಕ್ಕೆ ಆಗಲಿಲ್ಲ. ಇದೇ ರೀತಿ ಮುಂದುವರಿಸುತ್ತಾ ಹೋಗಿ ರೈತರು ಸಂಕಷ್ಟಕ್ಕೆ ಒಳಗಾಗುವುದು ಬೇಡ. ಆ ಕಾರಣಕ್ಕೋಸ್ಕರ ಈ ನಿಟ್ಟಿನಲ್ಲಿ ನಮ್ಮ ಸರ್ಕಾರ ಕ್ಯಾಬಿನೆಟ್‌ನಲ್ಲಿ ಈ ನಿರ್ಣಯ ತೆಗೆದುಕೊಂಡಿದೆ. ನಮ್ಮ ಮೂಲಭೂತ ಉದ್ದೇಶ ರೈತರು ಬೆಳೆದಂತಹ ಕಬ್ಬನ್ನು ಅರೆಯಲಿಕ್ಕೆ ಅನುಕೂಲ ಸಿಗಬೇಕು. ಆ ಕಾರಣಕ್ಕೋಸ್ಕರ ಆ ವಿಚಾರವನ್ನು ಪ್ರಸ್ತಾಪ ಮಾಡಿ ಎಂದು ಕೇಳಿದೆ. ಅದಕ್ಕೆ ಮಾನ್ಯ ಸದಸ್ಯರು ಸಹಕರಿಸಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನೂತನ ಸಕ್ಕರೆ ಸಚಿವರಿಗೆ ಆಸಕ್ತಿ ಮತ್ತು ಕಾಳಜಿ ಇದೆ. ಅದನ್ನು ಒಪ್ಪುತ್ತೇನೆ, ಮೆಚ್ಚುತ್ತೇನೆ. ಅದನ್ನು ಕಾರ್ಯರೂಪದಲ್ಲಿ ಉಳಿಸುವುದರಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೋರಿಸಬೇಕೆನ್ನುವುದು ನನ್ನ ವಿನಮ್ರ ಮನವಿ. ಮೈಸೂರು ಸಕ್ಕರೆ ಕಾರ್ಖಾನೆ ಇಡೀ ಏಷ್ಯಾಕ್ಕೆ ಮಾದರಿ. ಎಂತಹ ಪರಿಸ್ಥಿತಿಯಲ್ಲಿ ಆ ಕಾರ್ಖಾನೆಯನ್ನು Leslie Charles Coleman ರವರು ಕಟ್ಟಿದರು ಎಂದರೆ, ಒಂದು ಕಾಲದಲ್ಲಿ ತಯಾರಾಗುತ್ತಿದ್ದಂತಹ ಮದ್ಯಗಳಿಗೆ ಇಡೀ ರಾಜ್ಯದಲ್ಲಿ ಬೇಡಿಕೆ ಇತ್ತು. ಈಗ Distillery ಅನ್ನು ಮುಚ್ಚಲಾಗಿದೆ. 'ಮಂಡ್ಯ ರಮ್' ಅಂದರೆ ಅದರ ಖದರ್ ಬೇರೆಯೇ ಆಗಿತ್ತು. ಆಗ ಹತ್ತಾರು ಬ್ರಾಂಡ್ ಇತ್ತು. Cogen ಇದೆ, ಅದು ನಡೆಯುತ್ತಿಲ್ಲ. ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳವನ್ನು ಅದಕ್ಕೆ ತೊಡಗಿಸಲಾಗಿದೆ. Highest potential sugar cane growing area ಅಂದರೆ ಮಂಡ್ಯ. ನೂರಾರು ವರ್ಷಗಳಿಂದ ನಡೆಯುತ್ತಿರುವ ಕಾರ್ಖಾನೆಯನ್ನು ಉಳಿಸಿಕೊಳ್ಳುವಲ್ಲಿ ಅದನ್ನೇ ಹೊಸ ಕಾರ್ಖಾನೆಯನ್ನಾಗಿ ಮಾಡಬೇಕೆನ್ನುವ ನಿರ್ಣಯ ಕಳೆದ ಸರ್ಕಾರದಲ್ಲಿ ಆಗಿದೆ. ನೀವು ಈಗ ಇದನ್ನು ಖಾಸಗೀಕರಣ ಮಾಡುವುದಾದರೆ ಸಕ್ಕರೆ ಲಾಭಿಯನ್ನು ಹತೋಟಿಗೆ ತರುವವರು ಯಾರು? ಸರ್ಕಾರ ದರವನ್ನು ನಿಗದಿ ಮಾಡುತ್ತಿತ್ತು. ಸರ್ಕಾರ ನಿಗದಿ ಮಾಡಿದ ದರವನ್ನು ಮೊದಲು ಮೈಸೂರು ಕಾರ್ಖಾನೆ ರೈತರಿಗೆ ಕೊಡುತ್ತಿತ್ತು. ಅದನ್ನೇ ಇಡೀ ರಾಜ್ಯದ ಇತರೆ ಕಾರ್ಖಾನೆಗಳು ಅನುಸರಿಸುತ್ತಿದ್ದವು. ಖಾಸಗೀಕರಣ ಮಾಡುವುದು ಸುಲಭ. ಅದಕ್ಕೆ ಎಲ್ಲರೂ ಮುಂದೆ ಬರುತ್ತಾರೆ. It is most potential. ಆದರೆ, ಮೈಸೂರು ಸಕ್ಕರೆ ಕಾರ್ಖಾನೆಯನ್ನು ಖಾಸಗೀಕರಣ ಮಾಡಲಿಕ್ಕೆ ವಿರೋಧ ಇದೆ. ಬೇರೆ ಕಾರ್ಖಾನೆಗಳನ್ನು ಮಾಡಲಿಕ್ಕೆ ನಮ್ಮ ವಿರೋಧವಿಲ್ಲ. ಅದನ್ನು ಬಹಳ ಯಶಸ್ವಿಯಾಗಿ ನಡೆಸಲಿಕ್ಕೆ ಸಾಧ್ಯವಿದೆ. Mismanagement ನಿಂದಾಗಿ ಇವತ್ತು ಅನ್ಯಾಯವಾಗಿದ್ದು, ಕಾರ್ಖಾನೆ ಸಂಕಷ್ಟದಲ್ಲಿದೆ. ಹೀಗಾಗಿ, ನೂತನ ಸಚಿವರಿಗೆ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ತಮ್ಮ ಕಾಳಜಿಯನ್ನು ಒಂದು ಸವಾಲಿನಂತೆ ಸ್ವೀಕರಿಸಿ. ಮೈಸೂರು ಸಕ್ಕರೆ ಕಾರ್ಖಾನೆಗೆ ಹಿಂದಿನ ಸರ್ಕಾರ ಏನು 100 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿತ್ತು, ಅದನ್ನು ಉಪಯೋಗ ಮಾಡಿಕೊಳ್ಳಬೇಕು. ಮತ್ತೆ, 60 ಎಕರೆ ಜಮೀನು ಮಂಡ್ಯ ಸಿಟಿಯಲ್ಲಿ ಇದೆ.

ಮುಂದು. . .

(175) 6.3.2020, 11.10 KG.MD

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು.):-**

ಮಂಡ್ಯವನ್ನು 'ಸಕ್ಕರೆ ನಗರ' ಎಂದು ಹೇಳುತ್ತಿದ್ದರು. ಮಂಡ್ಯದ ಹೃದಯಭಾಗದಲ್ಲಿ ಸಕ್ಕರೆ ಕಾರ್ಖನೆ ಇದೆ. ಇವತ್ತು ಆ ಕಾರ್ಖನೆಯನ್ನು ಅಲ್ಲಿಂದ ಅಲ್ಲಿಗೆ ಶಿಫ್ಟ್ ಮಾಡಿ ಹೊಸ ಕಾರ್ಖನೆಯನ್ನು ಮಾಡಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರದಿಂದಲೇ ಕಾರ್ಖನೆಯನ್ನು ನಡೆಸಬೇಕು ಎನ್ನುವುದು ಆ ಭಾಗದ ರೈತರ ಮತ್ತು ಜನ ಸಂಘಟನೆಗಳ ಒತ್ತಾಯ ಇದೆ. ಆ ಜಿಲ್ಲೆಯಲ್ಲಿರುವಂತಹ ಉಳಿದ ಕಾರ್ಖನೆಗಳನ್ನು ಖಾಸಗೀಕರಣ ಮಾಡುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಸರ್ಕಾರಿ ಸಕ್ಕರೆ ಕಾರ್ಖನೆಯನ್ನು ಖಾಸಗೀಕರಣ ಮಾಡುವುದಕ್ಕೆ ನಮ್ಮ ವಿರೋಧ ಇದೆ. ದಯಮಾಡಿ ಮಾನ್ಯ ಸಚಿವರು ಇದನ್ನು ಅರ್ಥಮಾಡಿಕೊಳ್ಳಬೇಕು. ಇದಕ್ಕೆ ಏನು ಮಾಡುತ್ತಾರೋ ಗೊತ್ತಿಲ್ಲ. ಈ ಹಿಂದಿನ ನಿರ್ಧಾರ ಏನಾಗಿದೆ, ಆ ನಿರ್ಧಾರದ ಪ್ರಕಾರವೇ ಸಕ್ಕರೆ ಕಾರ್ಖನೆಯನ್ನು ಸರ್ಕಾರದ ಸ್ವಾಮ್ಯದಲ್ಲಿ ನಡೆಸುವಂತಹ ನಿರ್ಧಾರಕ್ಕೆ ಬರಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಇನ್ನೂ ಬಹಳ ಮುಖ್ಯವಾಗಿ ಬಜೆಟ್‌ನಲ್ಲಿ ಒಂದು ವಿಷಯ ಪ್ರಸ್ತಾಪವಾಗಿದೆ. ಶಾಸಕರುಗಳಿಗೆ ಮೂರು-ಮೂರು ಶಾಲೆಗಳ ಜವಾಬ್ದಾರಿ ಕೊಡುತ್ತೇವೆ ಮತ್ತು ದತ್ತು ಕೊಡುತ್ತೇವೆಂದು ಪ್ರಸ್ತಾಪ ಆಗಿದೆ. ನನಗೆ ಈ ವಿಷಯ ಅರ್ಥವಾಗುತ್ತಿಲ್ಲ. ನಾವು ಶಾಸಕರ ನಿಧಿ ನೋಡಿ ಹತ್ತು ತಿಂಗಳು ಆಗಿದೆ. ಆರಂಭದಲ್ಲಿ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು ಬಿಟ್ಟರೆ, ಇನ್ನೂ ಒಂದೂವರೆ ಕೋಟಿ ರೂಪಾಯಿಗಳಿಗೆ ಎಲ್ಲಾ ಶಾಸಕರುಗಳ ಮನೆಗಳ ಕಡೆಗೆ ಅಲೆಯುವುದಾಗಿದೆ. ನಾಲೆಗೆ grant ಕೊಡಿ, ರಸ್ತೆಗೆ grant ಕೊಡಿ, ಅದಕ್ಕೆ ಕೊಡಿ, ಇದಕ್ಕೆ ಕೊಡಿ ಎನ್ನುವುದಾಗಿದೆ. ದೊಡ್ಡ ಸುದ್ದಿ ಮಾಡಿದರೆ ಮಾತ್ರ ನಮಗೆ ಗ್ರಾಂಟ್ ಬರುತ್ತದೆ. ಇಲ್ಲದಿದ್ದರೆ ಬರುವುದಿಲ್ಲ. ಇನ್ನೂ ಒಂದೂವರೆ ಕೋಟಿ ರೂಪಾಯಿಗಳು ಬಾಕಿ ಇದೆ. ಯಾವುದೇ ಅಭಿವೃದ್ಧಿಗೂ ಅಡ್ಡಿ ಇಲ್ಲ, ತೊಂದರೆ ಇಲ್ಲ, ಯಾವುದಕ್ಕೂ ಕೊರತೆ ಇಲ್ಲ ಎನ್ನುತ್ತಾರೆ. 300 ಜನ ಶಾಸಕರಿಗೆ ಕೊಡಬೇಕಾದ ತಲಾ ಒಂದೂವರೆ ಕೋಟಿ ರೂಪಾಯಿಗಳ ಮೂರು ಕಂತುಗಳ ಅನುದಾನವನ್ನೇ ಇನ್ನೂ ಕೊಡುವುದಕ್ಕೆ ಆಗಿಲ್ಲ. ಈ ಬಜೆಟ್‌ನಲ್ಲಿ ಅದರ ಪ್ರಸ್ತಾಪ ಆಗಿಲ್ಲ. ಶಾಸಕರ ನಿಧಿ ಇಲ್ಲದೆಯೇ ಯಾವ ರೀತಿ ಶಾಲೆಗಳನ್ನು ನಾವು ದತ್ತು ತೆಗೆದುಕೊಳ್ಳುವುದು? ಒಂದು ಬಾರಿ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟುಬಿಡಿ ಎಂದು ಹೇಳಿದ್ದಕ್ಕೆ proposal ಕೊಟ್ಟುಬಿಟ್ಟರು. ಈಗ ಏನು ಮಾಡುವುದು ಹೇಳಿ? ಶಾಸಕರ ಆಪ್ತ ಸಹಾಯಕರಿಗೆ ವೇತನವೇ ಇಲ್ಲ. ನಮಗೆ 3 ರಿಂದ 4 ತಿಂಗಳಿನಿಂದ ವೇತನ ಇರಲಿಲ್ಲ. ಅತಿಥಿ ಉಪನ್ಯಾಸಕರಿಗೆ ಕಳೆದ 10 ತಿಂಗಳಿಗಳಿಂದ ವೇತನ ಇಲ್ಲ. ಪದವಿ ಪೂರ್ವ ಕಾಲೇಜುಗಳಲ್ಲಿ ಇಡೀ ವರ್ಷ ಅವರಿಗೆ ವೇತನ ಇಲ್ಲ. ಅವರಿಗೆ ಕೊಡುವುದು ಮೂರು ಕಾಸು. ಎಲ್ಲಾ ಶಿಕ್ಷಕರದ್ದು ಪ್ರತಿ ದಿವಸ ಹಣಕಾಸು ಇಲಾಖೆಗೆ ಬರುತ್ತದೆ. ನಮಗೆ ಎಡರು ಕೋಟಿ ರೂಪಾಯಿ, ನಮಗೆ ಮೂರು ಕೋಟಿ ರೂಪಾಯಿ, ನಮಗೆ ಐದು ಕೋಟಿ ರೂಪಾಯಿ shortage ಇದೆ, ವೇತನಕ್ಕೆ ಹಣ ಕೊಡಿಸಿ ಎಂದು ಹೇಳುತ್ತಾರೆ. ಶಿಕ್ಷಕರ ವೇತನಕ್ಕೆ ತೊಂದರೆಯಾಗಿದೆ. ಅತಿಥಿ ಉಪನ್ಯಾಸಕರ ಮತ್ತು ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೊಂದರೆಯಾಗಿದೆ. ಇವತ್ತು ಯಾವ ಪರಿಸ್ಥಿತಿಯಲ್ಲಿ ನಾವು ಇದ್ದೇವೆಂದರೆ, ನಮ್ಮ ಆಪ್ತ ಸಹಾಯಕರಿಗೂ ವೇತನ ಇಲ್ಲ. ಅನುದಾನವು ಇಲ್ಲ.

ಮಾನ್ಯ ಸಭಾಪತಿಯವರೇ, ಇನ್ನೂ ಬಹಳ ವಿಚಾರಗಳು ಇವೆ, ಆದರೆ, ಹೆಚ್ಚಿಗೆ ಮಾತನಾಡುವುದರಲ್ಲಿ ಅರ್ಥವಿಲ್ಲ ಎಂಬ ಕಾರಣಕ್ಕೆ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಉಳಿದ ವಿಚಾರಗಳನ್ನು ಬಜೆಟ್‌ನ ಮೇಲೆ ಮಾತನಾಡುತ್ತೇನೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಾಗಿ ತಮಗೆ ಧನ್ಯವಾಗಳನ್ನು ತಿಳಿಸುತ್ತೆನೆ.

**ಸಭಾಪತಿಯವರು:-** ಡಾ||ತೇಜಸ್ವಿನಿ ಗೌಡರವರೇ, ತಾವು 20 ನಿಮಿಷಗಳಲ್ಲಿ ಮಾತನಾಡಿ ಮುಗಿಸಬೇಕು.

**ಡಾ||ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಉಭಯ ಸದನಗಳನ್ನು ಉದ್ದೇಶಿಸಿ ಘನತೆವೆತ್ತ ಮಾನ್ಯ ರಾಜ್ಯಪಾಲರು ಮಾಡಿದಂತಹ ಭಾಷಣಕ್ಕೆ ಅಭಿನಂದನೆಗಳನ್ನು ಸಲ್ಲಿಸುವಂತಹ ಒಂದು ಸತ್ಸಂಪ್ರದಾಯವನ್ನು ಪಾಲನೆ ಮಾಡುತ್ತಾ ನಾವು ಮಾತನಾಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಕಂಠೇಗೌಡರವರು ಹೇಳಿದ್ದು ನಿಜವಿದೆ. ನಾವು ಈ ಕಲಾಪವನ್ನು ಬಜೆಟ್ ಮಂಡನೆಗೂ ಮುಂಚೆಯೇ ಮುಗಿಸಬೇಕಾಗಿತ್ತು. ಆದರೆ, ಮುಗಿಸದಿರುವುದಕ್ಕೆ ಕಾರಣ ಏನೆಂದು ಮಾನ್ಯ ಸಭಾಪತಿಯವರು ಹೇಳಿದ್ದರಿಂದ, ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಂಡು ಸದನದ ಸಮಯವನ್ನು ಇನ್ನು ಮುಂದೆ ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ನಾವು ಒಂದು ನಿರ್ಣಯಕ್ಕೆ ಬರಬೇಕಾಗಿದೆ.

ಮಾನ್ಯ ಸಭಾಪತಿಯವರೇ, ಸದನದಲ್ಲಿ ತುಂಬ ದಿಗ್ಗಜರು ಮಾತನಾಡಿದ್ದಾರೆ. ಅವರೆಲ್ಲರೂ ಬಹಳ ಸೊಗಸದಾತಂಹ debate ಮಾಡಿದರು. ಹಿರಿಯರಾದಂತಹ ಮಾನ್ಯ ಎಸ್.ಆರ್.ಪಾಟೀಲ್‌ರವರು ಇರಬಹುದು, ಶ್ರೀ ಬಸವರಾಜ ಶಿವಲಿಂಗ ಹೊರಟ್ಟಿಯವರು ಇರಬಹುದು ಅಂತಹ debate ಗಳನ್ನು ಕೇಳುವುದೇ ನಮ್ಮ ಸೌಭಾಗ್ಯ. ಪೀಠದಿಂದ ಅನೇಕ ಬಾರಿ ಎಲ್ಲರಿಗೂ ಅವಕಾಶ ಮಾಡಿಕೊಟ್ಟಾಗ, ನಾವು ಸಹ ಮಧ್ಯ ಪ್ರವೇಶ ಮಾಡುವುದನ್ನು ಕಡಿಮೆ ಮಾಡಿದರೆ ಅವರ ವಿಚಾರ ಲಹರಿ ಚೆನ್ನಾಗಿ ಆಗುತ್ತದೆಂದು ನಾನು ಬಯಸುತ್ತೇನೆ. ನಾನು ಅಂತಹ ಒಂದು ಸಹಕಾರವನ್ನು ಸಮಯ ಕಡಿಮೆ ಇರುವುದರಿಂದ ನಿರೀಕ್ಷೆ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಮೊದಲು ಆರಂಭವಾಗಿದ್ದು, ಈ ಸರ್ಕಾರ ಯಾವ ಸಂದರ್ಭದಲ್ಲಿ ರಚನೆ ಆಯಿತು, ಈ ಸರ್ಕಾರ ಬಂದಾಗ ಮಾನ್ಯ ಮುಖ್ಯ ಮಂತ್ರಿಯವರು ಏಕಾಂಗಿಯಾಗಿ, ಒಂದು ತಿಂಗಳ ಕಾಲ ಸಚಿವ ಸಂಪುಟವನ್ನು ರಚನೆ ಮಾಡಲು ತೊಂದರೆ ಆಯಿತು ಎಂದು ಕಟುವಾದ ಮಾತುಗಳಿಂದ ಪ್ರತಿಪಕ್ಷದ ನಾಯಕರು ಟೀಕೆ ಮಾಡಿದ್ದಾರೆ. ನಾವು ಅದೆಲ್ಲವನ್ನು ಸ್ವೀಕರಿಸುತ್ತೇವೆ. ಅದು ವಸ್ತುಸ್ಥಿತಿ. ಅನೇಕ ಸಂದರ್ಭಗಳಲ್ಲಿ ಈ ಭಾಗದಲ್ಲಿ ಕುಳಿತಿರುವಂತಹ ಹೊಸ ಶಾಸಕರುಗಳಲ್ಲಿ ಅನೇಕರಿಗೆ ಅವಕಾಶ ಸಿಕ್ಕಿ ಅವರು ಸಚಿವರಾಗಿ ಬಂದಿದ್ದಾರೆ. ಅದನ್ನು ತೀಕ್ಷ್ಣವಾಗಿ ಟೀಕೆ ಮಾಡಲಾಯಿತು. ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ಚುನುವಾಣೆಯ ಮೂಲಕ ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದಂತಹ ಬಿಜೆಪಿಗೆ ಸರ್ಕಾರ ರಚನೆ ಮಾಡುವಂತಹ ಸಂದರ್ಭದಲ್ಲಿ mathematical number ಸಿಗದ ಕಾರಣ, ನಾವು ಪ್ರತಿ ಪಕ್ಷದಲ್ಲಿ ಕುಳಿತುಕೊಳ್ಳಬೇಕಾಯಿತು. ನಂತರ ಮೈತ್ರಿ ಸರ್ಕಾರ ಸಂಕಷ್ಟದಲ್ಲಿಯೇ ರಚನೆ ಆಯಿತು. ಆದರೆ, ನಂತರ ಅವರು ಸಫಲರಾದರು. ನಾವು ಅದನ್ನು ಗೌರವಿಸುತ್ತೇವೆ. ತದನಂತರ ಉಂಟಾದ ಮೈತ್ರಿ ಸರ್ಕಾರದ ಪತನಕ್ಕೆ ಬಿಜೆಪಿಯೇ ಕಾರಣವೆಂದು, ಬಿಜೆಪಿಯ ಬಗ್ಗೆ ಅನೇಕ ಬಾರಿ ಟೀಕೆ ಮಾಡಿದರು. ರಾಜಕೀಯ ಕ್ಷೇತ್ರಗಳಲ್ಲಿ ಹೊರಗಡೆ ಟೀಕೆ ಮಾಡಿದ್ದನ್ನು ಸ್ವೀಕರಿಸುತ್ತೇವೆ. ಆದರೆ, ಸದನದೊಳಗೆ ಚರ್ಚೆ ನಡೆಯುವಂತಹ ಸಂದರ್ಭದಲ್ಲಿ ಅದರಲ್ಲಿ ಯಾವುದೇ ರೀತಿಯ ಎಳ್ಳಷ್ಟು ಸತ್ಯಾಂಶ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಕಾರಣ, ಅವರ ಮನೆಯಲ್ಲಿ ಉಂಟಾದ ಮೂಲ ಒಡಕಿಗೆ ನಾವು ಕಾರಣರಲ್ಲ. ಅವರ ಮನೆಯಿಂದ ಹೊರಬಂದ ಸಹೋದರರು ಯಾವ ಕಾರಣಕ್ಕೆ ಹೊರಬಂದರು ಎಂಬುದಕ್ಕೆ ಅವರೇ ಒಂದು ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ. ನಮ್ಮ ಪಾತ್ರ ಬಂದಿರುವುದು ಯಾವಾಗ ಎಂದರೆ, ಉಪ ಚುನಾವಣೆ ಘೋಷಣೆ ಆಯಿತು. ಅದಕ್ಕೂ ಮುಂಚೆ ಕಾನೂನು ಹೋರಾಟ ಆಯಿತು. ಕೆಳಮನೆಯಲ್ಲಿ ಮಾನ್ಯ ಸ್ಪೀಕರ್‌ರವರು ಶಿಕ್ಷೆ ವಿಧಿಸಿದರು. ಅನರ್ಹಗೊಳಿಸಿದರು. ಮಾನ್ಯ ಸರ್ವೋಚ್ಚ ನ್ಯಾಯಾಲಯದವರೆಗೂ ಕಾನೂನು ಹೋರಾಟ ನಡೆದು, ಚುನಾವಣೆಗಳು ಆಗಬೇಕೆಂದು ಘೋಷಣೆ ಆಯಿತು, ಚುನಾವಣೆಯಲ್ಲಿ ಅವರು ಸ್ಪರ್ಧಿಸಬಹುದೆಂದು ಆದ ಮೇಲೆ ಅದನ್ನು ಟೀಕೆ ಮಾಡುವುದು ಎಷ್ಟು ಸರಿ, ಎಷ್ಟು ಸರಿಯಲ್ಲ ಎನ್ನುವುದನ್ನು ನಾನು ಈ ಸದನದ ವಿವೇಚನೆಗೆ ಬಿಡುತ್ತೇನೆ. ಅವರು ನಮ್ಮ ಪಕ್ಷವನ್ನು ಒಪ್ಪಿ ನಮ್ಮ ಪಕ್ಷದಿಂದ ಉಪ ಚುನಾವಣೆಯಲ್ಲಿ ಅಭ್ಯರ್ಥಿಗಳಾದ ಮೇಲೆ ಅವರು ಕಮಲದ ಕಲಿಗಳಾದರು. ಅಲ್ಲಿಯವರೆಗೆ ಕಮಲದ ಪಕ್ಷಕ್ಕೂ ಮತ್ತು ಅವರಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎನ್ನುವುದನ್ನು ಹೇಳುವುದಕ್ಕೆ ನಾವು ಇವತ್ತು ಇಷ್ಟ ಪಡುತ್ತೇನೆ. ಅವರ್ಯಾರು ಸಹ ಅಸಮರ್ಥರಾಗಿರಲಿಲ್ಲ. ಅವರೆಲ್ಲರೂ ತಮ್ಮ ವ್ಯಯಕ್ತಿಕ ವರ್ಚಸ್ಸನ್ನು, ಸಾಮರ್ಥ್ಯವನ್ನು ಹೊಂದಿದ್ದರು. ಅಂತರಿಕ ಪ್ರಜಾಪ್ರಭುತ್ವದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಕ್ಷದಲ್ಲಿ ಒಳಗಡೆ ಅವರ ಬೇಗುದಿಯನ್ನು ಮತ್ತು ಭಿನ್ನಾಪ್ರಾಯವನ್ನು ವ್ಯಕ್ತಪಡಿಸಿದರು. ಅದು ಆ ಪಕ್ಷದ ಹಿರಿಯರಿಗೆ ಒಪ್ಪಿಗೆ ಆಗದಿರಬಹುದು. ಅದು ಆ ರಾಜಕೀಯ ಪಕ್ಷದ ಆತಂರಿಕ ವಿಚಾರ ನಾನು ಅದರೊಳಗೆ ಕೈಹಾಕುವುದಿಲ್ಲ. ಆದರೆ, ಜನತೆಯ ಆಶೀರ್ವಾದದಿಂದ ಅವರೆಲ್ಲರೂ ಗೆದ್ದು ಬಂದಿದ್ದಾರೆ. ಅವರು highest risk ತೆಗೆದುಕೊಂಡಿದ್ದರು. ಜನತೆ ಒಮ್ಮೆ ಆಶೀರ್ವಾದ ಮಾಡಿ ಒಂದು ರಾಷ್ಟ್ರೀಯ ಪಕ್ಷದ ಮೂಲಕ ಗೆಲ್ಲಿಸಿ ಕಳುಹಿಸದ ಮೇಲೆ ನಾವು ಮತ್ತೆ, ಮತ್ತೆ ಅದನ್ನು ಈ ಸದನದಲ್ಲಿ ಕುಳಿತುಕೊಂಡು ಅವರು ಅನರ್ಹರೆಂದು ಹೇಳುವುದಾಗಲಿ, ಅವರನ್ನು ಚುಚ್ಚುವುದಾಗಲಿ, ವ್ಯಂಗ್ಯದ ಮಾತುಗಳನ್ನಾಡಿದರೆ ಅದಕ್ಕೆ ಹೆಚ್ಚಿನ ಬೆಲೆ ಇರುವುದಿಲ್ಲ ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಅದನ್ನು ಮರೆತ್ತಿದ್ದೇವೆ. ಆದರೆ, ಅವರೇ ಅದನ್ನು ಜ್ಞಾಪಕ ಮಾಡಿಕೊಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾವು ಅದನ್ನು ಮರೆತ್ತಿದ್ದೇವೆ. ಆದರೆ, ಮಾನ್ಯ ಸದಸ್ಯರೇ ಅದನ್ನು ಮತ್ತೆ ಜ್ಞಾಪಕ ಮಾಡಿಕೊಡುತ್ತಿದ್ದಾರೆ.

**(ಗೊಂದಲ)**

**ಡಾ||ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಅವರು ಮರೆಯುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಅದನ್ನು ಮರೆತ್ತಿದ್ದೇವೆ. ಅವರೇ ಅದನ್ನು ಪುನಃ ನೆನಪು ಮಾಡುತ್ತಿದ್ದಾರೆ.

**ಡಾ||ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ. ಮತ್ಸರ ಸಹಜ. ಹೊಟ್ಟೆಕಿಚ್ಚು ಸಹಜ. ಆದರೆ, ಅದು ಒಂದು ಮಿತಿಯಲ್ಲಿ ಇರಬೇಕು. ಅವರೆಲ್ಲರೂ ಸಹ ಇವತ್ತಿನ ದಿವಸ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇದನ್ನು ಪೂರಕವಾಗಿ ಏಕೆ ಹೇಳಿದ್ದೇನೆಂದರೆ, ನಮ್ಮ ಮಾನ್ಯ ಮುಖ್ಯ ಮುಖ್ಯಮಂತ್ರಿಯವರು ಸಂಪುಟ ರಚನೆಗಿಂತ ಮುಂಚೆ ಅವರು ಕೆಲಸ ಮಾಡುವಾಗ ನಮ್ಮ ಅರ್ಧ ರಾಜ್ಯ ಬರದಿಂದ ತತ್ತರಿಸಿತ್ತು. ತದನಂತರ ಅತಿ ಶೀಘ್ರವಾಗಿ ಅತಿ ಪ್ರವಾಹ ಬಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅತೀವೃಷ್ಟಿಯಿಂದ ಕಷ್ಟಗಳನ್ನು ಎದುರಿಸಬೇಕಾಯಿತು. ಆದರೆ, ಮಾನ್ಯ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದ ಸರ್ಕಾರದಲ್ಲಿ ಇವತ್ತು ಸಚಿವರು ಆಗಿರುವಂತಹವರು ಅವತ್ತಿನ ಮಾಜಿ ಸಚಿವರು, ಮಾಜಿ ಉಪ ಮುಖ್ಯಮಂತ್ರಿಯವರು ಇರಬಹುದು, ಬಿಜೆಪಿಗೆ ಅಧಿಕಾರ ಇರಲಿ ಅಥವಾ ಬಿಡಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಜೊತೆಗೆ ಸಚಿವರಿಗಿಂತ ಹೆಚ್ಚಾಗಿ ಅವರು ಒಂದು ತಂಡವಾಗಿ, ಒಂದು ಸಮೂಹವಾಗಿ ಬರ ನಿಗ್ರಹಣ ಇರಬಹುದು, ಅತೀವೃಷ್ಟಿಯನ್ನು ನಿಗ್ರಹಣ ಮಾಡಿದ್ದರಿಂದಾಗಿ ಒಂದು ಒಳ್ಳೆಯ ರೀತಿಯಲ್ಲಿ ಈ ಪರಿಸ್ಥಿತಿಯನ್ನು ನಿಗ್ರಹ ಮಾಡಿದ್ದಾರೆ ಎನ್ನುವುದನ್ನು ತಾವು ಒಪ್ಪುತ್ತೀರಿ ಎಂದು ನಾನು ಭಾವಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಅನೇಕ ಮಾನ್ಯ ಸದಸ್ಯರು ಅನೇಕ ಅಂಶಗಳ ಮೇಲೆ ಗಮನ ಚೆಲ್ಲಿದ್ದಾರೆ. ಬಜೆಟ್‌ನ ಮೇಲೆ ನಂತರ ಚರ್ಚೆ ಮಾಡುವುದರಿಂದ ನಾನು ಹೆಚ್ಚು ಸಮಯವನ್ನು ವ್ಯಯ ಮಾಡುವುದಿಲ್ಲ. ನಮ್ಮ ಸರ್ಕಾರವು, ಆದ್ಯತೆಯ ಮೇರೆಗೆ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದು, ಪ್ರಸಕ್ತ ಹಣಕಾಸು ವರ್ಷದಲ್ಲಿ ಬೃಹತ್ ನೀರಾವರಿ ಯೋಜನೆಗಳ ಮುಖಾಂತರ ಸರಿ ಸುಮಾರು 12,000 ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿ ಸಾಮರ್ಥ್ಯವನ್ನು ಕಲ್ಪಿಸಿದೆ. ಇದರ ಜೊತೆಗೆ ಗ್ರಾಮೀಣ ಪ್ರದೇಶದಲ್ಲಿರುವ ಕೆರೆಗಳಿಗೆ ನೀರು ತುಂಬಿಸುವ ಮೂಲಕ ಅಂತರ್ಜಲ ಪುನಶ್ಚೇತನಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಿದೆ. ಈ ನಿಟ್ಟಿನಲ್ಲಿ ಸುಮಾರು 175 ಕರೆಗಳನ್ನು ಭರ್ತಿ ಮಾಡಲು 496 ಕೋಟಿ ರೂಪಾಯಿಗಳ ಅಂದಾಜು ವೆಚ್ಚದ 4 ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

ಕೇಂದ್ರ ಸರ್ಕಾರದ "ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ" ಅಡಿಯಲ್ಲಿ ಅರ್ಹ ಕೃಷಿ ಆಧಾರಿತ ಕುಟುಂಬಗಳಿಗೆ ಕೇಂದ್ರ ಸರ್ಕಾರವು ನೀಡುತ್ತಿರುವ 6,000 ರೂಪಾಯಿಗಳ ವಾರ್ಷಿಕ ಹಣಕಾಸಿನ ನೆರವಿನ ಜೊತೆಗೆ ನಮ್ಮ ಸರ್ಕಾರವು ಪ್ರತಿ ವರ್ಷ 4,000 ರೂಪಾಯಿಗಳ ಹೆಚ್ಚುವರಿ ಹಣಕಾಸಿನ ನೆರವನ್ನು ಸಹ ನೀಡುತ್ತಿದೆ.

ಹಾಗೆಯೇ, 100 ಬರಪೀಡಿತ ತಾಲ್ಲೂಕ್‌ಗಳಲ್ಲಿ "ಬರ ನಿಯಂತ್ರಣ ಜಲಾನಯನ ಅಭಿವೃದ್ಧಿ" ಎಂಬ ಒಂದು ಹೊಸ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಿದೆ.

41 ತಾಲ್ಲೂಕುಗಳಲ್ಲಿ ಅಂತರ್ಜಲ ನಿರ್ವಹಣಾ ಕಾರ್ಯವನ್ನು ಕೈಗೊಳ್ಳಲು "ಅಟಲ್ ಭೂಜಲ ಯೋಜನೆ"ಯಡಿ ಕೇಂದ್ರ ಸರ್ಕಾರದಿಂದ ನೀಡುವ ಅನುದಾನಕ್ಕೆ ಪೂರಕವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಚ್ಚುವರಿ ಅನುದಾನ ನೀಡುವ ಮೂಲಕ ರಾಜ್ಯವನ್ನು ಬರ ನಿರೋಧಕವಾಗಿಸಲು ನಮ್ಮ ಸರ್ಕಾರ ಉದ್ದೇಶಿಸಿದೆ.

"ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ" ಯೋಜನೆಯ ಅಡಿಯಲ್ಲಿ ದಿನಾಂಕ 26–07–2019 ರಿಂದ ಈವರೆಗೆ 3.30 ಲಕ್ಷಕ್ಕೂ ಹೆಚ್ಚಿನ ಫಲಾನುಭವಿಗಳ ಚಿಕಿತ್ಸೆಗಾಗಿ ಅನುಮೋದನೆಯನ್ನು ನೀಡಲಾಗಿದೆ.

ನಮ್ಮ ಸರ್ಕಾರವು, 1ನೇ ನವೆಂಬರ್ 2019 ರಿಂದ ಜಾರಿಗೆ ಬರುವಂತೆ "ಆಶಾ ಕಾರ್ಯಕರ್ತೆಯರ" ಮಾಸಿಕ ಗೌರವ ಧನವನ್ನು 3,500 ರೂಗಳಿಂದ 4,000 ರೂ.ಗಳಿಗೆ ಹೆಚ್ಚಿಸಿದೆ.

ನಮ್ಮ ಸರ್ಕಾರವು ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡಲಾಗುತ್ತಿದ್ದ ಗೌರವ ಧನವನ್ನು ಮಾಸಿಕ 8,000 ರೂಪಾಯಿಗಳಿಂದ 10,000 ಗಳವರೆಗೆ ಮತ್ತು ಅಂಗನವಾಡಿ ಸಹಾಯಕರ ಗೌರವಧನವನ್ನು ಮಾಸಿಕ 4,000 ರೂಪಾಯಿಗಳಿಂದ 5,250 ರೂಪಾಯಿಗಳಿಗೆ ಹೆಚ್ಚಿಸಿದೆ.

ನಮ್ಮ ಸರ್ಕಾರವು, ಡಿಸೆಂಬರ್ 2019ರವರೆಗೆ 1.15 ಲಕ್ಷಕ್ಕೂ ಹೆಚ್ಚು ಮನೆಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿದೆ ಮತ್ತು 3,461 ನಿವೇಶನಗಳನ್ನು ವಿತರಣೆ ಮಾಡುವುದರ ಮುಖಾಂತರ ಬಿಜೆಪಿ ಸರ್ಕಾರ ಯಾವ ನಿಟ್ಟಿನಲ್ಲಿ ಮುಂದೆ ಸಾಗುತ್ತಿದೆ ಎಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತೋರಿಸಿದ್ದಾರೆ.

ಮುಂದು .,

(176)06–03–2020(11–20)ಎಂವಿ–ಎಂಡಿ

**(ಸಭಾಪತಿಯವರ ಉಪಸ್ಥಿತಿ)**

**ಡಾ॥ತೇಜಸ್ವಿನಿ ಗೌಡ (ಮುಂದು):–**

ಮಾನ್ಯ ಸಭಾಪತಿಯವರೇ, ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ವಿಶೇಷವಾಗಿ ಬೇಸಿಗೆಕಾಲ ಬರುತ್ತಿರುವುದರಿಂದ ನಮ್ಮನ್ನು ಕಾಡುವಂಥದ್ದು ಎಂದರೆ, ಈಗ 25 ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯಲ್ಲಿ 1752 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹದಿನಾರು ಸಾವಿರ ಗ್ರಾಮೀಣ ನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಸರ್ಕಾರ ಕೆಲಸ ಮಾಡಿರುವಂಥದ್ದನ್ನು ಮಾನ್ಯ ರಾಜ್ಯಪಾಲರು ಉಲ್ಲೇಖ ಮಾಡಿದ್ದಾರೆ. ಸುಮಾರು 7.54 ಲಕ್ಷ ಮಂದಿಗೆ ಸುರಕ್ಷಿತವಾದ ಕುಡಿಯುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನೀರನ್ನು ಒದಗಿಸುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ ಬಗ್ಗೆ ಹೇಳುವುದಾದರೆ, ಈಗ ವಿರೋಧ ಪಕ್ಷದಲ್ಲಿ ಇರಲಿ, ಆಡಳಿತ ಪಕ್ಷದಲ್ಲಿ ಇರಲಿ. ನಮ್ಮೆಲ್ಲರನ್ನು ಕಾಡುತ್ತಿರುವಂತಹ ಪ್ರಶ್ನೆ ಎಂದರೆ, ಅನೇಕ ಮಂದಿ ಬಡವರಿಗೆ ಯಾವ ರೀತಿಯಲ್ಲಿ ಉದ್ಯೋಗವನ್ನು ಸೃಷ್ಟಿ ಮಾಡಬೇಕು ಎಂಬುದು. ಉದ್ಯೋಗ ಸೃಷ್ಟಿಯು ಯಾವುದೇ ಸರ್ಕಾರಕ್ಕೂ ಸಹ ಒಂದು ದೊಡ್ಡ ಸವಾಲು. ಅದರಲ್ಲಿ ಪ್ರಧಾನ ಮಂತ್ರಿ ಕೌಶಲ್ಯ ಭಾರತ ಯೋಜನೆ ಮತ್ತು ಕರ್ನಾಟಕದ ಕೌಶಲ್ಯ ಯೋಜನೆಯಡಿಯಲ್ಲಿ ನಿರ್ಲಕ್ಷ್ಯಕ್ಕೆ ಒಳಪಟ್ಟಂತಹ ಪುಟ್ಟ ಪುಟ್ಟ ಕೌಶಲ್ಯಗಳು ಏನಿವೆ ಅಂದರೆ, ಮರಗೆಲಸ, ಶಿಲ್ಪದ ಕೆಲಸ, ಹೆಣಿಗೆ ಕೆಲಸ, ನೇಯ್ಗೆ ಕೆಲಸ. ಇಂತಹ ಅನೇಕ ಅದ್ವಿತೀಯ ಕೌಶಲ್ಯಗಳನ್ನು ಉಳಿಸುವ ದೃಷ್ಟಿಯಿಂದ ಈ ಯೋಜನೆ ಬಹಳ ಅನುಕೂಲಕರವಾಗಿದೆ. ಈ ನಿಟ್ಟಿನಲ್ಲಿ ಸುಮಾರು 33 ಸಾವಿರ ಅಭ್ಯರ್ಥಿಗಳಿಗೆ ತರಬೇತಿ ಕೊಡುವಂಥದ್ದು ಬಹಳ ಉತ್ತಮವಾದ ಕೆಲಸವಾಗಿದೆ.

ಮಾನ್ಯ ಸಭಾಪತಿಯವರೇ, ಪೋಡಿ ಅಭಿಯಾನದ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಸರ್ಕಾರದ ಯಾವುದೇ ಯೋಜನೆ ರೈತರಿಗೆ ತಲುಪಬೇಕಾದರೆ, ಭೂ ದಾಖಲೆಗಳು ಬಹಳ ಮಹತ್ವವಾದ ದಾಖಲೆಗಳು. ನಾವು ಎಷ್ಟೋ ಬಾರಿ ಕೊಲೆಗಳಾಗುವಂತಹವುದನ್ನು ನೋಡುತ್ತೇವೆ. ಈಗ ಒಂದು ಗುಂಟೆ ಜಾಗಕ್ಕೆ ಅಣ್ಣ-ತಮ್ಮಂದಿರು ಮನೆಯನ್ನು ಹೊಡೆಯುತ್ತಾರೆ ಮತ್ತು ಗ್ರಾಮ, ಗ್ರಾಮಗಳ ನಡುವೆ ಇರುವಂತಹ ಸಾಮರಸ್ಯ ಕೆಡುತ್ತದೆ. ನಮ್ಮ ಸರ್ಕಾರ ಪೋಡಿ ಅಭಿಯಾನವನ್ನು ಕಂದಾಯ ಇಲಾಖೆಯ ವತಿಯಿಂದ ಕಂದಾಯ ಸಚಿವರಾದ ಮಾನ್ಯ ಆರ್.ಅಶೋಕ್‌ರವರ ನೇತೃತ್ವದಲ್ಲಿ ಅದಕ್ಕೆ ಗಂಭೀರವಾದ ಆದ್ಯತೆ ಕೊಟ್ಟು ಮಾಡುತ್ತಿರುವುದರ ಬಗ್ಗೆ ನಮಗೆ ಬಹಳ ಉಪಯುಕ್ತವಾದ ಕಾರ್ಯಕ್ರಮವೆಂದು ಅನಿಸುತ್ತಿದೆ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪೋಡಿ ಎಲ್ಲಿ ಆಗಿದೆ.

**ಡಾ||ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಪೋಡಿಯನ್ನು digitization ಮಾಡುತ್ತಿದ್ದಾರೆ.

**ಶ್ರೀ ಟಿ.ಎ.ಶರವಣ(ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ದಯಮಾಡಿ ಅವರು ಸದನಕ್ಕೆ ತಪ್ಪು ಸಂದೇಶ ಕೊಡುವುದು ಬೇಡ.

**(ಗೊಂದಲ)**

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಮಗೆ ಗೊತ್ತಿರುವಂತೆ ದಕ್ಷ ಅಧಿಕಾರಿಗಳ...

**(ಗೊಂದಲ)**

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ. ತಾವು ನನಗೆ ಮಾತನಾಡುವುದಕ್ಕೆ ಸಮಯ ನೀಡಿದ್ದೀರಿ.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಆದರೆ, ಅದು ನಡೆಯುತ್ತಿಲ್ಲ.

**(ಗೊಂದಲ)**

**ಡಾ॥ಜಯಮಾಲ ರಾಮಚಂದ್ರ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಕಾಲಂನಲ್ಲಿ ಇರುವಂಥದ್ದು ಯಾವುದೂ ಪೋಡಿ ಆಗಿಲ್ಲ.

**(ಗೊಂದಲ)**

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡೋಣ. ಆದರೆ, ನಾನು yield ಆಗಿಲ್ಲ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿ.ಶ್ರೀನಿವಾಸ ಪ್ರಸಾದ್‌ರವರು ಕಂದಾಯ ಮಂತ್ರಿಗಳಾಗಿದ್ದಾಗಿನಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಇದನ್ನು ಅನೇಕ ಮಂದಿ ಮಾತನಾಡಿರುವುದರಿಂದ, ಈಗ ಎರಡು ಕಡೆಯಲ್ಲಿಯೂ ಸಹ ಮಾತನಾಡಿದ್ದೇವೆ. ನಮ್ಮ ಪ್ರತಿಪಕ್ಷದ ಸನ್ಮಿತ್ರರು ಹೇಳುವಂತಹ ಯಾವುದೇ ವಿಚಾರಧಾರೆಗಳನ್ನು ಸ್ವೀಕರಿಸುವುದಕ್ಕೆ ಈ ಸರ್ಕಾರ ಮುಕ್ತ ಮನಸ್ಸನ್ನು ಹೊಂದಿದೆ. ರೈತರ ವಿಚಾರ ನಮ್ಮೆಲ್ಲರಿಗೂ ಸೇರಿರುವಂಥದ್ದು. ಬಜೆಟ್ ಮೇಲೂ ಮಾತನಾಡೋಣ, ಲೋಪದೋಷಗಳು ಇದ್ದರೆ ಖಂಡಿತವಾಗಿ ಸಚಿವರ ಗಮನಕ್ಕೆ ತಂದು ನಾವು ಕೂಡ ಅದಕ್ಕೆ ಧ್ವನಿ ಸೇರಿಸುತ್ತೇವೆ. ಅದರಲ್ಲಿ ಯಾವುದೇ ರೀತಿಯ ವ್ಯತ್ಯಾಸ ಇಲ್ಲ.

ಈಗ ಇದರಲ್ಲಿ ವಿಶೇಷವಾಗಿ ನನ್ನ ಗಮನ ಸೆಳೆದಿರುವುದು ಎಂದರೆ, ಬೆಂಗಳೂರು ನಗರಕ್ಕೆ ಪ್ರತ್ಯೇಕವಾಗಿ 'ಭಯೋತ್ಪಾದಕ ನಿಗ್ರಹ ಘಟಕ' (Anti-Terrorist Unit) ವನ್ನು ಸ್ಥಾಪನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲಾಗಿದೆ. ತುರ್ತು ಸಂದರ್ಭಗಳಲ್ಲಿ ನೆರವು ನೀಡುವುದಕ್ಕಾಗಿ, ಕೇಂದ್ರ ಸರ್ಕಾರದ ನೆರವಿನೊಂದಿಗೆ 'ತುರ್ತು ಸ್ಪಂಧನ ಬೆಂಬಲ' ವ್ಯವಸ್ಥೆಯನ್ನು *ERSS* (Emergency Response Support System) ಸ್ಥಾಪಿಸಲಾಗಿದೆ. ದುಷ್ಟ ಅಪರಾಧಿಗಳು ಮತ್ತು ಭಯೋತ್ಪಾದಕರನ್ನು ಬಂಧಿಸಿಡುವುದಕ್ಕಾಗಿ, ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿ ಅತಿ ಭದ್ರತಾ ಕಾರಾಗೃಹವನ್ನು ನಿರ್ಮಿಸಲಾಗುತ್ತಿದೆ. ಹಾಗೆಯೇ ವಿಜಯಪುರ ಜಿಲ್ಲೆ ಮತ್ತು ಬೀದರ್ ಜಿಲ್ಲೆಗಳಲ್ಲಿ ಕೇಂದ್ರ ಕಾರಾಗೃಹಗಳನ್ನು ನಿರ್ಮಿಸಲಾಗಿದೆ. ಪೊಲೀಸ್ ನೇಮಕಾತಿಯಲ್ಲಿ ಮಹಿಳೆಯರಿಗೆ ಶೇಕಡಾ 25ರಷ್ಟು ಮೀಸಲಾತಿಯನ್ನು ಕೊಟ್ಟಿರುವಂಥದ್ದು ಬಹಳ ಸ್ವಾಗತಾರ್ಹವಾದುದು. ಈಗ ಬೆಂಗಳೂರಿನಲ್ಲಿ Anti-Terrorist Unit ನ್ನು ಸ್ಥಾಪನೆ ಮಾಡುವಂತಹ ಸನ್ನಿವೇಶ ಏಕೆ ಬಂತು? ಭಯೋತ್ಪಾದಕರು ಬೆಂಗಳೂರನ್ನು ಆಕ್ರಮಣ ಮಾಡುವಂತಹ ಸನ್ನಿವೇಶ ಯಾವ ಹಿನ್ನೆಲೆಯಲ್ಲಿ ಆಯಿತು. ಅದೇರೀತಿ ಸುರಕ್ಷತೆಗೆ ಸಂಬಂಧಪಟ್ಟಂತೆ, ರಾಜಧಾನಿ ಬೆಂಗಳೂರಿನಲ್ಲಿ ಯಾವ ರೀತಿಯ ಭಯೋತ್ಪಾದಕರು ಇದ್ದಾರೆಂದರೆ, ಪರಪ್ಪನ ಅಗ್ರಹಾರದ ಕಾರಾಗೃಹವನ್ನು ಉನ್ನತೀಕರಣಗೊಳಿಸಿ ಅದನ್ನು ಸುಭದ್ರತೆಯಿಂದ ಕಟ್ಟುವಂತಹ ಸನ್ನಿವೇಶ ಇದೆ ಎಂದರೆ, ದೇಶ ಮತ್ತು ರಾಜ್ಯದ ಸುರಕ್ಷತೆಯ ವಿಚಾರದಲ್ಲಿ ನಾವು ಯಾರೂ ಕೂಡ ಅದನ್ನು ಹಗುರವಾಗಿ ತೆಗೆದುಕೊಳ್ಳುವಂತಹ ಸಂದರ್ಭವಿಲ್ಲ. ಅನೇಕ ಹಿರಿಯ ಸದಸ್ಯರು ಮಾತನಾಡಿದಾಗ ಹೇಳಿದರು, CAA *Citizenship (Amendment) Act and NRC (National Register of Citizens)* ವಿರುದ್ಧ ನಡೆದಂತಹ ಪ್ರತಿಭಟನೆಗಳ ಸಂದರ್ಭದಲ್ಲಿ ರಾಜ್ಯದಲ್ಲಿ ಎಲ್ಲಾ ಕಡೆ ಶಾಂತಿ ಇತ್ತು. ಆದರೆ, ಮಂಗಳೂರು ಜಿಲ್ಲೆಯಲ್ಲಿ ಮಾತ್ರ ಏಕೆ ಪ್ರತಿಕೂಲ ಸಂದರ್ಭ ಉಂಟಾಯಿತು ಎಂದು, ಸರ್ಕಾರವನ್ನು ಗುರಿಯಾಗಿಸಿ ಟೀಕೆ ಮಾಡಿದರು. ಅದನ್ನು ನಾನು ಸ್ವಾಗತಿಸುತ್ತೇನೆ. ಅದು ನಿಜ. ಮಂಗಳೂರಿನಲ್ಲಿ ಪ್ರಕ್ಷುಬ್ಧತೆ ಏಕೆ ಆಯಿತು ಎನ್ನುವುದು ಚರ್ಚೆಯಾಗುವಂತಹ ವಿಚಾರ. ಇದು ಇವತ್ತಿನ ಉತ್ತರವಲ್ಲ. ಇವತ್ತು ಭಟ್ಕಳ ಎಂದು ಹೇಳಿದರೆ, ಸುಂದರವಾದ ಕಡಲ ಕಿನಾರೆ ನಮಗೆ ನೆನಪಿಗೆ ಬರುತ್ತದೆಯೇ? ಮತ್ತು ಮೀನುಗಾರಿಕೆಯಲ್ಲಿ ಅದ್ವಿತಿಯ ಸಾಧನೆ ಮಾಡಿರತಕ್ಕಂಥ ಉದ್ಯಮ ನಮಗೆ ನೆನಪು ಬರುತ್ತದೆಯೇ? ಹಾಗೆಯೇ ವಿದೇಶಿಯರು ಬಂದು ನೋಡುವಂತಹ ಒಂದು ಪ್ರವಾಸೋದ್ಯಮದ ಕೇಂದ್ರ ಎಂಬುದು ನಮಗೆ ನೆನಪು ಬರುತ್ತದೆಯೇ? ಈಗ ಭಟ್ಕಳ ಎಂದು ಹೇಳಿದರೆ, ಅವತ್ತಿನ ಕಾಲದಲ್ಲಿ ಸುಮಾರು ಎರಡೂವರೆ ದಶಕಗಳ ಹಿಂದೆ, ನಮ್ಮ ಶ್ರೀ ಚಿತ್ತರಂಜನ್ ಎನ್ನುವಂತಹ ಶಾಸಕರ ಹತ್ಯೆಯಾಗಿದ್ದರಿಂದ ಈ ಕರಾಳ ಕಥೆ ಶುರುವಾಗುತ್ತದೆ. ಇದಕ್ಕೆ ನಾವು ಕಾರಣವೇ, ಯಾರು ಕಾರಣರು ಎಂಬುದು ಅಲ್ಲ. ಈ ಸದನದಲ್ಲಿ ಯಾರೂ ಸಹ ಭಯೋತ್ಪಾದನೆಗೆ ಸಮರ್ಥನೆ ಮಾಡುತ್ತಾರೆಂದು ನಾನು ಭಾವಿಸುವುದಿಲ್ಲ. ನಾನು ಆ ರೀತಿಯ ಟೀಕೆಗಳನ್ನು ಮಾಡುವುದಿಲ್ಲ. ಆದರೆ, ಇವತ್ತಿನ ದಿವಸ ಯಾಸೀನ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಟ್ಕಳ್, ನೋಡಿ ಆ ಭಟ್ಕಳ್ ಹೆಸರನ್ನು ಬಿಟ್ಟಿದ್ದರೆ, ನಮಗೆ ಮರ್ಯಾದೆ ಮತ್ತು ಸಂತೋಷವಾಗುತ್ತಿತ್ತು. ಇವತ್ತು ಜಲ ಮಾರ್ಗ, ವಾಯು ಮಾರ್ಗ ಮತ್ತು ಭೂ ಮಾರ್ಗ ಎಲ್ಲಾ ಕಡೆ ಸುರಕ್ಷತೆಯನ್ನು ಕಾಪಾಡಿಕೊಳ್ಳುವಂತಹ ವಿಚಾರದಲ್ಲಿ ಯಾವುದೇ ಸರ್ಕಾರ ನಿರ್ಲಕ್ಷ್ಯ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ತಿಳಿದುಕೊಳ್ಳಬೇಕಾಗಿದೆ. ಹಾಗೆಯೇ ದೇಶದ ಮೇಲೆ ಆದಂತಹ ಆಕ್ರಮಣಗಳಲ್ಲಿ ಮಂಗಳೂರಿನಲ್ಲಿ Sleeper Cells ಪತ್ತೆಯಾಯಿತು. ಕೇರಳ ಮಾರ್ಗವನ್ನು ದುಷ್ಟರು ಮತ್ತು ದೇಶದ್ರೋಹಿಗಳು ನಮ್ಮ ರಾಜ್ಯದ ಒಳಗಡೆ ನುಸುಳುವುದಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ನಮ್ಮ ಕರ್ನಾಟಕ ಸರ್ಕಾರ ಯಾವೊತ್ತು ಕೂಡ ಆ ವಿಚಾರದಲ್ಲಿ ನಿರ್ಲಕ್ಷ್ಯತೆ ತೋರುವುದಕ್ಕೆ ಸಾಧ್ಯವಿಲ್ಲ ಎಂಬ ನಿಟ್ಟಿನಲ್ಲಿ ಇದನ್ನು ಮಾಡುತ್ತಿದೆ. ಹಾಗಾಗಿ ಮಂಗಳೂರಿನಲ್ಲಿ ನಡೆದ ಘಟನಾವಳಿಗಳಲ್ಲಿ ಜಾಗ್ರತೆ ವಹಿಸಿದ್ದು ನಮ್ಮ ಪೊಲೀಸ್ ಇಲಾಖೆ ಮತ್ತು Intelligence Department ಗಳು ಅತ್ಯಂತ ಸಂಯಮ, ಸಮರ್ಥವಾಗಿ ಮತ್ತು ಕಠಿಣವಾಗಿ ಆ ಸಂದರ್ಭವನ್ನು ನಿಭಾಯಿಸಿದ್ದು ಮಾತ್ರವಲ್ಲದೆ, ಸಾವಿರಾರು ಜನರ ಪ್ರಾಣ ರಕ್ಷಣೆ ಮತ್ತು ಸಾರ್ವಜನಿಕರ ಆಸ್ತಿ ರಕ್ಷಣೆ ಮಾಡುವುದಕ್ಕಾಗಿ ಅವರು ಹೆಚ್ಚಿನ ಜವಾಬ್ದಾರಿಯಿಂದ ತಮ್ಮ ಕರ್ತವ್ಯವನ್ನು ಮೆರೆದಿದ್ದಾರೆ. ನಾವು ಇಲ್ಲಿ ಅನೇಕ ಬಾರಿ ಮಾತಿನ ಭರಾಟೆಯಲ್ಲಿ, ಪೊಲೀಸ್ ಇಲಾಖೆಯ ನೈತಿಕತೆಯನ್ನು ಕುಗ್ಗಿಸುವಂತಹ ಮತ್ತು ಅಧಿಕಾರಿಗಳ ಬದ್ಧತೆಯನ್ನು ಪ್ರಶ್ನೆ ಮಾಡುವಂತಹ ಚರ್ಚೆಗಳು ನನಗೆ ವೈಯಕ್ತಿಕವಾಗಿ ನೋವನ್ನುಂಟು ಮಾಡಿತ್ತು. ಹಾಗಾಗಿ, ನಾವುಗಳು ಆ ನಿಟ್ಟಿನಲ್ಲಿ ಸ್ವಲ್ಪ ಗಂಭೀರವಾಗಿ ಚರ್ಚೆ ಮಾಡಬೇಕೆಂದು ನಾನು ಭಾವಿಸುತ್ತೇನೆ.

ಮಾನ್ಯ ಸಭಾಪತಿಯವರೇ, CAA and NRC ವಿಚಾರದ ಬಗ್ಗೆ ಹೇಳುವುದಾದರೆ, ಪ್ರತಿಪಕ್ಷಗಳು ಯಾವುದೇ ರೀತಿಯ ಟೀಕೆಯನ್ನು ಮಾಡುವುದು ಅವರ ಸ್ವಂತ ಹಕ್ಕು. ನಾನು ಸಂವಿಧಾನ ಮತ್ತು ಸದನ ಕೊಟ್ಟಿರುವಂತಹ ಹಕ್ಕನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಮಾಡುವ ಸಂದರ್ಭದಲ್ಲಿ ಈ ಸರ್ಕಾರ ಪಾರ್ಲಿಮೆಂಟ್‌ನಲ್ಲಿ ಪಾಸಾದಂತಹ ವಿಧೇಯಕದ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಪಾರ್ಲಿಮೆಂಟ್‌ನಲ್ಲಿ CAA and NRC ಬರುವಾಗ ಸಾಕಷ್ಟು ಚರ್ಚೆಗಳಾಗಿವೆ. ಚುನಾಯಿತರಾದ ಎಲ್ಲಾ ಸಂಸದರು ಚರ್ಚೆ ಮಾಡಿ, ಬಹುಮತದಿಂದ ಪಾಸಾದಂತಹ ಒಂದು ವಿಧೇಯಕ ದೇಶದಲ್ಲಿ ಜಾರಿಯಾಗುವಾಗ, ಸರ್ಕಾರಗಳು ಅದನ್ನು ಮಾಡುತ್ತೇವೆ ಅಥವಾ ಮಾಡುವುದಿಲ್ಲವೆಂದು ಹೇಳಬಹುದು. ಅದು ಆ ಸರ್ಕಾರಗಳಿಗೆ ಬಿಟ್ಟಂತಹ ವಿಚಾರ. ಆದರೆ, ಅದರ ಅಡಿಯಲ್ಲಿ ಮಾತನಾಡುವಾಗ, ಆ ಸನ್ನಿವೇಶ ಹೇಗೆ ಬಂತು? ಮತ್ತೆ ಮತ್ತೆ ಸರ್ಕಾರ ಅದನ್ನು ಹೇಳಿದೆ. ಇವತ್ತಿನ ದಿವಸ ಮುಸಲ್ಮಾನ ಮತ್ತು ಸಿಖ್ ಬಂಧುಗಳಿರಲಿ, ನಮ್ಮ ಸರ್ಕಾರ ಯಾವೊತ್ತು ಕೂಡ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಂದು ಹೇಳಿದೆ. ಬೇರೆಯವರು ಹೇಳುವುದನ್ನು ಕೇಳಿಸಿಕೊಳ್ಳಬೇಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ, ಸರ್ಕಾರ ಹೇಳುವುದನ್ನು ಕೇಳಿಸಿಕೊಳ್ಳಿ. ಇಲ್ಲಿ ನಾನು ಎರಡು ವಿಷಯಗಳನ್ನು ಉಲ್ಲೇಖ ಮಾಡುತ್ತೇನೆ. ಶ್ರೀಮತಿ ತಸ್ಲಿಮಾ ನಸ್ರೀನ್‌ರವರು ಬಾಂಗ್ಲಾ ದೇಶದ ಪ್ರಗತಿಪರ ಲೇಖಕಿಯಾಗಿದ್ದರು. ಮೂಲಭೂತವಾದಿಗಳಿಗೆ ಸೆಡ್ಡು ಹೊಡೆದರು ಎಂದು ಹೇಳಿ, ಲೇಖಕಿಯಾದ ಆ ಹೆಣ್ಣು ಮಗಳು ದೇಶವನ್ನು ತೊರೆದು ಮತ್ತು ಭಾರತದಲ್ಲಿ ನೆಲೆ ಪಡೆಯುವಂತಹ ಸ್ಥಿತಿ ಏಕೆ ಬಂತು ಅಂದರೆ ಅಸಹನೆ. ಮೂಲಭೂತವಾದಿಗಳು ಆಕೆಯ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಿ, ಅವರ ತಲೆದಂಡವನ್ನು ಕೇಳಿದರು. ವಿಶ್ವವ್ಯಾಪಿಯಾಗಿ ಪ್ರಚಾರದಲ್ಲಿರುವಂತಹ ಶ್ರೀ ಸಲ್ಮಾನ್ ರಶ್ದಿಯವರು ಮೂಲಭೂತವಾದಿಗಳಿಗೆ ಹಿತವಾದ ಪುಸ್ತಕವನ್ನು ಬರೆಯಲಿಲ್ಲವೆಂದು ಮುಸ್ಲಿಂ ಮೂಲಭೂತವಾದಿಗಳು ಅವರ ತಲೆದಂಡವನ್ನು ಕೇಳಿದ್ದು ನಿಜವಲ್ಲವೇ? ಇವತ್ತು ಪಾಕಿಸ್ತಾನದಲ್ಲಿ ಹುಟ್ಟಿದಂತಹ Adnan Sami ಭಾರತದ ಎಲ್ಲಾ ಸಂಗೀತ ಶ್ರೋತೃಗಳ ಮನಸ್ಸನ್ನು ಗೆದಿದ್ದಾರೆ. ನಾವೆಲ್ಲರೂ ಕೂಡ ಅವರ ಸಂಗೀತಕ್ಕೆ ಮನಸೋತಂತಹವರು, ನಾವು ಅವರನ್ನು ಮೆಚ್ಚುತ್ತೇವೆ. Adnan Sami ಯವರಿಗೆ ಭಾರತ ಪೌರತ್ವ ನೀಡಿಲ್ಲವೇ? ಇವೆಲ್ಲವೂ ಕೂಡ ಭಾರತದ ಸಂಯತೆ ಮತ್ತು ನಾವು ಎಲ್ಲರನ್ನೂ ಸಹ ಸ್ವೀಕರಿಸುತ್ತೇವೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. CAA and NRC ವಿರೋಧ ಮಾಡುವ ನೆಪದಲ್ಲಿ, ಪುಟ್ಟ ಮಕ್ಕಳನ್ನು ಕೂಡ ಭಯೋತ್ಪಾದಕ ಚಟುವಟಿಕೆಯಲ್ಲಿ ತೊಡಗಿಸುವುದು ಎಷ್ಟು ಅಪರಾಧವೋ...

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಭಯೋತ್ಪಾದಕ ಚಟುವಟಿಕೆಗಳಲ್ಲಿ ಪುಟ್ಟ ಮಕ್ಕಳಿಗೆ ಯಾರು ಪ್ರಚೋದನೆ ಕೊಡುತ್ತಾರೆಂದು ಅದರ ಬಗ್ಗೆ ಹೇಳಬೇಕಲ್ಲವೆ.

**ಡಾ॥ತೇಜಸ್ವಿನಿ ಗೌಡ:-** ಮಾನ್ಯ ಸದಸ್ಯರೇ, ನಾನು ಇನ್ನು yield ಆಗಿಲ್ಲ. ಮಾನವ ಹಕ್ಕುಗಳ ಉಲ್ಲಂಘನೆಯಲ್ಲಿ ಮಕ್ಕಳನ್ನು ತೊಡಗಿಸುವಂಥದ್ದು, ಕೇವಲ ಭಯೋತ್ಪಾದಕ ಚಟುವಟಿಕೆಯಲ್ಲಿ ಮಾತ್ರವಲ್ಲ. ಮಕ್ಕಳನ್ನು ವೇಶ್ಯಾವಾಟಿಕೆಯಲ್ಲಿ ತೊಡಗಿಸುವಂಥದ್ದು ಮತ್ತು ಏಷ್ಯಾಖಂಡದ ದೇಶಗಳಲ್ಲಿ ಮಕ್ಕಳನ್ನು ಯಾವುದೇ ಅಪರಾಧಗಳಲ್ಲಿ ತೊಡಗಿಸುವಂಥದ್ದು ಅತಿ ದೊಡ್ಡ ಅಪರಾಧವಾಗಿದೆ. ಇದರಿಂದ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಆದಕಾರಣ, ಇದಕ್ಕೆ ಯಾರು ಕಾರಣ, ಯಾರಿಗೆ ಶಿಕ್ಷೆ ಕೊಡಬೇಕು ಎಂಬುದು. ಈಗ ಅನೇಕ ಸದಸ್ಯರು ಮಾತನಾಡಿದ್ದಾರೆ. ಇದು ಸರ್ಕಾರಕ್ಕೂ ಕೂಡ ಗೊತ್ತಿದೆ, ಅದನ್ನು ಮುಂದಿನ ದಿನಗಳಲ್ಲಿ ಮಾಡೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗ ಇನ್ನೊಂದು ವಿಚಾರವಿದೆ. ಆರ್‌ಎಸ್‌ಎಸ್ ಬಗ್ಗೆ ಹಲವಾರು ಬಾರಿ ಮಾತನಾಡಿದ್ದಾರೆ. ಈಗ ಅದೊಂದು fashion ಆಗಿದೆ. ಆರ್‌ಎಸ್‌ಎಸ್ ಬಗ್ಗೆ ಟೀಕೆ ಮಾಡಿ. ನೀವು ಟೀಕೆ ಮಾಡುವುದಕ್ಕೆ ಸಂಪೂರ್ಣವಾದ ಹಕ್ಕನ್ನು ಕೊಡುತ್ತೇವೆ.

**(ಮುಂದು...)**

(177) 06.03.2020 11.30 LL-AK

**(ಸಭಾಪತಿಯವರ ಉಪಸ್ಥಿತಿ)**

**ಡಾ॥ ತೇಜಸ್ವಿನಿ ಗೌಡ(ಮುಂದುವರೆದಿದ್ದು...)**

ಆರ್.ಎಸ್.ಎಸ್. ಬಗ್ಗೆ ಹೊರಗಡೆ ಟೀಕೆ ಮಾಡಿದರೆ, ಅದಕ್ಕೆ ಅವರು ಉತ್ತರ ಕೊಡುತ್ತಾರೆ. ಆದರೆ ಈ ಸದನದಲ್ಲಿ "ದೇಶ ಸೇವೆಯೇ ಈಶ ಸೇವೆ" ಎನ್ನುವ ಉದ್ದೇಶಕ್ಕಾಗಿ ಲಕ್ಷಾಂತರ ಪ್ರಚಾರಕರು, ಸ್ವಯಂ ಸೇವಕರು ತಮ್ಮ ಇಡೀ ಜೀವನವನ್ನು ಸಮರ್ಪಣೆ ಮಾಡಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ಈ ಸದನವನ್ನು ದುರುಪಯೋಗ ಮಾಡಿಕೊಂಡು ನಾವು ಟೀಕೆ ಮಾಡಿದರೆ ಉತ್ತರ ಕೊಡುವುದಕ್ಕೆ ಅವರು ಈ ಸದನದಲ್ಲಿ ಇಲ್ಲ. ಹೊರಗಡೆ ಟೀಕೆ ಮಾಡೋಣ, ಟೀಕೆಗಳನ್ನು ಖಂಡಿತವಾಗಿ ಮಾಡಬಹುದು. ಹಾಗಾಗಿ, ನಾನು ಹೇಳುವಂಥದ್ದು, ಬೇಕಾದಷ್ಟು ಸಂಘಟನೆಗಳ ಬಗ್ಗೆ ನಾವು ಚರ್ಚೆ ಮಾಡುತ್ತೇವೆ. ಅಂತಹ ಚರ್ಚೆಗಳನ್ನು ಮಾಡಿ, ಸದನ ದುರುಪಯೋಗ ಆಗುವುದು ಬೇಡ ಎನ್ನುವಂತಹ ಮಾತನ್ನು ಹೇಳುತ್ತಾ, ಘನತೆವೆತ್ತ ರಾಜ್ಯಪಾಲರ ನಮ್ಮ ಸದನದ ದಿಕ್ಸೂಚಿ ಭಾಷಣವನ್ನು ಮಾಡಿದ್ದಾರೆ. ಅದೇ ನಿಟ್ಟಿನಲ್ಲಿ ನಮ್ಮ ಸರ್ಕಾರ ವಸ್ತುನಿಷ್ಠ ಸರ್ಕಾರ. ನಮ್ಮ ಸರ್ಕಾರ ಸುಳ್ಳು ಹೇಳುವ ಸರ್ಕಾರವಲ್ಲ. ಆರ್ಥಿಕ ಸ್ಥಿತಿ, ನಮ್ಮ ಮನೆಯಲ್ಲಿ ನಿಧಿ ಇದೆ ಎನ್ನುವಂತಹ **(ಗೊಂದಲ)** ಅಷ್ಟನ್ನು ನಾವು ತೋರಿಸಿದ್ದೇವೆ. ಆಕಾಶವನ್ನು ತೋರಿಸಿ ನಮ್ಮ ಬಿಜೆಪಿ ಸರ್ಕಾರ ಓಡಿ ಹೋಗುವ ಸರ್ಕಾರವಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಬಜೆಟ್ ಮಂಡನೆಯನ್ನು ನೋಡಿದರೆ, ಬಿಜೆಪಿ ಸರ್ಕಾರದಲ್ಲಿ ಎಷ್ಟು ವಸ್ತುನಿಷ್ಠೆ ಇದೆ ಎನ್ನುವುದು ಗೊತ್ತಾಗುತ್ತದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಾವು ಬಜೆಟ್ ಭಾಷಣದಲ್ಲಿ ಏನು ಹೇಳಿದ್ದೇವೆ ಅದನ್ನು ಮಾಡಿ ತೋರಿಸುತ್ತೇವೆ. **(ಗೊಂದಲ)** ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದಲ್ಲಿ ಇಡೀ ನಮ್ಮ ಸಚಿವ ಸಂಪುಟ ಕೆಲಸವನ್ನು ನಿರ್ವಹಿಸುತ್ತದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಪ್ರಾಂಶುಪಾಲರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರವರೇ, ನಾನು ಮಾತನಾಡುವಾಗ ದಯಮಾಡಿ ಮಧ್ಯೆ ಮಾತನಾಡಬೇಡಿ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರದ ಬಗ್ಗೆ ನಾವು ಏನಾದರೂ ಹೇಳಿದ್ದೇವೆಯೇ? ಆದರೂ, ಅವರಿಗೆ ಏತಕ್ಕೆ guilty feel ಆಗುತ್ತಿದೆ?

**(ಗೊಂದಲ)**

**ಶ್ರೀ ಆರ್. ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಬಿಜೆಪಿ ಸರ್ಕಾರದವರು ಸುಳ್ಳು ಹೇಳಬೇಕು ಮತ್ತು ಹೇಳಬಾರದು ಎಂಬ ಎರಡೂ ಅರ್ಥದಲ್ಲಿ ಹೇಳುತ್ತಿದ್ದಾರೆ.

**(ಗೊಂದಲ)**

**ಡಾ॥ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಟಿ. ಶ್ರೀಕಂಠೇಗೌಡರವರಿಗೆ ನಿಜ ಹೇಳುವುದಕ್ಕೆ ಗೊತ್ತೇ ಇಲ್ಲ. ಏಕೆಂದರೆ, ಯಾವಾಗಲೂ ಸುಳ್ಳು ಹೇಳುವವರ ಬಾಯಲ್ಲಿ ಸುಳ್ಳು ಹೇಳಿ ಅಭ್ಯಾಸ ಆಗಿದೆ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಎಸ್.ಎಲ್. ಭೋಜೇಗೌಡರೇ ನನ್ನ ಸಮಯವನ್ನು ತೆಗೆದುಕೊಳ್ಳಬೇಡಿ. ದಯಮಾಡಿ ಕುಳಿತುಕೊಳ್ಳಿ. ನಾನು ಮಾತನಾಡುವ ನನ್ನ ಸಮಯವನ್ನು ಯಾರಿಗೂ ಕೊಡುವುದಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿ ಗೌಡರವರು ಬಿಜೆಪಿ ವಕ್ತಾರರಾಗಿ ಮಾತನಾಡಬಾರದು. ಬದಲಾಗಿ, ಒಬ್ಬ ಶಾಸಕರಾಗಿ ಮಾತನಾಡಬೇಕು.

**(ಗೊಂದಲ)**

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಕೈಮುಗಿದು ಕೇಳುತ್ತೇನೆ. ದಯಮಾಡಿ ಎಲ್ಲಾ ಮಾನ್ಯ ಸದಸ್ಯರನ್ನು ಕುಳಿತುಕೊಳ್ಳುವಂತೆ ಮಾಡಬೇಕು.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಸದಸ್ಯರ ಪರವಾಗಿ ಮಾತನಾಡುತ್ತಿದ್ದೇವೆ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿ ಇವೊತ್ತಿನ ದಿವಸ ಉದ್ಯಮ ಕ್ಷೇತ್ರ ಇರಬಹುದು, ಪ್ರವಾಸೋದ್ಯಮ ವಿಚಾರ ಇರಬಹುದು, ಕಲೆಗಳ ವಿಚಾರ ಇರಬಹುದು, ಶೈಕ್ಷಣಿಕ ವಿಚಾರ ಇರಬಹುದು, ಇವೊತ್ತಿನ ದಿವಸ ಶಾಂತಿ-ಸಂಯಮತೆಯನ್ನು ಕಾಪಾಡಿದರೆ ಕರ್ನಾಟಕ ರಾಜ್ಯ ಭಾರತದ ಅತ್ಯಂತ ಮಾದರಿ ರಾಜ್ಯ ಆಗುವಂತಹ ಎಲ್ಲಾ ಅವಕಾಶಗಳನ್ನು ಹೊಂದಿದೆ. ನಮ್ಮ ರಾಜ್ಯದಲ್ಲಿ ಬಿಜೆಪಿ, ಕಾಂಗ್ರೆಸ್ ಅಥವಾ ಜೆಡಿಎಸ್ ಸರ್ಕಾರ ಅಧಿಕಾರದಲ್ಲಿರಲಿ. ನಮಗೆ ಅವಕಾಶ ಸಿಕ್ಕಿದಾಗ ಸುಂದರ ಕರ್ನಾಟಕವನ್ನು ಒಂದು ಪ್ರಗತಿಪರ ಅಭಿವೃದ್ಧಿಶೀಲ ಕರ್ನಾಟಕವನ್ನು ಕಟ್ಟುವುದರಲ್ಲಿ ಬಿಜೆಪಿ ಸರ್ಕಾರ ಕಟಿಬದ್ಧವಾಗಿ. ನಾವು ಘನತೆವೆತ್ತ ರಾಜ್ಯಪಾಲರು ನಮ್ಮ ದಿಕ್ಸೂಚಿ ಭಾಷಣದಲ್ಲಿ ಏನು ಹೇಳಿದ್ದಾರೆ, ಅದನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರ್ಕಾರ ಅದನ್ನು ಮಾಡುತ್ತೇವೆ ಎನ್ನುವಂತಹ ವಿಶ್ವಾಸವನ್ನು ವ್ಯಕ್ತಪಡಿಸಿ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ನನಗೆ ಮಾತನಾಡಲು ಅವಕಾಶ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿದ್ದಕ್ಕಾಗಿ ತಮಗೆ ಮೊದಲಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬಿಜೆಪಿ ಸರ್ಕಾರ ಘನತೆವೆತ್ತ ರಾಜ್ಯಪಾಲರಿಂದ ಸುಮಾರು 20 ಪುಟಗಳ ಭಾಷಣವನ್ನು ಮಾಡಿಸಿದೆ. ಇದರಲ್ಲಿ ಎಲ್ಲಿ ಬೆಳಕು ಚೆಲ್ಲಬೇಕು ಎಂಬ ಬಗ್ಗೆ ಇಲ್ಲ. ಕೇವಲ ಕತ್ತಲಲ್ಲಿ ಇಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇವರು ಏನು ಹೇಳಿದ್ದಾರೆ ಎನ್ನುವುದು ಯಾರಿಗೂ ಅರ್ಥವಾಗುವುದಿಲ್ಲ. ಈ ಬಜೆಟ್ ಪ್ರತಿ ನೋಡಿದರೆ confusion ಅರ್ಥವಾಗುತ್ತದೆ. ರಾಜ್ಯದ ಜನತೆಗೆ ಯಾವುದೇ ಒಂದು ಹೊಸ ಯೋಜನೆ ಕೊಟ್ಟಿರುದಿಲ್ಲ. ನಮ್ಮ ಸ್ನೇಹಿತರಾದ ಹಾಗೂ ಹಿರಿಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥರವರು ಮಾತನಾಡುವಾಗ ನಮ್ಮ ಸರ್ಕಾರ ಬಹಳ ವೇಗವಾಗಿ ನಡೆಯುತ್ತಿದೆ ಎಂದು ಹೇಳಿದರು. ಆದರೆ, ಈ ಸರ್ಕಾರ ಎಲ್ಲಿ ವೇಗವಾಗಿದೆ ಎಂಬ ಬಗ್ಗೆ ನಮಗೆ ಹೇಳಿರುವುದಿಲ್ಲ. ಏಕೆಂದರೆ, ಈ ರಾಜ್ಯಕ್ಕೆ 1/3 ಭಾಗದಷ್ಟು ಸಂಪತ್ತನ್ನು ಅಥವಾ ಮತ್ತೊಂದನ್ನು ಬೆಂಗಳೂರು ಪೂರೈಸುತ್ತದೆ. ಆದರೆ, ಈ ಬೆಂಗಳೂರ ಅಭಿವೃದ್ಧಿಗೆ ಒಬ್ಬ ಮಂತ್ರಿ ಈ ಸರ್ಕಾರದಲ್ಲಿರುವುದಿಲ್ಲ. ಇದು ಎಷ್ಟು ವಿಪರ್ಯಾಸವೆಂದರೆ ಇದು ಬಿಜೆಪಿ ಸರ್ಕಾರದವರಿಗೆ ಅರ್ಥವಾಗಬೇಕು. ಇಷ್ಟು ದೊಡ್ಡ ನಗರವನ್ನು ಅಭಿವೃದ್ಧಿ ಮಾಡುವುದಕ್ಕೆ ಒಬ್ಬ ಮಂತ್ರಿಯನ್ನು ನೇಮಕ ಮಾಡುವುದಕ್ಕೆ ಅವರಿಗೆ ಆಗುವುದಿಲ್ಲ. **(ಗೊಂದಲ)** ಒಬ್ಬ ಮಂತ್ರಿ ನೇಮಕ ಮಾಡುವಂತಹ ಒಂದು ವಿವೇಚನೆ ಕೂಡ ಆಗಿರುವುದಿಲ್ಲ. ಈ ಬೆಂಗಳೂರು ಹೇಗೆ ಅಭಿವೃದ್ಧಿಯಾಗುತ್ತದೆ?

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ...

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗುವುದಿಲ್ಲ. ನಾನು ಮಾತನಾಡುವಾಗ ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಅಡ್ಡಿಪಡಿಸಬಾರದು. ಇಲ್ಲವಾದರೆ, ಮುಂದೆ ಅವರು ಮಾತನಾಡುವುದಕ್ಕೆ ನಾನು ಬಿಡುವುದಿಲ್ಲ. ಇರುವ ವಿಚಾರ ಮಾತನಾಡಿದರೆ ಬಿಜೆಪಿಯವರಿಗೆ ಈ ರೀತಿ ಆಗುತ್ತದೆ. 28 ಜನ ಮಂತ್ರಿಗಳನ್ನು ನೇಮಕ ಮಾಡಿದ್ದಾರೆ. 14 ಜಿಲ್ಲೆಗಳಿಗೆ ಇನ್ನೂ ಪ್ರತಿನಿಧಿ ಇರುವುದಿಲ್ಲ.

**(ಗೊಂದಲ)**

**ಶ್ರೀ ಆರ್. ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಮಂತ್ರಿಗಳನ್ನು ನೇಮಕ ಮಾಡದೇ ಇರುವುದು ಡಾ॥ ವೈ.ಎ. ನಾರಾಯಣಸ್ವಾಮಿಯವರಿಗೆ ಅನುಕೂಲ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಟಿ. ರವಿ(ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು):–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನಾವು ಇರುವಂತಹ ವಾಸ್ತವಾಂಶವನ್ನು ಹೇಳಿದರೆ, ಅದನ್ನು ಕೇಳುವಂತಹ ಪರಿಸ್ಥಿತಿ ಇರಬೇಕು. 28 ಜನ ಮಂತ್ರಿಗಳಿದ್ದಾರೆ. 14 ಜಿಲ್ಲೆಗಳಿಂದ ಯಾರನ್ನು ಮಂತ್ರಿ ಮಾಡಿರುವುದಿಲ್ಲ. ಬೆಂಗಳೂರಿಗೆ ಒಬ್ಬ ಮಂತ್ರಿ ಮಾಡಿ ಎಂದು ಹೇಳಿದರೆ ಅದು ಆಗುವುದಿಲ್ಲ. ನಾನು ಇದಕ್ಕೆ ಮೊದಲು ಮಾತನಾಡುವಾಗ ಹೈದರಾಬಾದ್–ಕರ್ನಾಟಕದ ಬಗ್ಗೆ ಹೇಳಿದ್ದೆನು.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಬೆಂಗಳೂರಿನ ಮೇಲೆ ಹೆಚ್ಚು ಪ್ರೇಮ ಇರುವ ಕಾರಣದಿಂದಲೇ ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರಿನ ಉಸ್ತುವಾರಿ ವಹಿಸಿಕೊಂಡಿದ್ದಾರೆ.

**(ಗೊಂದಲ)**

**ಡಾ|| ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಉಸ್ತುವಾರಿಯನ್ನು ಮಾನ್ಯ ಮುಖ್ಯಮಂತ್ರಿಗಳೇ ವಹಿಸಿಕೊಂಡಿರುತ್ತಾರೆ. ಬಹುಶಃ ಮಾನ್ಯ ಸದಸ್ಯರು ದಿನಪತ್ರಿಕೆ ಓದಿಲ್ಲವೆಂದು ಕಾಣುತ್ತದೆ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ನಾನು ಮಾತನಾಡುವಾಗ ಅಡ್ಡಿಪಡಿಸುತ್ತಿದ್ದಾರೆ.

**ಶ್ರೀ ಹೆಚ್.ಎಂ. ರೇವಣ್ಣ:–** ಡಾ|| ವೈ.ಎ. ನಾರಾಯಣಸ್ವಾಮಿಯವರನ್ನು ಬೆಂಗಳೂರು ಸಿಟಿ ಮಿನಿಸ್ಟರ್ ಆಗಿ ನೇಮಕ ಮಾಡಲಿ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರಕ್ಕೆ ಒಬ್ಬ ಮಂತ್ರಿಯನ್ನು ನೇಮಕ ಮಾಡಿದರೆ ಅಭಿವೃದ್ಧಿ ಆಗುತ್ತದೆ ಎಂದು ಹೇಳಿದರೆ...

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್. ಭೋಜೇಗೌಡ:–** ಡಾ॥ ವೈ.ಎ. ನಾರಾಯಣಸ್ವಾಮಿಯವರು ಎಷ್ಟೇ ಕೂಗಾಡಿದರೂ ಈ ಬಾರಿ ಅವರು ಯಾವುದೇ ಕಾರಣಕ್ಕೂ ಮಂತ್ರಿಯಾಗುವುದಿಲ್ಲ. Quota ಮುಗಿದಿದೆ. ಆದುದರಿಂದ, ಅವರ ಪ್ರಭಾವವನ್ನು ಎಲ್ಲಿ ತೋರಿಸಬೇಕೋ ಅಲ್ಲಿ ತೋರಿಸಬೇಕು. ಹಾಗಾಗಿ, ಈ ಸದನದಲ್ಲಿ ಯಾವಾಗಲೂ ಎದ್ದು ಕೂಗಾಡುವುದು ಬೇಡ.

**(ಗೊಂದಲ)**

**ಡಾ॥ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಶ್ರೀ ಎಸ್.ಎಲ್. ಭೋಜೇಗೌಡರವರು ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರ ಹೆಗಲ ಮೇಲೆ ಇದ್ದರೂ ಸಹ ಅವರನ್ನು ಮಂತ್ರಿ ಮಾಡಿರುವುದಿಲ್ಲ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರಕ್ಕೆ ಒಬ್ಬ ಮಂತ್ರಿಯನ್ನು ನೇಮಕ ಮಾಡಿ ಎಂದು ಹೇಳಿದರೆ, ನಾವು ಮಾತನಾಡುವುದಕ್ಕೆ ಮೊದಲೇ ಆಡಳಿತ ಪಕ್ಷದವರು ತಮ್ಮ ಮಾತನ್ನು ಶುರು ಮಾಡುತ್ತಾರೆ.

**ಸಭಾಪತಿಯವರು:–** ತಾವು ಮಾತನಾಡಿದ್ದು ಮುಗಿಯಿತೇ?

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಎಲ್ಲಿ ಮುಗಿಯಿತು? ನಾನು ನನ್ನ ಮಾತನ್ನು ಇನ್ನೂ ಶುರು ಮಾಡಿರುವುದಿಲ್ಲ.

**ಸಭಾಪತಿಯವರು:–** ತಾವು ತಮ್ಮ ಮಾತನ್ನು ಶುರು ಮಾಡಿ. ಇನ್ನೂ ಬೆಂಗಳೂರನ್ನೇ ಸುತ್ತುತ್ತಿದ್ದೀರಿ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಆದರೆ, ಆಡಳಿತ ಪಕ್ಷದವರು ನಮಗೆ ಮಾತನಾಡಲು ಬಿಡುತ್ತಿಲ್ಲ. ಅಲ್ಲದೇ, ಹೊಸ ಸದಸ್ಯರನ್ನು ಮಾತನಾಡಲು ಬಿಡಬಾರದು ಎಂಬ ಆಸೆ ಇವರಿಗೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮೊದಲು ನಾನು ಮಾತನಾಡುತ್ತೇನೆ. ಬೇರೆಯವರು ಯಾವಾಗಲೂ ಮಾತನಾಡುತ್ತಾರೆ. **(ಗೊಂದಲ)** ನನಗೆ ಅವಕಾಶ ನೀಡಿದಾಗ, ನನ್ನ ಮಾತಿನ ಮಧ್ಯೆ ಬೇರೆಯವರು ಮಾತನಾಡಬಾರದು.

**(ಗೊಂದಲ)**

**ಡಾ|| ಜಯಮಾಲ:–** ಮಾನ್ಯ ಸಭಾಪತಿಯವರೇ, ಶ್ರೀ ಯು.ಬಿ. ವೆಂಕಟೇಶ್ ಅವರಿಗೆ ಮಾತನಾಡಲು ದಯಮಾಡಿ ಅವಕಾಶ ನೀಡಿ. ಆಡಳಿತ ಪಕ್ಷದವರು ಮಾತನಾಡುವಾಗ ನಾವು ಇದೇ ರೀತಿ ಅಡ್ಡಿಪಡಿಸಿದ್ದೇವೆಯೇ?

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಇಷ್ಟು ದೊಡ್ಡ ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ಒಬ್ಬ ಮಂತ್ರಿಯನ್ನು ನೇಮಕ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಎರಡನೆಯದಾಗಿ, ನೆರೆ ಮತ್ತು ಬರ ಪರಿಹಾರದ ಬಗ್ಗೆ ನಮ್ಮ ಸದಸ್ಯರುಗಳು ಈಗಾಗಲೇ ಮಾತನಾಡಿದ್ದಾರೆ. ಇವರು ಬಜೆಟ್‌ನಲ್ಲಿ...

**ಶ್ರೀ ಕೆ. ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರಕ್ಕೆ ಉಸ್ತುವಾರಿಯಾಗಿ ಒಬ್ಬ ಮಂತ್ರಿಯನ್ನು ನೇಮಕ ಮಾಡಲಾಗಿರುತ್ತದೆ. ಆದರೆ, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಒಬ್ಬ ಮಂತ್ರಿಯನ್ನು ನೇಮಕ ಮಾಡಬೇಕು.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ...ಇದಕ್ಕೆ ಒಂದು ಜಂಟಿ ಸದನ ಸಮಿತಿ ರಚನೆ ಮಾಡಬೇಕು. ಆ ಸಮಿತಿಗೆ ತಾವು ಅಧ್ಯಕ್ಷರಾಗಲಿ ಅಥವಾ ಕಂದಾಯ ಮಂತ್ರಿಗಳು ಅಧ್ಯಕ್ಷರಾಗಲಿ ಈ ಸದನದಿಂದ ಮತ್ತು ಕೆಳಮನೆಯಿಂದ ಸದಸ್ಯರುಗಳನ್ನು ನೇಮಕ ಮಾಡಿ, ಎಲ್ಲರೂ ಕೂಡ ನೆರೆ ಪೀಡಿತ ಪ್ರದೇಶಗಳಿಗೆ ಹೋಗಿ ಒಂದು ಸತ್ಯಶೋಧನೆ ನಡೆಸಿ ಒಂದು ವರದಿ ನೀಡಲಿ. ಬಿಜೆಪಿ ಸರ್ಕಾರದವರು ಏನು ಹೇಳಿದ್ದಾರೆ, ಅದು ನಿಜವಾಗಿದೆಯೋ ಅಥವಾ ಸುಳ್ಳಾಗಿದೆಯೇ ಎಂದು ಗೊತ್ತಾಗಲಿ. ಏಕೆಂದರೆ, ಈ ಬಗ್ಗೆ ನಾವು ಹೇಳಿದರೆ ಆಡಳಿತ ಪಕ್ಷದವರು ಒಬ್ಬೊಬ್ಬರು ಎದ್ದು ನಿಂತು 5 ಲಕ್ಷ, 10 ಲಕ್ಷ ಕೊಟ್ಟಿದ್ದೇವೆಂದು ನಮ್ಮ ಮಾತಿಗೆ ಅಡ್ಡಿಪಡಿಸುತ್ತಾರೆ. ಆದರೆ, ನೆರೆ ಪೀಡಿತ ಪ್ರದೇಶಗಳಿಗೆ ನಾವು ಭೇಟಿ ನೀಡಿದಾಗ, ನೆರೆ ಸಂತ್ರಸ್ತರು ನಮ್ಮ ಬಳಿ ಬಂದು, "ಬಾತ್‌ರೂಮ್‌ಗೆ ಹೋಗುವುದಕ್ಕೆ ನಮಗೆ ಸರಿಯಾದ ವ್ಯವಸ್ಥೆ ಇಲ್ಲ" ಎಂದು ಅಳುತ್ತಾ ಹೇಳುತ್ತಾರೆ. ಈ ಬಗ್ಗೆ ಸದನದಲ್ಲಿ ಹೇಳಿದರೆ ನಮ್ಮ ಮಾತಿಗೆ ಇವರು ನಗುತ್ತಾರೆ ಮತ್ತು ನಮ್ಮ ಮಾತಿಗೆ ಅಡ್ಡಿಪಡಿಸುತ್ತಾರೆ. ಸರ್ಕಾರದವರು ಹೈದರಾಬಾದ್–ಕರ್ನಾಟಕವನ್ನು **'ಕಲ್ಯಾಣ ಕರ್ನಾಟಕ'**ವೆಂದು ಹೆಸರು ಬದಲಾಯಿಸಿದ್ದಾರೆ. ಇದಕ್ಕಾಗಿ ನಮ್ಮ ಸರ್ಕಾರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1,000 ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಈಗ ಪುನಃ 1,500 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಅದನ್ನು ಖರ್ಚು ಮಾಡುವುದಕ್ಕೆ ಒಬ್ಬ ಅಧ್ಯಕ್ಷರು ಇರುವುದಿಲ್ಲ.

**(ಗೊಂದಲ)**

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ 1,500 ಕೋಟಿ ರೂಪಾಯಿಗಳನ್ನು ಹೈದರಾಬಾದ್-ಕರ್ನಾಟಕಕ್ಕೆ ಬಿಡುಗಡೆ ಮಾಡಿರುತ್ತಾರೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸ್‌ರಾಜು:-** ಮಾನ್ಯ ಸಭಾಪತಿಯವರೇ, ಹೈದರಾಬಾದ್-ಕರ್ನಾಟಕದ ಅಭಿವೃದ್ಧಿಗೆ 1,500 ಕೋಟಿ ರೂಪಾಯಿಗಳನ್ನು ಕಳೆದ 3 ವರ್ಷಗಳಿಂದಲೂ ನೀಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಒಬ್ಬ ಅಧ್ಯಕ್ಷರನ್ನು ನೇಮಕ ಮಾಡಬೇಕೆಂದು ಈ ಬಗ್ಗೆ ನಾನು ಕಳೆದ ಅಧಿವೇಶನದಲ್ಲಿಯೇ ಹೇಳಿದ್ದೇನೆ. ಅದಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿ ಬಿಡುಗಡೆಯಾಗಿರುವ ಅನುದಾನ ಖರ್ಚು ಮಾಡಲಿ, ಅಧ್ಯಕ್ಷರೇ ಇಲ್ಲದೇ ಹಣ ಖರ್ಚು ಮಾಡುವುದಿಲ್ಲವೆಂದರೆ ಏನು ಅರ್ಥ? ಅದರ ಬದಲಾಗಿ, ನಮ್ಮ ಸರ್ಕಾರ ವೇಗ ಇದೆ ಎಂದು ಹೇಳುವುದಾದರೆ, ಯಾವುದರಲ್ಲಿ ಈ ಸರ್ಕಾರ ವೇಗವಾಗಿದೆ? ನಾವು ಮಾತನಾಡಿದರೆ, “ನಾವು ಮುಂದೆ ಹೋಗುತ್ತಿದ್ದೇವೆ, ನಾವು ಓಡುತ್ತಿದ್ದೇವೆ” ಎಂದು ಹೇಳುತ್ತಾರೆ. ಆದರೆ, ಇರುವಂತಹ ಅನುದಾನವನ್ನು ಖರ್ಚು ಮಾಡುವುದಕ್ಕೆ ಈ ಸರ್ಕಾರಕ್ಕೆ ಆಗುತ್ತಿಲ್ಲ. ಇದು ನಾಚಿಕೆಗೇಡಿನ ಸಂಗತಿಯಾಗಿದೆ.

**ಶ್ರೀ ಆರ್. ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಸರ್ಕಾರ ಹೋಗುತ್ತಿರುವ ವೇಗ ಯಾರ ಕಣ್ಣಿಗೂ ಕಾಣಿಸುತ್ತಿಲ್ಲ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಬಿಡುಗಡೆಯಾದ ಅನುದಾನ ಅಲ್ಲಿಯೇ ಇದೆ. ಆ ಮಂಡಳಿಗೆ ಒಬ್ಬ ಅಧ್ಯಕ್ಷರನ್ನು ನೇಮಕ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಿದರೆ ಮಾತ್ರ ಆ ಹಣ ಖರ್ಚಾಗುತ್ತದೆ. ನಮ್ಮ ಸರ್ಕಾರದ್ದು 1,000 ಕೋಟಿ ರೂಪಾಯಿ ಹಾಗೂ ಈಗಿನ ಸರ್ಕಾರ 1,500 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ಹೇಳಿರುತ್ತಾರೆ. ಆದರೆ, ಆ ಅನುದಾನವನ್ನು ಇಟ್ಟುಕೊಂಡು ಏನು ಮಾಡುವುದು? ಆ ಮಂಡಳಿಗೆ ಅಧ್ಯಕ್ಷರನ್ನು ನೇಮಕ ಮಾಡದೇ ಹೋದರೆ ಆ ಅನುದಾನದ ಹಣ ಖರ್ಚು ಮಾಡುವುದಕ್ಕಾಗುವುದಿಲ್ಲ. ಆರ್ಟಿಕಲ್ 371(ಜೆ) ಅನ್ನು ಜಾರಿಗೆ ತರಬೇಕಾದಂತಹ ಸಂದರ್ಭದಲ್ಲಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಪ್ರತಿಯೊಬ್ಬ ಸಂಸದರ ಮನೆಗೆ ಹೋಗಿದ್ದರು. ಆ ಸಂದರ್ಭದಲ್ಲಿ ಬಿಜೆಪಿಯವರ ಕಾಲದಲ್ಲಿ ಶ್ರೀ ಎಲ್.ಕೆ. ಅಡ್ವಾಣಿಯವರು ಆರ್ಟಿಕಲ್ 371(ಜೆ) ಅನ್ನು ಜಾರಿಗೆ ತರುವುದಕ್ಕಾಗುವುದಿಲ್ಲವೆಂದು ಒಂದು ಪತ್ರ ಕೊಟ್ಟರು. ಆಗ ಮನೆ ಮನೆಗೆ ಹೋಗಿ ... **(ಗೊಂದಲ)** ನಾನು ಯೀಲ್ಡ್ ಆಗಿರುವುದಿಲ್ಲ. ನಾನು ಮಾತನಾಡುವಾಗ ಇವರು ಮಾತನಾಡಬಾರದು.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ...

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಆಡಳಿತ ಪಕ್ಷದವರು ಅಡ್ಡಿಪಡಿಸಿದರೆ, ಮುಂದೆ ಅವರು ಮಾತನಾಡುವುದಕ್ಕೆ ನಾವು ಕೂಡ ಅಡ್ಡಿಪಡಿಸುತ್ತೇವೆ.

**(ಗೊಂದಲ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನೇನೋ ಮಾತನಾಡಿ, ರಾಜ್ಯದ ಜನತೆಗೆ ತಪ್ಪು ಸಂದೇಶ ಹೋಗಬಾರದು.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ...ತಪ್ಪು ಸಂದೇಶ ಹೋಗುತ್ತದೆ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಹೌದು. ಆರ್ಟಿಕಲ್ 371(ಜೆ) ಯನ್ನು ಜಾರಿಗೆ ತರುವುದಕ್ಕಾಗುವುದಿಲ್ಲವೆಂದು ಲಿಖಿತವಾಗಿ...

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಮಾತನಾಡುವುದಕ್ಕೆ ಬೇರೆ ಒಳ್ಳೆಯ ವಿಷಯಗಳಿವೆ. ಅದರ ಬಗ್ಗೆ ಮಾನ್ಯ ಸದಸ್ಯರು ಮಾತನಾಡಲಿ. ಈ ರೀತಿ ತಪ್ಪು ಸಂದೇಶ ಕಡತಕ್ಕೆ ಮತ್ತು ಸಾರ್ವಜನಿಕರಿಗೆ ಹೋಗಬಾರದು.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಆರ್ಟಿಕಲ್ 371(ಜೆ)...

**(ಗೊಂದಲ)**

**ಡಾ॥ ಜಯಮಾಲ:–** ಮಾನ್ಯ ಸಭಾಪತಿಯವರೇ, ಸರ್ಕಾರ ಉತ್ತರ ಕೊಡುವಾಗ ಆಡಳಿತ ಪಕ್ಷದವರು ಮಾತನಾಡಲಿ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ...ಈ ಹಿಂದೆ ಆಗಿರುವುದನ್ನು 'ಆಗಿಲ್ಲ' ಎಂದು ಹೇಳಿದರೆ ಹೇಗೆ?

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇದರಿಂದ ತಪ್ಪು ಸಂದೇಶ ಹೋಗುತ್ತದೆ. ಇದನ್ನು ನಾವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಅವರು ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ಕೇಳಲಿ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನಾವು ಹೇಳುವುದನ್ನು ಪೂರ್ತಿಯಾಗಿ ಕೇಳದೆ ಮಧ್ಯದಲ್ಲಿ, ಒಬ್ಬರ ನಂತರ ಮತ್ತೊಬ್ಬರು ಮಾತನಾಡಿದರೆ ಹೇಗೆ?

**(ಗೊಂದಲ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಹೈದರಾಬಾದ್–ಕರ್ನಾಟಕದ ಬಗ್ಗೆ ಎಷ್ಟು ಗೊತ್ತಿದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಆರ್ಟಿಕಲ್ 371(ಜೆ) ಅನ್ನು ಜಾರಿಗೆ ತರುವುದಕ್ಕೆ ಶ್ರೀ ಎಲ್.ಕೆ. ಅಡ್ವಾಣಿಯವರ ಬೆಂಬಲ ಇದೆ. **(ಗೊಂದಲ)** ಇದರಿಂದ ತಪ್ಪು ಸಂದೇಶ ಹೋಗುತ್ತದೆ. ಇದನ್ನು ನಾವು ಒಪ್ಪುವುದಿಲ್ಲ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಶ್ರೀ ಯು.ಬಿ. ವೆಂಕಟೇಶ್‌ರವರು ಸರಿಯಾಗಿ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಹಾಗಾಗಿ, ಅದನ್ನು ಕಡತದಿಂದ ತೆಗೆದುಹಾಕಿಸಬೇಕು.

**(ಗೊಂದಲ)**

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆರ್ಟಿಕಲ್ 371(ಜೆ) ಅನ್ನು ಜಾರಿಗೆ ತರಲು ಎಲ್ಲರೂ ಕಾರಣ. ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಒಬ್ಬರೇ ಕಾರಣರಲ್ಲ.

**(ಗೊಂದಲ)**

(ಮುಂದುವರೆದಿದೆ...)

(178)06.03.2020/11.40/ವೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಯು.ಬಿ.ವೆಂಕಟೇಶ್:-** ಇವತ್ತಿನ ದಿವಸ ಜವಳಿ ಉದ್ಯಮ ಎಷ್ಟು ಸಂಕಷ್ಟದಲ್ಲಿದೆಯೆಂದರೆ, ಹೆಣ್ಣು ಮಕ್ಕಳು ತಮ್ಮನ್ನು ಎಲ್ಲಿ ಕೆಲಸದಿಂದ ತೆಗೆದು ಹಾಕುತ್ತಾರೋ ಎಂಬ ಆತಂಕದಲ್ಲಿದ್ದಾರೆ. ರೂ.10,000.00 ವರೆಗೂ ಪಡೆದುಕೊಳ್ಳುತ್ತಿದ್ದ ಸಂಬಳ ರೂ.3,000.00 ಅಥವಾ ರೂ.4,000.00 ವಾದರೂ ನೀಡಿ, ಕೆಲಸದಿಂದ ತೆಗೆದು ಹಾಕುವುದು ಬೇಡ ಎಂದು ಹೇಳುತ್ತಿದ್ದಾರೆ. ಈ ವಿಚಾರವಾಗಿ ಬಜೆಟ್‌ನಲ್ಲಿ ಏನು ಹೇಳಿಲ್ಲ. ಪ್ರವಾಸೋದ್ಯಮ ಕುರಿತು ಒಂದೇ ಒಂದು ಮಾತು ಸಹ ಈ ಪುಸ್ತಕದಲ್ಲಿಲ್ಲ. ಸಭಾನಾಯಕರೇ, ತಾವು ಸಹ ಬೇಕಾದರೆ ಓದಿ ನೋಡಿ. ನಾವು ಏನಾದರೂ ಕೇಳಿದರೆ ಆಡಳಿತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಕ್ಷದವರಿಗೆ ಕೋಪ ಬರುತ್ತದೆ. ಉಪನ್ಯಾಸಕರಿಗೆ ಸಂಬಳ ನೀಡಿರುವುದಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಾ॥ ಅಶ್ವತ್ಥನಾರಾಯಣರವರು 15 ದಿವಸದೊಳಗೆ ಸಂಬಳ ನೀಡುತ್ತೇವೆ ಎಂದು ಹೇಳಿದರು. ಆದರೆ, ಸುಮಾರು 6 ತಿಂಗಳು 9 ತಿಂಗಳಾದರೂ ಸಹ ಉಪನ್ಯಾಸಕರಿಗೆ ನೀಡಬೇಕಾದ ಸಂಬಳದ ವಿಚಾರ ಇತ್ಯರ್ಥವಾಗಿಲ್ಲ. ಅರಣ್ಯ ಪ್ರದೇಶದ ವಿಸ್ತೀರ್ಣದಲ್ಲಿ ನಾವೇ ಮೊದಲನೇ ಸ್ಥಾನದಲ್ಲಿದ್ದೇವೆ ಎಂದು ಬಜೆಟ್ ಪುಸ್ತಕದಲ್ಲಿ ಬರೆದುಕೊಂಡಿದ್ದಾರೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು 6 ತಿಂಗಳಾಗಿದೆ, ಒಂದು ಗಿಡ ಮರವಾಗಿ ಬೆಳೆಯಬೇಕಾದರೆ 2 ವರ್ಷದಿಂದ 5 ವರ್ಷಗಳು ಬೇಕು. ಹೀಗಿರುವಾಗ ಹೇಗೆ ಆ ಬಗ್ಗೆ ಇವರು ಅಂಕಿ ಅಂಶಗಳನ್ನು ನಮೂದಿಸುತ್ತಾರೆ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಮಾಡಿದಂತಹ ಕೆಲಸವನ್ನು ಇವರಿಗೆ 'ನಾವು ಮಾಡಿದ್ದೇವೆ' ಎಂದು ಹೇಳುವುದೇ ಒಂದು ದೊಡ್ಡ ಕೆಲಸವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಹೈನು ಉದ್ಯಮದಲ್ಲಿ ನಮ್ಮ ರಾಜ್ಯವೇ ಮೊದಲು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆಯೇ ಮಾಡಿರುವುದು ಎಂದು ಈ ಸರ್ಕಾರದವರು ಸನ್ಮಾನ್ಯ ರಾಜ್ಯಪಾಲರಿಂದ ಹೇಳಿಸಿದ್ದಾರೆ. 6 ತಿಂಗಳಲ್ಲಿ ಏನು ಮಾಡಿದ್ದಾರೆ? ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ 55.00 ಲಕ್ಷ ಲೀಟರ್ ಇದ್ದದ್ದು, ಈಗ 80.00 ಲಕ್ಷ ಲೀಟರ್ ಆಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಒಂದು ನಿಮಿಷ.

**ಶ್ರೀ ಯು.ಬಿ.ವೆಂಕಟೇಶ್:–** ಸಭಾನಾಯಕರೇ, ನನ್ನ ಮಾತನ್ನು ಮೊದಲು ಮುಗಿಸುತ್ತೇನೆ. ಮಾನ್ಯ ಸಭಾಪತಿಯವರು ಆಮೇಲೆ ನನಗೆ ಮಾತನಾಡಲು ಸಮಯವನ್ನು ನೀಡುವುದಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಹಾಲು ಉತ್ಪಾದಕರಿಗೆ ಎರಡು ರೂಪಾಯಿ ಪ್ರೋತ್ಸಾಹಧನವನ್ನು ನಿಗದಿಪಡಿಸಿದ್ದು, ನಮ್ಮ ಸರ್ಕಾರವೇ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 2006ನೇ ಸಾಲಿನಿಂದ 2019ನೇ ಸಾಲಿನವರೆಗೆ ಯಾರ್ಯಾರು ಎಷ್ಟೆಷ್ಟು ಸಬ್ಸಿಡಿ ಕೊಟ್ಟಿದ್ದಾರೆ ಎಂಬುದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುನೋಡಿ. ಹಾಲು ಉತ್ಪಾದಕರಿಗೆ ಐದು ರೂಪಾಯಿ ಮಾಡಿದ್ದು ನಮ್ಮ ಸರ್ಕಾರವೇ. ಯಾವ ಸರ್ಕಾರ ಮಾಡಿದೆ ಎಂಬುದನ್ನು ಹೇಳಲಿ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಹೌದು ಮಾನ್ಯ ಸಭಾಪತಿಯವರೇ, ನಮ್ಮ ಬಿಜೆಪಿ ಸರ್ಕಾರ ಅದನ್ನು ಮಾಡಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಹಿಂದಿನ ಮೈತ್ರಿ ಸರ್ಕಾರಕ್ಕೆ ನಾಚಿಕೆಯಾಗಬೇಕು. ಏನು ಕೊಟ್ಟಿದ್ದಾರೆ? ಅವರು ಕೇವಲ ಒಂದು ರೂಪಾಯಿ ಪ್ರೋತ್ಸಾಹ ಧನವನ್ನಷ್ಟೇ ಕೊಟ್ಟಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಇವರು ರಾಜ್ಯಪಾಲರ ಕೈಯಲ್ಲಿ ಸುಳ್ಳು ಹೇಳಿಸಿದ್ದಾರೆಯೇ ಹೊರತು, ಯಾವುದೇ ಕೆಲಸವನ್ನು ಮಾಡುವಂಥ...

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಸುಳ್ಳು ಹೇಳಬೇಕು ನಿಜ. ಆದರೆ, ಮತ್ತೊಬ್ಬರನ್ನು ಸಂತೋಷಪಡಿಸುವುದಕ್ಕೆ ಸುಳ್ಳು ಹೇಳಬಾರದು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ದಯಮಾಡಿ ಆಡಳಿತ ಪಕ್ಷದವರು ವಿರೋಧ ಪಕ್ಷದವರಿಗೆ ಮಾತನಾಡಲು ಬಿಡಬೇಕು. ಈ ಸದನ ನಡೆಯಬೇಕೋ, ಬೇಡವೋ?

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ಒಳ್ಳೆಯ ಕೆಲಸ ಮಾಡಿದವರು, ಮತ್ತೆ ಏತಕ್ಕೆ ಹೊಡೆಸಿಕೊಂಡಿದ್ದಾರೆ?

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಅದರ ಬಗ್ಗೆ ನೀವೇನು ಹೇಳುವುದು. ಮಾನ್ಯ ಸದಸ್ಯರನ್ನು ಮಾತನಾಡುವುದಕ್ಕೆ ಬಿಡಿ. ವಿರೋಧ ಪಕ್ಷದವರು ಆಡಳಿತ ಪಕ್ಷದವರು ಹೇಳಿದ್ದನ್ನು ಕೇಳಿಕೊಂಡು ಹೋಗಬೇಕೆ? ಇದು ನಾಚಿಕೆಗೇಡಿನ ವಿಚಾರವಾಗಿದೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ.ಶರವಣ:-** ಮಾನ್ಯ ಎಂ.ಕೆ.ಪ್ರಾಣೇಶ್‌ರವರೇ, ನಾವು ಹೊಡೆಸಿಕೊಂಡು ಹೋಗಲಿಲ್ಲ, ನೀವೇ ಎತ್ತಿ ಹಾಕಿಕೊಂಡು ಹೋಗಿದ್ದು.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:-** ವಿಶೇಷ ವಿಮಾನದಲ್ಲಿ ಕರೆದುಕೊಂಡು ಹೋಗಿದ್ದು, ಯಾರು? ನಾಚಿಕೆಯಾಗಬೇಕು. ಹಿಂಬಾಗಿಲಿನಿಂದ ಅನೈತಿಕವಾಗಿ ಅಧಿಕಾರಕ್ಕೆ ಬಂದ ಸರ್ಕಾರ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:-** ಸಮಯವನ್ನು ಏತಕ್ಕೆ ವ್ಯರ್ಥ ಮಾಡುವುದು, ಮಾನ್ಯ ಸದಸ್ಯರಿಗೆ ಸಮಯವನ್ನು ಕೊಟ್ಟಿದ್ದಾರೆ. ಅವರು ಮಾತನಾಡಲಿ ಬಿಡಿ. ಮಾನ್ಯ ವೈ.ಎ.ನಾರಾಯಣಸ್ವಾಮಿಯವರಿಗೆ ಸುಮ್ಮನೆ ಇರುವುದಕ್ಕಾಗುವುದಿಲ್ಲವೇ?

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ರೈತರಿಗೆ (ಗೊಂದಲ) ಅವರಿಗೆ ನಾಚಿಕೆಯಾಗುವುದಿಲ್ಲವೇ?

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಅವರಿಗೆ ನಾಚಿಕೆಯಾಗಬೇಕು.

(ಗೊಂದಲ)

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ರೈತರಿಗೆ ರೂ.10,000-00 ಕೊಡುತ್ತೇವೆ ಎಂದು ಹೇಳಿ ಕೊಡದೆ ಹೋದವರು ಅವರು ಅವರಿಗೆ ನಾಚಿಕೆಯಾಗಬೇಕು. ಸಾಲ ಮನ್ನಾ ಮಾಡುತ್ತೇವೆ ಎಂದು ರೈತರಿಗೆ ವಾಗ್ದಾನ ಮಾಡಿ ಅವರಿಗೆ ಮೋಸ ಮಾಡಿ ಓಡಿ ಹೋದವರು ಅವರು. ಖಜಾನೆಯಲ್ಲಿ ದುಡ್ಡಿಲ್ಲವೆಂದು ಸುಳ್ಳು ಸುಳ್ಳು ಹೇಳಿಕೊಂಡು ರೈತರಿಗೆ ಮೋಸ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ರೈತ ಮಹಿಳೆಯರು ಏನು ಡೈರಿ ನಡೆಸುತ್ತಿದ್ದಾರೆ, ಅವರಿಗೆ ಎಷ್ಟರ ಮಟ್ಟಿಗೆ ಇವರು ತೆರಿಗೆ ವಿಧಿಸಿದ್ದಾರೆ ಎಂದರೆ, ಅವರಿಗೆ ನಾಚಿಕೆಯಾಗಬೇಕು. ಆ ರೈತರ ಶಾಪ ಯಾವುದೇ ಕಾರಣಕ್ಕೂ ಅವರಿಗೆ ತಟ್ಟದೇ ಇರುವುದಿಲ್ಲ.

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್:–** ಹೌದು, ರೈತರ ಶಾಪದಿಂದಲೇ ಇವತ್ತು ಅವರು ವಿರೋಧ ಪಕ್ಷದಲ್ಲಿ ಕುಳಿತಿರುವುದು.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ರೂ.875.00 ಕೋಟಿ ಭರಿಸಿರುವುದಕ್ಕೆ ಅವರು ಎಷ್ಟೆಲ್ಲಾ ಹೇಳಿಕೊಳ್ಳುತ್ತಾರೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಸುಳ್ಳಿನ ಸರಮಾಲೆಯನ್ನು ಸನ್ಮಾನ್ಯ ರಾಜ್ಯಪಾಲರ ಕಡೆಯಿಂದ ಹೇಳಿಸಿ, ಬರೀ 20 ಪುಟಗಳನ್ನೊಳಗೊಂಡ ಒಂದು ಪುಸ್ತಕವನ್ನು ನೀಡಿ, ಯಾವುದೇ ನಿಜಾಂಶವನ್ನು ಬಿಜೆಪಿ ಸರ್ಕಾರ ಜನರ ಮುಂದೆ ಇಟ್ಟಿಲ್ಲ. ಏನೇನು ಅಭಿವೃದ್ಧಿಯಾಗಿದೆ ಎಂದು ಹೇಳಿದ್ದಾರೆ, ಅದೆಲ್ಲವೂ ಹಳೆಯ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಮಾಡಿರುವುದೇ ವಿನಃ ಬಿಜೆಪಿ ಸರ್ಕಾರದಲ್ಲಿ ಏನೂ ಆಗಿಲ್ಲ. ಬಿಜೆಪಿ ಸರ್ಕಾರಕ್ಕೆ ಭಗವಂತ ಎಷ್ಟು ಒಳ್ಳೆಯದನ್ನು ಮಾಡುತ್ತಾನೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರು ಯಾವಾಗಲಾದರೂ ಅಧಿಕಾರಕ್ಕೆ ಬರಲಿ, ನೆರೆ ಸಂಭವಿಸುತ್ತದೆ, ಇಲ್ಲದಿದ್ದರೆ ಬರ ಸಂಭವಿಸುತ್ತದೆ. ಬಿಜೆಪಿ ಸರ್ಕಾರ ಯಾವಾಗ ಅಸ್ತಿತ್ವಕ್ಕೆ ಬಂದರೂ ಅವರಿಗೆ ಬೇಕಾದಂಥ ಬಹುಮತ ಬರುವುದಿಲ್ಲ. ಹಾಗಾಗಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಯಾವಾಗ ಮುಖ್ಯಮಂತ್ರಿಗಳಾಗುತ್ತಾರೆಯೋ ಅಂತಹ ಸಂದರ್ಭದಲ್ಲಿ ಬೇರೆ ಪಕ್ಷದವರನ್ನು ತೆಗೆದುಕೊಂಡು, ಸರ್ಕಾರ ಮುಂದಕ್ಕೆ ನಡೆಸಿಕೊಂಡು ಹೋಗುವಂಥ ಒಂದು ವಿಚಲಿತ ಪರಿಸ್ಥಿತಿಯಾಗಿದೆ. ಇದೆಲ್ಲವಕ್ಕೂ ಕಡಿವಾಣ ಹಾಕಬೇಕು. ಆದ್ದರಿಂದ ಮಾನ್ಯ ಮುಖ್ಯಮಂತ್ರಿ ಅಥವಾ ತಮ್ಮ ಅಧ್ಯಕ್ಷತೆಯಲ್ಲಿಯೇ ಒಂದು ಸದನ ಸಮಿತಿ ರಚನೆ ಮಾಡಿ,...

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ,...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, ನಮ್ಮನ್ನು ಮಾತನಾಡಲು ಬಿಡಿ. ತಾವು ಮಾತನಾಡುವಾಗ ನಾನು ಸಹ ತಮಗೆ ಮಾತನಾಡಲು ಬಿಡುವುದಿಲ್ಲ, ಇವತ್ತು ಹೇಳಿದ್ದೇನೆ. ತಾವು ಏನೆಂದು ಅಂದುಕೊಂಡಿದ್ದೀರಿ, ಹಿರಿಯರೆಂದರೆ ಅದು ನೀವೇಯೇ? ಮೊನ್ನೆ ಮಾನ್ಯ ಆಯನೂರು ಮಂಜುನಾಥ್‌ರವರು ಮಾತನಾಡುವಾಗ ನಾನು ಎದ್ದು ಮಾತನಾಡಿದ್ದಕ್ಕೆ 'ನಿಮಗಿಂತ ಹಿರಿಯರಿದ್ದಾರೆ, ನೀವು ಕುಳಿತುಕೊಳ್ಳಿ' ಎಂದು ಹೇಳಿದರು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಅವರ ಲೆಕ್ಕದಲ್ಲಿ ವಿರೋಧ ಪಕ್ಷದವರು ಮಾತನಾಡಲೇಬಾರದು. ಅವರು 3 ಜನರೇ ಕುಣಿಯಬೇಕು, ನಾವು ಅದನ್ನು ನೋಡಿಕೊಂಡು ಕುಳಿತುಕೊಳ್ಳಬೇಕು. ಮಾನ್ಯ ತೇಜಸ್ವಿನಿ ಗೌಡರವರು ಮಾತನಾಡುವಾಗ ನಾವು ಸುಮ್ಮನೆ ಕೇಳಿಸಿಕೊಂಡು ಕುಳಿತಿರಲಿಲ್ಲವೇ? ಸದನ ನಡೆಯಲಿ ಎಂಬ ಇಚ್ಛೆಯೇ ಅವರಿಗೆ ಇಲ್ಲ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಹಾಗೆಯೇ ಮಾನ್ಯ ಹೆಚ್.ಎಂ.ರಮೇಶಗೌಡರಿಗೆ ನೀವು ಅವರ ಪಕ್ಕದಲ್ಲಿ ಕುಳಿತುಕೊಂಡು ಅವರಿಗೆ ಏನು ಮಾತನಾಡಬೇಕೆಂದು ಹೇಳಿಕೊಡು ಎಂದು ಹೇಳುತ್ತಾರೆ. ಅದೇ ರೀತಿ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಜೆ.ಹೆಚ್.ಪಟೇಲ್‌ರವರ ಕಾಲದಲ್ಲಿ ಮಾನ್ಯ ಆಯನೂರು ಮಂಜುನಾಥ್‌ರವರು ಅವರ ಕ್ಷೇತ್ರದಿಂದ ಗೆದ್ದು ಬಂದಾಗ ಗಮನ ಸೆಳೆಯುವ ಸೂಚನೆಯ ಮೇಲೆ ಮಾತನಾಡಲು ನಿಲ್ಲುತ್ತಾರೆ. ಅಂದಿನ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಜೆ.ಹೆಚ್.ಪಟೇಲ್‌ರವರು ಅದಕ್ಕೆ ಅವಕಾಶ ನೀಡುವುದಿಲ್ಲ. ಅದಕ್ಕೆ ಮಾನ್ಯ ಆಯನೂರು ಮಂಜುನಾಥ್‌ರವರು ಕುಳಿತಿರುವ ಆಸನದ ಮೇಲೆ ಎದ್ದು ನಿಲ್ಲುತ್ತಾರೆ, ಅಂದಿನ ಮುಖ್ಯಮಂತ್ರಿಗಳಾದ ಮಾನ್ಯ ಜೆ.ಹೆಚ್.ಪಟೇಲ್‌ರವರು 'ಮಂಜಣ್ಣ ನಿಂತುಕೊಳ್ಳಬೇಡ, ನಿನ್ನ ಮುಂದೆ ಯಾರಿದ್ದಾರೆ ಗೊತ್ತೇ? ಶ್ರೀಮತಿ ಪ್ರಮೀಳಾ ನೇಸರ್ಗಿಯವರಿದ್ದಾರೆ, ಅವರು ಸಾಷ್ಟಾಂಗ ನಮಸ್ಕಾರ ಹಾಕಿದರೆ ನೀನು ಹೋಗಿ ಬಿಡುತ್ತೀಯಾ, ಅರ್ಥವಾಯಿತೇ? ಜನ ನಿನ್ನನ್ನು ಗೆಲ್ಲಿಸಿ ಕಳುಹಿಸಿಕೊಟ್ಟಿರುವುದು ಆಸನದಲ್ಲಿ ಕುಳಿತುಕೊಳ್ಳುವುದಕ್ಕೆ, ನಿಂತುಕೊಳ್ಳುವುದಕಲ್ಲಾ! ಎಂದು ಹೇಳುತ್ತಾರೆ. ನಮಗೆ ಇವರೆಲ್ಲಾ... ಆಡಳಿತ ಪಕ್ಷದವರಿಗೆ ಹೇಳಬೇಕು, ಒಂದು ದಿನ ಕ್ಷಮೆ ಕೇಳುತ್ತಾರೆ, ಒಬ್ಬರು ಒಂದು ದಿನ ವಿಷಾದ ಕೇಳುತ್ತಾರೆ, ಬೇಡದ ವಿಚಾರವನ್ನು ಮಾತನಾಡುತ್ತಾರೆ, Ethics Committee ಬಗ್ಗೆ ಮಾತನಾಡಲು ಹೋಗುತ್ತಾರೆ. ನಮಗೆ ಹೇಳುವುದಲ್ಲ, ಮೊದಲು ಸದನದಲ್ಲಿ ಹೇಗೆ ಇರಬೇಕೆಂಬುದನ್ನು ಅವರ ಪಕ್ಷದವರಿಗೆ ಹೇಳಿಕೊಳ್ಳಲಿ. ನಾವು ಮಾತನಾಡುವಾಗ ಅಡ್ಡಿಪಡಿಸಿದರೆ, ಅವರಿಗಿಂತ ನಾವು ಹೆಚ್ಚು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಡ್ಡಿಪಡಿಸಬೇಕಾಗುತ್ತದೆ. ನಮಗಿಂತ ಅವರು ಸಂಖ್ಯೆಯಲ್ಲಿ ಜಾಸ್ತಿ ಇದ್ದೇವೆ ಎಂಬ ಕಾರಣಕ್ಕೆ ಅವರು ಈ ರೀತಿ ಅಡ್ಡಿಪಡಿಸುವುದು ಸರಿಯಲ್ಲ.

**ಸಭಾಪತಿಯವರು:-** ಮಾನ್ಯ ವೆಂಕಟೇಶ್‌ರವರೇ, ತಾವು ವಿಷಯದ ಮೇಲೆ ಮಾತನಾಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಎಲ್ಲಿ ವಿಷಯದ ಮೇಲೆ ಮಾತನಾಡುವುದು? ನಾವು ಮಾತನಾಡಬೇಕೆನ್ನುವ flow ಹೋಗಿಬಿಟ್ಟಿತು. ಆಡಳಿತ ಪಕ್ಷದವರೆಲ್ಲರೂ ಮಧ್ಯೆ-ಮಧ್ಯೆ ಎದ್ದು ಬೇಕಂತಲೇ ಹಾಳು ಮಾಡುತ್ತಾರೆ. ಅವರಿಗೆ ಸದನ ನಡೆಸುವುದು ಇಷ್ಟವಿಲ್ಲ. ಏನಾದರೂ ಮಾತನಾಡಬೇಕೆಂದು ನಾವು ಸಿದ್ಧತೆ ಮಾಡಿಕೊಂಡು ಸದನಕ್ಕೆ ಬಂದರೆ, ಬೇಕಂತಲೇ ಇವರು ಅಡೆ-ತಡೆ ಹಾಕುತ್ತಾರೆ. ಆದ್ದರಿಂದ ಈ ಸರ್ಕಾರ ಯಾವುದೇ ಒಂದು ದಿಕ್ಸೂಚಿಯನ್ನಿಟ್ಟುಕೊಂಡು ರಾಜ್ಯಪಾಲರ ಮುಖಾಂತರ ಭಾಷಣವನ್ನು ಮಾಡಿಸಿಲ್ಲ. ಅವರ ಬಾಯಲ್ಲಿ ಹೇಳಿಸಿರುವುದೆಲ್ಲಾ ಸುಳ್ಳು ಅಥವಾ ಈ ಪುಸ್ತಕದಲ್ಲಿರುವುದೆಲ್ಲಾ ನಮ್ಮ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಆಗಿರುವಂಥ ಸಾಧನೆ. ಆದ್ದರಿಂದ ದಯಮಾಡಿ ಬೆಂಗಳೂರಿಗೆ ಒಬ್ಬರು ಸಚಿವರನ್ನು ನೇಮಿಸಬೇಕು. ಈ ಬೆಂಗಳೂರು ನಗರದ ಅಭಿವೃದ್ಧಿಗೆ ಒತ್ತು ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಹೈದ್ರಾಬಾದ್-ಕರ್ನಾಟಕದಲ್ಲಿ ಬಹಳ ಅನ್ಯಾಯವಾಗುತ್ತಿದೆ. 6 ಜಿಲ್ಲೆಯಲ್ಲಿ ರೂ.2,000.00 ಕೋಟಿಗಳಷ್ಟು ಹಣ ಇದೆ. ಆದರೆ, ಅದನ್ನು ಖರ್ಚು ಮಾಡುವುದಕ್ಕೆ ಅವರಿಗೆ ಯೋಗ್ಯತೆ ಇಲ್ಲ. ಒಂದು ಕಡೆ ದುಡ್ಡಿಲ್ಲವೆಂದು ಹೇಳುತ್ತಾರೆ, ಮತ್ತೊಂದು ಕಡೆ ಕೆಲಸವೂ ಆಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಎಂ. ಕಾರಜೋಳರವರಿಗೆ ಹೇಳಿದ್ದೇವೆ ಎಂದು ಹೇಳಿದರು. ಬಹಳ ಒಳ್ಳೆಯದು, ಅವರು ಉತ್ತಮರು, ಮಾಡುತ್ತಾರೆ. ಆದರೆ, ಅವರು ಕೆಲಸವನ್ನು ಮಾಡಲಿಲ್ಲ ಏತಕ್ಕೆ? ಆ ಭಾಗದವರನ್ನು ಮಾಡಿ ಎಂದು ಹೇಳುತ್ತಾರೆ. ಯಾರಾದರೂ ಒಬ್ಬರನ್ನು ಮಾಡಲಿ. ನಾನು ಹಿಂದಿನ ಸದನದಲ್ಲಿಯೇ ಬಾಯಿ ಬಡಿದುಕೊಂಡೆ. 6 ಜಿಲ್ಲೆಯ ಜನ ಬಹಳ ಕಷ್ಟದಲ್ಲಿದ್ದಾರೆಂದು ಸವಿಸ್ತಾರವಾಗಿ ಹೇಳಿದ್ದೆ. 6 ತಿಂಗಳಾದರೂ ಒಬ್ಬರು ಸಚಿವರನ್ನು ನೇಮಿಸುವುದಕ್ಕಾಗಲಿಲ್ಲ, ಇವರಿಗೆ ಏನಾಗಿದೆ? 22 ಜನ ಸಚಿವರನ್ನಾಗಿ ನೇಮಿಸಲಾಗಿದೆ, 14 ಜಿಲ್ಲೆಗಳಿಗೆ representation ಇಲ್ಲ. ಇದರರ್ಥ ಏನು? ಈ ಸರ್ಕಾರ ಇರುತ್ತದೆಯೋ, ಹೋಗುತ್ತದೆಯೋ? ಕಳೆದ ಸಲವು ನಾವು ಹೇಳಿದ್ದೆವು, ಈಗಲೂ ಹೇಳುತ್ತಿದ್ದೇವೆ, ಸರ್ಕಾರ ಇದೇ ರೀತಿ ನಡೆದುಕೊಂಡು ಹೋದರೆ ಅವರು ಸಹ ಅಧಿಕಾರದಲ್ಲಿ ಇರುವುದಿಲ್ಲ. ಇದೆಲ್ಲಾ ಬಹಳ ದಿನ ನಡೆಯುವುದಿಲ್ಲ. ಅವರ ಆಯುಷ್ಯ ಅತ್ಯಂತ ಅಲ್ಪ ಎಂದು ಹೇಳುವುದಕ್ಕೆ ನನಗೆ ಬಹಳ ಬೇಜಾರಾಗುತ್ತಿದೆ. ಅವರು ಇದೇ ರೀತಿ ಸರ್ಕಾರವನ್ನು ನಡೆಸಿಕೊಂಡು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋದರೆ, 6 ತಿಂಗಳು ಮಾತ್ರ ಅಲ್ಲ, ಮುಂದಿನ ಬಜೆಟ್ ವೇಳೆಗೆ ಅವರ ಸರ್ಕಾರ ಅಸ್ತಿತ್ವದಲ್ಲಿರುವುದಿಲ್ಲ ಎಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವ ಮೊದಲು ಮಾನ್ಯ ಸದಸ್ಯರಲ್ಲಿ ಒಂದು ವಿನಂತಿಯೇನೆಂದರೆ, ನಾನು ರಾಜಕಾರಣದ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಏಕೆಂದರೆ, ರಾಜಕಾರಣದ ಬಗ್ಗೆ ಮಾತನಾಡಲು ಹಿರಿಯರಿದ್ದಾರೆ, ಅವರುಗಳು ಮಾತನಾಡುತ್ತಾರೆ. ನಾನು ಕೃಷಿ ಮತ್ತು ನೀರಾವರಿ ವಿಚಾರವಾಗಿ ಮಾತನಾಡುತ್ತೇನೆ. ಆದ್ದರಿಂದ ದಯವಿಟ್ಟು ಅವರ್‍ಯಾರು ನನ್ನ ಮಾತಿಗೆ ಅಡ್ಡಿಪಡಿಸಬಾರದು. ಮೊದಲನೆಯದಾಗಿ, ನಾನು ಕೃಷಿ ವಿಚಾರವಾಗಿ ಮಾತನಾಡುತ್ತೇನೆ. ಕೃಷಿ ಎಂದರೆ, ಕೇವಲ ಕೃಷಿ ಇಲಾಖೆ ಅಷ್ಟೇ ಅಲ್ಲ. ಕೃಷಿ ಇಲಾಖೆಯಲ್ಲಿ ಸಹಕಾರ ಇಲಾಖೆ, ಪಶುಸಂಗೋಪನಾ ಇಲಾಖೆ, ಇಂಧನ ಇಲಾಖೆ, ನೀರಾವರಿ ಇಲಾಖೆ, ತೋಟಗಾರಿಕೆ ಇಲಾಖೆ, ಸಕ್ಕರೆ ಇಲಾಖೆ, ಜವಳಿ ಇಲಾಖೆ ಇವೆಲ್ಲವು ಒಳಗೊಂಡಂತೆ ಸಮಗ್ರವಾಗಿ ಕೃಷಿ ಇಲಾಖೆ ಒಂದಕ್ಕೊಂದು ಲಿಂಕ್ ಇರುವಂತಹ ಒಂದು ಇಲಾಖೆಯಾಗಿದೆ. ಇವತ್ತು ನಮ್ಮ ದೇಶದಲ್ಲಿ ಪ್ರತಿ ರಾಜ್ಯದಲ್ಲಿಯು ಹಾಗೂ ನಮ್ಮಲ್ಲಿಯು ಸಹ ಮುಂಜಾನೆ ಎದ್ದ ಕೂಡಲೇ ರೈತರಿಗೆ ನಾವು ಹೆಚ್ಚಿನ ರೀತಿಯಲ್ಲಿ ಉತ್ತೇಜನ ನೀಡಬೇಕು, ಅವರ ಆರ್ಥಿಕ ಪರಿಸ್ಥಿತಿಯನ್ನು ದ್ವಿಗುಣಗೊಳಿಸಬೇಕೆಂದು ರೈತರನ್ನು ಎತ್ತರದಲ್ಲಿಟ್ಟುಕೊಂಡು ಸಾಕಷ್ಟು ಭಾಷಣಗಳನ್ನು ಹಿಂದಿನಿಂದಲೂ ಮಾಡಿಕೊಂಡು ಬಂದಿದ್ದೇವೆ. ಆದರೆ, ಇಷ್ಟು ವರ್ಷಗಳು ಕಳೆದರೂ ಸಹ ನಮ್ಮ ರೈತರಿಗೆ ಹೆಚ್ಚಿನ ರೀತಿಯಲ್ಲಿ ಲಾಭವಾಗುವುದನ್ನು ನೋಡುತ್ತಿಲ್ಲಾ. ಅದಕ್ಕೆ ಕಾರಣಗಳನ್ನು ಹುಡುಕುವ ಕೆಲಸವನ್ನು ಅತೀ ಮುಖ್ಯವಾಗಿ ನಮ್ಮ ಸರ್ಕಾರ ಮಾಡಬೇಕಾಗಿದೆ. ನಮ್ಮ ಕರ್ನಾಟಕ ರಾಜ್ಯವು ಯಾವ climatic zone ನಲ್ಲಿದೆ ಎಂಬುದನ್ನು ತಿಳಿದುಕೊಳ್ಳುವುದು ಅತ್ಯಂತ ಮಹತ್ವದ ವಿಚಾರವಾಗಿದೆ. ನಮ್ಮ ಕರ್ನಾಟಕ ರಾಜ್ಯವು Semi-Arid Tropics ನಲ್ಲಿ ಒಳಪಡುವಂಥ ಪ್ರದೇಶವಾಗಿದೆ. ಈ Semi-Arid Tropics ನಲ್ಲಿ ಯಾವ್ಯಾವ ಬೆಳೆಗಳನ್ನು ಸಮರ್ಪಕವಾಗಿ ಬೇಸಾಯ ಮಾಡಿ ಯಾವ ರೀತಿಯಲ್ಲಿ ಅತ್ಯಧಿಕ ಇಳುವರಿ ಉತ್ಪಾದನೆ ಮಾಡಬೇಕೆಂಬುದನ್ನು ಅಧ್ಯಯನ ಮಾಡುವುದು ಅತ್ಯಂತ ಅವಶ್ಯಕವಾಗಿರುವ ಅಂಶವಾಗಿದೆ. ರಾಜ್ಯ ಸರ್ಕಾರ ಸಹ ಈ seeds ಮತ್ತು pesticides ನಲ್ಲಿ ಸಾಕಷ್ಟು ಸಂಶೋಧನೆಗೆ ಪ್ರೋತ್ಸಾಹ ನೀಡಿ, ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಆಗುವ ಸಂಶೋಧನೆಗಳು ಸರಿಯಾದ ರೀತಿಯಲ್ಲಿ Lab to Land ಅನುಷ್ಠಾನಗೊಳದೇ ಇರುವುದು ಕೃಷಿ ಹಿಂದೆ ಬೀಳುವುದಕ್ಕೆ ಮುಖ್ಯವಾದ ಒಂದು ಕಾರಣವಾಗಿದೆ. ನಾನು ನಿನ್ನೆ ಬಜೆಟ್ ಪುಸ್ತಕವನ್ನು ಓದಿದ್ದೆ. ಪ್ರಮುಖವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶಿವಮೊಗ್ಗ ಕೃಷಿ ವಿಶ್ವವಿದ್ಯಾನಿಲಯವನ್ನು ಹೊರತುಪಡಿಸಿದರೆ ಇನ್ನುಳಿದ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಹಣವೇ ಇಲ್ಲದಂತಾಗಿದೆ. ಧಾರವಾಡ, ರಾಯಚೂರು ಮತ್ತು ಬೆಂಗಳೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳಿದ್ದು, ಇವೆಲ್ಲವೂ ಸುಮಾರು 50-60 ವರ್ಷಗಳಷ್ಟು ಹಿಂದಿನಿಂದಲೂ ನಡೆದುಕೊಂಡು ಬಂದಿರತಕ್ಕಂಥ ವಿಶ್ವವಿದ್ಯಾನಿಲಯಗಳಾಗಿವೆ.

(ಮುಂದು) . . .

(179)/06.03.2020/11.50/ಎಸ್‌ಕೆ-ಆರ್‌ಎನ್

**ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು):-**

ಈ ಕಾಲೇಜುಗಳಿಗೆ ಸ್ವಲ್ಪ ಹಣವನ್ನು provide ಮಾಡಿದರೆ, maximum infrastructure ನೀಡಿದರೆ, research ನಡೆಯವಂತಹ ಸ್ಥಳಗಳಾಗುತ್ತವೆ. ಪ್ರತಿ ವರ್ಷವೂ ಕೂಡ ಪ್ರತಿಯೊಂದು ವಿಶ್ವವಿದ್ಯಾನಿಲಯಗಳಿಗೂ ಅನುದಾನವನ್ನು ಘೋಷಣೆ ಮಾಡಬೇಕಾಗುತ್ತದೆ. ICAR (Indian Council of Agricultural Research), IIHR (Indian Institute of Horticulture Research), RKVY(Rashtriya Krishi Vikasa Yojana) ನಿಂದ ಸ್ವಲ್ಪ ಅನುದಾನ ಬರುತ್ತದೆ. ಆದರೆ ಆ ಅನುದಾನ ಸಾಕಾಗುವುದಿಲ್ಲ. ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಕರೋನಾ ವೈರಸ್ ಬಗ್ಗೆ ಹೇಳಿಕೆ ಕೊಟ್ಟರು. ಆ ಕರೋನಾ ವೈರಸ್ ಮನುಷ್ಯರಿಗೆ ಬರುತ್ತದೆ. ಅದೇ ರೀತಿ ಪ್ರತಿ ವರ್ಷವೂ ಕೂಡ ಒಂದಲ್ಲ ಒಂದು ರೀತಿಯ ವೈರಸ್‌ಗಳು ಗಿಡಗಳಿಗೆ attack ಆಗುವಂತಹದ್ದನ್ನು ನಾವು ನೋಡುತ್ತೇವೆ. ಇವತ್ತು ಯಾವ ರೀತಿ ಮನುಷ್ಯರಿಗೆ ವೈರಸ್‌ಗಳು attack ಆಗುತ್ತಿದೆಯೋ ಅದೇ ರೀತಿ ಗಿಡಗಳಿಗೆ ತಗಲುವಂತಹದ್ದನ್ನು ನಾವು ನೋಡುತ್ತಿದ್ದೇವೆ. Wilt ಬರುತ್ತದೆ. ವೈರಸ್ ಬರುತ್ತದೆ. ಅತ್ಯಂತ most deadly ವೈರಸ್ ಮೆಣಸಿನಕಾಯಿಯಲ್ಲಿ ಇದೆ. ಅದನ್ನು ಕಂಟ್ರೋಲ್ ಮಾಡಿದರೆ ಮಾತ್ರ ಮೆಣಸಿನಕಾಯಿ ಬೆಳೆಯುವುದಕ್ಕೆ ಸಾಧ್ಯವಿದೆ. ಒಂದೇ ಸಾರಿ ಅದು ಕಂಟ್ರೋಲ್ ಆಗಲಿಲ್ಲವೆಂದರೆ, ಸಂಪೂರ್ಣವಾಗಿ ಮೆಣಸಿನಕಾಯಿ ನಾಶವಾಗುತ್ತದೆ. ರಾಜ್ಯ ಸರ್ಕಾರ ಇದರ ಬಗ್ಗೆ ಬಹಳಷ್ಟು ಅಧ್ಯಯನ ಮಾಡಿ ಹೊಸ ಕೃಷಿ ನೀತಿ ಮಾಡಬೇಕೆಂದು ನಿನ್ನೆಯ ಬಜೆಟ್‌ನಲ್ಲಿ ಹೇಳಿದ್ದಾರೆ. ನಾನು ಎಲೆಕ್ಟ್ ಆಗಿ ನಾಲ್ಕು ವರ್ಷಗಳಾಯಿತು. ಅಂದಿನಿಂದಲೂ ಇದೇ ವಿಷಯವನ್ನೇ ಕೇಳುತ್ತಿದ್ದೇನೆ. ಪ್ರತಿ ವರ್ಷ ಹೊಸ ಕೃಷಿ ನೀತಿ ಮಾಡುತ್ತೇವೆಂದು ಹೇಳುತ್ತಲೇ ಇದ್ದಾರೆ. ಆದರೆ ಹೊಸ ಕೃಷಿ ನೀತಿ ಯಾವಾಗ ಮಾಡುತ್ತಾರೆಂಬುದು ನಮಗೆ ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಹೆಚ್ಚಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧ್ಯಯನ ಮಾಡಬೇಕಾಗುತ್ತದೆ. ಇವತ್ತು ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಸಹ ಈ ಸದನದಲ್ಲಿದ್ದಾರೆ. ಹಾಗಾಗಿ ಮಾನ್ಯ ಸಚಿವರಿಗೆ ಮನವಿ ಮಾಡುವುದೇನೆಂದರೆ, Farm labours ಬಗ್ಗೆ ಹೇಳುವುದಾದರೆ, ಇವತ್ತಿನ ದಿನಗಳಲ್ಲಿ ಶೇಕಡ 75 ರಷ್ಟು ರೈತ ಮಹಿಳೆಯರು ಜಮೀನುಗಳಲ್ಲಿ ದುಡಿಯುತ್ತಿದ್ದಾರೆ. ಆದರೆ ಪುರುಷರಿಗೆ ಕೆಲಸವಿಲ್ಲದೇ ಅರಳಿ ಕಟ್ಟೆಯ ಮೇಲೆ ಕುಳಿತುಕೊಳ್ಳುವುದು, ಮಹಿಳೆಯರು ದುಡಿದು ತಂದಿರುವ ಹಣವನ್ನು ಶೇಕಡ 50 ರಷ್ಟು ಪುರುಷರು ಪಡೆದುಕೊಂಡು, ರಾತ್ರಿ ಮಜಾ ಮಾಡಿ ಮಲಗಿಕೊಳ್ಳುವುದೇ ಕೆಲಸವಾಗಿದೆ. We must take more interest about our farm women labours. ಇವತ್ತು ಶೇಕಡ 70 ರಷ್ಟು farm women labours ನಿಂದಲೇ ಕುಟುಂಬಗಳು ನಡೆಯುತ್ತಿವೆ. ಹೈದರಾಬಾದ್-ಕರ್ನಾಟಕ ರಾಯಚೂರು ಪ್ರದೇಶದಲ್ಲಿ ಹತ್ತಿ, ಮೆಣಸಿನಕಾಯಿಯನ್ನು ಅತಿ ಹೆಚ್ಚಾಗಿ ಬೆಳೆಯುತ್ತಾರೆ. ಹೆಣ್ಣು ಮಕ್ಕಳು ಮುಂಜಾನೆ ಬೆಳಗ್ಗೆ ಏಳು ಗಂಟೆಗೆ ಎದ್ದು ಸಂಜೆಯವರೆವಿಗೂ ಹತ್ತಿಯನ್ನು ಬಿಡಿಸುವುದಕ್ಕೆ ಹೋಗುತ್ತಾರೆ. ಒಂದು ಕೆ.ಜಿ. ಹತ್ತಿಯನ್ನು ಬಿಡಿಸಿದರೆ, ಅವರಿಗೆ ಐದು ರೂಪಾಯಿಗಳನ್ನು ನೀಡುವುದು ಒಡಂಬಡಿಕೆಯಾಗಿದೆ. ರೈತ ಹೆಣ್ಣು ಮಗಳು ಸಂಜೆಯಾದರೂ ಕೂಡ ಊಟ ಮಾಡುವ ಹಾಗೇ ಇಲ್ಲ. ಮುಂಜಾನೆಯಿಂದ ಸಂಜೆಯವರೆವಿಗೂ ಹೊಲದಲ್ಲಿದ್ದು, ಸಂಜೆ ಏಳು ಗಂಟೆಯಾದ ಮೇಲೆ ಮನೆಗೆ ವಾಪಸ್ಸು ಹೋಗುತ್ತಾಳೆ. ಸುಮಾರು ಎಪ್ಪತ್ತು, ಎಂಭತ್ತು, ಒಂದು ಕ್ವಿಂಟಾಲ್‌ನಿಂದ ಒಂದು ಕ್ವಿಂಟಾಲ್ ಹತ್ತು ಕೆ.ಜಿಯವರೆಗೂ ಹತ್ತಿ ಬಿಡಿಸುತ್ತಾಳೆ. ಐದಾರು ವರ್ಷಗಳು ಇರುವಂತಹ ಮಕ್ಕಳನ್ನು ಆಕೆ ತನ್ನ ಜೊತೆಗೆ ಕರೆದುಕೊಂಡು ಹೋಗಿ, ಎಲ್ಲರೂ ಸೇರಿಕೊಂಡು ಹತ್ತಿಯನ್ನು ಬಿಡಿಸುತ್ತಾರೆ. ಅವರು ಎಷ್ಟು ಕೆಲಸ ಮಾಡುತ್ತಾರೆಂಬುದನ್ನು ನಾವು ನೋಡಬೇಕಾಗುತ್ತದೆ, ಮತ್ತು ಅವರ welfare ಬಗ್ಗೆ ಚಿಂತನೆ ಮಾಡಬೇಕು. ಹತ್ತಿ ಬಿಡಿಸುವ ಸೀಸಿನ್ ಒಂದು ತಿಂಗಳು ಇದ್ದಾಗ ಹಗಲು-ರಾತ್ರಿ ದುಡಿಯುತ್ತಾರೆ. ಆ ಸೀಸಿನ್‌ಲ್ಲಿ ದುಡಿದಂತಹ ಹಣದಲ್ಲಿ ಒಂದು ವರ್ಷಕ್ಕೆ ಕುಟಂಬಕ್ಕೆ ಆಗುವಷ್ಟು ಬಟ್ಟೆ, ಸಣ್ಣ-ಪುಟ್ಟ ಸಾಮಾನುಗಳನ್ನು ಖರೀದಿ ಮಾಡಿಕೊಳ್ಳಬೇಕು. ಏಕೆಂದರೆ, ಇನ್ನುಳಿದ ಒಂಭತ್ತು ತಿಂಗಳು ಅವರಿಗೆ ಕೆಲಸ ಸಿಗುವುದಿಲ್ಲ. ಮೂರು ತಿಂಗಳ ಕಾಲ ಅವರಿಗೆ ಹತ್ತಿ ಬಿಡಿಸುವ ಕೆಲಸ ಜಾತ್ರೆ ಇದ್ದ ಹಾಗೇ. ಹಾಗಾಗಿ ಅವರ ಆರೋಗ್ಯದ ಬಗ್ಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೇ ಎಂಬುದರ ಬಗ್ಗೆ ತಿಳಿಸಬೇಕೆಂದು ಕೋರುತ್ತೇನೆ.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರಣ ಸಬಲೀಕರಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತಹದ್ದು ಬಹಳಷ್ಟು ನಿಜ. ನಮ್ಮ ಭಾಗದಲ್ಲಿ ಅತಿ ಹೆಚ್ಚಾಗಿ ರೈತ ಕುಟುಂಬಗಳು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರುವುದರಿಂದ, ಪ್ರತಿ ದಿನ ರೈತ ಹೆಣ್ಣು-ಮಕ್ಕಳು ಬೆಳಿಗ್ಗೆ ಏಳು ಗಂಟೆಯಿಂದ ಸಂಜೆ ಏಳು ಗಂಟೆಯವರೆಗೆ ಹೊಲದಲ್ಲಿ ಕೆಲಸ ಮಾಡುತ್ತಿರುವುದನ್ನು ನಾವು ಕೂಡ ಗ್ರಾಮೀಣ ಪ್ರದೇಶದಲ್ಲಿ ನೋಡುತ್ತಿದ್ದೇವೆ. ಅವರ ಆರೋಗ್ಯ ಮತ್ತು ಕುಟುಂಬದ ನಿರ್ವಹಣೆಯ ಬಗ್ಗೆ, ಮತ್ತೊಂದರ ಬಗ್ಗೆ ನಮ್ಮ ಇಲಾಖೆಯಿಂದ ಹಾಗೂ ಮಹಿಳಾ ಅಭಿವೃದ್ಧಿ ನಿಗಮದಿಂದ ಕೆಲವೊಂದು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಕೃಷಿ ಇಲಾಖೆಯಿಂದ ರೈತ ಹೆಣ್ಣು ಮಕ್ಕಳ ಸ್ವಸಹಾಯ ಸಂಘಗಳನ್ನು ಮಾಡುತ್ತಿದ್ದಾರೆ. ಅದರ ಬಗ್ಗೆಯು ಸಹ ಮಾನ್ಯ ಸಚಿವರ ಹತ್ತಿರ ಮಾತನಾಡಿ, ಅಲ್ಲಿರುವಂತಹ ಸ್ವಸಹಾಯ ಸಂಘಗಳನ್ನು ತೆಗೆದುಕೊಂಡು, ಅದರ ಮೂಲಕ ಇನ್ನು ಹೆಚ್ಚಿನ ಯೋಜನೆಗಳನ್ನು ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಈ ಬಜೆಟ್‌ನಲ್ಲಿ ಅತಿ ಹೆಚ್ಚು ಅನುದಾನವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಕೊಟ್ಟಿದ್ದಾರೆ. ಹಾಗಾಗಿ ಹೆಣ್ಣು ಮಕ್ಕಳು ಬಗ್ಗೆ ಹೆಚ್ಚಿನ ಕಾಳಜಿ ತೆಗೆದುಕೊಂಡರೆ ಒಳ್ಳೆಯದಾಗುತ್ತದೆಂಬುದು ನನ್ನ ಅಭಿಪ್ರಾಯವಾಗಿದೆ. ಬಜೆಟ್ ಪುಸ್ತಕದಲ್ಲಿ ಒಂದು ನೂರ ಆರವತ್ಮೂರು ಲಕ್ಷ ರೈತರಿಗೆ ಸರ್ಕಾರ ಹೆಲ್ತ್ ಕಾರ್ಡ್‌ನ್ನು ಕೊಟ್ಟಿದ್ದಾರೆಂಬ ಮಾತನ್ನು ಉಲ್ಲೇಖ ಮಾಡಲಾಗಿದೆ. ನಾವು ಇದರ ಬಗ್ಗೆ ಹೋದ ವರ್ಷ ಪ್ರಸ್ತಾಪ ಮಾಡಿದ್ದೇವೆ. ಪ್ರತಿ ವರ್ಷವೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ. ಇವತ್ತಿನವರೆಗೂ ಯಾವ ರೈತರಿಗೂ ಕೂಡ soil ಹೆಲ್ತ್ ಕಾರ್ಡ್ ಸಿಕ್ಕಿಲ್ಲ ಅಥವಾ ಆಫೀಸ್‌ನಲ್ಲಿ ಸುಮ್ಮನೆ ಏನಾದರೂ ಮುಚ್ಚಿಟ್ಟುಕೊಂಡಿದ್ದಾರೆಯೇ ಎಂಬುದು ಸಹ ಗೊತ್ತಿಲ್ಲ. soil ಹೆಲ್ತ್ ಕಾರ್ಡ್ ಮಾಡಿರುವ ಉದ್ದೇಶವೇನೆಂದರೆ, ರೈತನಿಗೆ ನಿನ್ನ ಹೊಲದ ಜಮೀನಿನ ಗುಣಧರ್ಮ ಈ ತರಹವಿದೆ. ನಿನ್ನ pH ಇಷ್ಟಿದೆ. ಜಮೀನಿನ soil nutrients ಕಡಿಮೆ ಇದೆ ಅಥವಾ ಜಾಸ್ತಿ ಇದೆ. Phosphate, Urea, Zink, micro nutrients ಕಡಿಮೆಯಾಗಿದೆ ಎಂಬುದರ ಬಗ್ಗೆ ಅರಿವು ಮೂಡಿಸಲು soil ಹೆಲ್ತ್ ಕಾರ್ಡ್ ತಂದಿರುವುದು. ಆದರೆ ಇವತ್ತಿನವರೆಗೂ ಯಾವ ರೈತರಿಗೂ ಕೂಡ card distribute ಮಾಡಿಲ್ಲ. ಅದೊಂದು ಅಭಿಯಾನವಾಗಬೇಕು. ಇದೊಂದು ಅತ್ಯಂತ ಮುಖ್ಯ ವಿಷಯವಾಗಿದೆ. ಇವತ್ತು ಒಬ್ಬ ರೈತ ತನ್ನ ಜಮೀನಿನಲ್ಲಿ ಯಾವುದೋ ಬೆಳೆಯನ್ನು ಬೆಳೆದರೆ ಆಗುವುದಿಲ್ಲ. ಆತನಿಗೆ ತನ್ನ ಜಮೀನಿನಲ್ಲಿ soil nutrients ಏನಿದೆ? pH ಏನಿದೆ? ಅದಕ್ಕೆ micro nutrients ಯಾವುದು ಕಡಿಮೆ ಮತ್ತು ಯಾವುದು ಜಾಸ್ತಿಯಿದೆ. ಯಾವ fertilizer ನ್ನು ಕಡಿಮೆ ಹಾಕಬೇಕು ಹಾಗೂ ಯಾವ fertilizer ಜಾಸ್ತಿ ಹಾಕಬೇಕು ಎನ್ನುವಂತಹ knowledge ಕೊಡುವುದು ಬಹಳ ಮುಖ್ಯವಾಗಿದೆ. ನಾವು soil

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

health card ನ್ನು ಮಾಡಿದ ತಕ್ಷಣ ಅದನ್ನು ಒಳಗೆ ಇಟ್ಟುಕೊಂಡರೆ ಉಪಯೋಗವೇನಿಲ್ಲ. ಯಾವ ರೈತರಿಗೂ distribute ಆಗಿಲ್ಲ. ಇವತ್ತು ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್‌ನ್ನು ಕೊಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ಆ ಕಿಸಾನ್ ಕ್ರೆಡಿಟ್ ಕಾರ್ಡ್‌ನಲ್ಲಿ ಸರ್ವೇ ನಂಬರ್ ಇರಬೇಕು. ಸರ್ವೇ ನಂಬರಿನಲ್ಲಿ soil pH, ಇರಬೇಕು. ಆ soil ನ ಗುಣಧರ್ಮಗಳು ಇರಬೇಕು. ಪ್ರತಿಯೊಂದು ಇದ್ದಾಗ ಮಾತ್ರ ರೈತನಿಗೆ ಉಪಯೋಗವಾಗುತ್ತದೆ. ಆದರೆ ಒಟ್ಟಿಗೆ ಎಲ್ಲಾ ರೈತರಿಗೂ ಅದನ್ನು adopt ಮಾಡುವುದಕ್ಕೆ ಆಗುವುದಿಲ್ಲ. Innovative farmers ಮೊದಲು ಅದನ್ನು ಗಮನಿಸಿದ ನಂತರ ಅಳವಡಿಸಿಕೊಂಡು ಆಮೇಲೆ ರೆಗ್ಯೂಲರ್ ಆಗಿ ತಿಳಿದುಕೊಂಡು ಉಳಿದಂತಹವರು ಅದನ್ನು ಅನುಸರಿಸುತ್ತಾರೆ. ನಾಲ್ಕೈದು ವರ್ಷಗಳ ನಂತರ ಕ್ರಮೇಣವಾಗಿ ಅದು implement ಆಗುವುದಕ್ಕೆ ಪ್ರಾರಂಭವಾಗುತ್ತದೆ.

ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯಕ್ಕೆ climatic condition ಇರುವಷ್ಟು ಬಹುಶಃ ನಮ್ಮ ದೇಶದಲ್ಲಿ ಎಲ್ಲಿಯೂ ಇಲ್ಲ. ಅಷ್ಟು ಉತ್ತಮವಾದಂತ condition ಇದೆ. ಉತ್ತರ ಕರ್ನಾಟಕದ ಬೆಳಗಾವಿ, ವಿಜಯಪುರ, ಬಾಗಲಕೋಟೆ ಆ ಭಾಗದಲ್ಲಿ first class horticulture crops ಬರುವಂತಹ ಪ್ರದೇಶಗಳಾಗಿವೆ. ಆದರೆ ವಿಷಯವೇನೆಂದರೆ, ಇವತ್ತಿನ ದಿವಸ ರೈತನ ಹತ್ತಿರ ಹಣವಿಲ್ಲ. ಇವತ್ತಿನ ದಿನಗಳಲ್ಲಿ ಒಂದು ಎಕರೆ ಪಪ್ಪಾಯಿ, ದ್ರಾಕ್ಷಿ, ದಾಳಿಂಬೆ ಹಾಕಬೇಕೆಂದರೆ, initial investment ಬೇಕು. Small and marginal farmers, two to five acres land ಒಳಗಿದ್ದವರಿಗೆ ಅಷ್ಟೊಂದು ಹಣವನ್ನು ಎಲ್ಲಿ invest ಮಾಡುವುದಕ್ಕಾಗುತ್ತದೆ? ಅದೊಂದು ಸಮಸ್ಯೆ ಇದೆ. ತೋಟಗಾರಿಕೆ ಇಲಾಖೆಯವರು subsidy ಕೊಡುತ್ತಾರೆ. ಆ subsidy ಯು handful of people ಗೆ ಸಿಗುತ್ತದೆ. ಯಾರು ರಾಜಕಾರಣದಲ್ಲಿ ಗಟ್ಟಿಮುಟ್ಟಿರುತ್ತಾರೋ ಮತ್ತು ಶಿಷ್ಯರು ಯಾರಿರುತ್ತಾರೋ ಅಂತಹ ಮೂರ್ನಾಲ್ಕು ಜನರಿಗೆ ಮಾತ್ರ ಇದು ಸಿಗುತ್ತದೆ. ಇದು ವ್ಯಾಪಕವಾಗಿ ಸಿಗುವಂತಹದ್ದಾಗಬೇಕು. ರೈತರ ಆದಾಯವನ್ನು ಹೆಚ್ಚು ಮಾಡಬೇಕೆಂದು ಎಲ್ಲರೂ ಹೇಳುತ್ತಾರೆ. ರೈತರ ಆದಾಯವನ್ನು ಹೆಚ್ಚು ಮಾಡಬೇಕೆಂದರೆ, first we must provide money to the farmers. ರೈತರ benefit ಸಲುವಾಗಿ, ರೈತರ ಸಲುವಾಗಿ ನಾವು ಹಣವನ್ನು ಹೆಚ್ಚಿಗೆ ಖರ್ಚು ಮಾಡಿದರೆ ಮಾತ್ರ ಆಗುತ್ತದೆ. Fertilizers ನ್ನು ಮನೆಯ ತನಕ ಹೋಗಿ ಕೊಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ನಾವು ರೈತ ಸಂಪರ್ಕ ಕೇಂದ್ರಗಳಿಗೆ ಹೋಗುತ್ತೇವೆ. ರೈತರಿಗೆ ಬೇಕಾಗುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

fertilizers ಇರುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ, ಆರೋಗ್ಯ ಇಲಾಖೆಯಲ್ಲಿ ಏನಿದೆ ಎಂದರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಜನರಿಕ್ ಮೆಡಿಸಿನ್‌ಗಳು ಎಂದು ಹೇಳಿದ್ದಾರೆ. ಆದರೆ ಡಾಕ್ಟರ್ ಬರೆದುಕೊಡುವ ಔಷಧಗಳು ಜನರಿಕ್ ಔಷಧಾಲಯಗಳಲ್ಲಿ ಇರುವುದಿಲ್ಲ. ಆ ಔಷಧಾಲಯಗಳಲ್ಲಿ ಇರುವ ಔಷಧಿಗಳನ್ನು ಡಾಕ್ಟರ್ ಬರೆದುಕೊಡುವುದಿಲ್ಲ. ಅದೇ ತರಹ ಇದು ಸಹ ಆಗಿದೆ. Pesticidesನ್ನು ಯಾವ್ಯಾವ ಭಾಗದಲ್ಲಿ ಹೊಡೆಯಬೇಕು ಮತ್ತು ಯಾವಾಗ ಹೊಡೆದರೆ, ಅದು ನಿಯಂತ್ರಣಕ್ಕೆ ಬರುತ್ತದೆ ಎಂಬುದನ್ನು majority ನಾವು ಡಿಪಾರ್ಟ್‌ಮೆಂಟಿಗಿಂತ ಜಾಸ್ತಿ innovative farmers ನಿಂದ ಕಲಿಯಬೇಕಾಗಿದೆ. Innovative farmers ಏನಿದ್ದಾರೆ, They are more educated than the department.

ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಒಂದು instance ನ್ನು ಹೇಳಬಯಸುತ್ತೇನೆ. ನಮ್ಮಲ್ಲಿ super-10 ಎಂಬ ಹೆಸರಿನ ಮೆಣಸಿನಕಾಯಿ ಇದೆ. ಆಂಧ್ರಪ್ರದೇಶದಲ್ಲಿ ಒಂದು Agriculture Hub ಇದೆ. ಅಲ್ಲಿಗೆ ಯಾವ ರೈತ ಹೋಗಿ ಔಷಧಿ, ಬೀಜವನ್ನು ತಂದಿದ್ದಾರೋ, ಅವರದು ಮಾತ್ರ ಸುಮಾರು ನಲವತ್ತೈದು ಕ್ವಿಂಟಾಲ್ ಮೆಣಸಿನಕಾಯಿ ಬೆಳೆ ಬಂದಿದೆ. ಒಂದು ಕ್ವಿಂಟಾಲ್ ಮೆಣಸಿನಕಾಯಿ ಬೆಲೆ ಸುಮಾರು ಹನ್ನೆರಡು ಸಾವಿರ ರೂಪಾಯಿಗಳಿತ್ತು. ಇವತ್ತು ಹದಿನಾರು ಸಾವಿರ ರೂಪಾಯಿಗಳವರೆಗೆ ಬೆಲೆ ಏರಿಕೆಯಾಗಿದೆ. ಇದನ್ನು ಲೆಕ್ಕ ಹಾಕಿದರೆ ಸುಮಾರು ನಾಲ್ಕು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗುತ್ತದೆ. ಅಂದರೆ Coffee ಬೆಳೆ ಬೆಳೆದರೂ ಇಷ್ಟೊಂದು ಆದಾಯ ಬರುವುದಿಲ್ಲ. ಇವೆಲ್ಲವನ್ನೂ educate ಮಾಡುವಂತಹದ್ದು ಬಹಳ ಮುಖ್ಯವಾಗಿದೆ. ಅಂದರೆ ಯಾವ್ಯಾವ ಪ್ರದೇಶಗಳಲ್ಲಿ ಯಾವ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಿದೆ ಎಂದು ತಿಳಿಸಬೇಕು. ಬೆಳಗಾವಿ ಪ್ರದೇಶದಲ್ಲಿ ಕೇವಲ ತರಕಾರಿಗಳನ್ನು ಬೆಳೆಯುತ್ತಾರೆ. ಅಲ್ಲಿ ಒಂದು ಎಕರೆ ಭೂಮಿಯಲ್ಲಿ ಬೆಳೆ ಬೆಳೆದರೆ ಸುಮಾರು ಮೂರ್‍ನಾಲ್ಕು ಲಕ್ಷ ರೂಪಾಯಿಗಳಷ್ಟು ಆದಾಯ ಬರುತ್ತದೆ. ಮಾನ್ಯ ಸಚಿವರು ಸಹ ಅದೇ ಊರಿನವರು. ಇವತ್ತು ಕೋಲ್ಡ್ ಸ್ಟೋರೇಜ್‌ಗಳು ಇಲ್ಲ. ನಮಗೆ agriculture products ಬರುತ್ತವೆ. ಒಂದೆರಡು ದಿನಗಳಲ್ಲಿ ಅವು perishable ಆಗಿ ಬಿಡುತ್ತವೆ. ಇವೆಲ್ಲಾ perishable goods ಆಗಿರುವುದರಿಂದ ಕೋಲ್ಡ್ ಸ್ಟೋರೇಜ್‌ಗಳು ಬೇಕು. ಎಷ್ಟು ಕೋಲ್ಡ್ ಸ್ಟೋರೇಜ್‌ಗಳನ್ನು ಮಾಡಿದ್ದಾರೆ? ಮಾನ್ಯ ಸಭಾಪತಿಯವರೇ. ಇವತ್ತು ಹತ್ತು ಕೋಲ್ಡ್ ಸ್ಟೋರೇಜ್‌ಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ಇವತ್ತು ಹತ್ತು ಕೋಲ್ಡ್ ಸ್ಟೋರೇಜ್‌ಗಳನ್ನು ಮಾಡಿದರೆ, ಅದು ಸಾಕಾಗುತ್ತದೆಯೇ? ಒಂದೊಂದು ಊರುಗಳಿಗೆ ಹತ್ತು ಕೋಲ್ಡ್ ಸ್ಟೋರೇಜ್‌ಗಳು ಬೇಕಾಗುತ್ತದೆ. ರಾಯಚೂರು ಜಿಲ್ಲೆಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಳೆಯುವಂತಹ ಮೆಣಸಿನಕಾಯಿ, ಹುಣಸೆಹಣ್ಣು, ಕಡ್ಲೆಬೇಳೆ ಇವುಗಳನ್ನು ಇಡುವುದಕ್ಕೆ ಸುಮಾರು 20 ರಿಂದ 25 ಕೋಲ್ಡ್ ಸ್ಟೋರೇಜ್ ಬೇಕಾಗುತ್ತದೆ. ಇವುಗಳನ್ನು ಇಡಲು ನಮ್ಮ ಏರಿಯಾದವರು ಎಲ್ಲಿಗೆ ಹೋಗುತ್ತೇವೆಂದರೆ, ಬ್ಯಾಡಗಿಗೆ ಹೋಗುತ್ತೇವೆ, ಆಂಧ್ರಪ್ರದೇಶದ ಕಡೆ ಹೋಗುವ ಮಾರ್ಗದಲ್ಲಿ ಮುಖ್ಯ ಹೆದ್ದಾರಿಯ ಹತ್ತಿರ ಸುಮಾರು 6-7 ಕೋಲ್ಡ್ ಸ್ಟೋರೇಜ್‌ಗಳಿವೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ):-** ಮಾನ್ಯ ಸಭಾಪತಿಯವರೆ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಕೃಷಿಯ ಬಗ್ಗೆ ಬಹಳ ಚೆನ್ನಾಗಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರಿಗೆ ಪೂರಕವಾಗಿರಲಿ ಮತ್ತು ಚರ್ಚೆ ಮಾಡುವುದಕ್ಕೆ ಅನುವಾಗಿರಲಿ ಎಂದು ನಾನು ಒಂದೆರಡು ವಾಕ್ಯಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈ ತರಹ ವಿಷಯವನ್ನು ಮಾತನಾಡಿದರೆ, ನನಗೆ ಬಹಳ ಖುಷಿಯಾಗುತ್ತದೆ. ಆದರೆ ಪಕ್ಷ ಬೇರೆ ಇರಬಹುದು ಮತ್ತೆನಾದರೂ ಬೇರೆ ಇರಬಹುದು.

(ಮುಂದು)

(180) 06.03.2020 12.00 ಟಿಸಿಹೆಚ್-ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಲಕ್ಷಣ ಸಂಗಪ್ಪ ಸವದಿ (ಮುಂದು):-**

ರೈತರ ಬಗ್ಗೆ ತಾಂತ್ರಿಕವಾಗಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಅದನ್ನು ನಾವು ಯಾವುದೇ ತರಹದ ವಿಭಿನ್ನತೆ ತಿಳಿದುಕೊಳ್ಳದೆ ಅದಕ್ಕೆ ಪೂರಕವಾಗಿ ಚರ್ಚೆಗಳನ್ನು ಮಾಡಬೇಕಾಗಿರುವ ಅವಶ್ಯಕತೆ ಇದೆ. ನಾನೇಕೆ ಅವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆಂದರೆ, ನಾವು ಚರ್ಚೆ ಮಾಡುವುದಕ್ಕೆ ಸುಗಮವಾಗುತ್ತದೆ. ಮೊನ್ನೆ ದಿವಸ ನಾನು ದೆಹಲಿಗೆ ಹೋದಂತಹ ಸಂದರ್ಭದಲ್ಲಿ ಸನ್ಮಾನ್ಯ ಪ್ರಧಾನ ಮಂತ್ರಿಗಳು ಒಂದು ಸಭೆ ಕರೆದಿದ್ದರು. ಆ ಸಭೆಯಲ್ಲಿ ಬೇರೆ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಕೂಡ ಇದ್ದರು. ರೈತರಿಗೆ ಏನು ರಸಗೊಬ್ಬರಗಳನ್ನು ಕೊಡುತ್ತಿದ್ದೇವೆ, ಅದನ್ನು ಸಬ್ಸಿಡಿ ರೂಪದಲ್ಲಿ ಕೊಡುತ್ತಿದ್ದೇವೆ. ಆ ಕಂಪನಿಗಳಿಗೆ ಏನು ಸಬ್ಸಿಡಿ ಜಮಾ ಮಾಡುತ್ತಿದ್ದಾರೆ, ಅದನ್ನು ನಿಲ್ಲಿಸಿ, ನೇರವಾಗಿ ರೈತರ ಖಾತೆಗಳಿಗೆ ಕೊಡಬೇಕು ಎನ್ನತಕ್ಕಂಥ ಒಂದು ಪ್ರಶ್ನೆಯನ್ನು ಎತ್ತಿದ್ದರು. ಆ ನಿಟ್ಟಿನಲ್ಲಿ ನಿಮ್ಮ ರಾಜ್ಯದ ಅಭಿಪ್ರಾಯಗಳನ್ನು ತಿಳಿಸಬೇಕು ಎನ್ನತಕ್ಕಂಥ ವಿಚಾರವನ್ನು ನಮಗೆ ತಿಳಿಸಿದ್ದರು. ಅವರಿಗೆ ಕೃಷಿ ಕ್ಷೇತ್ರದಲ್ಲಿ ಆಸಕ್ತಿ ಮತ್ತು ಅನುಭವವಿರುವುದರಿಂದ, ಇದರ ಬಗ್ಗೆ ಸ್ವಲ್ಪ ಚಿಂತನೆ ಅವರ ಮುಖಾಂತರವಾಗಲಿ ಎನ್ನತಕ್ಕಂಥ ವಿಚಾರವಾಗಿದೆ. ಇನ್ನು ಎರಡನೆಯದಾಗಿ, ಕೇಂದ್ರ ಸರ್ಕಾರ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಲೆಗಳಲ್ಲಿ ಏರಿಳಿತಗಳಾತಕ್ಕಂಥ ಸಂದರ್ಭದಲ್ಲಿ ಇದನ್ನು ತಡೆಯುವುದಕ್ಕೆ ಕೃಷಿಗೆ ವೈಜ್ಞಾನಿಕ ಬೆಂಬಲ ಬೆಲೆ ಸಿಗಬೇಕೆಂದು ಬಜೆಟ್‌ನಲ್ಲಿ 'ಒಂದು ಜಿಲ್ಲೆಗೆ ಒಂದು ಬೆಳೆ' ಎಂದು ಘೋಷಣೆ ಮಾಡಿದ್ದಾರೆ. ಅದನ್ನು ತಾವೆಲ್ಲರೂ ನೋಡಿದ್ದೀರಿ. ಇದರ ಬಗ್ಗೆ ಅಭಿಪ್ರಾಯ ತಿಳಿಸಲು ಸ್ವಲ್ಪ ಚರ್ಚೆಗಳಾಗಬೇಕು. ಇದರ ಜೊತೆಗೆ ಯಾವ ಯಾವ ಜಿಲ್ಲೆಯಲ್ಲಿ vegetable and grape ಬೆಳೆ ಬೆಳೆಯುತ್ತೇವೆಯೋ ಆಯಾ ಜಿಲ್ಲೆಗಳಿಗೆ ಅನುಗುಣವಾಗಿ ಕೇಂದ್ರ ಸರ್ಕಾರದಿಂದ ಬಹಳಷ್ಟು ಕಡೆ ಶೀತಲ ಗೃಹಗಳನ್ನು ಕೊಡುತ್ತೇವೆ ಎನ್ನತಕ್ಕಂಥ ವಿಷಯವನ್ನು ಕೂಡ ಪ್ರಸ್ತಾಪ ಮಾಡಿದರು. ಅದನ್ನು ಬಳಸಿಕೊಂಡು ನಮ್ಮ ರಾಜ್ಯ ಸರ್ಕಾರದಿಂದ action plan ಗಳನ್ನು ಮಾಡಬೇಕಾಗಿರುತ್ತದೆ. ನಾವು ಯಾವುದೇ ಒಂದು ಸರ್ಕಾರವನ್ನು ಟೀಕೆ ಮಾಡತಕ್ಕಂಥದ್ದು ಆಗಬಾರದು. ಕೆಲವೊಂದು ಉತ್ತಮವಾಗಿರತಕ್ಕಂಥ ಸಲಹೆಗಳು ನಿಮ್ಮ ಕಡೆಯಿಂದ ಬಂದರೆ, ಆ ಸಲಹೆಗಳನ್ನು ಸ್ವೀಕಾರ ಮಾಡಿ, ಸರ್ಕಾರಗಳು ಹೆಜ್ಜೆಗಳನ್ನಿಡುತ್ತಾ ಹೋದಾಗ ಮಾತ್ರ ರೈತ ಸಮುದಾಯಕ್ಕೆ ಹೆಚ್ಚು ಅನುಕೂಲವಾಗುತ್ತದೆ ಎನ್ನತಕ್ಕಂಥ ಭಾವನೆಯನ್ನಿಟ್ಟುಕೊಂಡು ನಾವೆಲ್ಲರೂ ಕೂಡ ಚರ್ಚೆಯನ್ನು ಮಾಡೋಣ ಎನ್ನತಕ್ಕಂಥ ಮಾತನ್ನು ನಾನು ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವೇನು ಸರ್ಕಾರವನ್ನು ಟೀಕೆ ಮಾಡುತ್ತಿಲ್ಲ. ನಮ್ಮ ಸಮಸ್ಯೆಗಳನ್ನು ಹೇಳುತ್ತಿದ್ದೇವೆ ಅಷ್ಟೆ. ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ, ನಾನು ನಮ್ಮ ಸರ್ಕಾರ ಇದ್ದಾಗ ಆಗಲೀ, ನಿಮ್ಮ ಸರ್ಕಾರಕ್ಕಾಗಲೀ ಟೀಕೆ ಮಾಡುತ್ತಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀ ಬಸವರಾಜ ಪಾಟೀಲ್ ಇಟಗಿಯವರೇ, ತಾವು ಟೀಕೆ ಮಾಡುತ್ತಿಲ್ಲ. ರೈತರಿಗೆ ಪೂರಕವಾಗಿರತಕ್ಕಂಥ ಹೆಚ್ಚು ಬೆಳಕು ಚೆಲ್ಲುವಂಥ ಕೆಲಸ ಆಗಬೇಕು ಅಷ್ಟೆ. ನೀವು ಹೇಳುತ್ತಿರುವುದರಲ್ಲಿ ಏನೂ ಟೀಕೆ ಇಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಗಳು ತುಂಬಾ ಉಪಯುಕ್ತವಾದಂತಹ ವಿಷಯವನ್ನು ಸಮಯೋಚಿತವಾಗಿ ಮಾತನಾಡಿದ್ದಾರೆ. ಜಿಲ್ಲಾವಾರು ಬೆಳೆ ಬೆಳೆಯುವುದು ಇದೆಯಲ್ಲಾ, it is very tough. ಆದರೆ, ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತರ ಮನವೊಲಿಸತಕ್ಕಂಥ ಕೆಲಸವನ್ನು ಮಾನ್ಯ ವಿರೋಧಪಕ್ಷದವರು ಹಾಗೂ ಸರ್ಕಾರದವರು ಮಾಡಬೇಕಾಗುತ್ತದೆ. ಈಗ ಏನಾಗಿದೆಯೆಂದರೆ, ಕೃಷಿ ಕ್ಷೇತ್ರದಲ್ಲಿ ಪ್ರತಿಯೊಂದು ವಿಚಾರದಲ್ಲೂ ಅದು ಲಾಭದಾಯಕವಾಗಿಲ್ಲ ಎನ್ನುವುದು ಮನವರಿಕೆಯಾಗಿದೆ. ಕೃಷಿ ಕ್ಷೇತ್ರ ಲಾಭದಾಯಕವಾಗಿದೆ ಎನ್ನುವುದನ್ನು ಇಂದಿನ ಯುವಕರಿಗೆ ಮನವರಿಕೆ ಮಾಡಿಕೊಡುವುದು ಮೊದಲ ಕೆಲಸವಾಗಿದೆ. ಇನ್ನೊಂದು ವಿಚಾರ ಹೇಳುವುದಾದರೆ, ಇತ್ತೀಚಿನ ದಿನಗಳಲ್ಲಿ ಎಲ್ಲಾ ಕೃಷಿ ಭೂಮಿಯಲ್ಲೂ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಆ ವಾಣಿಜ್ಯ ಬೆಳೆಗಳನ್ನು ಬೆಳೆಯುವುದನ್ನು ನಿಲ್ಲಿಸಿ, ಬೇರೆ ಬೆಳೆ ಬೆಳೆದರೆ ಲಾಭದಾಯಕವಾಗುವುದಿಲ್ಲ. traditional crop ಬೆಳೆಯುವುದಕ್ಕೆ ವ್ಯವಸ್ಥೆ ಮಾಡಿಕೊಟ್ಟಾಗ ಮಾತ್ರ ಅನುಕೂಲವಾಗಬಹುದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡು ಕೃಷಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಮಾಡಿಕೊಡಬೇಕು. ಇದು ಒಂದು basic problem. ಇವತ್ತಿನ ದಿವಸ ರೈತ ಸ್ವತಃ ಎಜುಕೇಟ್ ಮಾಡಿಕೊಂಡು ಸ್ವಲ್ಪ ಕಷ್ಟಪಟ್ಟು ಬೆಳೆಯನ್ನು ಬೆಳೆಯುತ್ತಾನೆ. ಆದರೆ, ಆತ ಆ ಬೆಳೆಯನ್ನು ಬೆಳೆದ ತಕ್ಷಣವೇ ಮಾರಾಟ ಮಾಡುವುದು ಅಷ್ಟೇ ಮುಖ್ಯವಾಗಿರುತ್ತದೆ. ಕೆಲವು perishable ಇರುತ್ತವೆ. ಕೆಲವು perishable ಇರುವುದಿಲ್ಲ. ಆದರೆ ತಕ್ಷಣವೇ ಮಾರಾಟ ಮಾಡುವುದು ಮತ್ತು ಅದಕ್ಕೆ ಸೂಕ್ತ ಬೆಲೆ ಸಿಗುವುದು ಕೂಡ ಅಷ್ಟೇ ಮುಖ್ಯ. ಉದಾಹರಣೆಗೆ, ಇವತ್ತಿನ ದಿವಸ ನಾವು 'ಜರ್ಬೆರಾ' ಎಂಬ ಹೂವನ್ನು ಬೆಳೆಯುತ್ತೇವೆ. ಬಹುಶಃ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಆ ಹೂವನ್ನು ಬೆಳೆಯಬಹುದು. ಅಂದರೆ ಜರ್ಬೆರಾ ಹೂ ಬಹಳ ಲಾಭದಾಯಕವಾಗಿರುತ್ತದೆ. ಅದನ್ನು ಬೆಳೆದ ತಕ್ಷಣವೇ ನಾವು ಎಲ್ಲಿಗೆ ಮಾರಾಟ ಮಾಡುವುದು ಎಂಬುದನ್ನು ತಿಳಿದುಕೊಂಡಿರಬೇಕು. ಏಕೆಂದರೆ, ಆ ಹೂವು ಎರಡು-ಮೂರು ದಿನಗಳಲ್ಲಿ ಚೆನ್ನಾಗಿದ್ದು, ನಂತರ ಬಾಡಿ ಹೋಗುತ್ತದೆ. ಹಾಗಾಗಿ, ಅದನ್ನು ತಕ್ಷಣವೇ ಮಾರುಕಟ್ಟೆಯಲ್ಲಿ ಮಾರಾಟ ಮಾಡಬೇಕಾಗುತ್ತದೆ. Transport to the place where it is needed. ಆ ರೀತಿಯ ಬೆಳೆಗಳನ್ನು ತಕ್ಷಣವೇ ಮಾರಾಟ ಮಾಡಲು ನಮ್ಮ ಹಳ್ಳಿಗಳಲ್ಲಿ ರೈತರಿಗೆ ಮಾಹಿತಿಯೇ ಇರುವುದಿಲ್ಲ. ಇವತ್ತಿನ ದಿವಸ ರೈತ ಸಂಪರ್ಕ ಕೇಂದ್ರಗಳಲ್ಲಿ ಸಹಾಯಕ ಕೃಷಿ ಅಧಿಕಾರಿಗಳು ಇದ್ದಾರೆ, ಅವರಿಗೆ ಒಬ್ಬ ಸಾಮಾನ್ಯ ರೈತನಿಗೆ ಇರುವಷ್ಟು ಮಾಹಿತಿ ಆ ಅಧಿಕಾರಿಗೆ ಇರುವುದಿಲ್ಲ. ಅದಕ್ಕೆ ನಾನು ತಮ್ಮ ಮೂಲಕ ಕೋರುವುದೇನೆಂದರೆ, ಕೃಷಿ ಇಲಾಖೆಯಲ್ಲಿ ಅಂತಹ ಯಾರೇ ಅಧಿಕಾರಿಗಳಿರಲಿ ಅವರಿಗೆ 10 ವರ್ಷಗಳಿಗೆ ಮತ್ತೊಮ್ಮೆ ಪರೀಕ್ಷೆ ಬರೆಸಬೇಕು. ಅವರಿಗೆ ಹೊಸ ಹೊಸ ಟೆಕ್ನಾಲಜಿ ಬಗ್ಗೆ ತಿಳಿಸಿಕೊಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಶ್ರೀ ಬಸವರಾಜ ಪಾಟೀಲ್ ಇಟಗಿಯವರು, ನಮ್ಮ ತೋಟದಲ್ಲಿ ಬೆಳೆದಿರುವ ಜರ್ಬೆರಾ ಹೂವಿನ ಬೆಳೆಯನ್ನು ನೋಡಿದ್ದಾರೆ. ನಾವು Gerbera Flowers ಅನ್ನು ಬೆಳೆಯುತ್ತೇವೆ. ಒಂದು ದಿವಸಕ್ಕೆ ಅದರಿಂದ ಎರಡು ಸಾವಿರ ರೂಪಾಯಿಗಳ ಆದಾಯ ಬರುತ್ತದೆ. ಒಂದು ಹೂವು ಹುಬ್ಬಳ್ಳಿಯಲ್ಲಿ 6 ರೂಪಾಯಿಗಳಿಗೆ ಮಾರಾಟವಾಗುತ್ತದೆ. ಬೆಂಗಳೂರಿಗೆ ತಂದು ಮಾರಾಟ ಮಾಡಿದರೆ 20 ರೂಪಾಯಿಗಳು ಸಿಗುತ್ತದೆ. ಅದೇ ಹೂವನ್ನು ದುಬೈಗೆ ಕಳುಹಿಸಿ ಮಾರಾಟ ಮಾಡಿದರೆ 110 ರೂಪಾಯಿಗಳು ಸಿಗುತ್ತದೆ. ರೈತರಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ. ನಾವು ಅನಿವಾರ್ಯವಾಗಿ ಆ ಬೆಳೆಯನ್ನು ಬೆಳೆದು ಮಾರಾಟ ಮಾಡುತ್ತಿದ್ದೇವೆ ಅಷ್ಟೆ. ನಾವು ಎಷ್ಟೇ ಕಷ್ಟಪಟ್ಟು ಆ ಬೆಳೆಯನ್ನು ಬೆಳೆದರೂ ಕೂಡ ಸೂಕ್ತ ಬೆಲೆ ಸಿಗುವುದಿಲ್ಲ. ಪೂನಾದಲ್ಲಿ ಹೆಚ್ಚಿಗೆ ಬೆಳೆದು ಮಾರಾಟ ಮಾಡುತ್ತಾರೆ. ನಾನು ಈ ಮಾತನ್ನು ಎಷ್ಟೋ ಬಾರಿ ಹತ್ತು ಜನರಿಗೆ ಹೇಳಿದ್ದೇನೆ. ಈಗ ನಾವು ಆ ಬೆಳೆಯನ್ನು ನಿಲ್ಲಿಸಬೇಕೆಂಬ ತೀರ್ಮಾನಕ್ಕೆ ಬಂದಿದ್ದೇವೆ. ಅದಕ್ಕೆ ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಹೇಳಿರುವುದು ಸರಿಯಾಗಿದೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಯಾವ ರೈತರಿಗೂ ಸರಿಯಾದ ಮಾರ್ಗದರ್ಶನವನ್ನು ಎಲ್ಲಿಯೂ ಕೊಡುವುದಿಲ್ಲ. ಅವರು ಬೆಳಗ್ಗೆ ಜಿಲ್ಲಾ ಪಂಚಾಯಿತಿಯ ಸಿ.ಇ.ಓರವರು ಸಭೆ ಕರೆದಿದ್ದಾರೆ, ಮತ್ತೊಂದು ಇಲಾಖೆಯ ಅಧಿಕಾರಿಗಳು ಸಭೆ ಕರೆದಿದ್ದಾರೆಂದು ಹೋಗಿಬಿಡುತ್ತಾರೆ. ಒಟ್ಟಾರೆಯಾಗಿ, ಇವತ್ತಿನವರೆಗೂ ಯಾವುದೇ ರೈತರಿಗೂ ಸರಿಯಾದಂತಹ ಮಾರ್ಗದರ್ಶನ ಕೊಡುವುದಿಲ್ಲ. ನಾವು ಒಂದು ಚೆಕ್‌ಡ್ಯಾಂ ನಿರ್ಮಾಣ ಮಾಡಿದ್ದೇವೆ, ಎರೆಹುಳು ಸಾವಯವ ಗೊಬ್ಬರ ತಯಾರಿಕಾ ಘಟಕವನ್ನು ಮಾಡಿದ್ದೇವೆ. ಅವರಿಂದ ನಾವೇ ಸ್ವತಃ ಮಾಹಿತಿ ತಿಳಿದುಕೊಂಡು ಮಾಡಿದರೆ, ಮಾಡಬಹುದಷ್ಟೆ, ಇಲ್ಲವೆಂದರೆ, ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇಲಾಖಾ ಅಧಿಕಾರಿಗಳು ದಯವಿಟ್ಟು ರೈತರ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ಅವರಿಗೆ ಸಕಾಲಕ್ಕೆ ಸರಿಯಾದ ಮಾರ್ಗದರ್ಶನ ನೀಡಬೇಕೆಂದು ಮಾನ್ಯ ಸಚಿವರು ಕಠಿಣವಾದ ಆದೇಶ ನೀಡುವಂತೆ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಸರ್ಕಾರ MSP (Minimum Support Price) declare ಮಾಡುತ್ತವೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಯಾವುದೇ ರೈತ ಹೆಚ್ಚು ಬೆಳೆ ಬೆಳೆದಿದ್ದು, ಅದಕ್ಕೆ ಸೂಕ್ತ ಬೆಲೆ ಸಿಗದಿದ್ದಾಗ, ರಾಜ್ಯ ಸರ್ಕಾರಗಳು intervene ಆಗಿ minimum support price ತಂದು ಆ ರೈತರು ಬೆಳೆದ ಬೆಳೆಯನ್ನು ಖರೀದಿ ಮಾಡುವುದಕ್ಕೆ ಸೂಕ್ತ ವ್ಯವಸ್ಥೆ ಆಗಬೇಕು. ಬಹಳಷ್ಟು cropಗಳಿಗೆ ಸೂಕ್ತವಾದ ದರ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಗದಿಪಡಿಸಿರುವುದಿಲ್ಲ. ಬೆಲೆ ನಿಯಂತ್ರಣಗಳೆಲ್ಲಾ businessmen ಬಳಿ ಇರುತ್ತದೆ. ಇತ್ತೀಚೆಗೆ ರಾಜ್ಯ ಸರ್ಕಾರ ತೊಗರಿಗೆ minimum support price ಅನ್ನು ಘೋಷಣೆ ಮಾಡಿದೆ. ಆಮೇಲೆ ಸೂಕ್ತ ಬೆಂಬಲ ಬೆಲೆಗಾಗಿ ತೊಗರಿ ಮಾರಾಟ ಕೇಂದ್ರಗಳನ್ನು ತೆರೆಯತಕ್ಕಂಥ ಕೆಲಸ ಮಾಡಿದೆ. ಸರ್ಕಾರ ಕೆಲವೊಂದು conditions ಹಾಕಿ, ಆ ಪ್ರಕಾರ ಒಬ್ಬ ರೈತರಿಂದ 10 ಕ್ವಿಂಟಾಲ್ ತೊಗರಿ ಖರೀದಿ ಮಾಡಲಾಗುವುದು ಎಂದು ಹೇಳಿತು, ಒಂದು ಕ್ವಿಂಟಾಲ್ ತೊಗರಿ 3800/- ರೂಪಾಯಿಗಳು 4900/- ರೂಪಾಯಿಗಳು 5100/- ರೂಪಾಯಿಗಳು ಮತ್ತು 5200/- ರೂಪಾಯಿಗಳು ಎಂದು ಡಿಕ್ಲೇರ್ ಮಾಡಿತು. ಸರ್ಕಾರದ ದರ 6100/- ರೂಪಾಯಿಗಳು ಹೆಚ್ಚಿಗೆ ಆಗಿದ್ದು, ಅದು 3-4 ದಿನಗಳು ಮಾತ್ರ market ಆಯಿತು. ದರ ಘೋಷಣೆಯಾದ ಒಂದು ತಿಂಗಳ ನಂತರ ಕೇಂದ್ರಗಳು ಪ್ರಾರಂಭವಾದವು. They came back again to Rs.3800/- ರೂ.3900 ಗಳು ಮತ್ತು ರೂ.4000ಗಳು ಆಯಿತು. ಆದರೆ ಇತ್ತೀಚೆಗೆ 15 ದಿವಸಗಳಿಂದ ಮಾತ್ರ ಕೇಂದ್ರಗಳು ಪ್ರಾರಂಭವಾಗಿವೆ. ಅವು ಏಕೆ ಪ್ರಾರಂಭವಾದವು ಎಂದರೆ, ಈಗಲೂ ರೈತರಲ್ಲಿ ಒಂದು ರೀತಿಯ ಗೊಂದಲವಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬೀದರ್‌ಗೆ ಬಂದು ಪ್ರತಿಯೊಬ್ಬ ರೈತರಿಂದ 20 ಕ್ವಿಂಟಾಲ್ ತೊಗರಿ ಖರೀದಿ ಮಾಡುತ್ತೇವೆಂದು ಘೋಷಿಸಿದರು. ಇವತ್ತಿನ ದಿವಸ ಅಲ್ಲಿನ ರೈತರಾದವರು 20 ಕ್ವಿಂಟಾಲ್, 25 ಕ್ವಿಂಟಾಲ್ ಮತ್ತು 30 ಕ್ವಿಂಟಾಲ್ ಅನ್ನು ಸರ್ಕಾರಿ ಖರೀದಿಸಿದರೆ ನಾವು ಕೂಡ ಉದ್ಧಾರ ಆಗುತ್ತೇವೆಂದು request ಮಾಡಿದರು. ಆದರೆ, ಮಾನ್ಯ ಮುಖ್ಯಮಂತ್ರಿಗಳು ಬಹುಶಃ ಅಧಿಕಾರಿಗಳನ್ನು ಕೇಳಿದರೊ ಅಥವಾ ಕೇಳಲಿಲ್ಲವೊ, ತಕ್ಷಣವೇ ನಾವು 20 ಕ್ವಿಂಟಾಲ್ ತೊಗರಿಯನ್ನು ಖರೀದಿ ಮಾಡುತ್ತೇವೆಂದು declare ಮಾಡಿಬಿಟ್ಟರು. ಕಲ್ಯಾಣ ಕರ್ನಾಟಕದಲ್ಲಿ ಮಾತ್ರ ಅತಿ ಹೆಚ್ಚು ತೊಗರಿ ಬೆಳೆಯಲಾಗುತ್ತದೆ. declare ಆದ ನಂತರ ರೈತರು ಏನು ಮಾಡಿದರೆಂದರೆ, ಯಾರು registration ಮಾಡಿಸಿದ್ದರು, ಅವರು rate ಮಾಡಲು ಪ್ರಾರಂಭಿಸಿದರು. 20 ಕ್ವಿಂಟಾಲ್ ಆದ ನಂತರ ತೊಗರಿಯನ್ನು ಕೊಡೋಣ ಅಂದುಕೊಂಡರು. Because of this bargain, one month has been lost. ರೈತರು ಬೆಳೆದ ತಕ್ಷಣವೇ, ನಮಗೆ ದುಡ್ಡು ಕೊಟ್ಟಿರತಕ್ಕಂಥವರು ಅಥವಾ ರಸಗೊಬ್ಬರ ಮತ್ತು ಬಿತ್ತನೆಗೆ ಬೀಜ ಕೊಟ್ಟಿರತಕ್ಕಂಥವರು 'ಏನಪ್ಪಾ, ನೀನು ಮೊನ್ನೆ ದಿವಸ harvest ಮಾಡಿದ್ದು, ಅದನ್ನು ಇನ್ನೂ ಮಾರಾಟ ಮಾಡಿಲ್ಲವೆ' ಎಂದು ಫೋನ್ ಮಾಡುತ್ತಿರುತ್ತಾರೆ. ಕಾರಣವೇನೆಂದರೆ, ನಾವು ಅವರಿಗೆ ಹಣ ಕಟ್ಟಬೇಕಾಗಿರುತ್ತದೆ. ಅವರು ಪಾಪ, ನಮಗೆ ಹಣ, ರಸಗೊಬ್ಬರ ಮತ್ತು ಬಿತ್ತನೆಗೆ ಬೀಜ ಕೊಟ್ಟಿರುತ್ತಾರೆ. ಇನ್ನೂ ನೀವು ಮಾರಾಟ ಮಾಡಲಿಲ್ಲವೆ ಎಂದು ಕೇಳುತ್ತಿರುತ್ತಾನೆ. ಆ businessmen

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆತಂಕವೇನೆಂದರೆ, ನಾನು ಕೊಟ್ಟಿರತಕ್ಕಂಥ ಹಣವನ್ನು ವಾಪಸ್ಸು ಪಡೆದುಕೊಳ್ಳಬೇಕು ಎಂಬುದಾಗಿರುತ್ತದೆ. ಸುಗ್ಗಿ ಆಗಿ ಸುಮಾರು ನಾಲ್ಕು ತಿಂಗಳು ಕಳೆದಿದೆ, ಆದರೆ ಇವತ್ತಿನವರೆಗೂ ಕೂಡ ಸರ್ಕಾರ ಸರಿಯಾಗಿ ರೈತರಿಂದ ತೊಗರಿ ಖರೀದಿ ಮಾಡಲಿಲ್ಲ. ಈ ರೀತಿ ಆಗದಂತೆ ನೋಡಿಕೊಳ್ಳುವುದು ರಾಜ್ಯ ಸರ್ಕಾರದ ಜವಾಬ್ದಾರಿ ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು request ಮಾಡುತ್ತೇನೆ. ಆ ರೈತರು ಈಗಲೂ ಕೂಡ ಇನ್ನೂ ಗೊಂದಲದಲ್ಲಿಯೇ ಇದ್ದಾರೆ. ಆದರೆ, ಸರ್ಕಾರ 10 ಕ್ವಿಂಟಾಲ್‌ಗಿಂತ ಹೆಚ್ಚಿಗೆ ತೊಗರಿಯನ್ನು ಖರೀದಿಸುವುದಿಲ್ಲ. ಏಕೆಂದರೆ, ನಾನು ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್‌ರವರ ಬಳಿ ಏನು ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ಪ್ರತಿಯೊಬ್ಬ ರೈತರಿಂದ 20 ಕ್ವಿಂಟಾಲ್ ತೊಗರಿ ಖರೀದಿಸಲಾಗುವುದೆಂದು ಹೇಳಿದ್ದಾರೆ. ಅದು ಆಗುತ್ತದೋ, ಇಲ್ಲವೋ ಹೇಳಿ ಎಂದು ಕೇಳಿದ್ದೇನೆ. ಏಕೆಂದರೆ, NAFED (National Agricultural Cooperative Marketing Federation) ನಿಂದ ಹಣ ಬಿಡುಗಡೆ ಆಗಬೇಕಾಗುತ್ತದೆ. NAFED ನವರು ಕೂಡ ಒಪ್ಪಿಗೆ ಕೊಟ್ಟಿಲ್ಲ. ಅವರು ಒಪ್ಪಿಗೆ ಕೊಟ್ಟ ತಕ್ಷಣವೇ ಮಾನ್ಯ ಮುಖ್ಯಮಂತ್ರಿಗಳ ಕಚೇರಿಯಿಂದ ಆರ್ಥಿಕ ಇಲಾಖೆಗೆ ಫೈಲ್ ಹೋದ ನಂತರ, ಅವರು ನಾವು ಕೊಡುವುದಕ್ಕೆ ಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿರುವುದನ್ನಾದರು ನೀವು clarify ಮಾಡಬೇಕಲ್ಲವೇ?

**ಶ್ರೀ ಲಕ್ಷಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಹೇಳುವುದು ಸರಿಯಾಗಿದೆ. ಇತ್ತೀಚೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಬೀದರ್ ಜಿಲ್ಲೆಗೆ ಪ್ರವಾಸಕ್ಕೆ ಹೋದಂತಹ ಸಂದರ್ಭದಲ್ಲಿ, ಆ ಭಾಗದಲ್ಲಿ ಇರತಕ್ಕಂಥ ತೊಗರಿ ಬೆಳೆಯುವ ರೈತರೆಲ್ಲಾ ಬಂದು, ಸರ್ಕಾರ 10 ಕ್ವಿಂಟಾಲ್ ಖರೀದಿ ಮಾಡಿದರೆ ನಮಗೆಲ್ಲಾ ತೊಂದರೆಯಾಗುತ್ತದೆ. ಅದಕ್ಕಾಗಿ ನೀವು 20 ಕ್ವಿಂಟಾಲ್ ತೊಗರಿಯನ್ನು ಖರೀದಿಸಬೇಕು ಎಂಬ ಮನವಿಯನ್ನು ಕೊಟ್ಟಿದ್ದಾರೆ.

(ಮುಂದು...)

**(181)6.3.2020/12.10/ಎಂ.ಎಂ–ವಿ.ಕೆ**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಮುಂದು):–**

ಮನವಿಯನ್ನು ಕೊಟ್ಟಾಗ ಮಾನ್ಯ ಮುಖ್ಯಮಂತ್ರಿಗಳು ನಾವು 20 ಕ್ವಿಂಟಾಲ್ ತೊಗರಿ ಬೇಳೆಯನ್ನು ಬೆಂಬಲ ಬೆಲೆ ಕೊಟ್ಟು ಖರೀದಿ ಮಾಡುವುದಕ್ಕೆ ಸೂಚನೆ ಕೊಡುತ್ತೇನೆ ಎಂದು ಹೇಳಿದರು. ಬೀದರ್‌ನಲ್ಲಿ ಪಶು ಮೇಳ ನಡೆದ ಸಂದರ್ಭದಲ್ಲಿ ಅದು ನಮ್ಮ ಗಮನಕ್ಕೆ ಬಂದಿದೆ. ತಕ್ಷಣ ಇಲ್ಲಿ ಬಂದಮೇಲೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಷಯವನ್ನು ತಿಳಿದುಕೊಂಡು ಒಂದು ಸಭೆಯಲ್ಲಿ ಆರ್ಥಿಕ ಇಲಾಖೆಯವರನ್ನು ಕರೆಸಿಕೊಂಡು ಚರ್ಚೆ ಮಾಡಿ ತಕ್ಷಣವೇ ಇಲ್ಲಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಕೇಂದ್ರ ಸರ್ಕಾರದ ಸುತ್ತೋಲೆ ಏನೆಂದರೆ, ಪ್ರತಿ ರೈತರಿಂದ 10 ಕ್ವಿಂಟಾಲ್ ತೊಗರಿ ಬೇಳೆಯನ್ನು ಖರೀದಿ ಮಾಡಬೇಕೆಂಬುದಾಗಿದೆ. ನಾವು ಒಂದು ಸರ್ವೆ ಮಾಡಿಕೊಂಡು, ತುರ್ತು ಸಭೆಯಲ್ಲಿ ನಿರ್ಣಯ ಮಾಡಿಕೊಂಡು ಅದನ್ನು ಕೇಂದ್ರ ಸರ್ಕಾರಕ್ಕೆ 10 ಕ್ವಿಂಟಾಲ್‌ಗೆ ಬದಲಾಗಿ 20 ಕ್ವಿಂಟಲ್ ಖರೀದಿ ಮಾಡಲು ಅವಕಾಶ ಕೊಡಬೇಕೆಂದು ಒಂದು requisition ಕಳುಹಿಸಿಕೊಟ್ಟಿದ್ದೆವು. ಆದಷ್ಟು ಬೇಗನೆ ಅದಕ್ಕೊಂದು ಸ್ಪಷ್ಟನೆ ಕೊಡಿ ಎಂದು ಫೋನ್ ಮುಖಾಂತರ ಕೂಡ ನಾವು ಸಂಪರ್ಕ ಮಾಡಿದ್ದೆವು. ಅದು ಬಂದ ತಕ್ಷಣವೇ ಏನು ಮಾಡಬೇಕೆಂದು ನಿರ್ಣಯ ತೆಗೆದುಕೊಳ್ಳುತ್ತೇವೆ.

**ಶ್ರೀ ಎನ್.ಎಸ್. ಬೋಸ್‌ರಾಜು:-** ಮಾನ್ಯ ಸಚಿವರೇ, ಈಗ ಆಂಧ್ರಪ್ರದೇಶದಲ್ಲಿ 20 ಕ್ವಿಂಟಾಲ್ ತೊಗರಿ ಬೇಳೆಯನ್ನು ಖರೀದಿ ಮಾಡುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಇಟಗಿಯವರೇ, ನಿಮ್ಮ ಮಾತು ಮುಗಿಯಿತೇ?

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನನ್ನ ಮಾತು ಇನ್ನೂ ಮುಗಿದಿಲ್ಲ.

**ಸಭಾಪತಿಯವರು:-** ಮಾನ್ಯ ಶರವಣರವರೇ, ಮಾತನಾಡಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ನನಗೆ ಇನ್ನೊಂದು 5-10 ನಿಮಿಷ ಮಾತನಾಡಲು ಅವಕಾಶವನ್ನು ಕೊಡಬೇಕು. ನಾನಂತೂ ಉಳಿಕೆ ಸಮಯದಲ್ಲಿ ಮಾತೇ ಆಡುವುದಿಲ್ಲ. ಇದ್ದಾಗ ಒಂದೆರಡು ನಿಮಿಷ ಹೆಚ್ಚಾಗಿ ಕೊಡದಿದ್ದರೆ ನಾವು ಏನು ಮಾಡುವುದು? ಇನ್ನೂ ಮೇಜರ್ ಆಗಿ allied subject ಇದೆ ಅದನ್ನು ನಾನಿನ್ನೂ ಪ್ರಾರಂಭ ಮಾಡಿಲ್ಲ, ಇದೇ ಇನ್ನೂ ಮುಗಿದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಇಟಗಿಯವರು ಕೃಷಿ ವಿಜ್ಞಾನದಲ್ಲಿ ಪದವೀಧರರಾಗಿದ್ದಾರೆ, ಕೃಷಿ ಬಗ್ಗೆ ಅಪಾರವಾದ ಜ್ಞಾನ ಹೊಂದಿದ್ದಾರೆ ಅವರಿಗೆ ಸ್ವಲ್ಪ ಹೆಚ್ಚಿನ ಸಮಯಾವಕಾಶ ಕೊಡಿ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ಆಯಿತು ಅವರು ಮಾತನಾಡಲಿ. ಮಾನ್ಯ ಭೋಸ್‌ರಾಜುರವರು ಮಾತನಾಡಿದ್ದಕ್ಕೆ ತಮ್ಮದು ಮುಗಿಯಿತೇ ಎಂದು ಕೇಳಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಅವರು intervene ಆಗಿ ಮಾತನಾಡಿದರು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಆಂಧ್ರಪ್ರದೇಶದಲ್ಲಿ, ತೆಲಂಗಾಣದಲ್ಲಿ 25 ಕ್ವಿಂಟಾಲ್ ತೊಗರಿ ಬೇಳೆಯನ್ನು ಬೆಂಬಲ ಬೆಲೆಯಲ್ಲಿ ಖರೀದಿ ಮಾಡುತ್ತಿದ್ದಾರೆ. ಈಗ ರಾಯಚೂರಿನ ಗಡಿಯಲ್ಲಿದ್ದವರೆಲ್ಲಾ ಆ ಕಡೆ ಅವರ ಬೀಗರಿರುವ ಕಡೆ ಪಡೆದುಕೊಂಡು 25 ಕ್ವಿಂಟಾಲ್ ಕೊಟ್ಟು ಬರುತ್ತಿದ್ದಾರೆ. ಆ ಪರಿಸ್ಥಿತಿ ನಡೆಯುತ್ತಿದೆ. ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಒಂದು ಸ್ವಲ್ಪ anticipate ಮಾಡಬೇಕು ಯಾವ್ಯಾವ ಬೆಳೆ ನಮ್ಮ ರಾಜ್ಯದಲ್ಲಿ ಮೊದಲಿಗೆ ನಮ್ಮ ಅಧಿಕಾರಿಗಳು ಹೇಳುತ್ತಾರೆ, rainfall ಹೇಗಿದೆ, ಯಾವ ಬೆಳೆ ಚೆನ್ನಾಗಿದೆ? ಅದರ ಮಾರುಕಟ್ಟೆ ಬೆಲೆ ಏನಿದೆ? ಯಾವುದು intervention ಮಾಡಬೇಕು. As a Government you must anticipate. ಅಂದಾಗ ಮಾತ್ರ ರೆಡಿ ಇರುವುದಕ್ಕೆ ಸಾಧ್ಯವಾಗುತ್ತದೆ. ಮೊದಲೇ NAFED (National Agricultural Cooperative Marketing Federation) ಗೆ ಪತ್ರ ಬರೆದು; ಮಾನ್ಯ ಮುಖ್ಯಮಂತ್ರಿಯಾದ ಎಸ್.ಎಂ. ಕೃಷ್ಣರವರ ನೇತೃತ್ವದ ಸರ್ಕಾರ ಇದ್ದಾಗ ಅವರು ಮೊದಲು ನೀವು ಪ್ರತಿ ವರ್ಷ 5,000 ಕೋಟಿ ಆವರ್ತ ನಿಧಿ (revolving fund) ಇಡಬೇಕೆಂದು ವಿನಂತಿ ಮಾಡಿದೆ. ಎಲ್ಲರೂ ಕೃಷಿಯನ್ನು ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಹೇಳಿಕೊಳ್ಳುತ್ತಾರೆ. ಆದರೆ ಒಂದು ರೂಪಾಯಿ ಕೂಡ ಆವರ್ತ ನಿಧಿ ಇಲ್ಲದೇ; ಮೊನ್ನೆ 2,000 ಕೋಟಿ ಬಜೆಟ್‌ನಲ್ಲಿ ನೋಡಿದ್ದೇವೆ. Revolving fund ಇಲ್ಲದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. We must depend on the Central Government. ಒಂದು ಸಲ NAFED ನವರು ಒಪ್ಪಿಕೊಳ್ಳುತ್ತಾರೆ, ಮತ್ತೊಂದು ಸಲ ಅವರು ಇಷ್ಟಕ್ಕೆ ಎಂದು ನಿರ್ಬಂಧ ವಿಧಿಸುತ್ತಾರೆ. As a State Government, ನಮ್ಮ ಶಕ್ತಿ ಏನಿರಬೇಕು ಎಂದರೆ, ನಮ್ಮ ರೈತರ ಕಣ್ಣೀರನ್ನು ಒರೆಸುವಂತಹ ಕೆಲಸ ಮಾಡಬೇಕು. ಇನ್ನೊಂದು ವಿಚಾರವೇನೆಂದರೆ, ಕೇಂದ್ರ ಸರ್ಕಾರದವರು scheduled banks ಗಳಲ್ಲಿ ರೈತರಿಗೆ ಲೋನ್ ಕೊಡುತ್ತಿದ್ದರು at the interest rate of 7 per cent ಕೊಡುತ್ತಿದ್ದರು. ಅದರಲ್ಲಿ ಶೇ.3ರಷ್ಟು ಕೇಂದ್ರ ಸರ್ಕಾರ ಮಾಫ್ ಮಾಡುತ್ತಿದ್ದರು. ಅದನ್ನು ಕೂಡ ಹಿಂಪಡೆದುಕೊಂಡಿದ್ದಾರೆ. ಶೇ.3ರಷ್ಟು scheduled bank

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಳಿಗೆ ಏನು ಕೊಡುತ್ತಿದ್ದರು, it has been withdrawn by the Central Government. ಅದು ಕೂಡ ರೈತರಿಗೆ ಬಹಳ ಮಾರಕವಾಗುವ ಕೆಲಸವಾಗಿದೆ. ಇದೆಲ್ಲಾ ಅಂಶಗಳಿದೆ. ಅದೂ ಅಲ್ಲದೆ ಮಾನ್ಯ ಲಕ್ಷ್ಮಣ ಸವದಿಯವರು ಕೃಷಿ ಸಚಿವರಾಗಿದ್ದಾಗ ರಾಯಚೂರಿಗೆ ಬಂದಿದ್ದರು. ಅವರಿಗೆ ಸ್ವಲ್ಪ demonstrations ತೋರಿಸಿದ್ದರು. ಅದೇನೆಂದರೆ, ಗಾಳಿಯಿಂದ Drone ಮೂಲಕ spraying ಮಾಡುವುದು, ಅಂತಹವೆಲ್ಲಾ ತೋರಿಸಿದರು. ಏಕೆಂದರೆ ರಾಯಚೂರಿನಲ್ಲಿ ಕೃಷಿ ವಿಜ್ಞಾನ ಕಾಲೇಜು ಇದೆ. ಆ ಕೃಷಿ ಕಾಲೇಜಿನಲ್ಲಿ agricultural implements ಗೆ ಏನು ಬೇಕಾಗುತ್ತದೆ ಅದರ ಪ್ರಕಾರ design ಮಾಡಿ ಹೊರತೆಗೆಯುವಂತಹ ಕೆಲಸ ಟೆಕ್ನಾಲಜಿಯವರದ್ದು ಆ ಪದವೀಧರರದ್ದಾಗಿದೆ. ಆದರೆ ಆ ಪದವೀಧರರು ಒಂದು ಸಲ ಪದವಿ ಪಡೆದು ಹೊರಗೆ ಬಂದಮೇಲೆ ಅವರಿಗೆ ಎಲ್ಲಿಯೂ placement ಆಗುತ್ತಿಲ್ಲ. ಒಂದು ವೇಳೆ ನಿಮಗೆ ಎಲ್ಲಿಯೂ placement ಕೊಡುವುದಕ್ಕಾಗದಿದ್ದರೆ, Agricultural Engineering College, B.Tech in Agricultural Engineering College ತೆರೆಯುವ ಅವಶ್ಯಕತೆಯೇ ಇರುವುದಿಲ್ಲ. ಇವತ್ತು ಆ ಹುಡುಗರನ್ನು ಯಾವ ಕಡೆಯಲ್ಲಿಯೂ ಕೆಲಸಕ್ಕೆ ತೆಗೆದು ಕೊಳ್ಳುತ್ತಿಲ್ಲ, ಕೃಷಿ ಇಲಾಖೆಯೂ ತೆಗೆದುಕೊಳ್ಳುತ್ತಿಲ್ಲ. ಹಿಂದೆ 1998 ರಿಂದ 2000ರಲ್ಲಿ ವಿನಂತಿ ಮಾಡಿದಾಗ ಅವರನ್ನು 'ಕಾಡಾ'ದಲ್ಲಿ ನಿಯೋಜನೆ ಮಾಡಿದರು. ಏಕೆಂದರೆ, ಹೆಚ್ಚು ನೀರು ಬರುವುದರಿಂದ ಸವಳು-ಜವಳು ಭೂಮಿ ಆಗುವಂತಹ ಒಂದು ಪ್ರದೇಶದಲ್ಲಿ ಆ technical graduates ರನ್ನು ಸೇರಿಸಿಕೊಂಡು ಅವರಿಗೆ ಒಂದು ಅವಕಾಶ ಕೊಟ್ಟು placement ಕೊಟ್ಟಿದ್ದರು. ಆದರೆ ಇವತ್ತು Agricultural Engineering Graduates ಗಳಿಗೆ placements ಇಲ್ಲ. ಆ placement ಬಗ್ಗೆ ಕೂಡ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಏಕೆಂದರೆ, ಸರ್ಕಾರದ ಇಷ್ಟು ಹಣವನ್ನು ಖರ್ಚು ಮಾಡಿ ಪದವಿ ಮಾಡುತ್ತೇವೆ. ಒಬ್ಬ ವೈದ್ಯನಾಗಬೇಕಾದರೆ ಒಂದು ಕೋಟಿ ಎರಡು ಕೋಟಿ ರೂಪಾಯಿ ಸರ್ಕಾರದ ಹಣ ಖರ್ಚಾಗುತ್ತದೆ, ಆದರೆ ಅವರುಗಳು ವಿದೇಶಕ್ಕೆ ಹೋಗಿ ನೌಕರಿ ಮಾಡುತ್ತಾರೆ ಹೊರತು ನಮಗೆ ಅವರ ಸೇವೆ ಸಿಗುವುದಿಲ್ಲ ಇದು ಕೂಡ ಅದೇ ರೀತಿ ಆಗುತ್ತದೆ. ನಾವು ಇಷ್ಟು ಹಣವನ್ನು ಖರ್ಚು ಮಾಡಿ ಕಾಲೇಜಿನಲ್ಲಿ ಲೆಕ್ಚರರ್ ಕೊಟ್ಟು ಎಲ್ಲಾ ಮಾಡಿದ ಮೇಲೆ ಆ ಪದವೀಧರರಿಗೆ ಪ್ಲೇಸ್‌ಮೆಂಟ್ ಕೊಟ್ಟು ಕೃಷಿ ಇಲಾಖೆಯನ್ನು ಸುಧಾರಿಸುವುದಕ್ಕೆ ಹೇಳಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಈ ಹಂತದಲ್ಲಿ ಉಪಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಏಕೆಂದರೆ, ಪ್ರತಿ ದಿನವೂ spacing change ಆಗುತ್ತದೆ. ಇನ್ನೊಂದು ಆಸಕ್ತಿದಾಯಕ ವಿಚಾರವೇನೆಂದರೆ, ಕೃಷಿಯಲ್ಲಿ ಒಂದೇ ಅಂತರ ಇರುವುದಿಲ್ಲ. ಒಂದು ವರ್ಷ 4/3, 4/2 ಮತ್ತು ಇನ್ನೊಂದು ವರ್ಷ 3/3 ಆಗುತ್ತದೆ. Spacing ಅಂದರೆ ಗಿಡಗಳ ಅಂತರ. ಅದು ಒಂದೊಂದು ಬೆಳೆಯಲ್ಲಿ ಬದಲಾಗುವುದನ್ನು ನಾವು ನೋಡುತ್ತೇವೆ. ಯಾರಿಗೆ ಜಾಸ್ತಿ ಬೆಳೆ ಬರುವುದೋ ಅವರು ಅಂತರವನ್ನು ಕಡಿಮೆ ಮಾಡಿರುತ್ತಾರೆ. High-density, Ultra-density ಇವೆಲ್ಲವೂ ಕೂಡ ಪ್ರತಿ ದಿವಸ ಬರುತ್ತವೆ. ಅದಕ್ಕೆ ತಕ್ಕಂತೆ implements ಕೂಡ ರೆಡಿ ಮಾಡಬೇಕಾಗುತ್ತದೆ. implements ಅನ್ನು ರೆಡಿ ಮಾಡಿ ಅವರ ಕೈಗೆ ಕೊಟ್ಟಾಗ ಮಾತ್ರ ಕೃಷಿ ಇನ್ನಷ್ಟು ಸರಳವಾಗಿ ಬರುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಉಪಸಭಾಪತಿಯವರು:–** ಮಾನ್ಯ ಬಸವರಾಜ ಇಟಗಿಯವರೇ, ಒಂದು ನಿಮಿಷ. ನಿಮ್ಮ ಮಾತಿಗೆ ನಾನು ಸಹಕಾರ ಕೊಡುತ್ತೇನೆ. ನೀವು B.Sc Agriculture graduate ಹಾಗೂ ನೀವು ಕೃಷಿಯಲ್ಲಿ ಬಹಳ ಪರಿಣಿತರು ಎಂದು ಮಾನ್ಯ ಸಚಿವರು ಕೂಡ ಹೇಳಿದರು. ಅದರ ಜೊತೆಗೆ ತಾವು ಕೊಳವೆಬಾವಿಗಳ ನೀರು ಕೆಳಗಡೆ ಹೋಗುತ್ತಿದೆಯಲ್ಲಾ ಅದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಿದರೆ ಒಳ್ಳೆಯದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಇದರ allied subject irrigation ಆಗಿದೆ. ಇದು ಇದ್ದರೆ ಅದು ಇರುತ್ತದೆ ಇಲ್ಲದಿದ್ದರೆ ಇಲ್ಲ. ಮೊದಲು ಕೃಷಿ ಬಗ್ಗೆ ಹೇಳುತ್ತೇನೆ, ನಂತರ ನೀರಾವರಿ, ಬೋರ್‌ವೆಲ್ಸ್ ಬಗ್ಗೆ ಹೇಳುತ್ತೇನೆ. ಕೇಂದ್ರ ಸರ್ಕಾರದಲ್ಲಿ ICAR (Indian Council of Agricultural Research), IHRI (Indian Horticultural Research Institute), RKVY (Rashtriya Krishi Vikas Yojana) ಇವೆಲ್ಲಾ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರ ತಂದಿದೆ. ಆದರೆ ದುರ್ದೈವವಶಾತ್ ಎಂದರೆ, ನಮ್ಮ ರಾಜ್ಯದಲ್ಲಿ ಅದರ ಲಾಭವನ್ನು ಬಹಳ ಜನರು ತೆಗೆದುಕೊಳ್ಳುವುದೇ ಇಲ್ಲ. ಆದರೆ ಆಂಧ್ರಪ್ರದೇಶದಲ್ಲಿ ರೈತರು ಸುಮಾರು 700 ಕೋಟಿ, 800 ಕೋಟಿ ಪ್ರತಿ ವರ್ಷ ಈ ನಾಲ್ಕರಿಂದ ಹಣವನ್ನು ತೆಗೆದುಕೊಳ್ಳುತ್ತಾರೆ. ಆದರೆ ನಮ್ಮ ಇಲಾಖೆಯವರು ಇವತ್ತಿನವರೆಗೂ ಯಾರಾದರೂ ಒಂದು ಅರ್ಜಿ ಹಾಕಿದರೆ Horticulture Board ನಿಂದ ನಮಗೆ ಹಣ ಕೊಡಿಸಿ ಎಂದರೆ ಅದು ಮೂರು ವರ್ಷವಾದರೂ ಅಲ್ಲಿಯೇ ಕೊಳೆಯುತ್ತದೆ. ಕನಿಷ್ಠ ಪಕ್ಷ ರಾಜ್ಯ ಸರ್ಕಾರ

"ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖರ್ಚು ಮಾಡಲಾಗದಿದ್ದರೂ ಕೇಂದ್ರ ಸರ್ಕಾರ ಕೊಡುವುದಕ್ಕಾದರೂ ಸಹಾಯ ಮಾಡಬೇಕಲ್ಲವೇ? ಅದರ ಬಗ್ಗೆ ಕೂಡ ರಾಜ್ಯ ಸರ್ಕಾರ ಹೆಚ್ಚು ಗಮನ ಕೊಡಬೇಕೆಂದು ವಿನಂತಿ ಮಾಡುತ್ತೇನೆ. ಮೊನ್ನೆ ರೋಗಗಳು ಜಾಸ್ತಿ ಬರುತ್ತಿರುವ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಬಂತು. ಅದಕ್ಕೆ ಮುಖ್ಯವಾದ ಕಾರಣವೆಂದರೆ, ರೈತರು biochemicals ಅನ್ನು ಉಪಯೋಗಿಸುವುದಾಗಿದೆ. ಇವತ್ತು ಮಾರುಕಟ್ಟೆಯಲ್ಲಿ ಔಷಧಿಯನ್ನು ಸಿಂಪಡಿಸಲು ಸರಿಯಾದ ಔಷಧಿಗಳಿರುವುದಿಲ್ಲ ಅದಕ್ಕೆ biochemical ಎನ್ನುತ್ತಾರೆ. ಈಗ ಪರಿಹಾರಸ್ನೇಹಿ ಎಂದು ಬಯೋ ಕೆಮಿಕಲ್ ಬಂದಿದೆ. ಬಯೋ ಕೆಮಿಕಲ್‌ನಲ್ಲಿ ಏನು ಮಾಡುತ್ತಾರೆ ಎಂದರೆ ಶೇ.2 ರಷ್ಟು ingredients ಹಾಕಿ ಶೇ.70 ರಿಂದ ಶೇ.80 ರಷ್ಟು ಬಯೋ ಕೆಮಿಕಲ್ ಹಾಕುತ್ತಾರೆ. ಇದರಿಂದ ಏನಾಗುತ್ತದೆ ಎಂದರೆ, ಎಷ್ಟು ಡೋಸ್‌ಗೆ ಸಾಯಬೇಕಾಗಿರುತ್ತದೆ, ಅಷ್ಟು ಡೋಸ್‌ಗೆ ಹುಳಗಳು ಸಾಯುವುದೇ ಇಲ್ಲ. ಅದು ಇವರ major marketing. ಅದನ್ನು ಕೂಡ ಮೊನ್ನೆ ರಾಯಚೂರಿನಲ್ಲಿ ವಿಚಾರ ಮಾಡಿದಾಗ ರಾಜ್ಯ ಸರ್ಕಾರವಾಗಲೀ ಅಥವಾ ಕೃಷಿ ವಿಶ್ವವಿದ್ಯಾನಿಲಯಗಳಾಗಲೀ ಬಯೋ ಕೆಮಿಕಲ್ ಅನ್ನು ಯಾವ ಅಂಗಡಿಯಲ್ಲಿಯೂ ಮಾರತಕ್ಕದ್ದಲ್ಲ ಎಂದು ಮಾನ್ಯ ಲಕ್ಷ್ಮಣ ಸವದಿಯವರು ಕೃಷಿ ಸಚಿವರಾಗಿದ್ದಾಗಲೇ ಮಾಡಿದ್ದರು. ಅವರ ಆದೇಶದ ಮೇರೆಗೆ ಎಲ್ಲಾ ಅಂಗಡಿಗಳಲ್ಲಿಯೂ ಬಯೋ ಕೆಮಿಕಲ್ ಮಾರಾಟ ಬಂದ್ ಆಗಿದೆ. ಇದರಿಂದ ಬಹಳಷ್ಟು ಒಳ್ಳೆಯ ಕೆಲಸಗಳಾಗಿವೆ. ಏಕೆಂದರೆ, ಬಯೋ ಕೆಮಿಕಲ್ಸ್‌ಗೆ ಹಣ ಹಾಕಿ ರೈತರು ಹಾಳಾಗಿ, ಹುಳಗಳೂ ಕೂಡ ಸಾಯಲಿಲ್ಲ, ಇದರಿಂದ ರೈತರಿಗೆ ಬೆಳೆ ನಷ್ಟವಾಗಿ ರೈತರೂ ಸಾಯುವಂತಹ ಪರಿಸ್ಥಿತಿ ಬಂತು. ಅಂತಹ ಒಂದು ಪರಿಸ್ಥಿತಿ ಇದೆ. ಅದನ್ನು ಬಂದ್ ಮಾಡಿಸಿದ ಮೇಲೆ ಸರಿಯಾದ ಔಷಧಿ ಸಿಂಪಡಿಸಿದ ಮೇಲೆ ಹುಳಗಳು ಸಾಯುವಂತಹದ್ದನ್ನು ನೋಡಿದ್ದೇವೆ. ಇನ್ನೊಂದು ಈ agricultural implements ಗೆ ನಾವು ಸಬ್ಸಿಡಿ ಕೊಡುವುದು ಹಿಂದಿನ ಸರ್ಕಾರಗಳಿಂದ ನಡೆದುಕೊಂಡು ಬಂದಿದೆ, ಅದನ್ನು ಹೆಚ್ಚಿಗೆ ಮಾಡುವಂತಹ ಕೆಲಸ ಮಾಡಬೇಕು. ಅವರು ಒಂದು ತಾಲ್ಲೂಕಿಗೆ minimum implements ಕೊಡುತ್ತಾರೆ ಅದರ ಬದಲು ಉದಾಹರಣೆಗೆ 100 ಜನ ರೈತರಿದ್ದರೆ ಕನಿಷ್ಠ ಪಕ್ಷ 30–40 ರೈತರಿಗಾದರೂ ಅದರ benefits ಸಿಗಲು ಎಷ್ಟು ಹೆಚ್ಚು ಮಾಡುವುದಕ್ಕೆ ಸಾಧ್ಯತೆ ಇದೆಯೋ ಅದನ್ನು ಮಾಡಿದಾಗ ಮಾತ್ರ ಇನ್ನೂ ಹೆಚ್ಚಿನ ರೈತರಿಗೆ ಲಾಭವಾಗುತ್ತದೆ. ಒಂದು ಆಶ್ಚರ್ಯಕರ ಸುದ್ದಿಯೊಂದನ್ನು ಸದನಕ್ಕೆ ಹೇಳಬಯಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ pesticides ಹೊಡೆದು ಹೊಡೆದು ಹುಳಗಳು ಸಾಯುತ್ತಿರಲಿಲ್ಲ. ಒಬ್ಬ ರೈತನು ಏನು ಮಾಡಿದರೆಂದರೆ, . . .

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ವೈ.ಎ. ನಾರಾಯಣಸ್ವಾಮಿ:–** ಯಾವ ಹುಳು?

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಗಿಡಗಳಿಗೆ ಬರುವ ಹುಳಗಳು (insects). ಮನುಷ್ಯರಿಗೆ ಯಾವ ಹುಳಗಳು ಬರುತ್ತವೆಯೋ ಹಾಗೆ ಗಿಡಗಳಿಗೂ ಹುಳುಗಳು ಬರುತ್ತವೆ.

**ಉಪಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ . . .

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಒಂದು ಗಿಡ ಬೆಳೆಯಬೇಕಾದರೆ, 4–5 ಹಂತಗಳಲ್ಲಿ 4–5 ನಮೂನೆಯ pests ಗಳು ಬರುತ್ತವೆ.

(ಮುಂದು)

(182) 06–03–2020/ 12–20/ ಕೆಹೆಚ್–ವಿಕೆ

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು):–**

ಹುಳುಗಳು ಅಂದರೆ pests ಒಂದೊಂದು ಹಂತದಲ್ಲಿ ಒಂದೊಂದು ರೀತಿಯ ಹುಳುಗಳು ಬರುತ್ತವೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಮೊನ್ನೆಯ ದಿವಸ ಏನಾಗಿದೆ ಎಂದರೆ,

**ಉಪ ಸಭಾಪತಿಯವರು:–** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ತಾವು ಆ ಕಡೆ ಗಮನ ಕೊಡುವುದಕ್ಕೆ ಹೋಗಬೇಡಿ. ತಾವು ಹೇಳುವ ವಿಚಾರವನ್ನು ಹೇಳಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, insecticide cost ಜಾಸ್ತಿ ಆದ ಮೇಲೆ ರೈತರಿಗೆ ಸ್ವಲ್ಪ ತೊಂದರೆಯಾಗಿದೆ. ಒಂದು ಲೀಟರ್ ಕೆಮಿಕಲ್‌ಗೆ ಸುಮಾರು 16 ಸಾವಿರದಿಂದ 20 ಸಾವಿರ ರೂಪಾಯಿಗಳಾಗುತ್ತವೆ. ಇದರ ಬಗ್ಗೆ ಬೇಸತ್ತು ಒಬ್ಬ ರೈತ ಏನು ಮಾಡಿದ್ದಾನೆ ಎಂದರೆ, ಆತನಿಗೆ ಇದರ ವಿಚಾರವಾಗಿ ಹೈದರಾಬಾದ್‌ನಲ್ಲಿ ಒಂದು ಮಾಹಿತಿ ಸಿಗುತ್ತದೆ. ಅಲ್ಲಿಗೆ ಆ ರೈತ ಹೋಗಿ ಬಂದಿದ್ದಾನೆ. ಅಲ್ಲಿಗೆ ಹೋಗಿ ಬಂದ ನಂತರ ತತ್ತಿ ಮತ್ತು edible oil ನಾವು ಇವತ್ತಿನ ದಿವಸ ಊಟಕ್ಕೆ ತತ್ತಿಗಳನ್ನು ಉಪಯೋಗ ಮಾಡುತ್ತೇವೆಯಲ್ಲವೇ, ಅದರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೊತೆಗೆ edible oil ಅಂದರೆ ಎಣ್ಣೆ, ಆ ಎಣ್ಣೆ ಅಂಶಗಳನ್ನು ಚೆನ್ನಾಗಿ ಕಲಸಿಕೊಂಡು ಗಿಡಕ್ಕೆ spray ಮಾಡುವಂತಹ ಕೆಲಸ ಮಾಡಿದ್ದಾರೆ. ಅದರಲ್ಲಿ ಒಟ್ಟಾರೆಯಾಗಿ pests ಇಲ್ಲ. He has sprayed it for six times. ಅದರಲ್ಲಿ ನಾವು 10 percent of the ಕೆಮಿಕಲ್ ಉಪಯೋಗ ಮಾಡಿದಾಗ ಎಷ್ಟು ಬೆಲೆ ಆಗುತ್ತಿತ್ತೋ, ಅದರ ಶೇಕಡಾ 10 ರಷ್ಟು ಬೆಲೆಯ ಮೇಲೆ he has controlled the pests. ಇಂತಹ ಒಂದು organic insecticide ಕಂಡು ಹಿಡಿದಿರುವಂತಹದ್ದು ಕೂಡ ನಾವು ಸಂಶೋಧನೆ ಮಾಡುವಂತಹದ್ದು, ಅದಕ್ಕೆ Entomology ಒಳಗೆ ಜಾಸ್ತಿ ಸಂಶೋಧನೆ ಮಾಡುವಂತಹದ್ದು ಕೂಡ ಬಹಳ ಮುಖ್ಯವಾಗಿದೆ. ಏಕೆಂದರೆ, ಇವತ್ತಿನ ದಿವಸ ಕರೋನಾ ವೈರಸ್ ಯಾವ ರೀತಿಯಲ್ಲಿ ಬಂದಿದೆ ಎಂಬುದು ಗೊತ್ತಿಲ್ಲ. ಅದೇ ರೀತಿ ಗಿಡಗಳಿಗೂ ಯಾವುದೋ ಒಂದು ವೈರಸ್ ಬರುತ್ತದೆ. ಅದು ನಮಗೆ ಗೊತ್ತಿರುವುದಿಲ್ಲ. ಆ pest attack ಆಗಿ ಬೆಳೆ ನಷ್ಟವಾದ ಮೇಲೆ ಅದರ residue ತೆಗೆದುಕೊಂಡು ಹೋಗಿ, sample collect ಮಾಡಿ Agriculture University ಯವರು inspect ಮಾಡಿ, examine ಮಾಡಿದಾಗ ಮಾತ್ರ ಇಂತಹ ವೈರಸ್ ಬಂದಿದೆ, ಇಂತಹ pest attack ಆಗಿದೆ, ಇಂತಹದ್ದಾಗಿದೆ ಎಂಬುದು ಕಂಡು ಬರುತ್ತದೆ. ಇವುಗಳನ್ನು ಕೂಡ ನಾವು anticipate ಮಾಡಿ Entomology Department ನಿಂದ ಇನ್ನಷ್ಟು ಹೆಚ್ಚಿನ ಸಂಶೋಧನಾ ಕಾರ್ಯಗಳನ್ನು ಮಾಡುವಂತಹ ಕೆಲಸ ಸರ್ಕಾರ ಮಾಡಬೇಕೆಂದು ಹೇಳಿ ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಈಗಾಗಲೇ ಸಮಯ ಜಾಸ್ತಿಯಾಗಿದೆ, ಇನ್ನು ಒಂದೆರಡು ವಿಷಯಗಳು ಇರುವುದರಿಂದ, ಇದನ್ನು ಇಲ್ಲಿಗೆ ಮುಗಿಸುತ್ತೇನೆ.

ಎರಡನೆಯದಾಗಿ, ಕೃಷಿಗೆ ನೀರು ಬಹಳ ಮುಖ್ಯ. The main ingredient is water. ಎಲ್ಲಿ ನಾವು ನೀರನ್ನು ಚೆನ್ನಾಗಿ ಬೆಳೆಗಳಿಗೆ ಒದಗಿಸುತ್ತೇವೆಯೋ, ಅಷ್ಟೇ ಚೆನ್ನಾಗಿ ಇಳುವರಿ ಬರುತ್ತದೆ. ಇದರ ಜೊತೆಗೆ high yielding varieties ಅನ್ನು ನೋಡುವಂತಹದ್ದು ಆಗುತ್ತದೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸಾಕಷ್ಟು ಜಲಾಶಯಗಳು ನಿರ್ಮಾಣವಾಗಿವೆ. ಉದಾಹರಣೆಗೆ, ಗೋದಾವರಿ ಬೇಸಿನ್, ಕಾವೇರಿ ಬೇಸಿನ್, ಕೃಷ್ಣಾ ಬೇಸಿನ್ ಮತ್ತು ಇನ್ನಿತರ ಜಲಾಶಯಗಳು ನಿರ್ಮಾಣವಾಗಿವೆ. ತುಂಬಾ ಕಾಲುವೆಗಳು ಸಹ ನಿರ್ಮಾಣವಾಗಿವೆ. ಅದನ್ನು ಮೀರಿ ಸಮರ್ಪಕವಾಗಿ ಪ್ರತಿಯೊಂದು ರೈತರ ಜಮೀನಿಗೆ ನೀರು ಮುಟ್ಟುವಂತಹ ಕೆಲಸ ಆಗುತ್ತಿಲ್ಲ. ಇದರಲ್ಲಿ ಏನು ಸಮಸ್ಯೆ ಇದೆ. ಇವತ್ತಿನ ದಿವಸ ಒಂದು ಪ್ರಾಜೆಕ್ಟ್‌ನ್ನು ಮಾಡುತ್ತಾರೆ, ಅದೇನೆಂದರೆ, ತುಂಗಾಭದ್ರಾ ಕೆನಾಲ್ 130 ಟಿಎಂಸಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀರು ತುಂಬುವಷ್ಟು ಇದೆ. ಇಷ್ಟು ಜಮೀನಿಗೆ ನೀರು ಕೊಡಬೇಕೆಂದು ಎಲ್ಲಾ ಅಂಶಗಳನ್ನು ತಯಾರು ಮಾಡಿ, ಒಂದು ಪ್ರಾಜೆಕ್ಟ್ ಮಾಡಿದ್ದಾರೆ. ಇವತ್ತಿನ ದಿವಸ ಅದರ ಮೇಲೆ 50 ಪ್ರಾಜೆಕ್ಟ್‌ಗಳು ಆಗಿವೆ. ತುಂಗಾ ಜಲಾಶಯ, ಭದ್ರಾ ಜಲಾಶಯ, ತುಂಗಾ ಮೇಲ್ದಂಡೆ ಯೋಜನೆ, ಸಿಂಗಟಾಲೂರು ಜಲಾಶಯ ಹಾಗೂ ಪಾವಗಡಕ್ಕೆ ಕುಡಿಯುವ ನೀರನ್ನು ತರಲಾಯಿತು. ತಾವು ನಿರ್ದಿಷ್ಟ ಜಮೀನಿಗಳಿಗೆ ನೀರನ್ನು ಒದಗಿಸುತ್ತೇವೆ ಎಂದು distribution line ಎಲ್ಲಾ ಮಾಡಿ, ಪ್ರಾಜೆಕ್ಟ್‌ಗಳನ್ನು ಮಂಜೂರು ಮಾಡುತ್ತಾ ಹೋದರೆ ಇದಕ್ಕೆ ಅರ್ಥ ಏನಾದರೂ ಉಳಿಯುತ್ತದೆಯೇ, ಇವತ್ತಿನ ದಿವಸ ಇದಕ್ಕೆ ಬೇರೆ ಬೇರೆ ಪರ್ಯಾಯ ಮಾರ್ಗಗಳನ್ನು ಹುಡುಕಬೇಕಲ್ಲವೇ, ಇಷ್ಟು rainfall ಇದ್ದಾಗ ಸಾಕಷ್ಟು ಟಿಎಂಸಿ ನೀರು ಇವತ್ತು, 700-800 ಟಿಎಂಸಿ ನೀರನ್ನು ಕೃಷ್ಣಾ ಬೇಸಿನ್‌ನಿಂದ ಆಂಧ್ರಪ್ರದೇಶಕ್ಕೆ ಕಳುಹಿಸಲಾಯಿತು ಎಂದು ಯಾರೋ ಮಾನ್ಯ ಸದಸ್ಯರು ಹೇಳಿದರು. 700-800 ಟಿಎಂಸಿ ನೀರು ಅಲ್ಲ, ಬಹುಶಃ ಅವರಿಗೆ ಗೊತ್ತಿರುವುದಿಲ್ಲ. ಈ ಬಾರಿ more than 1000 TMC ನೀರು ಆಂಧ್ರಪ್ರದೇಶಕ್ಕೆ ಹೋಗಿದೆ. ಯಾರೋ ಮಾನ್ಯ ಸದಸ್ಯರು 630 ಟಿಎಂಸಿ ನೀರು ಕಳುಹಿಸಿದ್ದೇವೆ ಎಂದು ಹೇಳಿದರು. ತುಂಗಾಭದ್ರಾ ಜಲಾಶಯ ಮತ್ತು ಕೃಷ್ಣಾ ಜಲಾಶಯದಿಂದಲೇ 1000 ಟಿಎಂಸಿ ಮೇಲೆ ನೀರು ಆಂಧ್ರಪ್ರದೇಶಕ್ಕೆ ಹೋಗಿದೆ. ಇವೆಲ್ಲಾ water bodies create ಮಾಡುವುದನ್ನು ಮೊದಲು ಮಾಡಬೇಕು. ಇವತ್ತಿನ ದಿವಸ ನಾವು ಒಂದು ಊರಿಗೆ 2 ಟಿಎಂಸಿ ಕುಡಿಯುವ ನೀರು ಅವಶ್ಯಕತೆ ಇದೆ ಎಂದು ಹೇಳುತ್ತೇವೆ. ತಾವು ಯಾವುದೋ ಒಂದು ಇದ್ದ ಪ್ರಾಜೆಕ್ಟ್‌ನಲ್ಲಿ ನೀರನ್ನು ಕಸಿದುಕೊಂಡು ಹೋಗುವುದಕ್ಕಿಂತ water body create ಮಾಡಿ, ಆ 2 ಟಿಎಂಸಿ ನೀರನ್ನು ಸಂಗ್ರಹಣೆ ಮಾಡಿ, ಅಲ್ಲಿಂದ ಕುಡಿಯುವ ನೀರನ್ನು ಕೊಡುವಂತಹ ಕೆಲಸವನ್ನು ಮಾಡಬೇಕು. ಈಗ ಇರುವ ಪ್ರಾಜೆಕ್ಟ್ ಅನ್ನು ಹಾಳುಮಾಡುತ್ತಾ ಹೋದರೆ, ಈ ರೀತಿಯಲ್ಲಿ ಪ್ರತಿಯೊಂದು ಪ್ರಾಜೆಕ್ಟ್‌ಗೆ ಯಾವುದೇ ಗೊತ್ತು-ಗುರಿ ಇಲ್ಲದೆ ಸುಮ್ಮನೆ ಮಂಜೂರು ಮಾಡಿಸಿಕೊಂಡು ಹೋದರೆ, ಇವೆಲ್ಲಾ suffer ಆಗುತ್ತವೆ. ಇವತ್ತಿನ ದಿವಸ ಇಷ್ಟೊಂದು ಮೂಲಸೌಕರ್ಯಗಳನ್ನು ಒದಗಿಸಿ, ದುಡ್ಡನ್ನು ಹಾಕಿ, ಜಲಾಶಯಗಳನ್ನು ನಿರ್ಮಾಣ ಮಾಡುವುದರಿಂದ ಮತ್ತು ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದರಿಂದ ಏನು ಉಪಯೋಗವಾಗುತ್ತದೆ? ಇವತ್ತಿನ ದಿವಸ *NRBC (Narayanpur Right Bank Canal)* ಒಳಗೆ 16 ರಿಂದ 18 ಕಿ.ಮೀ 18th distributor.... only these four distributors contribute more than 80 percent of the NRBC. But then too there is no water now. ಇವತ್ತಿನವರೆಗೂ ಸರಿಯಾಗಿ ನೀರು ವಿತರಣೆಯಾಗಿರುವುದಿಲ್ಲ. ತಾವು ಹೇಳಿದ ಹಾಗೆ ಇವತ್ತಿನ ದಿವಸ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂತರ್ಜಲ ಕೂಡ ಬಹಳಷ್ಟು ಕೆಳಗೆ ಹೋಗಿದೆ. ಬೋರ್‌ವೆಲ್‌ಗಳು 1000 ಅಡಿ, 1200 ಅಡಿ ಮತ್ತು 1300 ಅಡಿ ಕೆಳಗೆ ಹೋಗಿದೆ. Water bodies create ಮಾಡಿದರೆ ಮಾತ್ರ ನೀರಿನ ಮಟ್ಟ ಮೇಲಕ್ಕೆ ಬರುತ್ತದೆ. ಅದರ ಬಗ್ಗೆ ಸರ್ಕಾರ ಹೆಚ್ಚಿನ ಗಮನಹರಿಸಿರುವುದಿಲ್ಲ. ನಾವು ಎಲ್ಲಿಗೆ ಅವಶ್ಯಕತೆ ಇದೆಯೋ, ಅಲ್ಲಿಗೆ ಬೋರ್‌ವೆಲ್‌ಗಳನ್ನು ಹಾಕಿ ಎಂದು ಹೇಳುತ್ತೇವೆ. ಆದರೆ, Water bodies create ಮಾಡಬೇಕು. ಇವತ್ತಿನ ದಿವಸ ಸಾಕಷ್ಟು ಕೆರೆಗಳು ಇವೆ. ಆ ಕೆರೆಗಳನ್ನು rejuvenate ಮಾಡಿ excess water ಬಂದಾಗ ನದಿ ನೀರು ಬೇರೆ ರಾಜ್ಯಕ್ಕೆ ಹೋಗುವುದನ್ನು divert ಮಾಡಿ water bodies create ಮಾಡಿ, ಎಲ್ಲಾ ಟ್ಯಾಂಕ್‌ಗಳನ್ನು ತುಂಬಿಸುವಂತಹ ಕೆಲಸ ಮಾಡಬೇಕು. ಪ್ರತಿ ಊರಿನಲ್ಲಿ ಒಂದರಿಂದ ಎರಡು ಕೆರೆಗಳು ಇದ್ದೇ ಇರುತ್ತದೆ. ಆ ಕೆರೆಗಳನ್ನು ತುಂಬಿಸಿದರೆ ಆ ಗ್ರಾಮದಲ್ಲಿನ ಜನರಿಗೆ ಕುಡಿಯುವ ನೀರನ್ನು ಒದಗಿಸಬಹುದು. ಇದರಿಂದ ಸಾಕಷ್ಟು ರೈತರಿಗೂ ಕೂಡ ಅನುಕೂಲವಾಗುವುದನ್ನು ನಾವು ನೋಡಬಹುದು. ಇವತ್ತಿನ ದಿವಸ ತುಂಗಾಭದ್ರಾ ಪ್ರಾಜೆಕ್ಟ್‌ನಿಂದ ಕೊಪ್ಪಳ, ಗಂಗಾವತಿ, ಸಿಂಧನೂರು, ಮಾನ್ವಿ ಮತ್ತು ರಾಯಚೂರು ತಾಲ್ಲೂಕುಗಳಿಗೆ ಪೂರ್ಣವಾಗಿ irrigate ಆಗುತ್ತಿತ್ತು. ನಾವು ಚಿಕ್ಕವರಿದ್ದಾಗಿನಿಂದ ಇದನ್ನು ಕೇಳುತ್ತಿದ್ದೇವೆ. ಈ 6 ವರ್ಷಗಳಿಂದ ಸಿಂಧನೂರಿಗೆ ಕೊನೆಯಾಗಿರುವುದನ್ನು ನೋಡಬಹುದು. ಇದರಿಂದ ರೈತರು ಏನು ಮಾಡಬೇಕು? ರೈತರು ಬೇರೆ ಏನು ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ಎರಡು ಬಾರಿ ನೀರು ಹಾಕಿ ಭತ್ತ ಬೆಳೆದುಕೊಂಡರೆ ಮುಂದೆ ಅಲ್ಲಿ ಯಾವುದೇ ಬೀಜಗಳನ್ನು ಹಾಕಿದರೂ ಕೂಡ ಬೆಳೆ ಬರುವುದಿಲ್ಲ. ಆ ರೀತಿ ಒಂದು ಪರಿಸ್ಥಿತಿ ಇವತ್ತಿನ ದಿವಸ ನಿರ್ಮಾಣವಾಗಿದೆ. ಇವತ್ತಿನ ದಿವಸ ಸವಳು-ಜವಳು ಕೂಡ ಅಷ್ಟೇ ಆಗಿದೆ. ಅದರ ಬಗ್ಗೆಯೂ ಕೂಡ ಸರ್ಕಾರ ಗಮನಹರಿಸಬೇಕಾಗುತ್ತದೆ. ಇವತ್ತಿನ ದಿವಸ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಸವಳು-ಜವಳು ಕಾರ್ಯಕ್ರಮವನ್ನು ಮಾಡಿ ಸುಮಾರು 15 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ನೀಡಿತ್ತು. ಇದು ಎಷ್ಟರಮಟ್ಟಿಗೆ ಕಾರ್ಯಗತವಾಗಿದೆಯೋ ಗೊತ್ತಿಲ್ಲ. ಇದರ ಬಗ್ಗೆ ಯಾರಿಗಾದರೂ ಗೊತ್ತಿದೆಯೋ, ಇಲ್ಲವೋ ಗೊತ್ತಿಲ್ಲ. ಸವಳು-ಜವಳು ಸಮಸ್ಯೆಯನ್ನು ನಿವಾರಣೆ ಮಾಡುವಂತಹದ್ದಕ್ಕೆ, ಮಣ್ಣಿನ ಗುಣಮಟ್ಟವನ್ನು ವಾಪಸ್ಸು ತರುವುದಕ್ಕೆ, filtration pipes ಹಾಕಿ ಮಾಡುವುದಕ್ಕೆ ಸುಮಾರು 15 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ನೀಡಿತ್ತು.

**ಸಭಾಪತಿಯವರು:-** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ ಬೇಗ ಮುಗಿಸಿ. ಏಕೆಂದರೆ, ನಿಮ್ಮ ಹಿಂದೆ ಇರುವ ಮಾನ್ಯ ಶರವಣರವರು ಮಾತನಾಡುವುದಕ್ಕೆ ಕಾಯುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಒಂದೆರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಆಲಮಟ್ಟಿ ಜಲಾಶಯವನ್ನು 519.60 ಅಡಿಯಿಂದ 524 ಅಡಿಗೆ ಎತ್ತರಿಸಬೇಕಾಗಿರುವುದು ಬಹಳ ಮುಖ್ಯವಾಗಿದೆ. ಇದಕ್ಕೆ ಅನುಮತಿಯನ್ನು ಕೊಟ್ಟು, ಈಗಾಗಲೇ ಸುಮಾರು 4 ರಿಂದ 5 ವರ್ಷಗಳಾಯಿತು. ಇದರ ಬಗ್ಗೆ ಸುಪ್ರಿಂ ಕೋರ್ಟ್ ಮತ್ತು ಸರ್ಕಾರದಿಂದ clearance ಕೂಡ ಬಂದಿದೆ. ಇವತ್ತಿನವರೆಗೂ ಕೂಡ ಇದನ್ನು ಮಾಡಿರುವುದಿಲ್ಲ. ಬಜೆಟ್ ಭಾಷಣದಲ್ಲಿಯೂ ನಾನು ನೋಡಿದ್ದೇನೆ. ಅದರಲ್ಲಿಯೂ ಕೂಡ ಯುಕೆಪಿ ಬಗ್ಗೆ ಏನೇನು ವಿಚಾರಗಳನ್ನು ಪ್ರಸ್ತಾಪ ಮಾಡಿರುವುದಿಲ್ಲ. It is one of the biggest Irrigation Project in Asia. ಅದರ ಬಗ್ಗೆಯೂ ಕೂಡ ಏನು ಇಲ್ಲ. ಇಷ್ಟೊಂದು ನಿರ್ಲಕ್ಷ್ಯ ಮಾಡಿದ ಮೇಲೆ ಏನು ಮಾಡಿದರೂ ಏನು ಉಪಯೋಗವಾಗುವುದಿಲ್ಲ. ಇವತ್ತಿನ ದಿವಸ highest water ಅಲ್ಲಿಯೇ ಸಿಗುವುದು, ಇದನ್ನು utilize ಮಾಡುವಂತಹದ್ದು ರಾಜ್ಯ ಸರ್ಕಾರದ ಕೆಲಸವಾಗಿದೆ. ಅದರ ಬಗ್ಗೆ ಬಜೆಟ್ ಭಾಷಣದಲ್ಲಿ ಉಲ್ಲೇಖ ಮಾಡಿರುವುದೇ ಇಲ್ಲ. ಆಲಮಟ್ಟಿ ಜಲಾಶಯವನ್ನು 519.60 ಅಡಿಯಿಂದ 524 ಅಡಿಗೆ ಎತ್ತರಿಸುವ ವಿಚಾರವನ್ನು ಕೈಗೆತ್ತಿಕೊಂಡು ಈಗಾಗಲೇ 5-6 ವರ್ಷಗಳಾಗಿವೆ. 4 ರಿಂದ 5 ಲಕ್ಷ ಹೆಕ್ಟೇರ್‌ಗಳಷ್ಟು ನೀರಾವರಿ ಜಮೀನು ಆಗುವಂತಹದ್ದಿದೆ. ಒಬ್ಬರಿಗೂ ಸಹ ಅದರ ಮೇಲೆ ಗಮನ ಇಲ್ಲ. ಇದಕ್ಕೆ 50 ರಿಂದ 60 ಸಾವಿರ ಕೋಟಿ ರೂಪಾಯಿಗಳು ಬೇಕು. ಇದಕ್ಕೆ ನಾವು ಹಿಂದೆ ಒಂದು ಸಲಹೆಯನ್ನು ಕೊಟ್ಟಿದ್ದೆವು. ಒಂದು ವೇಳೆ ಸರ್ಕಾರದ ಹತ್ತಿರ ದುಡ್ಡು ಇಲ್ಲದೆ ಇದ್ದರೆ, ಎಷ್ಟು ಪ್ರದೇಶ ಮುಳುಗಡೆಯಾಗುತ್ತದೆಯೋ ಆ ಮುಳುಗಡೆ ಪ್ರದೇಶಕ್ಕೆ ಪ್ರತಿ ವರ್ಷ 10 ರಿಂದ 15 ಸಾವಿರ ಕೋಟಿ ರೂಪಾಯಿಗಳನ್ನು earmark ಮಾಡಬೇಕು. ಒಂದೇ ವರ್ಷದಲ್ಲಿ 78 ಸಾವಿರ ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಅದರ ಬಗ್ಗೆ ಒಂದು ಪಟ್ಟಿಯನ್ನು ತೆಗೆದುಕೊಳ್ಳಬೇಕು. Per acre Rs. 40,000 ಎಂದು ರೈತರ ಜೊತೆ ಒಡಂಬಡಿಕೆ ಮಾಡಿಕೊಂಡು, ಅದನ್ನು ಲೀಸ್ ಆಗಿ ತೆಗೆದುಕೊಳ್ಳಿ. ಎಷ್ಟು ಭೂಮಿ ಮುಳುಗಡೆಯಾಗುತ್ತದೆಯೋ, ಅಷ್ಟು ಎಕರೆ ಜಮೀನನ್ನು ಲೀಸ್ ಆಗಿ ತೆಗೆದುಕೊಳ್ಳಿ. ಯಾವ್ಯಾವಾಗ ರೊಕ್ಕ ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ, ಆಗ lease agreement close ಆಗುತ್ತದೆ. ತಾವು ಮೊದಲ ವರ್ಷದಲ್ಲಿ 15 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಾಗ ಮುಚ್ಚಿಬಿಡುವುದು. ಮತ್ತೆ 15 ಸಾವಿರ ಕೋಟಿಗಳೆಂದು ಮಾಡುವುದು. ಈ ರೀತಿ ಮಾಡಿದರೆ 4 ರಿಂದ 5 ವರ್ಷದಲ್ಲಿ ಪ್ರಾಜೆಕ್ಟ್ ಮುಗಿಸಬಹುದು. ಸಾವಿರಾರು ಕೋಟಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿಗಳು ಟ್ಯಾಕ್ಸ್ ಆಗಿ ಬರುತ್ತದೆ. ಅಂತಹ ಕೆಲಸವನ್ನು ಬಿಟ್ಟು ಬೇರೆ ಕಡೆಗೆ ಪ್ರಾಮುಖ್ಯತೆ ಕೊಟ್ಟರೆ ಏನು ಉಪಯೋಗವಾಗುತ್ತದೆ ಎಂಬುದು ನನ್ನ ಭಾವನೆಯಾಗಿದೆ.

ಮಾನ್ಯ ಸಭಾಪತಿಯವರೇ, ತಾವು ಮಾತನಾಡುವುದಕ್ಕೆ ಜಾಸ್ತಿ ಅವಕಾಶವನ್ನು ಕೊಟ್ಟಿದ್ದೀರಿ. ನಾನು ಸಾಕಷ್ಟು ವಿಚಾರಗಳ ಬಗ್ಗೆ ಮಾತನಾಡಿದ್ದೇನೆ. ಬೇರೆ ಸದಸ್ಯರು ಕೂಡ ಮಾತನಾಡುವವರಿದ್ದಾರೆ. ನಾನು ಹೇಳಿರುವಂತಹ ವಿಚಾರಗಳನ್ನು ಮಾನ್ಯ ಸದಸ್ಯರೆಲ್ಲರೂ ಕೂಡ ಬಹಳ ತಾಳ್ಮೆಯಿಂದ ಕೇಳಿರುವುದರಿಂದ ಅವರಿಗೂ ಮತ್ತು ತಮಗೂ ಧನ್ಯವಾದಗಳನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣೆಯ ಕಾರ್ಯಕ್ರಮದಲ್ಲಿ ನನಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ. ಬಹುಶಃ 20 ಪುಟಗಳುಳ್ಳ 67 ಅಂಶಗಳನ್ನು ಸನ್ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ಸರ್ಕಾರ ಹೇಳಿಸಿದೆ. ಇದರಲ್ಲಿರುವ ಅಂಶಗಳ ಬಗ್ಗೆ ರಾಜ್ಯಪಾಲರು ಪದೇ ಪದೇ "ನಮ್ಮ ಸರ್ಕಾರ", "ನಮ್ಮ ಸರ್ಕಾರ", "My Government" ಎಂದು ಹೇಳಿದ್ದಾರೆ. ಇದರ ಬಗ್ಗೆ ನನಗೆ ಅನಿಸುವುದೇನೆಂದರೆ, ಹಿಂದಿನ ಸನ್ಮಾನ್ಯ ಕುಮಾರಸ್ವಾಮಿಯವರ ನೇತೃತ್ವದ ಮೈತ್ರಿ ಸರ್ಕಾರದಲ್ಲಿನ ವಿಚಾರಗಳನ್ನು ಕೂಡ ಅವರು ಇಲ್ಲಿ "ನಮ್ಮ ಸರ್ಕಾರ" ಎಂದು ಹೇಳಿಕೊಂಡಿದ್ದಾರೆ ಎಂದು ನನಗನಿಸುತ್ತಿದೆ. ಎರಡನೆಯದಾಗಿ, ಇವತ್ತಿನ ದಿವಸ ಸನ್ಮಾನ್ಯ ಮುಖ್ಯಮಂತ್ರಿಗಳು ಬಿಜೆಪಿ ಸರ್ಕಾರ ಬಂದ ನಂತರ ಅಧಿವೇಶನದಲ್ಲಿ 'ನಾನು ಯಾವುದೇ ಕಾರಣಕ್ಕೂ ಕೂಡ ದ್ವೇಷದ ರಾಜಕಾರಣ ಮಾಡುವುದಿಲ್ಲ, ನಾನು ವಿರೋಧ ಪಕ್ಷದ ಸದಸ್ಯರ ಸಹಕಾರವನ್ನು ಬಯಸುತ್ತಿದ್ದೇನೆ ಎನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

(ಮುಂದು)

**(183) 06/03/2020/12:30/ಎಸ್‌ಪಿಆರ್/ಬಿಎನ್‌ಎಸ್**

**(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಟಿ.ಎ.ಶರವಣ(ಮುಂದು):–**

ಯಾವುದೇ ಕಾರಣಕ್ಕೂ ನಾನು ದ್ವೇಷದ ರಾಜಕಾರಣ ಮಾಡುವುದಿಲ್ಲ ಎಂಬುದಾಗಿ ಪದೇ ಪದೇ ಈ ಸದನದಲ್ಲಿ ಹಾಗೂ ವಿಧಾನ ಮಂಡಲದಲ್ಲಿ ಹೇಳಿರುವುದನ್ನು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ದ್ವೇಷದ ರಾಜಕಾರಣ ಮಾಡದೇ, ಹಿಂದಿನ ಸರ್ಕಾರ ಹಾಗೂ ಆಗಿನ ಎಲ್ಲಾ ಶಾಸಕರುಗಳು ಯಾವ ರೀತಿಯಾಗಿ ಅನುದಾನಗಳನ್ನು ಬಿಡುಗಡೆ ಮಾಡಿ, ಸರ್ಕಾರಿ ಆದೇಶ ಮಾಡಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟೆಂಡರ್ ಕರೆದು ಕಾರ್ಯಾದೇಶ ನೀಡಿದ ಕಾಮಗಾರಿಗಳನ್ನು ಯಾವ ಕಾರಣಕ್ಕಾಗಿ ತಡೆಹಿಡಿದಿದ್ದಾರೆ ಎನ್ನುವುದು ನನಗೆ ಅರ್ಥವಾಗಿಲ್ಲ. ಇದನ್ನು ದ್ವೇಷದ ರಾಜಕಾರಣ ಅಲ್ಲದೇ ಮತ್ತೇನೆಂದು ಕರೆಯಬೇಕು ಎನ್ನುವುದನ್ನು ತಮ್ಮ ಮುಖಾಂತರ ಸಭಾನಾಯಕರಿಗೆ ಕೇಳಲಿಕ್ಕೆ ಬಯಸುತ್ತೇನೆ.

ರಾಜಕಾರಣವೆನ್ನುವುದು ಯಾರಿಗೂ ಸಹ ಶಾಶ್ವತವಲ್ಲ. ಯಾವುದೇ ಪಕ್ಷವು ಆಡಳಿತದಲ್ಲಿರಲಿ, ಸರ್ಕಾರಗಳು ಬದಲಾಗುತ್ತಿರುತ್ತವೆ. ಇವತ್ತಿನ ದಿವಸ ನಮಗೆ ಅವಶ್ಯಕವಾಗಿರುವುದೇನೆಂದರೆ, ರಾಜ್ಯದ ಜನರ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ, ಅವುಗಳ ಬಗ್ಗೆ ಬೆಳಕು ಚೆಲ್ಲುವಂತಹ ಕೆಲಸಗಳನ್ನು ಮಾಡಿ, ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳಬೇಕು. ಅದನ್ನು ಬಿಟ್ಟು, ಇವತ್ತಿನ ದಿವಸ ಪ್ರಸ್ತುತ ಸರ್ಕಾರವು ಬಂದ ನಂತರ, ಮುಖ್ಯಮಂತ್ರಿಗಳು 'ತಂತಿ ಮೇಲೆ ನಡೆಯುತ್ತಿದ್ದೇನೆ, ನನ್ನ ಕೈಯ್ಯಲ್ಲಿ ಏನೂ ಇಲ್ಲ, ನಾನು ಏನನ್ನೂ ಮಾಡುವುದಕ್ಕಾಗುತ್ತಿಲ್ಲ' ಎಂಬುದಾಗಿ ಪದೇ ಪದೇ ಹೇಳಿದ್ದಾರೆ. ಇದು ತಮಗೂ ಸಹ ಗೊತ್ತಿರುವ ವಿಷಯವಾಗಿದೆ. ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿ, ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ನಾವು ಗಮನಿಸಿದ್ದೇವೆ. ಈ ಸಂಗತಿಯು ಹಲವಾರು ಪತ್ರಿಕೆಗಳಲ್ಲಿ ವರದಿಯಾಗಿದೆ.

ಇವತ್ತಿನ ದಿವಸ ಕೇಂದ್ರ ಸರ್ಕಾರದಿಂದ ಜಿ.ಎಸ್.ಟಿ. ಅಥವಾ 14th Finance Commission, ಯಾವುದೇ ಇರಬಹುದು, ರಾಜ್ಯ ಸರ್ಕಾರಕ್ಕೆ ಬರಬೇಕಾಗಿರುವ ಹಣ ಇನ್ನೂ ಬಂದಿಲ್ಲ. ಇವತ್ತಿನ ದಿವಸ ರಾಜ್ಯ ಸರ್ಕಾರಕ್ಕೆ ಅನ್ಯಾಯವಾಗಿದೆ. ಇದರ ಬಗ್ಗೆ ಏಕೆ ಈ ಸರ್ಕಾರ ಮಾತನಾಡುತ್ತಿಲ್ಲ. ಕೇವಲ ಮುಖ್ಯಮಂತ್ರಿಗಳಷ್ಟೇ ಅಲ್ಲ ಸರ್ಕಾರದಲ್ಲಿರುವ 28 ಮಂತ್ರಿಗಳು ಕೂಡ ಮಾನ್ಯ ಪ್ರಧಾನ ಮಂತ್ರಿಗಳ ಬಳಿಗೆ ವಿರೋಧ ಪಕ್ಷದೊಂದಿಗೆ ನಿಯೋಗವನ್ನು ತೆಗೆದುಕೊಂಡು ಹೋಗಿ, ಬರಬೇಕಾಗಿರುವ ಅನುದಾನದ ಬಗ್ಗೆ ಏಕೆ ಕೇಳುತ್ತಿಲ್ಲ? ಇದಕ್ಕೆ ಏಕೆ ಪ್ರಯತ್ನಿಸುತ್ತಿಲ್ಲ? ರಾಜ್ಯಕ್ಕೆ ಬರಬೇಕಾಗಿರುವ ಅನುದಾನ ಇನ್ನೂ ಕೇಂದ್ರ ಸರ್ಕಾರದಿಂದ ಬಂದಿಲ್ಲ; ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆ ಎಂಬುದಾಗಿ ನಿನ್ನೆಯ ಆಯವ್ಯಯದಲ್ಲಿಯೂ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಹೀಗಾಗಿ ಅನುದಾನ ಪಡೆದುಕೊಳ್ಳುವುದರ ಕಡೆಗೆ ನಮ್ಮ ಸರ್ಕಾರವು ಗಮನಹರಿಸಿದರೆ, ಬಹುಶಃ ನಮ್ಮ ರಾಜ್ಯಕ್ಕೆ ಆಗಿರುವ ನಷ್ಟವನ್ನು ಭರಿಸಬಹುದು. ಅನುದಾನ ಎಂಟು ಸಾವಿರ ಕೋಟಿ ರೂಪಾಯಿ ಇರಬಹುದು ಹಾಗೂ ಜಿ.ಎಸ್.ಟಿ. ಮೂರು ಸಾವಿರ ಕೋಟಿ ರೂಪಾಯಿ ಇರಬಹುದು ಅಥವಾ ಇನ್ನಾವುದೇ ಹಣ ಆಗಿರಲಿ, ಅದನ್ನು ಕೇಂದ್ರ ಸರ್ಕಾರದಿಂದ ಪಡೆದುಕೊಳ್ಳಬೇಕು. ಇವತ್ತಿನ ದಿವಸ ಸರ್ಕಾರವು ತನ್ನ ಹಲವಾರು ಯೋಜನೆಗಳ ಬಗ್ಗೆ ಸ್ಪಷ್ಟಪಡಿಸಿದೆ. ಬಹುಶಃ ಯೋಜನೆಗಳು ಕೇವಲ ಕಾಗದದ ಮಟ್ಟದಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾತ್ರವಿದೆಯೇ ಹೊರತು, ಯಾವುದೇ ಯೋಜನೆಗಳು ಕಾರ್ಯರೂಪಕ್ಕೆ ಬರುತ್ತಿಲ್ಲ. ಇನ್ನು ನೆರೆ ಹಾವಳಿಯ ಬಗ್ಗೆ ಹೇಳುವುದಾದರೆ, ಉಪ ಮುಖ್ಯಮಂತ್ರಿಗಳಾದ ಶ್ರೀ ಲಕ್ಷ್ಮಣ ಸವದಿಯವರು ಸದನದಲ್ಲಿ ಉಪಸ್ಥಿತರಿದ್ದಾರೆ. ಅವರು ಪ್ರತಿನಿಧಿಸುವ ಭಾಗದಲ್ಲುಂಟಾದ ನೆರೆ ಹಾವಳಿಯ ಪ್ರದೇಶಗಳಿಗೆ ನಾನೂ ಸಹ ಭೇಟಿ ನೀಡಿದ್ದೆನು. ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಿದಂತೆ, ನೆರೆ ಹಾವಳಿಯ ಸಂತ್ರಸ್ತರಿಗೆ ಹತ್ತು ಸಾವಿರ ರೂಪಾಯಿಗಳ ಪರಿಹಾರವನ್ನು ನೀಡುವುದಾಗಿ ಸರ್ಕಾರವು ಹೇಳಿದೆ. ಪರಿಹಾರ ನೀಡಿದ ಹತ್ತು ಸಾವಿರ ರೂಪಾಯಿಗಳ ಮೊತ್ತದ ಚೆಕ್ ಬೌನ್ಸ್ ಆಗಿರುವ ಸಂಗತಿಗಳನ್ನು ನಾನು ನೋಡಿದ್ದೇನೆ. ಇದರ ಜೊತೆಗೆ ನೆರೆಯ ಎಲ್ಲಾ ಪ್ರದೇಶಗಳಲ್ಲಿ Flood Relief Fund ಸಮರ್ಪಕವಾಗಿ ಹಂಚಿಕೆಯಾಗಿಲ್ಲ. ಸರ್ಕಾರಿ ಅಧಿಕಾರಿಗಳು ನೀಡುವ ಮಾಹಿತಿಯ ಹಿನ್ನೆಲೆಯ ಮೇರೆಗೆ ಸರ್ಕಾರವು ಕೆಲಸ ನಿರ್ವಹಿಸುತ್ತಿದೆ. ನೆರೆ ಪೀಡಿತ ಎಲ್ಲಾ ತಾಲ್ಲೂಕು, ಹೋಬಳಿ ಹಾಗೂ ಗ್ರಾಮಗಳಿಗೆ ತಮ್ಮ ಸರ್ಕಾರದ ಎಷ್ಟು ಮಂತ್ರಿಗಳು ಭೇಟಿ ನೀಡಿದ್ದಾರೆ? ರಾಜ್ಯದ ನೆರೆ ಪೀಡಿತ ಜಿಲ್ಲೆಗಳಿಗೆ ಮಂತ್ರಿಗಳು ಎಷ್ಟು ಪ್ರವಾಸಗಳನ್ನು ಮಾಡಿದ್ದಾರೆ? ಈ ವಿಚಾರದ ಬಗ್ಗೆ ಸರ್ಕಾರವು ಬೆಳಕನ್ನು ಚೆಲ್ಲಬೇಕು. ಏಕೆಂದರೆ, ರಾಜ್ಯದಲ್ಲಿ ಇಂದಿಗೂ ಸಹ ಎಷ್ಟೋ ಜನ ಫುಟ್‌ಪಾತ್, ರಸ್ತೆಯ ಬೀದಿಗಳಲ್ಲಿ ಮಲಗುತ್ತಿದ್ದಾರೆ. ನೆರೆ ಪೀಡಿತ ಪ್ರದೇಶದಲ್ಲಿನ ಮನೆಗಳು, ಸಣ್ಣ ಸಣ್ಣ ಅಂಗಡಿಗಳು ಕುಸಿದು ಹೋಗಿವೆ. ನೆರೆ ಸಂತ್ರಸ್ತರಿಗೆ ಸರ್ಕಾರದಿಂದ ಸಹಕಾರ ಸಿಗಬೇಕು. ಈ ಹಾದಿಯಲ್ಲಿ ಸರ್ಕಾರ ಕೆಲಸ ನಿರ್ವಹಿಸಿಲ್ಲ. ಪ್ರಕೃತಿ ವಿಕೋಪ ಹೇಗೆ ಉಂಟಾಗುತ್ತದೆ ಎನ್ನುವುದು ನನಗೆ ತಿಳಿದಿಲ್ಲ. ಈ ವಿಚಾರದಲ್ಲಿ ಸರ್ಕಾರವು ತೆಗೆದುಕೊಳ್ಳಬೇಕಾಗಿರುವ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿಲ್ಲ. ಇದನ್ನು ನಾನು ನೇರವಾಗಿ ಆರೋಪ ಮಾಡುವುದಕ್ಕೆ ಬಯಸುತ್ತೇನೆ. ಕೇವಲ ಪುಸ್ತಕ ರೂಪದಲ್ಲಿದ್ದರೆ ಮಾತ್ರವೇ ಸಾಲದು; ಅವುಗಳು ಅನುಷ್ಠಾನಗೊಳ್ಳಬೇಕು. ಈ ಕಡೆಗೆ ಸರ್ಕಾರವು ಗಮನಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಇದರ ಜೊತೆಗೆ ಬೆಂಗಳೂರು ಮಹಾನಗರದಲ್ಲಿ ಸರ್ಕಾರವು ಕಾನೂನು ಸುವ್ಯವಸ್ಥೆಯ ಬಗ್ಗೆ ಸಮರ್ಪಕವಾಗಿ ತೆಗೆದುಕೊಂಡಿರುವ ಕ್ರಮಗಳಿಗೆ ಸ್ಪಂದಿಸಿದೆ, ಅದು ಸಾಲದು. ರಾಜ್ಯದ ಬೆಂಗಳೂರು ಮತ್ತು ಬೆಳಗಾವಿ ನಗರಗಳಲ್ಲಿ ಮಾತ್ರವೇ ಸರ್ಕಾರ ನಡೆಯುತ್ತಿದೆ ಎಂದು ಹಲವಾರು ಪತ್ರಿಕೆಗಳಲ್ಲಿ ವರದಿ ಮಾಡಿದ್ದರು. ಆದರೂ ಸಹ ಬೆಂಗಳೂರು ನಗರದಲ್ಲಿ ಸರ್ಕಾರವು ಹೆಚ್ಚಿನ ಒತ್ತನ್ನು ನೀಡಿ, ಗಮನ ಹರಿಸಬೇಕೆಂದು ಕೋರುತ್ತೇನೆ. ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು ಈಗ ಸದನದಲ್ಲಿ ಉಪಸ್ಥಿತರಿದ್ದಾರೆ. ಕಾನೂನು ಸುವ್ಯವಸ್ಥೆಯಲ್ಲಿ ಪೊಲೀಸರು ಈಗ ತೆಗೆದುಕೊಳ್ಳುತ್ತಿರುವ ಕ್ರಮಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಲದು. ಇನ್ನೂ ಹೆಚ್ಚಿನ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಸರ್ಕಾರವು ಗಮನಹರಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ.ಯಂತಹ ಎರಡೂ ಯೋಜನೆಗಳಲ್ಲಿ ಸಮ್ಮಿಶ್ರ ಸರ್ಕಾರದ ಸಾಧನೆಯು ತೃಪ್ತಿಕರವಾಗಿದೆ. ರಾಜ್ಯದ 11,577 ಗ್ರಾಮಗಳಲ್ಲಿ ಸಮೀಕ್ಷೆಯನ್ನು ಮಾಡಲಾಗಿದೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಖುದ್ದಾಗಿ ಬೇಸರ ವ್ಯಕ್ತಪಡಿಸಿರುವ ವಿಚಾರವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ 30 ಸಣ್ಣ-ಪುಟ್ಟ ಜಾತಿಗಳನ್ನು ಗುರ್ತಿಸಿ, ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಒತ್ತನ್ನು ನೀಡಲಾಗಿತ್ತು. ಇದರ ಬಗ್ಗೆ ಈಗಿನ ಸರ್ಕಾರದ ಯೋಜನೆಗಳಲ್ಲಿ ಕಾಣುತ್ತಿಲ್ಲ. ಈ ವಿಚಾರದಲ್ಲಿಯೂ ಸಹ ಸರ್ಕಾರವು ಗಮನ ಹರಿಸಬೇಕೆಂದು ಕೋರುತ್ತೇನೆ.

ಇವತ್ತಿನ ದಿವಸ ನನ್ನ ಸಹೋದರಿಯು ಈಗಾಗಲೇ ಪೋಡಿಯ ಬಗ್ಗೆ ಮಾತನಾಡಿದ್ದಾರೆ. ಸರ್ಕಾರಕ್ಕೆ ಯಾವುದೇ ರೀತಿಯಾದ ತಪ್ಪು ಸಂದೇಶವನ್ನು ಕೊಡಬಾರದು. ಪೋಡಿ ಅಭಿಯಾನದ ಯೋಜನೆಯಲ್ಲಿ 11,500 ಗ್ರಾಮಗಳಿಗೆ ಮಾಡಿದ್ದ ಕಾರ್ಯಕ್ರಮಗಳು ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. ಸದರಿ ಯೋಜನೆಯು ನಮ್ಮ ಸರ್ಕಾರದಿಂದ ಪ್ರಾರಂಭವಾಗಿದೆ. ಗ್ರಾಮೀಣಾಭಿವೃದ್ಧಿ ಸಚಿವರು ಸದನದಲ್ಲಿ ಉಪಸ್ಥಿತರಿದ್ದರು. ಹೀಗಾಗಿ ಪೋಡಿ ವ್ಯವಸ್ಥೆಯ ಬಗ್ಗೆ ಸರ್ಕಾರವು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಅವರಿಗೆ ಹೇಳಲಿಚ್ಛಿಸುತ್ತೇನೆ. ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ವ್ಯವಸ್ಥೆಗಳಲ್ಲಿ ಅಲ್ಲಿನ ಪಿ.ಡಿ.ಓ.ಗಳು ಇ-ಸ್ವತ್ತು ಯೋಜನೆಯಡಿ ವರ್ಗಾವಣೆ ಮಾಡಬೇಕಾಗಿರುವ ಕೆಲಸಗಳನ್ನು ಕಳೆದ ನಾಲ್ಕೈದು ತಿಂಗಳುಗಳಿಂದ ಮಾಡಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಬೆಂಗಳೂರು ನಗರದ ಕೆಂಗೇರಿಯ ಉದಾಹರಣೆಯೊಂದನ್ನು ನೀಡಬಯಸುತ್ತೇನೆ. ಅಲ್ಲಿ ಕಛೇರಿಯಲ್ಲಿನ ಗಣಕಯಂತ್ರಗಳು ಕಾರ್ಯನಿರ್ವಹಿಸುತ್ತಿಲ್ಲ. ಈ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ, 'ನೆಟ್‌ವರ್ಕ್ ಇಲ್ಲ, ಗಣಕಯಂತ್ರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ, ಸರ್ವರ್ ಡೌನ್ ಆಗಿದೆ ಹೀಗಾಗಿ ನಾವೇನು ಮಾಡುವುದಕ್ಕಾಗುತ್ತದೆ' ಎಂದು ಉತ್ತರಿಸುತ್ತಾರೆ. ತಮ್ಮ ಸರ್ಕಾರವು ಅಧಿಕಾರಕ್ಕೆ ಬಂದು ಎಂಟು ತಿಂಗಳುಗಳಾಗಿವೆ. ಏಕೆ ಈ ವಿಚಾರದಲ್ಲಿ ಗಮನಹರಿಸುತ್ತಿಲ್ಲ? ಆದ್ದರಿಂದ ಸರ್ಕಾರವು ಈ ವಿಚಾರದಲ್ಲಿ ಗಮನ ಹರಿಸಬೇಕೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ತುಂಬಾ ಕಷ್ಟಪಟ್ಟು ಈ ಸರ್ಕಾರದ ರಚನೆಯಾಗಿದೆ, ಏನೇನು ಮಾಡಲಾಗಿದೆ ಎಂದು ಮಾನ್ಯ ಡಾ॥ ತೇಜಸ್ವಿನಿ ಗೌಡರವರು ಈ ಮೊದಲು ಪ್ರಸ್ತಾಪ ಮಾಡುತ್ತಿದ್ದರು. ಅವರು ತಮ್ಮ ಭಾಷಣದಲ್ಲಿ ತಮ್ಮ ಸರ್ಕಾರವನ್ನು ಹೇಗೆ ಅಧಿಕಾರಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತರಲಾಯಿತು, ಯಾವ ರೀತಿಯ ಕಷ್ಟಗಳನ್ನು ಪಟ್ಟಿದ್ದರು ಎಂಬ ಅಂಶಗಳ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ನಾನು ಈ ವಿಚಾರದಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೂ ಸಹ ಸುಳ್ಳು ಅರ್ಥವಾಗುವ ರೀತಿಯಲ್ಲಿ ಸತ್ಯಾಂಶಗಳು ಯಾರಿಗೂ ಸಹ ಅರ್ಥವಾಗುವುದಿಲ್ಲ. ಸುಳ್ಳು ಎಷ್ಟು ಚೆನ್ನಾಗಿ ತಲುಪುತ್ತದೆ ...

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾತುಗಳೆಲ್ಲವನ್ನೂ ಹೇಳಿ, ಈಗ ಮಾತನಾಡುವುದಿಲ್ಲ ಎಂಬುದಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಶರವಣರವರೇ, ತಾವು ಮಾತನಾಡಿದ್ದು ಮುಗಿಯಿತೇ?

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇನ್ನು ಒಂದು ನಿಮಿಷದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಮಾನ್ಯ ಮಾಧುಸ್ವಾಮಿರವರು ಹೇಳಿದ ಮಾತುಗಳು ನನಗೆ ಕೇಳಿಸಲಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):-** ತಾವು ಮಾತನಾಡುವುದಿಲ್ಲವೆಂದು ಹೇಳಿ, ಎಲ್ಲವನ್ನೂ ಮಾತನಾಡಿರುವ ಬಗ್ಗೆ ಮಾನ್ಯ ಸಚಿವರು ಹೇಳಿದರು.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ದಯಮಾಡಿ ಒಂದು ನಿಮಿಷ ಕಾಲಾವಕಾಶವನ್ನು ನೀಡಿ. ಸುಳ್ಳು ಅರ್ಥವಾಗುವಷ್ಟು ಸುಲಭವಾಗಿ ಸತ್ಯಾಂಶ ಅರ್ಥವಾಗುವುದಿಲ್ಲ. ಆದ್ದರಿಂದ ಸುಳ್ಳು ಹೇಳುವವರು ಆ ಕ್ಷಣಕ್ಕೆ ತುಂಬಾ ಒಳ್ಳೆಯವರಾಗಿ ಕಾಣಿಸುತ್ತಾರೆ, ಆದರೂ ಕೂಡ ನಂಬಿದವರಿಗೆ ನಿಜ ಹೇಳುವುದು ಕೆಟ್ಟವರಿಗೆ ಕಾಣುತ್ತದೆ. ಇವತ್ತಿನ ದಿವಸ ಇಂತಹ ಪರಿಸ್ಥಿತಿ ಈ ಸರ್ಕಾರದಲ್ಲಿ ನಡೆಯುತ್ತಿದೆ. ಸುಳ್ಳು ಯೋಜನೆಗಳನ್ನು ಹೇಳಿ, ಸುಮ್ಮನೆ ಪ್ರಚಾರವನ್ನು ಪಡೆಯುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಮುಜರಾಯಿ, ಮೀನುಗಾರಿಕೆ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈಗಾಗಲೇ ಉಚಿತ ಸಾಮೂಹಿಕ ವಿವಾಹ ಎಂದು ಹೇಳಿ, ಪುಕ್ಕಟೆ ಪ್ರಚಾರವನ್ನು ಪಡೆದುಕೊಂಡಿದ್ದಾರೆ. ಯಾರದೋ ದುಡ್ಡು ಬಳಸಿ ಮದುವೆ ಮಾಡುತ್ತಾರೆ. ಜನರ ಭಾವನೆಗಳನ್ನು ಸಚಿವರು ಅರ್ಥಮಾಡಿಕೊಳ್ಳಬೇಕು. ಭಕ್ತಾದಿಗಳು ದೇವಸ್ಥಾನಕ್ಕೆ ಬಂದು ಹುಂಡಿಗೆ ಕಾಣಿಕೆಯನ್ನು ಹಾಕುತ್ತಾರೆ. ಅಂತಹ ಹಣವನ್ನು ಬಳಸಿಕೊಂಡು ಸಾಮೂಹಿಕ ವಿವಾಹವನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುವುದಾಗಿ ಸಚಿವರು ಹೇಳಿದ್ದಾರೆ. ಈ ವಿಚಾರದಲ್ಲಿ ನಾನು ಹೇಳುವುದೇನೆಂದರೆ, ಭಕ್ತಾದಿಗಳು ದೇವಸ್ಥಾನದ ಅಭಿವೃದ್ಧಿಗೋಸ್ಕರ ಹುಂಡಿಗೆ ಹಣವನ್ನು ಹಾಕುತ್ತಾರೆ. ಹೀಗಾಗಿ ದೇವಸ್ಥಾನಗಳ ಅಭಿವೃದ್ಧಿ ಮಾಡುವುದನ್ನು ಬಿಟ್ಟು ಇವತ್ತಿನ ದಿವಸ ಸರ್ಕಾರವು ದೇವರ ಹೆಸರಿನಲ್ಲಿ ಪುಕ್ಕಟೆ ಪ್ರಚಾರವನ್ನು ತೆಗೆದುಕೊಳ್ಳುತ್ತಿದೆ. ಇದು ಎಷ್ಟು ಮಾತ್ರ ಸರಿ? ಈ ವಿಚಾರದಲ್ಲಿ ಸರ್ಕಾರವು ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಮಾನ್ಯ ಸದಸ್ಯರು ಕೇಳಬೇಕು. ನನಗೆ ಜ್ಞಾಪಕವಿರುವಂತೆ ನಿನ್ನೆಯ ದಿವಸ ಮಾನ್ಯ ಸದಸ್ಯರು ಹಾಗೂ ನನ್ನ ಸ್ನೇಹಿತರು ಸಾಮೂಹಿಕ ಹಾಗೂ ಸರಳ ವಿವಾಹವನ್ನು ನಮ್ಮ ಇಲಾಖೆಯು ಯಾವ ರೀತಿಯಾಗಿ ಮಾಡುತ್ತದೆ, ಹುಂಡಿಗೆ ಹಾಕಿದ ಹಣವನ್ನು ಉಪಯೋಗಿಸಲಾಗುತ್ತದೆಯೆ ಎಂಬ ಚುಕ್ಕೆ ಗುರ್ತಿನ ಪ್ರಶ್ನೆಯೊಂದನ್ನು ಕೇಳಿದ್ದರು. ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ ತಕ್ಷಣವೇ, ನಾನು ನಿನ್ನೆಯ ದಿವಸ ಸದರಿ ಪ್ರಶ್ನೆಗೆ ಪೂರ್ಣ ಸಿದ್ಧತೆಯನ್ನು ಮಾಡಿಕೊಂಡು ಬಂದಿದ್ದೆನು. ನಮ್ಮ ಇಲಾಖೆಯ ಯೋಜನೆಗಳನ್ನು ಅವರ ಮುಖಾಂತರ ಇಡೀ ರಾಜ್ಯಕ್ಕೆ ತಿಳಿಸೋಣ ಎಂದು ನಾನು ಭಾವಿಸಿದ್ದೆನು. ಪ್ರಶ್ನೆಯನ್ನು ತೆಗೆದುಕೊಂಡಾಗ ಮಾನ್ಯ ಸದಸ್ಯರು ಸದನದಲ್ಲಿ ಉಪಸ್ಥಿತರಿರಲಿಲ್ಲ ಮತ್ತು ಅವರು ಎಲ್ಲಿ ಹೋಗಿದ್ದರೋ ಗೊತ್ತಿಲ್ಲ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾನು ಆ ಸಂದರ್ಭದಲ್ಲಿ ಸದನದಲ್ಲಿ ಹಾಜರಿರದಿರುವುದನ್ನು ನಾನು ಒಪ್ಪುತ್ತೇನೆ. ಆಕಸ್ಮಿಕವಾಗಿ ನನಗೆ ಅತ್ಯಂತ ಜರೂರು ಕೆಲಸ ಬಂದಿದ್ದರಿಂದ ನಾನು ಹೋಗಿದ್ದೆನು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳಿದ ಮಾನ್ಯ ಸದಸ್ಯರು ಕನಿಷ್ಠ ಉತ್ತರವನ್ನು ಕೇಳುವುದಕ್ಕಾಗಿ ಸದನದಲ್ಲಿದ್ದಿದ್ದರೆ, ನಿನ್ನೆಯ ದಿವಸ ನಾನು ಎಲ್ಲವನ್ನೂ ವಿವರಿಸುತ್ತಿದ್ದೆನು. ಇವತ್ತಿನ ದಿವಸ ಮಾನ್ಯ ಸದಸ್ಯರಿಗೆ ಈ ಕಷ್ಟ ಇರುತ್ತಿರಲಿಲ್ಲ. ರಾಜ್ಯದಲ್ಲಿನ 'ಎ' ದರ್ಜೆಯ ಸಂಪದ್ಭರಿತವಾದ 100 ದೇವಸ್ಥಾನಗಳನ್ನು ಆಧಾರವಾಗಿಟ್ಟುಕೊಂಡು ನಾವು ಸರಳ ವಿವಾಹ ಯೋಜನೆಯನ್ನು ಕೈಗೊಂಡಿದ್ದೇವೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಚ್ಛಿಸುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾನಾಯಕರು ಈಗ ಏಕೆ ಆ ಪ್ರಶ್ನೆಯನ್ನು ವಿವರಿಸುತ್ತಿದ್ದಾರೆ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದ್ದರಿಂದ ನಾನು ಈಗ ವಿವರಣೆ ನೀಡುತ್ತಿದ್ದೇನೆ. ಮಾನ್ಯ ಸದಸ್ಯರು ಇದೇ ವಿಷಯವನ್ನು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಂಡು ಬರಲಿ. ಸಾಮೂಹಿಕ ಹಾಗೂ ಸರಳ ವಿವಾಹವನ್ನು ಈ ರಾಜ್ಯದ ಎಲ್ಲಾ ಜನ ಪ್ರತಿನಿಧಿಗಳು ಪಕ್ಷಭೇದ ಮರೆದು ಚರ್ಚೆ ಮಾಡೋಣ. ಇದನ್ನು ಮಾನ್ಯ ಸದಸ್ಯರು ಪ್ರಾಯಶಃ ಒಪ್ಪಿಕೊಳ್ಳಬಹುದು.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾನಾಯಕರೇ, ನಾನು ಇದನ್ನು ಒಪ್ಪುತ್ತೇನೆ ಏಕೆಂದರೆ, ಈ ಕಾರ್ಯಕ್ರಮ ಚೆನ್ನಾಗಿದೆ. ಸದರಿ ಕಾರ್ಯಕ್ರಮಕ್ಕಾಗಿ ಸರ್ಕಾರವು ಆರ್ಥಿಕ ಇಲಾಖೆಯಿಂದ ಹಣವನ್ನು ಬಿಡುಗಡೆ ಮಾಡಲಿ ಹಾಗೂ ಹುಂಡಿ ಹಣವನ್ನು ಬೇರೆ ಯೋಜನೆಗಳಿಗೆ ವಿನಿಯೋಗಿಸಿ. ಭಕ್ತಾದಿಗಳು ದೇವಸ್ಥಾನಗಳ ಉದ್ಧಾರಕ್ಕಾಗಿ ಹುಂಡಿಗೆ ಹಣ ಹಾಕುತ್ತಾರೆ. ಹುಂಡಿಯ ಹಣವನ್ನು ಬಳಸುವುದರಿಂದ ಭಕ್ತಾದಿಗಳ ಭಾವನೆಗಳಿಗೆ ಧಕ್ಕೆಯಾಗುತ್ತಿದೆ. ಹುಂಡಿಯ ಹಣದಿಂದ ದೇವಸ್ಥಾನಗಳು ಉದ್ಧಾರವಾಗಿ, ಅಲ್ಲಿ ಅಭಿವೃದ್ಧಿ ಕೆಲಸಗಳಾಗಬೇಕು.

**(ಮುಂದು)**

(184)/06.03.2020/12.40/ಎಲ್‌ಎಂ(ಹೆಚ್‌ವಿ)-ಬಿಎಸ್‌ಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಎ.ಶರವಣ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಉದಾಹರಣೆಗೆ ಹೇಳಬೇಕಾದರೆ, ನಮ್ಮ ಬಸವನಗುಡಿಯ ಒಂದು ದೇವಸ್ಥಾನದಲ್ಲಿ ಮಂಟಪ ಕಟ್ಟುವುದಕ್ಕೆ ಹಣವಿಲ್ಲವೆಂದು ಅದನ್ನು ಪೆಂಡಿಂಗ್‌ನಲ್ಲಿಟ್ಟಿದ್ದಾರೆ. ಆದ್ದರಿಂದ ದೇವಸ್ಥಾನದ ಅಭಿವೃದ್ಧಿಗಾಗಿ ಹುಂಡಿ ಹಣವನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿದೆ.

**ಡಾ||ಜಯಮಾಲ:-** ಸನ್ಮಾನ್ಯ ಸಭಾಪತಿಯವರೇ, ದೇವಸ್ಥಾನಗಳಲ್ಲಿ ಸಾಮೂಹಿಕ ವಿವಾಹಗಳು ನಡೆಯುತ್ತಿರುವುದಕ್ಕೆ ನಾವೆಲ್ಲರೂ ಹೆಮ್ಮೆ ಪಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಕೆಲವು ಹೆಣ್ಣುಮಕ್ಕಳಿಗೆ ಸುಮಾರು 35-40 ವರ್ಷಗಳಾದರೂ ಮದುವೆ ಮಾಡಲು ಮಾತಾಪಿತೃಗಳ ಬಳಿ ಹಣವಿಲ್ಲದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರುಗಳು ಇನ್ನೂ ಅವಿವಾಹಿತರಾಗಿಯೇ ಉಳಿದಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ಈ ರೀತಿಯ ವ್ಯವಸ್ಥೆ ಮಾಡಿರುವುದನ್ನು ನಾವೆಲ್ಲರೂ ಸ್ವಾಗತಿಸಬೇಕಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಈಗ ಪರಿಸ್ಥಿತಿ ಬದಲಾವಣೆಯಾಗಿದೆ. ನಮ್ಮ ಗಂಡು ಮಕ್ಕಳು ವಿವಾಹವಾಗುವುದಕ್ಕೆ ಹೆಣ್ಣು ಸಿಗುತ್ತಿಲ್ಲ. ನಾವೆಲ್ಲರೂ ಹೆಣ್ಣಿಗಾಗಿ ಹುಡುಕಾಡುತ್ತಿದ್ದೇವೆ.

**ಶ್ರೀ ಸಿ.ಟಿ.ರವಿ(ಪ್ರವಾಸೋದ್ಯಮ ಮತ್ತು ಕನ್ನಡ, ಸಂಸ್ಕೃತಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಹಳ್ಳಿಗಳಲ್ಲಿ ವ್ಯವಸಾಯ ಮಾಡುತ್ತಿರುವ ಗಂಡು ಮಕ್ಕಳಿಗೆ ಹೆಣ್ಣುಗಳೇ ಸಿಗುತ್ತಿಲ್ಲ.

**ಶ್ರೀ ಟಿ.ಎ.ಶರವಣ:–** ಸನ್ಮಾನ್ಯ ಸಭಾಪತಿಯವರೇ, ಈ ರೀತಿ ಸಾಮೂಹಿಕ ವಿವಾಹ ಮಾಡುವುದಕ್ಕೆ ದೇವಸ್ಥಾನದಲ್ಲಿರುವ ಸಾರ್ವಜನಿಕರ ಹುಂಡಿ ಹಣವನ್ನು ಬಳಕೆ ಮಾಡದೇ ಸರ್ಕಾರದ ಹಣವನ್ನು ಬಳಕೆ ಮಾಡಬೇಕೆನ್ನುವುದು ನನ್ನ ಮನವಿಯಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಸಾಮೂಹಿಕ ವಿವಾಹಗಳನ್ನು ನೆರವೇರಿಸುತ್ತಿರುವುದು ಸ್ವಾಗತರ್ಹವಾಗಿದೆ. ಆದರೆ, ದೇವಸ್ಥಾನಗಳ ಹುಂಡಿ ಹಣವನ್ನು ಈ ಕಾರ್ಯಕ್ಕಾಗಿ ಬಳಸಿಕೊಂಡರೇ ದೇವಸ್ಥಾನಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಸಂಬಳ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಸಾಮೂಹಿಕ ವಿವಾಹಕ್ಕೆ ಹುಂಡಿ ಹಣದ ಜೊತೆಗೆ ಸರ್ಕಾರದ ಕಾಣಿಕೆಯೇನು ಎನ್ನುವುದನ್ನು ಅವರು ಹೇಳಬೇಕಾಗಿದೆ. 'ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ' ಎನ್ನುವ ರೀತಿಯಲ್ಲಿ ಯಾರದೋ ಹಣದಲ್ಲಿ ಅವರು ಪ್ರಚಾರ ಪಡೆದುಕೊಳ್ಳುವುದು ಬೇಡ ಎನ್ನುವುದು ನಮ್ಮ ಮನವಿಯಾಗಿದೆ.

**ಡಾ||ಜಯಮಾಲ:–** ಸನ್ಮಾನ್ಯ ಸಭಾಪತಿಯವರೇ, ಸಾಮೂಹಿಕ ವಿವಾಹಗಳನ್ನು ನಡೆಸುತ್ತಿರುವುದು ತುಂಬಾ ಒಳ್ಳೆಯ ಕೆಲಸವಾಗಿದೆ. ದೇವಸ್ಥಾನದಲ್ಲಿಯೇ ಆ ಕ್ಷಣದಲ್ಲಿಯೇ ಮದುವೆ ರಿಜಿಸ್ಟ್ರೇಶನ್ ಆದರೆ, ವಧುವರರಿಗೆ ಕೊಡುವಂತಹ ಸವಲತ್ತುಗಳು ಅವರುಗಳು ಅಲ್ಲಿಯೇ ಪಡೆದುಕೊಳ್ಳುವಂತಾಗಬೇಕೆನ್ನುವುದು ನನ್ನ ಸಲಹೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ.ಶರವಣಃ–** ಸನ್ಮಾನ್ಯ ಸಭಾಪತಿಯವರೇ, ಇವರು ದೇವಸ್ಥಾನಗಳ ಹುಂಡಿ ಹಣದಲ್ಲಿ ಸಾಮೂಹಿಕ ವಿವಾಹಗಳನ್ನು ಮಾಡುತ್ತಿದ್ದಾರೆ. ಆದರೆ, ಆ ದೇವಸ್ಥಾನಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು 1,488 ನೌಕರರಿಗೆ ಸಂಬಳವನ್ನು ಕೊಟ್ಟಿಲ್ಲ. ಅವರುಗಳು ಹೋರಾಟ ಮಾಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಯಾವ ದೇವಸ್ಥಾನದ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ. ಯಾವ ದೇವಸ್ಥಾನಗಳು 'ಎ' ದರ್ಜೆ ದೇವಸ್ಥಾನಗಳಾಗಿಲ್ಲವೋ ಮತ್ತು ಯಾವ ದೇವಸ್ಥಾನಗಳಲ್ಲಿ ಹಣಕಾಸಿನ ಕೊರತೆ ಇದೆಯೋ ಅಂತಹ ದೇವಸ್ಥಾನಗಳಿಗೆ ಸರ್ಕಾರದ ವತಿಯಿಂದ ಹಣವನ್ನು ಕೊಟ್ಟು ಸಾಮೂಹಿಕ ವಿವಾಹಗಳನ್ನು ನೆರವೇರಿಸುವಂತಹ ಕಾರ್ಯವನ್ನು ಮಾಡಲಾಗುತ್ತದೆ. ನನ್ನ ಸಹೋದರಿ ಜಯಮಾಲರವರು, 'ಸ್ಥಳದಲ್ಲಿಯೇ ಮದುವೆ ರಿಜಿಸ್ಟ್ರೇಶನ್ ಆಗಬೇಕು' ಎಂದು ಹೇಳಿದ್ದಾರೆ. ಸ್ಥಳದಲ್ಲಿಯೇ ಮದುವೆಯನ್ನು ರಿಜಿಸ್ಟ್ರೇಶನ್ ಮಾಡುವುದಕ್ಕೆ ಸಂಬಂಧಪಟ್ಟ ರೂಪುರೇಷೆಗಳನ್ನು ರಚಿಸಲಾಗಿದೆ. ಕೊಲ್ಲೂರು ದೇವಸ್ಥಾನದಲ್ಲಿ ಒಂದು ಸಾವಿರ ಮದುವೆ ನಡೆಯಬಹುದೆಂದು ಊಹಿಸಿಕೊಂಡಿದ್ದೆವು. ಆದರೆ, ಸಾಮೂಹಿಕ ವಿವಾಹದಲ್ಲಿ ಮದುವೆಯಾಗುತ್ತೇವೆಂದು ಫಾರಂ ತೆಗೆದುಕೊಂಡು ಹೋಗಿರುವವರ ಸಂಖ್ಯೆ ಇವತ್ತಿನವರೆಗೆ ಎರಡು ಸಾವಿರವಾಗಿದೆ. ಸುಮಾರು 190 'ಎ' ದರ್ಜೆ ದೇವಸ್ಥಾನಗಳಲ್ಲಿ 100 ದೇವಸ್ಥಾನಗಳನ್ನು ಮಾತ್ರ ನಾವು ಆಯ್ಕೆ ಮಾಡಿಕೊಂಡಿದ್ದೇವೆ. ಮಾನ್ಯ ಶರವಣನವರು ಮಾತನಾಡುತ್ತಾ, 'ಮುಜರಾಯಿ ದೇವಸ್ಥಾನದಲ್ಲಿ ಕೆಲಸ ಮಾಡುವ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೆ ಸರ್ಕಾರದ ಬಳಿ ಹಣವಿಲ್ಲ' ಎಂದು ಹೇಳಿದ್ದಾರೆ. ಯಾವುದೇ ದೇವಸ್ಥಾನವಾಗಿದ್ದರೂ ಶೇಕಡಾ 35ರಷ್ಟು ಆದಾಯಮಿತಿಯೊಳಗೆ ಆ ದೇವಸ್ಥಾನದ ನೌಕರರಿಗೆ ಸಂಬಳ ಕೊಡುವುದಕ್ಕೆ ಯಾವುದೇ ತೊಂದರೆಯಿಲ್ಲ. ಇಲ್ಲಿಯವರೆಗೆ ಯಾವುದೇ ದೇವಸ್ಥಾನದ ಸಂಬಳ ಸಾರಿಗೆ ಆದಾಯದ ಪರಿಮಿತಿಯನ್ನು ಮೀರಿಲ್ಲ. ಕುಕ್ಕೆ ಸುಬ್ರಮಣ್ಯ ದೇವಸ್ಥಾನದಿಂದ ನಮಗೆ ಬರುತ್ತಿರುವ ಆದಾಯದ ಮೊತ್ತ 100 ಕೋಟಿ ರೂಪಾಯಿಗಳಾಗಿವೆ. ಕೊಲ್ಲೂರು ಮೂಕಾಂಬಿಕೆ ದೇವಸ್ಥಾನದಿಂದ 60 ರಿಂದ 80 ಕೋಟಿ ರೂಪಾಯಿಗಳು ಬರುತ್ತಿವೆ. ಕಟೀಲು ದೇವಸ್ಥಾನದಿಂದ ಸುಮಾರು 35 ರಿಂದ 40 ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತಿದೆ. ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನದಿಂದ 40 ರಿಂದ 50 ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತಿದೆ. ಆದ್ದರಿಂದ ಈ ದೇವಸ್ಥಾನಗಳಲ್ಲಿ ಯಾವುದೇ ಕಾರಣಕ್ಕೂ ಹಣದ ಕೊರತೆಯೆನ್ನುವುದು ಉದ್ಭವಿಸುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಎಲ್ಲ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅತ್ಯಂತ ವ್ಯವಸ್ಥಿತವಾಗಿ ಯೋಜನಾಬದ್ಧವಾಗಿ ಸರಳ ಸಾಮೂಹಿಕ ವಿವಾಹ ಯೋಜನೆಯಾದ 'ಸಪ್ತಪದಿ' ಯೋಜನೆಗೆ ಚಾಲನೆಯನ್ನು ಕೊಡುತ್ತಿದ್ದೇವೆ. ಇದು ಅತ್ಯಂತ ಪಾರದರ್ಶಕವಾಗಿ ನಡೆಯುತ್ತದೆಂದು ನಾನು ವಿಶ್ವಾಸದಿಂದ ಹೇಳುತ್ತಿದ್ದೇನೆ. ಯಾವ ಗೊಂದಲವೂ ಇಲ್ಲದೇ ಅವರೆಲ್ಲರೂ ಈ ವಿವಾಹಗಳಿಗೆ ಆಗಮಿಸಿ, ವಧುವರರನ್ನು ಆಶೀರ್ವದಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಟಿ.ಎ.ಶರವಣ:–** ಸನ್ಮಾನ್ಯ ಸಭಾಪತಿಯವರೇ, .........

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಅವರು ಈ ವಿಚಾರವನ್ನು ಬೇರೆ ನಿಯಮಗಳಡಿಯಲ್ಲಿ ಚರ್ಚೆಗೆ ತಂದರೆ, ಅವರ ಪ್ರತಿಯೊಂದು ಪ್ರಶ್ನೆಗೂ ಅವರಿಗೆ ತೃಪ್ತಿಯಾಗುವ ರೀತಿಯಲ್ಲಿ ಉತ್ತರವನ್ನು ಕೊಡುತ್ತೇನೆ.

**ಶ್ರೀ ಅ.ದೇವೇಗೌಡ(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರುಗಳು ಪ್ರಸ್ತಾಪ ಮಾಡಿರುವ ವಿಚಾರಗಳನ್ನು ಬಿಟ್ಟು ಬೇರೆ ವಿಚಾರಗಳ ಬಗ್ಗೆ ಅಂದರೆ, ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಅವರುಗಳ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಮಾತನಾಡುತ್ತೇನೆ.

ಸನ್ಮಾನ್ಯ ಸಭಪತಿಯವರೇ, ನಮ್ಮೂರಿನಲ್ಲಿ ರೇಷ್ಮೆ ಬೆಳೆಗಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರೇಷ್ಮೆ ಬೆಳೆಗಾರರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಸರ್ಕಾರ ರೇಷ್ಮೆ ಮಾರುಕಟ್ಟೆಯಲ್ಲಿ 'ಇ' ಪೇಮೆಂಟ್ ವಿಧಾನವನ್ನು ಜಾರಿಗೆ ತಂದಿದೆ. ಇದು ನಿಜಕ್ಕೂ ಸ್ವಾಗತಾರ್ಹವಾಗಿದೆ. ಅಲ್ಲಿ ಮಧ್ಯವರ್ತಿಗಳೇ ಸಾಹುಕಾರರಾಗಿದ್ದರು. ರೈತರಿಗೆ ಸರಿಯಾದ ರೀತಿಯಲ್ಲಿ ಹಣವನ್ನು ಹಂಚಿಕೆ ಮಾಡುತ್ತಿರಲಿಲ್ಲ. ಸರ್ಕಾರ ರೇಷ್ಮೆ ಮಾರುಕಟ್ಟೆಯಲ್ಲಿ 'ಇ' ಪೇಮೆಂಟ್ ವಿಧಾನವನ್ನು ಜಾರಿಗೆ ತಂದಿರುವುದು ನಿಜಕ್ಕೂ ನನಗೆ ಸಂತೋಷವನ್ನುಂಟು ಮಾಡಿದೆ. ಅದೇ ರೀತಿಯಲ್ಲಿ ರಾಜ್ಯದಲ್ಲಿರುವ 9 ಲಕ್ಷ ಹಾಲು ಉತ್ಪಾದಕರಿಗೆ 5 ರೂಪಾಯಿಗಳ ಪ್ರೋತ್ಸಾಹಧನವನ್ನು ನೀಡಿರುವುದು ಮೆಚ್ಚುಗೆ ಪಡುವಂತಹ ವಿಚಾರವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಹಾಲು ಉತ್ಪಾದಕರಿಗೆ 5 ರೂಪಾಯಿಗಳ ಪ್ರೋತ್ಸಾಹಧನ ನೀಡಿರುವುದು ಮತ್ತು ರೇಷ್ಮೆ ಮಾರುಕಟ್ಟೆಯಲ್ಲಿ 'ಇ' ಪೇಮೆಂಟ್ ಅನ್ನು ಜಾರಿಗೆ ತಂದಿರುವುದು ಯಾವ ಸರ್ಕಾರ ಎನ್ನುವುದನ್ನು ಮಾನ್ಯ ಸದಸ್ಯರು ಹೇಳಬೇಕಾಗಿದೆ.

**ಶ್ರೀ ಅ.ದೇವೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಮೀನುಗಾರರ ಮತ್ತು ನೇಕಾರರ ಸಾಲ ಮನ್ನಾ ಮಾಡಿದೆ. ಆಶಾ ಕಾರ್ಯಕರ್ತರು ಮತ್ತು ಅಂಗನವಾಡಿಯಲ್ಲಿ ಕೆಲಸ ಮಾಡುವ ಹೆಣ್ಣು ಮಕ್ಕಳು ಪ್ರತಿದಿನ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರವನ್ನು ಒತ್ತಾಯಿಸಿ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಕುಳಿತುಕೊಳ್ಳುತ್ತಿದ್ದರು. ಅಂಗನವಾಡಿ ಕಾರ್ಯಕರ್ತರ ಸಂಬಳವನ್ನು 8 ಸಾವಿರದಿಂದ 10 ಸಾವಿರ ರೂಪಾಯಿಗಳಿಗೆ ಹೆಚ್ಚಿಸಿರುವುದು ನಿಜಕ್ಕೂ ಸಂತೋಷ ತರುವಂತಹ ವಿಚಾರವಾಗಿದೆ. ಕಳೆದ ಎರಡು ವರ್ಷಗಳಿಂದ ಬಾಕಿ ಇರುವ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ವಿತರಣೆ ಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಸರ್ಕಾರವನ್ನು ಕೇವಲ ಟೀಕೆ ಮಾಡುವುದನ್ನು ಬಿಟ್ಟು ಸಲಹೆಸೂಚನೆಗಳನ್ನು ನೀಡುವ ಕೆಲಸ ಮಾಡಬೇಕಾಗಿದೆ. ಅದೇ ರೀತಿಯಲ್ಲಿ ನಮ್ಮಂತಹ ಕಿರಿಯರಿಗೆ ಮಾರ್ಗದರ್ಶಕರಾಗಬೇಕಾಗುತ್ತದೆ.

ನಮ್ಮ ಗ್ರಾಮ ಮತ್ತು ನಮ್ಮ ರಸ್ತೆ ಯೋಜನೆಯಡಿಯಲ್ಲಿ ಎಲ್ಲ ಗ್ರಾಮಗಳ ರಸ್ತೆಗಳಿಗೆ ಸಿಮೆಂಟ್ ಹಾಕಿ ಸಿಮೆಂಟ್ ರಸ್ತೆಗಳನ್ನಾಗಿ ಮಾರ್ಪಡಿಸಿರುವುದು ಒಳ್ಳೆಯ ಯೋಜನೆಯಾಗಿದೆ. ರಾಜ್ಯದಲ್ಲಿರುವ ಸುಮಾರು 411 ಸರ್ಕಾರಿ ಫಸ್ಟ್ ಗ್ರೇಡ್ ಕಾಲೇಜುಗಳಲ್ಲಿ ಡಿಗ್ರಿ ವ್ಯಾಸಂಗ ಮಾಡುತ್ತಿರುವ ಸುಮಾರು 1.70 ಜನ ಹೆಣ್ಣುಮಕ್ಕಳಿಗೆ ಶುಲ್ಕ ರಹಿತ ಶಿಕ್ಷಣವನ್ನು ನೀಡುವ ಯೋಜನೆ ನಮ್ಮ ಸರ್ಕಾರದಾಗಿದೆ. ಬಡ ಹೆಣ್ಣುಮಕ್ಕಳು ಹೆಚ್ಚು ಸಂಖ್ಯೆಯಲ್ಲಿ ಡ್ರಾಫ್‌ಔಟ್ ಆಗುತ್ತಿದ್ದರು. ಅವರು ತಮ್ಮ ವ್ಯಾಸಂಗವನ್ನು ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಟ್ಟ ನಮ್ಮ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸುವುದರಲ್ಲಿ ದೇಶದಲ್ಲಿಯೇ ಕರ್ನಾಟಕ ಎರಡನೆಯ ಸ್ಥಾನವನ್ನು ಪಡೆದುಕೊಂಡಿದೆ. ಹೂಡಿಕೆದಾರರು ಸುಮಾರು 71,475 ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿಕೆ ಮಾಡಿದ್ದಾರೆ. ಹೂಡಿಕೆದಾರರು ಹೂಡಿಕೆ ಮಾಡಿ ಉದ್ದಿಮೆಗಳನ್ನು ಸ್ಥಾಪಿಸುವಾಗ ಶೇಕಡಾ 75ರಷ್ಟು ಕನ್ನಡಿಗರಿಗೇ ಉದ್ಯೋಗಾವಕಾಶವನ್ನು ಕಲ್ಪಿಸಿ ಕೊಡಬೇಕೆನ್ನುವ ಷರತ್ತನ್ನು ಸರ್ಕಾರ ವಿಧಿಸಬೇಕೆಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಈಗಾಗಲೇ ಮೆಕಾನಿಕಲ್ ಮತ್ತು ಸಾಫ್ಟ್‌ವೇರ್ ಇಂಜಿನಿಯರ್‌ಗಳು ಹಳ್ಳಿಗೆ ಗುಳೆ ಹೋಗುತ್ತಿದ್ದಾರೆ. ಉತ್ತರ ಕರ್ನಾಟಕದಿಂದ ಬಂದಂತಹ ಇಂಜಿನಿಯರ್‌ಗಳು ಕೆಲಸ ಸಿಕ್ಕಿತ್ತೆಂದು ಮದುವೆ ಮಾಡಿಕೊಂಡಿದ್ದರು. ಇವತ್ತು ಬೆಂಗಳೂರಿನಲ್ಲಿ ಅವರ ಸ್ಥಿತಿ ಏನಾಗಿದೆಯೆಂದರೆ, ಬಹಳಷ್ಟು ಜನರು ನಿರುದ್ಯೋಗಿಗಳಾಗಿ ವಿಚ್ಛೇದನ ಪಡೆದುಕೊಳ್ಳುತ್ತಿದ್ದಾರೆ. ನನಗೆ ತಿಳಿದಂತೆ ಸುಮಾರು 300-400 ಜನ ಮೆಕಾನಿಕಲ್ ಇಂಜಿನಿಯರ್‌ಗಳು ನಮ್ಮೂರಿಗೆ ಗುಳೆ ಹೋಗಿದ್ದಾರೆ. ಆದ್ದರಿಂದ ಶೇಕಡಾ 75ರಷ್ಟು ಕನ್ನಡಿಗರಿಗೇ ಉದ್ಯೋಗಾವಕಾಶವನ್ನು ಕಲ್ಪಿಸಿ ಕೊಡಬೇಕೆನ್ನುವ ನಿಬಂಧನೆಯನ್ನು ಸರ್ಕಾರ ವಿಧಿಸಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿನ ಮುಖ್ಯ ಬಡಾವಣೆಗಳಲ್ಲಿ ಜನವಸತಿ ಕೇಂದ್ರಗಳನ್ನು ಸ್ಥಾಪನೆ ಮಾಡುವುದಕ್ಕೆ ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಿ ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತಿದ್ದೇನೆ. ರಾಜ್ಯದಲ್ಲಿ ನಿರುದ್ಯೋಗಿ ಪದವೀಧರರಿಗೆ ಮಾಹೆಯಾನ 5 ಸಾವಿರ ರೂಪಾಯಿಗಳನ್ನು ನೀಡುವ ಬಗ್ಗೆ ಈಗಾಗಲೇ ಆಯವ್ಯಯದಲ್ಲಿ ಘೋಷಣೆ ಮಾಡಲಾಗಿದೆ. ಅದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತಿದ್ದೇನೆ. ಸ್ಟೈಫಂಡ್ ಅಡಿಯಲ್ಲಿ ಕೆಲಸ ಮಾಡುತ್ತಿದ್ದ ನಿರುದ್ಯೋಗಿಗಳಿಗೆ ಈಗಾಗಲೇ ವಯೋಮಿತಿ ಮೀರಿ ಹೋಗಿ ಕೊನೆಯ ಹಂತದಲ್ಲಿ ಖಾಯಂ ಆಗಿದ್ದವರನ್ನು ಯಾವ ಮಕ್ಕಳು ಅಳಿಯಂದಿರು ನೋಡಿಕೊಳ್ಳುತ್ತಿಲ್ಲ. ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, 6ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸುವುದರ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ನಡುವೆ ಇರುವಂತಹ ವೇತನ ತಾರತಮ್ಯವನ್ನು ಸರಿಪಡಿಸಬೇಕಾಗಿದೆ. ನಿವೃತ್ತಿ ಹೊಂದಿರುವ ನೌಕರರು ಸಂಕಷ್ಟದಲ್ಲಿದ್ದಾರೆ. 6ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸುವಾಗ ಪಿಂಚಣಿ ಸೌಲಭ್ಯವನ್ನು ಕಲ್ಪಿಸಿಕೊಡಬೇಕೆನ್ನುವ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಈ ಅಂಶಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಪಶುವೈದ್ಯರು ಮತ್ತು ವೈದ್ಯ ವಿದ್ಯಾಭ್ಯಾಸವನ್ನು ಪೂರೈಸುವವರಿಗೆ ಸರ್ಕಾರ ಸಾಕಷ್ಟು ಹಣವನ್ನು ವೆಚ್ಚ ಮಾಡಿರುತ್ತದೆ. ಆದರೆ, ವೈದ್ಯರಾದವರು ಸಬ್ ಇನ್ಸ್‌ಪೆಕ್ಟರ್ ಮತ್ತು ಸಬ್ ರಿಜಿಸ್ಟ್ರಾರ್‌ಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

(ಮುಂದುವರೆದಿದೆ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

185/06-03-2020/12-50/ಬಿಎಸ್‌ಡಿ-ಕೆಎಸ್

**ಶ್ರೀ ಅ. ದೇವೇಗೌಡ (ಮುಂದು)**

ಅದಕ್ಕೆ ಒಂದು ನಿಗದಿ ಮಾಡಿ, Super speciality, Veterinary, Horticulture and Sericulture course ಗಳಿಗೆ ಸರ್ಕಾರದಿಂದ ಸವಲತ್ತು ಕೊಟ್ಟು ವಿದ್ಯಾರ್ಥಿಗಳನ್ನು ಓದಿಸಿದ್ದರೆ ಅವರು ಆ ಕೆಲಸ ಮಾಡುವುದನ್ನು ಬಿಟ್ಟು ಸಬ್‌ರಿಜಿಸ್ಟ್ರಾರ್, ಸಬ್‌ಇನ್ಸ್‌ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ. ಇದನ್ನು ತಡೆಯುವ ಕೆಲಸವನ್ನು ಮಾಡಬೇಕೆಂದು ಸರ್ಕಾರದಲ್ಲಿ ವಿನಂತಿಸುತ್ತೇನೆ.

ಇನ್ನು ರಾಮನಗರ ಜಿಲ್ಲೆಯ ಹನುಮಾನಹಳ್ಳಿಯ ಮೊರಾರ್ಜಿ ದೇಸಾಯಿ ಶಾಲೆಯ 25 ವರ್ಷಗಳ ರಜತ ಮಹೋತ್ಸವದಲ್ಲಿ ಭಾಗವಹಿಸಿದ್ದೆನು. ಆ ಶಾಲೆಯು ಆಶ್ರಮದ ರೀತಿ ಗುಡ್ಡುಗಾಡು ಪ್ರದೇಶದಲ್ಲಿದೆ. ಅಲ್ಲಿನ ವಿದ್ಯಾರ್ಥಿಗಳು ನೂರಕ್ಕೆ 100% ತೇರ್ಗಡೆಯಾಗಿದ್ದಾರೆ. ಅಲ್ಲಿ ಕೆಲಸ ಮಾಡುವ ಶಿಕ್ಷಕರು ಮತ್ತು ನೌಕರರಿಗೆ ವೇತನ ತಾರತಮ್ಯ ಇದ್ದು, ಅವರಿಗೆ ವೇತನವನ್ನು ಸರಿಪಡಿಸಬೇಕೆಂದು ಕೊಡಬೇಕೆಂದು ಮನವಿ ಮಾಡುತ್ತೇನೆ. ಇತ್ತೀಚೆಗೆ ಅರಣ್ಯಗಳು ಮಾಯವಾಗುತ್ತಿವೆ. ಮಾನ್ಯ ರೇವಣ್ಣನವರು ಸದನದಲ್ಲಿ ಉಪಸ್ಥಿತರಿದ್ದು, ಔಷಧಿಯುಕ್ತ ಪ್ರದೇಶವಾದ ಸಾವನದುರ್ಗದಲ್ಲಿ ಒತ್ತುವರಿಯಾಗುತ್ತಿದೆ. ಅರಣ್ಯ ಗಿಡಗಳನ್ನು ಮಳೆ ಇಲ್ಲದಂತಹ ಇಂತಹ ಸಮಯದಲ್ಲಿ ನೆಡುತ್ತಿದ್ದಾರೆ. ಅದಕ್ಕೆ ಒಂದು ಕಂಡೀಷನ್ ಹಾಕಿ ಮಳೆಗಾಲದಲ್ಲಿ ಅರಣ್ಯ ಸಸಿಗಳನ್ನು ನೆಡುವ ಕೆಲಸ ಮಾಡಿಸಬೇಕು.

ಇನ್ನು ನೇಮಕಾತಿ ವಿಷಯಕ್ಕೆ ಸಂಬಂಧಪಟ್ಟಂತೆ ಕೆ.ಪಿ.ಎಸ್.ಸಿ. ಯಲ್ಲಿ ಕೆ.ಎ.ಎಸ್ ಮೂಲಕ ಆರ್.ಟಿ.ಓ. ಮತ್ತು ಎ.ಆರ್.ಟಿ.ಓ. ನೇಮಕವಾಗಿ ಐದು ವರ್ಷಗಳು ಕಳೆದಿವೆ. ಪ್ರತಿ ವರ್ಷ ನೇಮಕ ಮಾಡಬೇಕೆಂದು ನಿಯಮವಿದ್ದರೂ ಆಯ್ಕೆಯಾಗಿ ಐದು ವರ್ಷಗಳು ಕಳೆದಿವೆ. ಆದರೆ ಯಾರಿಗೂ ನೇಮಕಾತಿ ಆದೇಶ ಕೊಟ್ಟಿಲ್ಲ. ಆರ್.ಟಿ.ಓ. ಮತ್ತು ಎ.ಆರ್.ಟಿ.ಓ. ಹುದ್ದೆಗಳಿಗೆ ಅಲ್ಲಿನವರನ್ನೇ ಪ್ರಭಾರದಲ್ಲಿಟ್ಟುಕೊಂಡಿದ್ದಾರೆ. ಆಯ್ಕೆಯಾಗಿರುವವರಿಗೆ ಅನುಭವ ಪ್ರಮಾಣ ಪತ್ರ ನೀಡಬೇಕೆಂದು ಹೇಳಿಕೊಂಡು ಯಾರಿಗೂ ನೇಮಕಾತಿ ಆದೇಶ ಕೊಟ್ಟಿಲ್ಲ. ಕೆ.ಎ.ಎಸ್. ಪರೀಕ್ಷೆಯಲ್ಲಿ ಆರ್.ಟಿ.ಓ. ಮತ್ತು ಎ.ಆರ್.ಟಿ.ಓ. ಗಳಾಗಿ ಆಯ್ಕೆಯಾಗಿರುವುದರಿಂದ ದೊಡ್ಡ ದೊಡ್ಡ ಸಾಹುಕಾರರ ಮಕ್ಕಳನ್ನು ಮದುವೆಯಾಗಿ, ಕೊನೆಗೆ ತಾಳಿಯನ್ನು ಕೈಗೆ ಕೊಟ್ಟು ಹೋಗುವ ಪರಿಸ್ಥಿತಿ ಬಂದಿದೆ. ದಯವಿಟ್ಟು ಇದರ ಕಡೆ ಗಮನಹರಿಸಿಬೇಕೆಂದು ಒತ್ತಾಯ ಮಾಡುತ್ತೇನೆ. ಒಂದು ರೀತಿ ಯಾವುದೇ ಹುದ್ದೆಗಳಿಗೆ ನೇಮಕ ಮಾಡಲು ಅರ್ಜಿ ಕರೆದರೂ ನೇಮಕ ಮಾಡಲು ಐದು ವರ್ಷಗಳನ್ನು ತೆಗೆದುಕೊಂಡು ಪಂಚವಾರ್ಷಿಕ ಯೋಜನೆಯ ರೀತಿ ಮಾಡುತ್ತಿದ್ದಾರೆ. ಸರ್ಕಾರಿ ಶಾಲೆಗಳು ಸಬಲೀಕರಣವಾಗಬೇಕೆಂದು ಕನ್ನಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿವೃದ್ಧಿ ಅಧಿಕಾರಿಯವರು 1917 ರಲ್ಲಿ ವರದಿಯೊಂದನ್ನು ಕೊಟ್ಟಿದ್ದಾರೆ. ಅದು ಸಬಲೀಕರಣ ಆಗದೇ ಕನ್ನಡ ಶಾಲೆಗಳೆಲ್ಲವೂ ಮುಚ್ಚಿ ಹೋಗುತ್ತಿವೆ. ಅಲ್ಲದೇ ದೈಹಿಕ ಶಿಕ್ಷಕರೂ ಒಬ್ಬರೂ ಇಲ್ಲ. ಎಲ್ಲೋ ಒಬ್ಬರು ಇದ್ದರೂ ಅವರನ್ನು ಹೆಚ್ಚುವರಿ ಎಂದು ವರ್ಗಾವಣೆ ಮಾಡುತ್ತಿದ್ದಾರೆ. ಎಲ್ಲಾ ಪ್ರೈಮರಿ ಶಾಲೆಗಳು ಉಳಿಯಲು ದೈಹಿಕ ಶಿಕ್ಷಕರನ್ನು ನೇಮಕ ಮಾಡಬೇಕು. ಶಾಲಾ-ಕಾಲೇಜುಗಳು ಮುಚ್ಚಿಹೋದರೆ ಅವರಿಗೆ ಕೆಲಸ ಇಲ್ಲದಂತಾಗುತ್ತದೆ ಎಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ವರದಿಯನ್ನು ಜಾರಿಗೆ ತರಬೇಕು. ಅದೇ ರೀತಿ ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ತರಬೇಕು. ಬೆಂಗಳೂರು ನಗರದಲ್ಲಿಯೂ ಕನ್ನಡ ಶಾಲೆಗಳು ಮುಚ್ಚಿ ಹೋಗುವ ಪರಿಸ್ಥಿತಿ ಬಂದಿದೆ. ಬೆಂಗಳೂರಿನಲ್ಲಿ ಮಹಾರಾಜರ ಕಾಲದಲ್ಲಿ ಕಟ್ಟಿದ ಕ್ಯಾನ್ಸರ್ ಆಸ್ಪತ್ರೆ ಇರಬಹುದು, ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆ ಇರಬಹುದು. ಈಗ 198 ವಾರ್ಡ್‌ಗಳಾಗಿ ಬೆಂಗಳೂರು ನಗರ ಬೆಳೆದಿದ್ದು, ಸರ್ಕಾರಿ ಜಮೀನುಗಳನ್ನು ಬಡಾವಣೆಗಳಾಗಿ ಮಾಡುತ್ತಾ ಜಮೀನನ್ನು ನುಂಗುತ್ತಿದ್ದಾರೆ. ಆದ್ದರಿಂದ 8 ದಿಕ್ಕುಗಳಲ್ಲಿಯೂ ಆಸ್ಪತ್ರೆಗಳನ್ನು ವಿಸ್ತರಣೆ ಮಾಡಬೇಕು. ಸರ್ಕಾರಿ ಶಾಲೆಗಳನ್ನು ಮಾಡಬೇಕು. ಮಾಗಡಿ ರಸ್ತೆಯಿಂದ ಜಯದೇವ ಆಸ್ಪತ್ರೆಗೆ ಹೋಗುವ ಮಾರ್ಗ ಮಧ್ಯೆದಲ್ಲಿಯೇ ರೋಗಿ ಸತ್ತುಹೋಗುತ್ತಿದ್ದಾನೆ. ಹೃದಯ ಮತ್ತು ಕ್ಯಾನ್ಸರ್‌ಗೆ ಸಂಬಂಧಪಟ್ಟ ರೋಗಗಳ ಆಸ್ಪತ್ರೆಗಳನ್ನು 8 ದಿಕ್ಕುಗಳಲ್ಲಿಯೂ ಮಾಡಬೇಕು. ಈಗ ಜಾಗವೇ ಸಿಗುವುದಿಲ್ಲ. ಏಕೆಂದರೆ ಎಲ್ಲರೂ 10 ಎಕರೆ ಜಮೀನನ್ನು ತೆಗೆದುಕೊಂಡು ಗುಡ್ಡಗಳನ್ನು ಒತ್ತುವರಿ ಮಾಡಿಕೊಂಡು 100 ಎಕರೆ ಮಾಡಿಕೊಳ್ಳುತ್ತಿದ್ದಾರೆ. ಇದರ ಕಡೆ ಸರ್ಕಾರದ ಅಧಿಕಾರಿಗಳು ಗಮನ ಹರಿಸುತ್ತಿಲ್ಲ. ದಯವಿಟ್ಟು ಇದರ ಕಡೆ ಗಮನ ಹರಿಸಬೇಕು. ಬಿ.ಬಿ.ಎಂ.ಪಿ. ಶಾಲಾ-ಕಾಲೇಜುಗಳಲ್ಲಿ ಏಜೆನ್ಸಿ ಮೂಲಕ ಗುತ್ತಿಗೆ ಆಧಾರದ ಮೇಲೆ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ಎಲ್ಲ ಬಡವರ ಬಿ.ಬಿ.ಎಂ.ಪಿ. ಶಾಲೆಗೆ ಹೋಗುತ್ತಾರೆ. ಎಂ.ಎ., ಪಿಹೆಚ್‌ಡಿ., ಮಾಡಿರುವವರಿಗೆ ಏಳೆಂಟು ಸಾವಿರ ರೂಪಾಯಿಗಳ ಸಂಬಳ ಕೊಡುತ್ತಿದ್ದಾರೆ. ಬಿ.ಬಿ.ಎಂ.ಪಿ. ಯಲ್ಲಿ ಹಣ ಇದ್ದು, ಇವರನ್ನು ಕೆ.ಪಿ.ಎಸ್.ಸಿ. ಮೂಲಕ ನೇಮಕ ಮಾಡಿಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

ಇನ್ನು ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಬಗ್ಗೆ ಪ್ರತಿಯೊಬ್ಬರು ಮಾತನಾಡುತ್ತಿದ್ದಾರೆ. ನೇಮಕಾತಿ ಹೊಂದಿದ ಶಿಕ್ಷಕರು ಅಥವಾ ಅಧಿಕಾರಿಗಳು ಅಲ್ಲಿಗೆ ಹೋಗುತ್ತಿಲ್ಲ. ಆದ್ದರಿಂದ ಕಡ್ಡಾಯವಾಗಿ ಸ್ಥಳೀಯದವರನ್ನು ನೇಮಕ ಮಾಡಿಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ನಾವು ವಿದ್ಯಾರ್ಥಿಗಳಾಗಿದ್ದಾಗ ಮಾನ್ಯ ಡಿ. ದೇವರಾಜ ಅರಸ್ ರವರು ಮುಖ್ಯಮಂತ್ರಿಗಳಾಗಿದ್ದಾಗ ಜಕ್ಕರಾಯನ ಕೆರೆ ಪ್ರದೇಶದಲ್ಲಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಆ ಪ್ರದೇಶದಲ್ಲಿ ಸರ್ಕಸ್ ಅನ್ನು ನಡೆಸುತ್ತಿದ್ದರು. ಅಲ್ಲಿ ವೀನಸ್ ಸರ್ಕಸ್ ಸಹ ಸುಟ್ಟು ಹೋಗಿತ್ತು. ಆದರೆ ಈಗ ಓಟಿಗಾಗಿ ಆ ಪ್ರದೇಶದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಲಮ್ ಮಾಡಿದ್ದಾರೆ. ಆದ್ದರಿಂದ ಕೇರಳ ಮಾದರಿಯಲ್ಲಿ ಮಾಡಿದಂತೆ ಅಲ್ಲಿನ ಮಂತ್ರಿಮಹಲ್ ಮತ್ತು ಅಲ್ಲಿನ ಕಟ್ಟಡಗಳನ್ನು ತೆಗಸಬೇಕು ಎಂದು ಮನವಿ ಮಾಡುತ್ತೇನೆ. ಈಗಾಗಲೇ, C.P.Ed (Certificate in Physical Education), B.P.Ed. (Bachelors of Physical Education) and M.P.Ed. (Masters of Physical Education) ಓದಿದ ಶಿಕ್ಷಕರಿಗೆ ಯಾವುದೇ ನೌಕರಿ ಸಿಗದೇ ನಿರುದ್ಯೋಗಿಗಳಾಗಿದ್ದು, ಸರ್ಕಾರವು ಇವರ ಕಡೆ ಗಮನ ಕೊಡಬೇಕು ಇಲ್ಲದಿದ್ದರೆ ಕನ್ನಡ ಶಾಲೆಗಳು ಮುಚ್ಚಿಹೋಗುವ ಪರಿಸ್ಥಿತಿ ಬರುತ್ತದೆ. ಅರಣ್ಯ ರಕ್ಷಕರು ಭಕ್ಷಕರಾಗಿದ್ದು, ಇರುವ ಮರಗಳನ್ನು ಕಡಿದು ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಯಾವ ಗಿಡಗಳನ್ನು ನೆಟ್ಟು ಬೆಳೆಸುವುದಿಲ್ಲ. ಸೆಪ್ಟೆಂಬರ್-ಅಕ್ಟೋಬರ್ ತಿಂಗಳ ಬೇಸಿಗೆ ಸಮಯದಲ್ಲಿ ಗಿಡ ನೆಡುತ್ತಿದ್ದು, ಮಳೆಗಾಲದಲ್ಲಿ ಸಾಮಾಜಿಕ ಅರಣ್ಯ ಯೋಜನೆಗಳಡಿ ಗಿಡಗಳನ್ನು ನೆಡಿಸುವ ಕೆಲಸ ಮಾಡಿಸಬೇಕೆಂದು ಮನವಿ ಮಾಡುತ್ತಾ, ಮಾನ್ಯ ಸಭಾಪತಿಯವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

ಪ್ರಶ್ನೆ ಸಂಖ್ಯೆಃ 373

(ಉತ್ತರದ ಪ್ರತಿ ಲಗತ್ತಿಸಿದೆ)

**ಶ್ರೀ ಅಲ್ಲಂ ವೀರಭದ್ರಪ್ಪಃ-** ಮಾನ್ಯ ಸಭಾಪತಿಯವರೇ, ಮೊದಲಿನಿಂದಲೂ ಹಂಪಿ ಉತ್ಸವವು ನವೆಂಬರ್ 3, 4 ಮತ್ತು 5 ನೇ ತಾರೀಖುಗಳಂದು ನಡೆಸುವುದು ಸರ್ಕಾರದ ವಿಚಾರವಾಗಿತ್ತು. ಕೆಲವು ಸಂದರ್ಭಗಳಲ್ಲಿ ಮಳೆ ಬಂದಿದೆ ಮತ್ತು ಬರ ಬಂದಿದೆ ಎಂದು ಉತ್ಸವವನ್ನು ಮುಂದಕ್ಕೆ ಹಾಕಿರುವ ನಿದರ್ಶನಗಳು ಉಂಟು. ಆದರೆ ಆ ಭಾಗದ ಜನರ ನಿರೀಕ್ಷೆಯಲ್ಲಿ ನವೆಂಬರ್ 3, 4 ಮತ್ತು 5 ನೇ ತಾರೀಖು ಮಾಡಬೇಕೆಂದು ಇದೆ. ಸರ್ಕಾರವು ಇದುವರೆಗೂ ಇದಕ್ಕೆ ಬಜೆಟ್‌ನಲ್ಲಿ ಹಣವನ್ನು ಘೋಷಣೆ ಮಾಡಿಲ್ಲ. ಮೈಸೂರು ದಸರಾ ಉತ್ಸವಕ್ಕೆ ಹಣ ಹಂಚಿಕೆ ಮಾಡಿದಂತೆ ಹಂಪಿ ಉತ್ಸವಕ್ಕೂ ಹಣ ಘೋಷಣೆ ಮಾಡಬೇಕು. ಅದರ ಜೊತೆಗೆ ಕೇವಲ ಹಂಪಿ ಉತ್ಸವ ಮಾಡುವುದರಿಂದ ಪ್ರವಾಸಿಗರನ್ನು ಆಕರ್ಷಿಸುವುದಕ್ಕೆ ಆಗುವುದಿಲ್ಲ. ಅಲ್ಲಿ ಬಹಳಷ್ಟು ಪ್ರಸಿದ್ಧವಾದ ಗುಡಿಗಳು ಬೆಟ್ಟದ ಮೇಲೆ ಇವೆ. ಕೇಂದ್ರದ ಮಂತ್ರಿಗಳಾದ ಮಾನ್ಯ ಪಿಯೂಷ್ ಗೊಯೆಲ್ ರವರು ಕುಟುಂಬ ಸಮೇತ ಭೇಟಿ ನೀಡಿ ಮೇಲಕ್ಕೆ ನಡೆದುಕೊಂಡು ಹೋಗಿದ್ದಾರೆ. ಅಲ್ಲಿ ropeway ಅಳವಡಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಏಕೆಂದರೆ ಬಹಳಷ್ಟು ಪವಿತ್ರವಾದ ಗುಡಿಗಳು ಇದ್ದು, ropeway ಅಳವಡಿಸುವುದರಿಂದ ಪ್ರವಾಸಿಗರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಕರ್ಷಣೆ ಮಾಡಬಹುದು. It is the ruins of Hampi. After Rome, Hampi is only the place where one can see ruins. ಇಂತಹ biggest ruins ಪ್ರಪಂಚದಲ್ಲಿ ಎಲ್ಲಿಯೂ ಇಲ್ಲ. ಅದಕ್ಕೆ ಪ್ರವಾಸಿಗರಿಗೆ ಅಗತ್ಯವಾದ ಅನುಕೂಲಗಳನ್ನು ಕಲ್ಪಿಸಬೇಕಾಗುತ್ತದೆ. ಕೊನೆಯದಾಗಿ ಬಳ್ಳಾರಿಯಲ್ಲಿ, second largest single rock mountain ಆಗಿರುತ್ತದೆ. ನನ್ನ ದುರ್ದೈವವೆಂದರೆ ನಾನು ಅದನ್ನು ನೋಡುವುದಕ್ಕೆ ಹೋಗಿಲ್ಲ. ಏಕೆಂದರೆ ಅದನ್ನು ಹತ್ತಬೇಕು. ಆದ್ದರಿಂದ ಅಲ್ಲಿಗೆ ಒಂದು ropeway ಅಳವಡಿಸಿದರೆ ಒಳ್ಳೆಯದು. ಇವತ್ತು ಸ್ವಿಡ್ಜರ್‌ಲ್ಯಾಂಡ್‌ನಲ್ಲಿ ಪ್ರತಿಯೊಂದು ಮನೆಗೂ ropeway ಅಳವಡಿಸಿಕೊಂಡಿದ್ದಾರೆ. ಅಲ್ಲಿನ ಪರಿಸರ ಕೆಡಬಾರದು ಎಂಬ ದೃಷ್ಟಿಯಿಂದ ropeway ಅಳವಡಿಸುತ್ತಾರೆ. Ropeway is the easy way of conveyance in Switzerland. ಆದ್ದರಿಂದ ಹಂಪಿಯಂತಹ ಪ್ರವಾಸಿ ಸ್ಥಳದಲ್ಲಿ ropeway ಅಳವಡಿಸಬೇಕೆಂದು ನನ್ನ ಬೇಡಿಕೆಯಾಗಿದೆ.

**ಶ್ರೀ ಪಿ.ಆರ್. ರಮೇಶ್‌:-** ಮಾನ್ಯ ಸಭಾಪತಿಯವರೇ, ಮಾನ್ಯ ಅಲ್ಲಂ ವೀರಭದ್ರಪ್ಪನವರ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ನೀಡಿರುವ ಬಗ್ಗೆ ತಿಳಿಸಿದ್ದು, ನಮಗ್ಯಾರಿಗೂ ಉಚಿತ ಉತ್ತರ ಬಂದಿರುವುದಿಲ್ಲ. ಅವರಿಬ್ಬರು ಮಾತ್ರ ಮಾತನಾಡುವುದಾದರೆ ನಾವೆಲ್ಲರೂ ಹೊರಗೆ ಹೋಗಿರುತ್ತೇವೆ.

**ಸಭಾಪತಿಯವರುಃ-** ಈಗ ಉತ್ತರವನ್ನು ಕೊಡುತ್ತಿದ್ದಾರೆ.

**ಶ್ರೀ ಸಿ.ಟಿ. ರವಿಃ-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿಶ್ವವಿಖ್ಯಾತ ಹಂಪಿ ಉತ್ಸವವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದು, ಸರ್ಕಾರವು ಖಂಡಿತವಾಗಿಯೂ ಗಂಭೀರವಾಗಿ ಪರಿಗಣಿಸಿದೆ. ನಾವು ಮೈಸೂರು ದಸರಾ ಉತ್ಸವ, ಹಂಪಿ ಉತ್ಸವ ಮತ್ತು ಬೆಂಗಳೂರು ಹಬ್ಬವನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸಿಗರನ್ನು ಸೆಳೆಯುವ ದೃಷ್ಟಿಯಿಂದ ಮತ್ತು ನಮ್ಮ ಸಂಸ್ಕೃತಿ ಹಾಗೂ ಪ್ರವಾಸೋದ್ಯಮವನ್ನು ಉತ್ತೇಜಿಸುವ ದೃಷ್ಟಿಯಲ್ಲಿ ಬಹಳ ಗಂಭೀರವಾಗಿ ಪರಿಗಣಿಸಿದ್ದೇವೆ. 1970ರಲ್ಲಿ ಕಮಲಮಹಲ್‌ನಲ್ಲಿ ಸಣ್ಣ ಪ್ರಮಾಣದಲ್ಲಿ ಸಾಂಸ್ಕ್ರತಿಕ ಚಟುವಟಿಕೆ ಪ್ರಾರಂಭವಾಯಿತು. 1982 ರಲ್ಲಿ ಮಾನ್ಯ ಎಂ.ಪಿ. ಪ್ರಕಾಶ್ ರವರ ಉತ್ಸಾಹದಿಂದಾಗಿ ಹಂಪಿ ಉತ್ಸವ ಎಂದು ಸಾಂಸ್ಕೃತಿಕ ಮಟ್ಟದಲ್ಲಿ ಪ್ರಾರಂಭವಾಯಿತು. ನಂತರ ಆಗಾಗ ದಿನಾಂಕಗಳ ಬದಲಾವಣೆಗಳ ಜೊತೆಗೆ, ಕೆಲವೊಮ್ಮೆ ಉತ್ಸವ ನಡೆದು, ಕೆಲವೊಮ್ಮೆ ನಿಂತು ಹಾಗೆಯೇ ಆಚರಿಸಿಕೊಂಡು ಬರಲಾಗುತ್ತಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(186)/06.03.2020/1.00/ಹೆಚ್‌ವಿ-ಕೆಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಪ್ರಾರಂಭದಲ್ಲಿ ನವೆಂಬರ್ ತಿಂಗಳಿನಲ್ಲಿ ಹಂಪಿ ಉತ್ಸವವನ್ನು ಆಚರಣೆ ಮಾಡಲಾಗುತ್ತಿತ್ತು. ಕಳೆದ ಬಾರಿ ಜನವರಿ 10ರಂದು ಈ ಉತ್ಸವವನ್ನು ಆಚರಿಸಲಾಗಿತ್ತು. ಈ ದಿನಾಂಕದಂದು ಕೃಷ್ಣದೇವರಾಯನ ಪಟ್ಟಾಭಿಷೇಕವಾದ ದಿನವೆನ್ನುವ ಮಾಹಿತಿ ದೊರೆತ ಹಿನ್ನೆಲೆಯಲ್ಲಿ, ಅದಕ್ಕೊಂದು ಗೌರವ ಒದಗಿಸಿಕೊಡಬೇಕೆನ್ನುವ ಹಿನ್ನೆಲೆಯಲ್ಲಿ ನಾವು ಅದನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗಬೇಕೆನ್ನುವ ಉದ್ದೇಶವನ್ನು ಹೊಂದಿದ್ದೇವೆ. ಉದಾಹರಣೆಗೆ ಹೇಳಬೇಕಾದರೆ, ದಸರ ಆಚರಣೆಯನ್ನು ಪಂಚಾಂಗದ ಆಧಾರದ ಮೇಲೆ ಇಂತಹದೇ ದಿನಾಂಕದಂದು ಆಚರಿಸಬೇಕೆಂದು ಇದೆ. ಅದೇ ರೀತಿಯಲ್ಲಿ ಇನ್ನು ಮುಂದೆ ಹಂಪಿ ಉತ್ಸವವನ್ನು ಶ್ರೀಕೃಷ್ಣದೇವರಾಯನ ಪಟ್ಟಾಭಿಷೇಕದ ದಿನಾಂಕವನ್ನು ಆಧರಿಸಿ ಆಚರಣೆ ಮಾಡಿದರೆ ನಿರಂತರವಾಗಿ ಆಚರಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ಈ ವರ್ಷ ಜನವರಿ 10, 11 ಮತ್ತು 12ನೇ ದಿನಾಂಕಗಳಂದು ಅಂದರೆ ನಿರಂತರವಾಗಿ ಮೂರು ದಿನಗಳ ಕಾಲ ಬಹಳ ಚೆನ್ನಾಗಿ ಆಚರಿಸಿದ್ದೇವೆ. ಇದಕ್ಕೆ ಅಗತ್ಯವಿರುವ ಅನುದಾನವನ್ನು ಮಾನ್ಯ ಮುಖ್ಯಮಂತ್ರಿಗಳ ಬಳಿ ಕೇಳಿದ್ದೇನೆ. ಕಳೆದ ಬಾರಿ ಹಂಪಿ ಉತ್ಸವಕ್ಕೆ 5 ಕೋಟಿ ರೂಪಾಯಿಗಳ ಅನುದಾನವನ್ನು ನಿಗದಿಪಡಿಸಿ ಕೊಟ್ಟಿದ್ದೇವೆ. ಮೂರು ರಾಷ್ಟ್ರೀಯ ಉತ್ಸವಗಳಲ್ಲದೇ, ಯಾವಯಾವ ಸಂಸ್ಥಾನಗಳ ಮಹಾರಾಜರುಗಳು ಜನಪರ ಆಡಳಿತವನ್ನು ಕೊಟ್ಟಿದ್ದರು, ಉದಾಹರಣೆಗೆ ಬಾದಾಮಿ ಚಾಲುಕ್ಯರಿರಬಹುದು, ಕಲ್ಯಾಣ ಚಾಲುಕ್ಯರು, ಕದಂಬರು, ಚಿತ್ರದುರ್ಗದ ಮದಕರಿ ನಾಯಕನಿರಬಹುದು, ಇವರುಗಳ ಸಾಧನೆಗಳನ್ನು ಆಧರಿಸಿ ರಾಜ್ಯ ಮಟ್ಟದ ಉತ್ಸವವನ್ನು ಆಚರಿಸಬೇಕೆನ್ನುವ ಚಿಂತನೆ ಇದೆ. ಅದಕ್ಕಾಗಿ ಚಿಂತಕರೊಂದಿಗೆ ಸಮಾಲೋಚನೆ ನಡೆಸಿ ಇಡೀ ವಾರ್ಷಿಕ ದಿನಾಂಕವನ್ನು ಮೊದಲೇ ನಿಗದಿಪಡಿಸುತ್ತೇವೆ. ಅಗತ್ಯವಿರುವ ಅನುದಾನವನ್ನು ಸಹ ಕೊಡುತ್ತೇವೆ. ಮಾನ್ಯ ಸದಸ್ಯರು ರೋಮ್ ನಗರದ ಉಲ್ಲೇಖ ಮಾಡಿದರು. ರೋಮ್‌ಗಿಂತ ಮೀರಿರುವ ರೀತಿಯಲ್ಲಿ ಇದನ್ನು ಕೈಗೊಳ್ಳಲಾಗುತ್ತದೆ. ಇದು ನಮ್ಮ ಹೆಮ್ಮೆಯೂ ಹೌದು, ದುರಂತವೂ ಹೌದು. ಇಂತಹ ದುರಂತಗಳು ಮುಂದೆ ಸಂಭವಿಸದಂತೆ ಎಚ್ಚರಿಕೆ ವಹಿಸಿ ಇದನ್ನು ಹೆಮ್ಮೆಯ ಉತ್ಸವವನ್ನಾಗಿ ಆಚರಿಸುವುದಕ್ಕೆ ನಮ್ಮ ಸರ್ಕಾರ ಕಟಿಬದ್ಧವಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಅಲ್ಲಂ ವೀರಭದ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಹಗ್ಗದ ಸೇತುವೆ (ರೋಪ್-ವೇ) ಮಾಡುವ ಬಗ್ಗೆ ಮಾನ್ಯ ಸಚಿವರು ಉಲ್ಲೇಖ ಮಾಡಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಟಿ.ರವಿಃ-** ಸನ್ಮಾನ್ಯ ಸಭಾಪತಿಯವರೇ, ಹಂಪೆ ಎ.ಎಸ್.ಐ. ಮತ್ತು ವರ್ಡ್ ಎರಿಟೇಜ್ ಸೆಂಟರ್‌ನ ಅಡಿಯಲ್ಲಿ ಬರುತ್ತದೆ. ಯಾವುದೇ ಕೆಲಸವನ್ನು ಮಾಡಬೇಕಾದರೂ ಅದರ ಪೂರ್ವಾನುಮತಿಯ ಅಗತ್ಯವಿದೆ. ಪೂರ್ವಾನುಮತಿ ಸಿಕ್ಕಿದರೆ ಈ ಬಗ್ಗೆ ನಾವು ಯೋಜನೆ ಮಾಡಬಹುದಾಗಿದೆ. ಎಲ್ಲ ಹಣವನ್ನು ಸರ್ಕಾರವೇ ವೆಚ್ಚ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ವಿಶ್ವ ಪ್ರವಾಸೋದ್ಯಮ ಹೂಡಿಕೆದಾರರ ಸಮ್ಮೇಳನವನ್ನು ಕರೆಯುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವಂತಹ ಆಯವ್ಯಯದಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಎ.ಎಸ್.ಐ. ಮತ್ತು ವರ್ಡ್ ಎರಿಟೇಜ್ ಸೆಂಟರ್‌ನ ಪೂರ್ವಾನುಮತಿ ಸಿಕ್ಕಿದರೆ ಪ್ರವಾಸೋದ್ಯಮಕ್ಕೆ ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಸ್ಮಾರಕಗಳ ಸಂರಕ್ಷಣೆ ಮತ್ತು ಅವುಗಳ ಪುನರುತ್ಥಾನದ ಅವಶ್ಯಕತೆ ಇದೆ. ಇದಕ್ಕೊಂದು ದೊಡ್ಡ ಮೊತ್ತದ ಹಣದ ಅವಶ್ಯಕತೆಯಿದೆ. ಕೇಂದ್ರ ಸರ್ಕಾರಕ್ಕೂ ಇದರ ಬಗ್ಗೆ ಪ್ರಸ್ತಾವನೆಯನ್ನು ಕಳುಹಿಸಿಕೊಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ-** ಸನ್ಮಾನ್ಯ ಸಭಾಪತಿಯವರೇ, ಬಳ್ಳಾರಿ ಕೋಟೆಯ ಬಗ್ಗೆ ಮಾನ್ಯ ಅಲ್ಲಂ ವೀರಭದ್ರಪ್ಪನವರು ಪ್ರಶ್ನೆ ಹೇಳಿದ್ದರು ಅದಕ್ಕೆ ಮಾನ್ಯ ಸಚಿವರು ಉತ್ತರವನ್ನೇ ನೀಡಿಲ್ಲ.

**ಶ್ರೀ ಸಿ.ಟಿ.ರವಿಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನೀಡಿರುವ ಲಿಖಿತ ರೂಪದ ಪ್ರಶ್ನೆಯಲ್ಲಿ ಆ ಬಗ್ಗೆ ಪ್ರಸ್ತಾಪ ಮಾಡಿಲ್ಲ. ನಮ್ಮಲ್ಲಿ ರಾಯಚೂರು, ಮುತ್ಕಲ್ಲು, ಬಳ್ಳಾರಿ, ಕಲಬುರ್ಗಿ, ಬೀದರ್, ಮೈಸೂರು, ಸಿರಾ, ಮಧುಗಿರಿ ಮತ್ತು ಶ್ರೀರಂಗಪಟ್ಟಣ ಹೀಗೆ ಅನೇಕ ಕೋಟೆಗಳು ಇವೆ.

ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಆನೆಗುಂದಿಯ ಹನುಮನುದಯಿಸಿದ ನಾಡು ಅಂಜನಾದ್ರಿಗೆ ಆಯವ್ಯಯದಲ್ಲಿ 20 ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನು ನೀಡಲಾಗಿದೆ.

**ಶ್ರೀ ಪಿ.ಆರ್.ರಮೇಶ್ಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ 'ಹಂಪಿ ಉತ್ಸವ ಮತ್ತು ಬೆಂಗಳೂರು ಹಬ್ಬಗಳಿಗೆ ಅನುದಾನವನ್ನು ಒದಗಿಸಲಾಗುವುದು' ಎಂದು ಹೇಳಿದ್ದಾರೆ. ಸುಮಾರು 400 ವರ್ಷಗಳ ಹಿಂದಿನ ಬೆಂಗಳೂರು ಇತಿಹಾಸವನ್ನು ನೋಡಿದರೆ, ಮೈಸೂರಿನಲ್ಲಿ ದಸರಾ ಉತ್ಸವ ಪ್ರಾರಂಭವಾಗುವುದಕ್ಕೂ ಮೊದಲು ಬೆಂಗಳೂರಿನಲ್ಲಿ ಕರಗ ಉತ್ಸವವನ್ನು ಆಚರಿಸಲಾಗುತ್ತಿದೆ. ಬ್ರಿಟಿಷರ ಕಾಲದ ಗೆಜೆಟ್ ನೋಟಿಫಿಕೇಶನ್‌ಗಳನ್ನು ನೋಡಿದಾಗ, ಸುಮಾರು 5 ಲಕ್ಷ ಜನರು ಈ ಕರಗ ಉತ್ಸವದಲ್ಲಿ ಸೇರಿರುವ ದಾಖಲೆ ಇದೆ. ಬ್ರಿಟಿಷರಿರಬಹುದು ಅಥವಾ ಅಂದಿನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜರುಗಳಿರಬಹುದು ಈ ಕರಗ ಮಹೋತ್ಸವಕ್ಕೆ ಮೆರಗು ತರುವಂತಹ ಕ್ರಮಗಳನ್ನು ತೆಗೆದುಕೊಂಡಿದ್ದರು. ತದನಂತರ ಬೆಂಗಳೂರು ಮಹಾನಗರ ಪಾಲಿಕೆಯವರು 1964ರಿಂದ ನಾಡಪ್ರಭು ಕೆಂಪೇಗೌಡ ಉತ್ಸವವನ್ನು ಆಚರಿಸುವುದಕ್ಕೆ ಪ್ರಾರಂಭಿಸಿದರು. ಕರಗ ಉತ್ಸವ ನಡೆಯುವಂತಹ ಸಂದರ್ಭದಲ್ಲಿಯೇ ಕೆಂಪೇಗೌಡ ಉತ್ಸವವನ್ನು ಆಚರಿಸಿಕೊಂಡು ಬಂದಿದ್ದರು. ಕಳೆದ 10-15 ವರ್ಷಗಳಲ್ಲಿ ಚುನಾವಣೆಗಳ ಕಾರಣದಿಂದಾಗಿ ಕೆಲವೊಂದು ಮಾರ್ಪಾಡುಗಳಾಗಿವೆ. ಕರಗ ಉತ್ಸವವನ್ನು ಆಧರಿಸಿ ಬೆಂಗಳೂರು ಹಬ್ಬವನ್ನು ಆಚರಣೆ ಮಾಡಿದರೆ, ಬೆಂಗಳೂರು ಇತಿಹಾಸವನ್ನು ಉಳಿಸಿದಂತಾಗುತ್ತದೆ. ಎರಡನ್ನೂ ಬೇರಬೇರೆ ದಿನಾಂಕಗಳಂದು ಆಚರಿಸಿದರೆ ನೂರಾರು ವರ್ಷಗಳ ಇತಿಹಾಸ ಹಾಳಾಗುತ್ತದೆ. ಇತಿಹಾಸ ಮತ್ತು ದಾಖಲೆಗಳ ಆಧಾರದ ಮೇಲೆ ಕರಗ ಉತ್ಸವವನ್ನು ವಿಶೇಷ ಉತ್ಸವವನ್ನಾಗಿ ಮಾಡಬೇಕೆನ್ನುವುದು ನನ್ನ ಮನವಿಯಾಗಿದೆ.

**ಶ್ರೀ ಸಿ.ಟಿ.ರವಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆಯನ್ನು ನೀಡಿದ್ದಾರೆ. ‘ಬೆಂಗಳೂರು ಹಬ್ಬ’ ವನ್ನು ಆಚರಿಸುವುದು ನಮ್ಮ ಸರ್ಕಾರದ ಚಿಂತನೆಯೆಂದು ನಾನು ಹೇಳಿದ್ದೇನೆ. ಈ ಹಿಂದೆ ಇದನ್ನು ಆಚರಿಸಿರಲಿಲ್ಲ. Business Model ಆಗಿ ನಮ್ಮ ಸಂಸ್ಕೃತಿಯನ್ನು ಪರಿಚಯಿಸುವುದಕ್ಕೆ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಳವಡಿಸಿಕೊಂಡು ಬೆಂಗಳೂರು ಹಬ್ಬವನ್ನು ಆಚರಿಸಬೇಕೆನ್ನುವುದು ನಮ್ಮ ಚಿಂತನೆಯಾಗಿದೆ. ಈ ಬಗ್ಗೆ ಸಮಗ್ರ ರೂಪುರೇಷೆಯನ್ನು ರೂಪಿಸುವ ಸಂದರ್ಭದಲ್ಲಿ ಮಾನ್ಯ ಸದಸ್ಯರು ನೀಡಿರುವ ಸಲಹೆಗಳನ್ನು ಪರಿಗಣಿಸಲಾಗುವುದು.

**ಸಭಾಪತಿಯವರು:-** ಡಾ||ಜಯಮಾಲರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:47(470) ಬೇರೆ ಇಲಾಖೆಗೆ ವರ್ಗಾವಣೆಗೊಂಡಿದೆ. ಮುಂದಿನ ಪ್ರಶ್ನೆ ಮಾನ್ಯ ಪಿ.ಆರ್. ರಮೇಶ್ ಅವರದು.

**ಶ್ರೀ ಪಿ.ಆರ್.ರಮೇಶ್:-** ಸನ್ಮಾನ್ಯ ಸಭಾಪತಿಯವರೇ, ತಾವು ನನ್ನ ಹೆಸರನ್ನು ಕರೆಯುವಂತಹ ಸಂದರ್ಭದಲ್ಲಿ ಉತ್ತರದ ಪ್ರತಿ ನನ್ನ ಕೈಗೆ ಬಂತು. ನಾನು ಉತ್ತರವನ್ನು ಓದಿಯೇ ಇಲ್ಲ.

**ಸಭಾಪತಿಯವರು:-** ಹಾಗಾದರೆ, ತಮ್ಮ ಪ್ರಶ್ನೆಯನ್ನು ಡಾ||ವೈ.ಎ.ನಾರಾಯಣಸ್ವಾಮಿಯವರ ಪ್ರಶ್ನೆಯ ನಂತರ ತೆಗೆದುಕೊಳ್ಳಲಾಗುವುದು.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:454**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ವೈ.ಎ.ನಾರಾಯಣಸ್ವಾಮಿಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳಾಗಿರುವ ಸಾರಿಗೆ ಸಚಿವರು ಬಹಳ ವಿವರವಾಗಿ ಉತ್ತರವನ್ನು ನೀಡಿದ್ದಾರೆ. ಆದರೆ, ಈ ಉತ್ತರ ನನಗೆ ಸಮಾಧಾನವನ್ನುಂಟು ಮಾಡಿಲ್ಲ. 'ಮಾಧ್ಯಮಗಳ ವರದಿಯ ಪ್ರಕಾರ ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಬಿ.ಎಂ.ಟಿ.ಸಿ. ಬಸ್ ಅಪಘಾತಗಳಿಗೆ ಹಳೇ ಬಸ್‌ಗಳ ತಾಂತ್ರಿಕ ದೋಷಗಳೇ ಕಾರಣ ಎನ್ನಲಾಗುತ್ತಿರುವುದು ನಿಜವೇ' ಎನ್ನುವ ನನ್ನ ಪ್ರಶ್ನೆಗೆ 'ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 2019-20ನೇ ಸಾಲಿನಲ್ಲಿ ಒಟ್ಟು 196 ಅಪಘಾತ ಪ್ರಕರಣಗಳು ದಾಖಲಾಗಿದ್ದು, ಇವುಗಳಲ್ಲಿ ಒಂದು ಅಪಘಾತವು ತಾಂತ್ರಿಕ ದೋಷದಿಂದ ಉಂಟಾಗಿರುತ್ತದೆ' ಎನ್ನುವ ಉತ್ತರವನ್ನು ನೀಡಿದ್ದಾರೆ. ಸಂಸ್ಥೆಯ ಚಾಲಕರು ಜವಾಬ್ದಾರರಾಗಿರುವ ಅಪಘಾತ ಪ್ರಕರಣಗಳು 100, ಸಂಸ್ಥೆಯ ವಾಹನಗಳ ತಾಂತ್ರಿಕ ದೋಷದಿಂದ ಉಂಟಾದ ಅಪಘಾತ ಪ್ರಕರಣ 01, ಸಂಸ್ಥೆಯ ಚಾಲಕರು ಮತ್ತು ಇತರೆ ರಸ್ತೆ ಬಳಕೆದಾರರೂ ಸಹ ಅಪಘಾತಗಳಿಗೆ ಜವಾಬ್ದಾರರಾಗಿರುವ ಪ್ರಕರಣಗಳ ಸಂಖ್ಯೆ 60 ಆಗಿದೆ. ಅದೇ ರೀತಿಯಲ್ಲಿ ಸಂಸ್ಥೆಯ ಜವಾಬ್ದಾರರಲ್ಲದ ಪ್ರಕರಣಗಳ ಸಂಖ್ಯೆ 35 ಆಗಿವೆ. ಜನವರಿ 6ನೇ ತಾರೀಖಿನಂದು 'ಬ್ರೇಕ್ ಇಲ್ಲದ ಬಿ.ಎಂ.ಟಿ.ಸಿ. ಬಸ್‌ಗೆ ಇಬ್ಬರು ಬಲಿ' ಎನ್ನುವ ಪತ್ರಿಕಾ ವರದಿ ಪ್ರಕಟವಾಗಿದೆ. ಪೊಲೀಸಿನವರು ನೀಡಿರುವ ಪ್ರಾಥಮಿಕ ವರದಿಯಲ್ಲಿ 'ಇದಕ್ಕೆ ಬಸ್‌ನಲ್ಲಿರುವ ತಾಂತ್ರಿಕ ದೋಷಗಳೇ ಕಾರಣ' ಎಂದು ಹೇಳುತ್ತಾರೆ. ಬಿ.ಎಂ.ಟಿ.ಸಿ. ಬಸ್‌ನಲ್ಲಿ ಒಂದು ದಿನಕ್ಕೆ 50 ಲಕ್ಷ ಜನರು ಓಡಾಡುತ್ತಾರೆ. ಮಾನ್ಯ ಸಚಿವರು ಕೊಟ್ಟಿರುವ ಉತ್ತರದ ಬಗ್ಗೆ ಅವರು ಅಧಿಕಾರಿಗಳ ಜೊತೆಗೆ ಮತ್ತೊಮ್ಮೆ ಚರ್ಚಿಸಬೇಕೆನ್ನುವುದು ನನ್ನ ಮನವಿಯಾಗಿದೆ.

ಬಸ್‌ಗಳನ್ನು ರಿಪೇರಿ ಮಾಡುವಾಗ ಅದಕ್ಕೆ ಅಗತ್ಯವಿರುವ ಸ್ಪೇರ್ ಪಾರ್ಟ್‌ಗಳನ್ನು ಸಿದ್ಧಯ್ಯ ರೋಡ್ ಮತ್ತು ಶಿವಾಜಿನಗರಗಳಲ್ಲಿ ಬಣ್ಣ ಹೊಡೆದಿರುವ ಹಳೆ ಸ್ಪೇರ್ ಪಾರ್ಟ್‌ಗಳನ್ನು ತಂದು ಅವರುಗಳು ಬಿಲ್ ಮಾಡಿಕೊಳ್ಳುತ್ತಿದ್ದಾರೆ. ಗುಣಮಟ್ಟವಿಲ್ಲದ ಸ್ಪೇರ್ ಪಾರ್ಟ್‌ಗಳನ್ನು ಉಪಯೋಗಿಸಿ ಬಸ್‌ಗಳನ್ನು ರಿಪೇರಿ ಮಾಡುತ್ತಿರುವುದರಿಂದ ಆಗುತ್ತಿರುವ ತೊಂದರೆಯ ಬಗ್ಗೆ ಪತ್ರಿಕಾ ಮಾಧ್ಯಮದಲ್ಲಿ ದೊಡ್ಡದಾಗಿ ಚರ್ಚೆಯಾಗಿತ್ತು. ಜನರು ಆತಂಕದಲ್ಲಿದ್ದಾರೆ. ನನ್ನ ಮೂರನೆಯ ಪ್ರಶ್ನೆಗೆ ಮಾನ್ಯ ಸಚಿವರು, '2019-20ನೇ ಸಾಲಿನಲ್ಲಿ 347 ಎಲೆಕ್ಟ್ರಿಕಲ್ ಬಸ್‌ಗಳನ್ನು ತರುತ್ತಿದ್ದೇವೆ' ಎನ್ನುವ ಉತ್ತರವನ್ನು ನೀಡಿದ್ದಾರೆ. ಬಿ.ಎಂ.ಟಿ.ಸಿ.ಯಲ್ಲಿ ಕೆಲಸ ಮಾಡುತ್ತಿರುವ ಚಾಲಕರ ಮೇಲೆ ಬಹಳ ಒತ್ತಡವಿದೆ. ಒಬ್ಬ ಡ್ರೈವರ್ ತನ್ನ ಡಿಪೋ ಮ್ಯಾನೇಜರ್‌ಗೆ, 'ಸಾರ್, ಆ ಬಸ್‌ನ ಬ್ರೇಕ್ ಸರಿಯಿಲ್ಲ.' ಎಂದು ಹೇಳಿದರೆ, ಆ ಅಧಿಕಾರಿ, 'ರ್ರೀ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀವು ತೆಗೆದುಕೊಂಡು ಹೋಗ್ರೀ, ನಾನು ಹೇಳಿದ ಕೆಲಸವನ್ನು ನೀವು ಮಾಡಬೇಕು. ಇಲ್ಲದಿದ್ದರೆ ನಿಮಗೆ ಡ್ಯೂಟಿ ಕೊಡುವುದಿಲ್ಲ' ಎನ್ನುವ ಮಾತನ್ನು ಹೇಳುತ್ತಾನೆ. ಒಂದು ಬಸ್ 9 ಲಕ್ಷ ಕಿಲೋಮೀಟರ್ ಓಡುತ್ತದೆ. 'ಸುಮಾರು 84 ಬಸ್‌ಗಳನ್ನು ಮೀಟರ್ ಕಿತ್ತಾಕಿ ಓಡಿಸಲಾಗುತ್ತಿದೆ' ಎನ್ನುವ ಪತ್ರಿಕಾ ವರದಿಯನ್ನು ಎಲ್ಲರೂ ಓದಿದ್ದಾರೆ. ಇದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಬೇಕು. ಸ್ಪೇರ್ ಪಾರ್ಟ್ ಹಿಂದೆ ಒಂದು ದೊಡ್ಡ ಮಾಫಿಯಾ ಕೆಲಸ ಮಾಡುತ್ತಿದೆ. ಬೇರಿಂಗ್ ಮತ್ತು ಲ್ಯೂಬ್ರಿಕೆಂಟ್ ಆಯಿಲ್ ಸಹ ನಕಲಿ ಎನ್ನುವುದು ವರದಿಯಾಗಿದೆ. ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

(ಮುಂದುವರಿದಿದೆ)

(187) 6.3.2020 1.10 ಪಿಕೆ:ಜಿಆರ್

(ಸಭಾಪತಿಗಳ ಉಪಸ್ಥಿತಿ)

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಹೆಚ್ಚು ಓಡಿರುವ ಬಸ್ಸುಗಳನ್ನು ಬಳಕೆ ಮಾಡುವ ಕಾರಣದಿಂದ ಅಪಘಾತಗಳಾಗುತ್ತಿವೆ ಎನ್ನುವುದನ್ನು ಮಾನ್ಯ ಸದಸ್ಯರು ಹೇಳಿದರು. ಈ ರೀತಿಯ ಅಪಘಾತದ ಪ್ರಕರಣ ಕಂಡುಬಂದಿರುವುದು ಕೇವಲ ಒಂದು ಮಾತ್ರ ಎನ್ನುವುದು ನಮ್ಮ ತನಿಖೆಯಿಂದ ಗೊತ್ತಾಗಿದೆ. ಮಾನ್ಯ ಸದಸ್ಯರು, ಡೂಪ್ಲಿಕೇಟ್ ಸ್ಪೇರ್ ಪಾರ್ಟ್‌ಗಳನ್ನು ಅಳವಡಿಸುತ್ತಿದ್ದಾರೆ, ಆ ಕಾರಣದಿಂದ ಅಪಘಾತಗಳಾಗುತ್ತವೆ ಎನ್ನುವ ಮಾತನ್ನು ಹೇಳಿದರು. ಬಹುಶಃ ಅವರು ಪತ್ರಿಕೆಗಳಲ್ಲಿ ಬರುವ ಲೇಖನಗಳನ್ನು ನೋಡಿ ಹೇಳುತ್ತಿರಬಹುದು ಎಂದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಇದರ ಬಗ್ಗೆ ನಾನು ಗಂಭೀರವಾಗಿ ಚಿಂತನೆ ಮಾಡುತ್ತೇನೆ ಮತ್ತು ಪರಿಶೀಲನೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ. ಅವರ ಹತ್ತಿರ ನಿಖರವಾದ ದಾಖಲಾತಿಗಳಿದ್ದು, ಅದನ್ನು ಕೊಟ್ಟರೆ ತಕ್ಷಣ ಕಾನೂನು ರೀತಿ ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಹಿಂಜರಿಯುವುದಿಲ್ಲ ಎಂದು ಹೇಳಬಯಸುತ್ತೇನೆ. ನಿಖರವಾದ ದಾಖಲೆಗಳಿದ್ದರೆ ಮಾನ್ಯ ಸದಸ್ಯರು ಕೊಡಬೇಕು. ಆದರೆ, ಹಳೆಯ ಬಸ್ಸುಗಳಿಂದಲೇ ಅಪಘಾತಗಳಾಗುತ್ತಿವೆ ಎಂದು ಹೇಳುವುದನ್ನು ಮೇಲ್ನೋಟಕ್ಕೆ ಒಪ್ಪಿಕೊಳ್ಳಲು ಆಗುವುದಿಲ್ಲ. ಏಕೆಂದರೆ, ವಯಸ್ಸಾದವರು ಜಾಗರೂಕತೆಯಿಂದ ನಡೆದುಕೊಳ್ಳುತ್ತಾರೆ; ವಯಸ್ಸಿದ್ದವನು ವೇಗವಾಗಿ ಹೋಗಿ ಎಡವಿ ಬೀಳುವ ಸಂದರ್ಭಗಳು ಇರುತ್ತವೆ. ಹಳೆಯ ಬಸ್ಸುಗಳನ್ನು ಓಡಿಸುವ ಚಾಲಕರೂ ಕೂಡ ಬಹಳ ಆಲೋಚನೆ ಮಾಡಿ ಓಡಿಸುತ್ತಾರೆ. ಈಗಿರುವ ಬಸ್ಸುಗಳು ಸಾಕಷ್ಟು ಹಳೆಯದಾಗಿವೆ, ಹೊಸ ಬಸ್ಸುಗಳನ್ನು ಖರೀದಿ ಮಾಡಲು ಚಿಂತನೆ ಮಾಡಿ ಎಂದು ಹೇಳಿದ್ದಾರೆ. ಈಗಾಗಲೇ ನಾವು 1200 ಬಸ್ಸುಗಳನ್ನು ಖರೀದಿ ಮಾಡಿದ್ದೇವೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಗಳೇ, ವಯಸ್ಸಿಗೂ ಮತ್ತು ಗಾಡಿ ಕಂಡೀಷನ್‌ಗೂ ಬಹಳ ವ್ಯತ್ಯಾಸ ಇರುತ್ತದೆ. ಗಾಡಿ ಕಂಡೀಷನ್ ಚೆನ್ನಾಗಿಲ್ಲದೇ ಚಿಕ್ಕ ವಯಸ್ಸಿನವರು ಓಡಿಸಿದರೂ ಅಪಘಾತಗಳಾಗಬಹುದು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ರೇವಣ್ಣನವರು ಇನ್ನೊಂದು 10 ವರ್ಷವಾದ ಮೇಲೆ ವಿಧಾನಸೌಧಕ್ಕೆ ಬರುವಾಗ ಒಂದು ಬಡಿಗೆ ಇಟ್ಟುಕೊಂಡೇ ನಡೆದು ಬರುತ್ತಾರೆ. ಏಕೆಂದರೆ, ನಾನೆಲ್ಲಿ ಎಡವಿ ಬೀಳುತ್ತೇನೆಯೋ, ಜೋಲಿ ಹೊಡೆಯುತ್ತೇನೆಯೋ ಎನ್ನುವ ಭಯ ಇರುತ್ತದೆ. ಅದೇ ರೀತಿ, ಹಳೆಯ ಬಸ್ಸುಗಳನ್ನು ಚಾಲಕರು ಹುಷಾರಾಗಿಯೇ ಓಡಿಸುತ್ತಾರೆ. ಮಾನ್ಯ ಸದಸ್ಯರಾದ ವೈ.ಎ.ನಾರಾಯಣಸ್ವಾಮಿಯವರು ನೀಡಿರುವ ಇತರ ಸಲಹೆಗಳನ್ನು ನಾನು ಪರಿಗಣಿಸುತ್ತೇನೆ ಮತ್ತು ಕೂಲಂಕಷವಾಗಿ ಪರಿಶೀಲನೆ ಮಾಡುತ್ತೇನೆ.

**ಡಾ॥ ವೈ.ಎ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಳೆಯ ಬಸ್ಸುಗಳನ್ನು phase out ಮಾಡುವುದಕ್ಕೆ ಇಲಾಖೆ ಅನುಸರಿಸುವ ಮಾನದಂಡಗಳೇನು? ಒಂದು ಬಸ್ಸು ಎಷ್ಟು ವರ್ಷ ಓಡಿಸಬೇಕು ಎಂದು ಒಂದು ಸೀಮಿತ ಅವಧಿ ಇರುತ್ತದೆ. ಹಳೆಯ ಬಸ್ಸುಗಳನ್ನು ಓಡಿಸುವುದಕ್ಕೆ ಏನು ಕಾರಣ? ಇಲಾಖೆಯಲ್ಲಿ ಹಣವಿಲ್ಲವೇ? ಹೊಸ ಬಸ್ಸುಗಳನ್ನು ಖರೀದಿಸಲು ಸಮಸ್ಯೆ ಇದೆಯೇ ದಯವಿಟ್ಟು ತಿಳಿಸಬೇಕು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಈ ಕುರಿತು ಮಾಹಿತಿ ಕೊಡಲು ನಿಗದಿತ ಸಮಯ ಕೊಟ್ಟರೆ ಸುವಿಸ್ತಾರವಾಗಿ ಚರ್ಚೆ ಮಾಡಲು ಸಾಧ್ಯವಾಗುತ್ತದೆ. ನಮ್ಮ 4 ನಿಗಮಗಳಲ್ಲಿ ಸ್ವಲ್ಪ ಹಣಕಾಸಿನ ತೊಂದರೆ ಇರುವುದರಿಂದ ನಾವು ಹೆಚ್ಚು ಬಸ್ಸುಗಳನ್ನು ಖರೀದಿ ಮಾಡುವುದಕ್ಕೆ ಆಗಲಿಲ್ಲ. ಆದರೆ ಈಗಾಗಲೇ 1200 ಬಸ್ಸುಗಳನ್ನು ಖರೀದಿಸುವ ಪ್ರಕ್ರಿಯೆ ಪ್ರಾರಂಭ ಮಾಡಿದ್ದೇವೆ. ನಿನ್ನೆ ಬಜೆಟ್‌ನಲ್ಲೂ ಬಿಎಂಟಿಸಿ ಒಳಗೊಂಡಂತೆ ನಮ್ಮ 4 ನಿಗಮಗಳಲ್ಲಿ ಸುಮಾರು 4000 ಬಸ್ಸುಗಳನ್ನು ಖರೀದಿ ಮಾಡುವ ಸಂಬಂಧ ಘೋಷಣೆ ಮಾಡಿದ್ದೇವೆ. ಮುಂದಿನ ದಿನಮಾನಗಳಲ್ಲಿ ಮಾನ್ಯ ಸದಸ್ಯರ ಆಸೆ ಈಡೇರುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:-** ಹಿಂದಿನ 2 ಬಜೆಟ್‌ಗಳಲ್ಲಿ 3 ಸಾವಿರ ಬಸ್ಸುಗಳನ್ನು ಖರೀದಿ ಮಾಡಲು ಏನು ಅಪ್ರೂವಲ್ ಕೊಡಲಾಗಿತ್ತೋ ಅದುಬಿಟ್ಟು ಮತ್ತೆ 2 ಸಾವಿರ ಬಸ್ಸುಗಳನ್ನು ಖರೀದಿ ಮಾಡಲಾಗುತ್ತಿದೆಯೇ ಅಥವಾ ಹಿಂದೆ ಖರೀದಿಗೆ ಅಪ್ರೂವಲ್ ಕೊಟ್ಟಿದ್ದ ಬಸ್ಸುಗಳನ್ನು ತರಿಸುತ್ತಿದ್ದೀರಾ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಬಹುಶಃ ಈ ಕುರಿತು ಮಾನ್ಯ ರೇವಣ್ಣನವರಿಗೆ ಮಾಹಿತಿ ಇದೆ ಎಂದು ಭಾವಿಸುತ್ತೇನೆ. ಈಗ ನಮ್ಮ ದೇಶದಲ್ಲಿ ಬಿಎಸ್-IV ಇದೆ. ಅದು ಮಾರ್ಚ್ 31ಕ್ಕೆ ಮುಗಿದು ಏಪ್ರಿಲ್ 1ನೇ ದಿನಾಂಕದ ನಂತರ ಬಿಎಸ್- ಗಿಖ ಬರುತ್ತದೆ. ನಾವು 3 ಸಾವಿರ ಬಸ್ಸುಗಳನ್ನು ತೆಗೆದುಕೊಳ್ಳಬೇಕು ಎನ್ನುವ ಚಿಂತನೆ ಮಾಡಿದ್ದೇವೆ. ಆದರೆ, ಟಾಟಾ, ಲೇಲೆಂಡ್ ಅಥವಾ ವೋಲ್ವೋ ಈ ಬಸ್ಸು ಕಂಪನಿಗಳು, 31ನೇ ಮಾರ್ಚ್ ಒಳಗೆ 1200 ಬಸ್ಸುಗಳನ್ನು ಕೊಡಲು ಸಾಧ್ಯವಾಗುತ್ತದೆ; ನೀವು ಹೆಚ್ಚು ಬಸ್ಸುಗಳಿಗೆ ಆರ್ಡರ್ ಮಾಡಿದರೂ ಕೂಡ ಸದರಿ ಅವಧಿಯಲ್ಲಿ ಬಸ್ಸುಗಳ ಉತ್ಪಾದನೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಹಾಗಾಗಿ ನಾವು 1200 ಬಸ್ಸುಗಳನ್ನು ಮಾತ್ರ ತೆಗೆದುಕೊಂಡಿದ್ದೇವೆ. ಬಿಎಸ್- ಗಿಖ ಅನ್ನು ನಾವು ಮುಂದಿನ ಏಪ್ರಿಲ್ ನಂತರದಲ್ಲಿ ಪ್ರಕ್ರಿಯೆಗಳನ್ನು ಪ್ರಾರಂಭ ಮಾಡುತ್ತೇವೆ.

**ಶ್ರೀ ಹೆಚ್.ಎಂ.ರೇವಣ್ಣ:-** ನನ್ನದೊಂದು ಸಲಹೆ ಇದೆ. ಬಸ್ಸುಗಳನ್ನು ಖರೀದಿ ಮಾಡುವಾಗ ವೋಲ್ವೋ ಬಸ್ಸುಗಳನ್ನು ಖಂಡಿತ ತೆಗೆದುಕೊಳ್ಳಬೇಡಿ, ಅವು ಬಿಳಿ ಆನೆಗಳಾಗಿಬಿಟ್ಟಿವೆ. ನಿಂತು ಹೋಗಿರುವ ಬಸ್ಸುಗಳಲ್ಲಿ ಹೆಚ್ಚು ವೋಲ್ವೋ ಬಸ್ಸುಗಳೇ ಇವೆ. ಸದರಿ ಕಂಪನಿಯ ಅಗ್ರಿಮೆಂಟ್‌ನಲ್ಲಿ ಏನು ರಿಪೇರಿ ಬಂದರೆ ಅವರಿಗೆ ವಹಿಸಬೇಕು ಎಂದಿದ್ದೆಯೋ ಇದರಿಂದ ತುಂಬಾ ಲಾಸ್ ಆಗುತ್ತಿದೆ. ಇನ್ನು ಮುಂದೆ ವೋಲ್ವೋ ಬಸ್ಸುಗಳನ್ನು ಬಿಟ್ಟು ಬೇರೆ ಕಂಪನಿಯ ಬಸ್ಸುಗಳನ್ನು ತೆಗೆದುಕೊಳ್ಳಬೇಕು. ಏರ್‌ಪೋರ್ಟ್ ಅಥವಾ ಇನ್ನಿತರ ಅವಶ್ಯಕತೆ ಇರುವ ಕಡೆಗಳಲ್ಲಿ ಓಡಿಸಲು ಮಾತ್ರ ವೋಲೋ ಬಸ್ಸುಗಳನ್ನು ಖರೀದಿ ಮಾಡಬೇಕು ಎನ್ನುವುದು ನನ್ನ ಸಲಹೆಯಾಗಿದೆ.

**ಡಾ:ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರಿ ಬಸ್ಸುಗಳ ಕಾರ್ಯಕ್ಷಮತೆ ಕುಗ್ಗಿದಂತಹ, ಅವಧಿ ಮೀರಿದ ಬಸ್ಸುಗಳನ್ನು ಗ್ರಾಮೀಣ ಭಾಗದಲ್ಲಿ ಹೆಚ್ಚು ಹಾಕಲಾಗಿದೆ. ಇದು ಬಹಳ ಅನ್ಯಾಯ ಮತ್ತು ತಾರತಮ್ಯ ನೀತಿ ಎನ್ನುವುದನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಗ್ರಾಮೀಣ ಭಾಗದ ಜನರಿಗೂ ಉತ್ತಮ ಬಸ್ಸುಗಳಲ್ಲಿ ಓಡಾಡುವ ಹಕ್ಕಿದೆ. ನಾನು ಮೊನ್ನೆ ಶಿವಮೊಗ್ಗಕ್ಕೆ ಹೋಗಿದ್ದೆ. ಶಿವಮೊಗ್ಗದಂತಹ ಉತ್ತಮ ಸಿಟಿಗೂ ಕೂಡ ಕಡೆಗಣಿಸಲ್ಪಟ್ಟ ವೋಲ್ವೋ ಬಸ್ಸುಗಳನ್ನು ಹಾಕುವಂಥದ್ದು, ಅದರಲ್ಲಿ ಟಿವಿ ಸೌಲಭ್ಯ ಕೊಡದೇ ಇರುವುದು, ಹವಾನಿಯಂತ್ರಣ ವ್ಯವಸ್ಥೆ ಸರಿಯಾಗಿ ಕೆಲಸ ಮಾಡದೇ ಇರುವಂಥದ್ದು, ಹೆಚ್ಚು ಶಬ್ದ ಮಾಡುವಂಥದ್ದು ಹೀಗೆ ಮೇಂಟೆನೆನ್ಸ್ ಇಲ್ಲದೇ ಇರುವ ವಾಹನಗಳನ್ನು ಹಾಕುತ್ತಿರುವುದರಿಂದ ಪ್ರಯಾಣಿಕರು ಆಕ್ರೋಶಕ್ಕೆ ಒಳಗಾಗಿದ್ದಾರೆ. ವೋಲ್ವೋ ಬಸ್ಸುಗಳಲ್ಲಿ ಪ್ರಯಾಣಿಸುವವರು ಅತಿ ಹೆಚ್ಚು ದರ ಕೊಡುವುದರಿಂದ ಅವರಿಗೆ ತೊಂದರೆಯಾಗದಂತೆ ಗಮನಕೊಡುವ ಕೆಲಸ ಮಾಡಬೇಕು. ಅಲ್ಲದೇ, ಈ ಹಿಂದೆ ಬಸ್ಸುಗಳಲ್ಲಿ ಕುಡಿಯುವ ನೀರನ್ನೇನು ಕೊಡಲಾಗುತ್ತಿತ್ತು ಈಗ ಅದನ್ನು ನಿಲ್ಲಿಸಲಾಗಿದೆ. ಪ್ಲಾಸ್ಟಿಕ್ ನಿಷೇಧದ ಹಿನ್ನೆಲೆಯಲ್ಲಿ ಈ ರೀತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದರೂ ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡದೇ ನೀರಿನ ವಿತರಣೆ ನಿಲ್ಲಿಸಿರುವುದರಿಂದ ಬಹಳ ತೊಂದರೆ ಆಗುತ್ತಿದೆ. ತಕ್ಷಣವೇ ನೀರು ಸರಬರಾಜಿನ ವ್ಯವಸ್ಥೆ ಮಾಡಬೇಕು ಮತ್ತು ಉತ್ತಮ ಬಸ್ಸುಗಳನ್ನು ಒದಗಿಸುವ ಕೆಲಸ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರುಗಳು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ವೋಲ್ವೋ ಬಸ್ಸುಗಳನ್ನು ಹೆಚ್ಚು ಖರೀದಿ ಮಾಡಬಾರದು, ಇದರಿಂದ ಹಣಕಾಸಿನ ತೊಂದರೆಯಾಗುತ್ತದೆ, ಮೇಂಟೇನೆನ್ಸ್ ದುಬಾರಿಯಾಗುತ್ತದೆ ಎನ್ನುವ ಮಾತನ್ನು ಹೇಳಿದರು. ನಾನು ಅದನ್ನು ಒಪ್ಪುತ್ತೇನೆ. ಈ ವರ್ಷದಿಂದ ಸದರಿ ಬಸ್ಸುಗಳನ್ನು ಖರೀದಿ ಮಾಡುವುದನ್ನು ಕಡಿಮೆ ಮಾಡುತ್ತಾ ಹೋಗುತ್ತಿದ್ದೇವೆ. ಆದರೆ, ಎಲ್ಲಿ ಲಾಂಗ್ ರೂಟ್‌ಗಳಿರುತ್ತವೆಯೋ, ತುಂಬಾ ದೂರದ ಪ್ರಯಾಣ ಮಾಡುವಂಥ ಮಾರ್ಗಗಳು ಇವೆಯೋ ಅಂತಹ ಮಾರ್ಗಗಳಿಗೆ ಸೀಮಿತವಾಗಿ, ಅಂದರೆ ಬೆಂಗಳೂರು-ಬೆಳಗಾವಿ ಇತ್ಯಾದಿ ಮಾರ್ಗಗಳಿಗೆ ಸೀಮಿತವಾಗಿ ವೋಲ್ವೋ ಬಸ್ಸುಗಳನ್ನು ಖರೀದಿ ಮಾಡುತ್ತಿದ್ದೇವೆ. ಸ್ಥಳೀಯ ಮಾರ್ಗಗಳ ಪ್ರಯಾಣಕ್ಕೆಂದು ಹೆಚ್ಚು ಟಾಟಾ ಮತ್ತು Leyland ಬಸ್ಸುಗಳನ್ನೇ ಖರೀದಿ ಮಾಡುತ್ತಿದ್ದೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ವೋಲ್ವೋ ಬಸ್ಸುಗಳಿಂದ ನಷ್ಟವಾಗುತ್ತಿದೆ ಎಂದು ಹೇಳಿ ಅದನ್ನು ನಿಲ್ಲಿಸಬಹುದು. ಆದರೆ ಜನ ಆ ಬಸ್ಸುಗಳಲ್ಲೇ ಹೋಗಲು ಇಚ್ಛಿಸಬಹುದು. ಹಾಗಾಗಿ ಜನರ ಆಸಕ್ತಿಯನ್ನೂ ಕೂಡ ಪರಿಗಣನೆಗೆ ತೆಗೆದುಕೊಳ್ಳಬೇಕು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಟಾಟಾ ಮತ್ತು ಲೇಲ್ಯಾಂಡ್ ಕಂಪನಿಯವರೂ ಕೂಡ ವೋಲ್ವೋ ಬಸ್ಸಿನ ಮಾದರಿಯಲ್ಲೇ ವ್ಯವಸ್ಥಿತವಾಗಿ ಬಸ್ಸುಗಳ ಉತ್ಪಾದನೆ ಮಾಡುತ್ತಿದ್ದಾರೆ. ಅವರೇ ಉತ್ತಮವಾದ, ತತ್ಸಮಾನವಾದ ಬಸ್ಸುಗಳನ್ನು ಕೊಡುತ್ತಿರುವುದರಿಂದ ಆ ನಿಟ್ಟಿನಲ್ಲಿ ಹೆಚ್ಚು ಒತ್ತು ಕೊಡುವ ಕೆಲಸ ಮಾಡುತ್ತಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇಡೀ ಶ್ರೀಲಂಕಾ ದೇಶದಲ್ಲೇ ಟಾಟಾ ಮೂಲದ ಬಸ್ಸು, ಜೀಪ್ ಇತ್ಯಾದಿ ವಾಹನಗಳು ಓಡಾಡುತ್ತವೆ. ನಮ್ಮ ದೇಶದ್ದೇ ಕಂಪನಿಯಾದ ಟಾಟಾ ಕಂಪನಿಯ ವಾಹನಗಳಿಗೆ ನಾವೇ ಮಾನ್ಯತೆ ಕೊಡದೇ ಇರುವುದು ಬಹಳ ವಿಷಾದನೀಯ. ಮಾನ್ಯ ಸಚಿವರು ಗಮನಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 398**

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ಬಿಎಂಟಿಸಿ ನಗರ ಸಾರಿಗೆ ಇರಬಹುದು ಅಥವಾ ಗ್ರಾಮೀಣ ಸಾರಿಗೆ ಇರಬಹುದು, ಎಲ್ಲಾ ಕಡೆ ದೀರ್ಘ ಕಾಲದಿಂದ ವಿದ್ಯಾರ್ಥಿಗಳಿಗೆ ರಿಯಾಯಿತಿ ಪಾಸುಗಳನ್ನು ನೀಡುತ್ತಿದ್ದೀರಿ. ಅದನ್ನು ಬದಲಾವಣೆ ಮಾಡಿ, ನಾಡಿನಾದ್ಯಂತ ಪೂರ್ಣ ಪ್ರಮಾಣದಲ್ಲಿ ಉಚಿತ ಸಾರಿಗೆ ವ್ಯವಸ್ಥೆಯನ್ನು ಎಲ್ಲಾ ವಿದ್ಯಾರ್ಥಿಗಳಿಗೂ ವಿಸ್ತರಿಸಬೇಕೆಂದು ಕೋರುತ್ತೇನೆ. ತಮ್ಮ ಉತ್ತರದಲ್ಲಿ, 2017-18ನೇ ಸಾಲಿನಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್‌ಗಳನ್ನು ವಿತರಿಸುತ್ತಿದೆ ಎಂದು ತಿಳಿಸಿದ್ದೀರಿ. ಬಹಳ ಸಂತೋಷ. ಇತ್ತೀಚೆಗೆ ಪತ್ರಿಕೆಗಳಲ್ಲಿ, ಯಾರು ಪದವಿಪೂರ್ವ ಪರೀಕ್ಷೆಯನ್ನು ಬರೆಯುತ್ತಿದ್ದಾರೋ ಆ ವಿದ್ಯಾರ್ಥಿಗಳಿಗೂ, ಪರೀಕ್ಷಾ ಅವಧಿಯಲ್ಲಿ ಓಡಾಡುವುದಕ್ಕೆ ಉಚಿತ ಬಸ್ ಪಾಸ್ ವ್ಯವಸ್ಥೆ ಮಾಡಿದ್ದೀರಿ ಎಂದು ಓದಿದೆ. ಅದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಮಾನ್ಯ ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ, 2017-18ನೇ ಸಾಲಿನ ಬಜೆಟ್‌ನಲ್ಲಿ ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವ್ಯವಸ್ಥೆಯನ್ನು ಜಾರಿಗೆ ತರುತ್ತೇನೆ ಎಂದು ಘೋಷಣೆ ಮಾಡಿದ್ದರು. ಆದರೆ ಈಗ ಅದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುತ್ತಿದೆ. ದಯಮಾಡಿ ಎಲ್ಲಾ ವರ್ಗದ, ಆರ್ಥಿಕವಾಗಿ ಹಿಂದುಳಿರುವ ಬಡ ಮಕ್ಕಳಿಗೆ ವಿಸ್ತರಣೆ ಮಾಡಬೇಕು ಎನ್ನುವುದು ನನ್ನ ಕೋರಿಕೆಯಾಗಿದೆ. ತಮ್ಮ ವಾಸ ಸ್ಥಾನದಿಂದ 60 ಕಿ.ಮೀ ವ್ಯಾಪ್ತಿಯಲ್ಲಿರುವಂತಹ ಶಾಲಾ-ಕಾಲೇಜುಗಳಿಗೆ ಓಡಾಡುವ ವಿದ್ಯಾರ್ಥಿಗಳಿಗೆ ಮಾತ್ರ ಬಸ್ ಪಾಸ್ ಕೊಡುವುದನ್ನು ಸೀಮಿತಗೊಳಿಸಲಾಗಿದೆ. ಕೆಲವು ಕಡೆ, 60 ಕಿ.ಮೀ.ಗಿಂತ ಹೆಚ್ಚು ಸಂಚಾರ ಮಾಡಿ ಶಿಕ್ಷಣ ಪಡೆಯುತ್ತಿರುವುದನ್ನು ಇತ್ತೀಚಿನ ದಿನಗಳಲ್ಲಿ ನೋಡುತ್ತಿದ್ದೇವೆ. ಕಿ.ಮೀ. ಮಿತಿಯನ್ನು ಹೆಚ್ಚು ವಿಸ್ತರಣೆ ಮಾಡುವ ಪ್ರಯತ್ನ ಮಾಡಬೇಕು.

(ಮುಂದು .. .)

(188)6-3-2020 1.20 ಡಿಎಸ್-ಜಿಆರ್

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಅಪಘಾತ ಪರಿಹಾರ ನಿಧಿ ಶುಲ್ಕ ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಈ ಉಚಿತ ಬಸ್ ಪಾಸ್ ಕೊಡುವುದರಲ್ಲೂ ಕೂಡ ಅಪಘಾತ ಪರಿಹಾರ ನಿಧಿ ಶುಲ್ಕವನ್ನು ಸರ್ಕಾರವೇ ಭರಿಸಬೇಕೆನ್ನುವುದು ನನ್ನ ಕಳಕಳಿಯ ಮನವಿ. ಈ ಕಿಲೋಮೀಟರ್ ಮಿತಿಯನ್ನು ವಿಸ್ತೀರ್ಣ ಮಾಡುವಂಥದ್ದು, ಎಲ್ಲಾ ವರ್ಗದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಕ್ಕಳಿಗೂ ಉಚಿತವಾದಂತಹ ಸಾರಿಗೆ ವ್ಯವಸ್ಥೆಯನ್ನು ಒದಗಿಸುವಂಥದ್ದು, ಆ ಸಂದರ್ಭದಲ್ಲಿ ಅಪಘಾತ ಪರಿಹಾರ ನಿಧಿ ಶುಲ್ಕವನ್ನು ಸರ್ಕಾರವೇ ಭರಿಸುವಂಥದ್ದಕ್ಕೆ ಮಾನ್ಯ ಸಚಿವರು ಕ್ರಮ ಕೈಗೊಳ್ಳಬೇಕು. ಯಾವ ಅವಧಿಯಲ್ಲಿ ಇದನ್ನು ವಿಸ್ತರಣೆ ಮಾಡುತ್ತಾರೆ ಎಂದು ನಾನು ಕೇಳಬಯಸುತ್ತಿದ್ದೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರು ವಿದ್ಯಾರ್ಥಿಗಳ ಬಸ್ ಪಾಸ್ ಬಗ್ಗೆ ಸರ್ಕಾರ ಇನ್ನಷ್ಟು ಹೆಚ್ಚು ಉದಾರತೆ ಇರಬೇಕು ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, 2014 ರಿಂದ ಇಲ್ಲಿಯವರೆಗೆ ಎರಡು ವರ್ಗಗಳಲ್ಲಿ ನಾವು ಬಸ್ ಪಾಸ್‌ಗಳನ್ನು ವಿತರಣೆ ಮಾಡುತ್ತಿದ್ದೇವೆ. ಒಂದು ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ, ಮತ್ತೊಂದು ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಬಸ್ ಪಾಸ್ ವಿತರಣೆ ಮಾಡುತ್ತಿದ್ದೇವೆ. ಮೊದಲು 2014 ರಿಂದ ಪ್ರಾರಂಭವಾಗಿದೆಯಲ್ಲಾ ಅದಕ್ಕಿಂತ ಮುಂಚಿತವಾಗಿಯೂ ಪ್ರಾರಂಭವಾಗಿದೆ. 2014 ರಿಂದ ಎಂದು ನಾನು ಏಕೆ point out ಮಾಡುತ್ತಿದ್ದೇನೆಂದರೆ, ಯಾರಿಂದ ಎಷ್ಟು ಹಣ ಪಡೆದು ಕೊಳ್ಳಬೇಕೆನ್ನುವುದು ಅವರಿಗೆ ನಿಗದಿಯಾಗಿದೆ. ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇಕಡ 25 ರಷ್ಟು ಕಟ್ಟಬೇಕು, ಶೇಕಡ 25 ರಷ್ಟು ನಿಗಮ ಭರಿಸಬೇಕು, ಶೇಕಡ 50 ರಷ್ಟು ಸರ್ಕಾರ ಭರಿಸಬೇಕು ಎನ್ನುವಂಥದ್ದು. Three-tier system ನಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಅದರ ನಂತರ ಹಿಂದಿನ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಬಹಳಷ್ಟು ಬಡವರು ಇರುತ್ತಾರೆ. ಅವರು ವಿದ್ಯೆಯಿಂದ ವಂಚಿತರಾಗಬಾರದು. ಅವರಿಗೆ ಸಾರಿಗೆ ಸವಲತ್ತನ್ನು ಕೊಟ್ಟರೆ ಆ ಬಡ ಮಕ್ಕಳು ವಿದ್ಯೆಯನ್ನು ಕಲಿಯಬಹುದು ಎನ್ನುವ ಭಾವನೆಯನ್ನಿಟ್ಟುಕೊಂಡು ಅವರಿಗೆ ಸಂಪೂರ್ಣವಾದ ಉಚಿತ ಬಸ್ ಕೊಡುವುದಾಗಿ ಘೋಷಣೆ ಮಾಡಿದ್ದಾರೆ. ಅಲ್ಲಿ ಏನಾಗಿದೆ ಎಂದರೆ ಶೇಕಡ 25 ರಷ್ಟು ವಿದ್ಯಾರ್ಥಿಗಳು ಭರಿಸಬೇಕಾಗಿರುವಂಥದ್ದನ್ನು ಸರ್ಕಾರ ಭರಿಸಬೇಕು. ಅದು ವಿದ್ಯಾರ್ಥಿ ಪಾಲಿನ ಹಣ. ಅಂದರೆ ಆಗ ಸರ್ಕಾರ ಶೇಕಡ 75 ರಷ್ಟು ಹಣ ಕಟ್ಟಬೇಕಾಗುತ್ತದೆ. ಶೇಕಡ 25 ರಷ್ಟು ನಿಗಮ ಭರಿಸುತ್ತದೆ. 2014 ರಿಂದ ಇಲ್ಲಿಯವರೆಗೆ ಒಟ್ಟಾರೆ ನಮ್ಮ ವಿದ್ಯಾರ್ಥಿಗಳ ಪಾಸ್‌ನಿಂದ ಸರ್ಕಾರದಿಂದ ಬರಬೇಕಾದ ಹಣ ಸುಮಾರು 3,000 ಕೋಟಿ ರೂಪಾಯಿಗಳು ಬಾಕಿ ಇದೆ. ಆದಾಗ್ಯೂ ಕೂಡ ಇವತ್ತು ನಮ್ಮ ಹಿರಿಯ ಸದಸ್ಯರು ಎಲ್ಲರಿಗೂ ಉಚಿತವಾಗಿ ಬಸ್ ಪಾಸ್ ಕೊಡಬೇಕೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ನಾವು ಗಂಭೀರವಾಗಿ ಚಿಂತನೆ ಮಾಡಬೇಕಾದ ಅವಶ್ಯಕತೆ ಇದೆ. ಏಕೆಂದರೆ, ಎಲ್ಲವೂ ನಿಗಮದಿಂದ ಮಾಡಬೇಕೆಂದರೆ ಕಷ್ಟವಾಗುವ ಸಂದರ್ಭ ಇದೆ. ಈ ಹಣ ಬರದಿರುವುದರಿಂದ ನಮ್ಮ ನಾಲ್ಕು ನಿಗಮಗಳಲ್ಲಿ ಇವತ್ತು ಹೊಸ ಬಸ್‌ಗಳನ್ನು ಖರೀದಿ ಮಾಡುವುದಕ್ಕೆ ತೊಂದರೆಯಾಗುತ್ತಿದೆ. ಸರಿಯಾದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಮಯಕ್ಕೆ ಅವರಿಗೆ ಸಂಬಳವನ್ನು ಕೊಡುವುದಕ್ಕೆ ತೊಂದರೆಯಾಗುತ್ತಿದೆ. ನಿರ್ವಹಣೆ ಮಾಡುವುದಕ್ಕೆ ತೊಂದರೆಯಾಗುತ್ತಿದೆ. ಅದಕ್ಕೆ ಕಾರಣ ಒಂದೇ ಸರ್ಕಾರ ಎಂದು ನಾನು ಹೇಳುತ್ತಿಲ್ಲ. 2014 ರಿಂದ ಇಲ್ಲಿಯವರೆಗೆ ಸುಮಾರು 3000 ಕೋಟಿ ರೂಪಾಯಿಗಳಷ್ಟು ನಮ್ಮ ನಾಲ್ಕು ನಿಗಮಗಳಿಗೆ ಸರ್ಕಾರದಿಂದ ಈ ಬಸ್ ಪಾಸ್ ಮುಖಾಂತರ ಬರಬೇಕಾಗಿರುವಂತಹ ಹಣ ಬರದಿರುವುದರಿಂದ ಸ್ವಲ್ಪ ನಾವು ಇವತ್ತು ಕಷ್ಟದಲ್ಲಿದ್ದೇವೆ. ನಾವು ಸೋರಿಕೆಯನ್ನು ತಡೆದು ಆ ನಾಲ್ಕು ನಿಗಮಗಳನ್ನು ಇನ್ನಷ್ಟು ಲಾಭದಾಯಕವಾಗಿ ಮಾಡುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಚಿಂತನೆಯನ್ನು ಮಾಡಿ ಮುಂದೆ ಹಣಕಾಸಿನಲ್ಲಿ ಸಬಲರಾದರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಉಚಿತವಾಗಿ ಬಸ್ ಪಾಸ್ ಕೊಡುವುದು ಮೊದಲಿನಿಂದಲೂ ಬಂದಿದೆ. ಅಲ್ಲಿ ಶ್ರೀಮಂತರು ಇರುತ್ತಾರೆ, ಸಾಮಾನ್ಯ ವರ್ಗದಲ್ಲಿ ಬಡವರ ಗತಿ ಏನು? ಈ ರೀತಿ ತಾರತಮ್ಯವನ್ನೇಕೆ ಮಾಡುತ್ತಾರೆ? ಮಕ್ಕಳು ಎಂದರೆ ದೇವರ ಸಮಾನ ಎಂದು ಹೇಳುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಶ್ರೀಮಂತರು ಇರುತ್ತಾರೆ. ಅವರಿಗೂ ಉಚಿತವಾಗಿ ಕೊಡುತ್ತಾರೆ. ಮೇಲ್ವರ್ಗದಲ್ಲಿ ಬಡವರು ಇರುತ್ತಾರೆ, ಆ ಮಕ್ಕಳು ಶಿಕ್ಷಣದಿಂದ ವಂಚಿತರಾಗುವುದಿಲ್ಲವೇ? ಬಹಳಷ್ಟು ಮೇಲ್ವರ್ಗದವರು ಪ್ರತಿ ದಿನ ದುಡಿಯದಿದ್ದರೆ ಅವರ ಜೀವನ ಸಾಗುವುದಿಲ್ಲ. ಸರ್ಕಾರ ಅದನ್ನು ಏಕೆ ನೋಡುತ್ತಿಲ್ಲ? ಈಗ ನಾವೆಲ್ಲರೂ ಭಾಷಣ ಮಾಡುತ್ತೇವೆ, ಬಡವರ ಗತಿ ಏನು? ಅವರನ್ನು ಮಾನ್ಯ ಸಚಿವರು ಪರಿಗಣಿಸಬೇಕಾಗುತ್ತದೆ. ಅವರ ಆದಾಯವನ್ನು ನೋಡಬೇಕಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಧಿಕಾರಿ ಒಂದು ಲಕ್ಷ ರೂಪಾಯಿಗಳ ಸಂಬಳವನ್ನು ತೆಗೆದುಕೊಳ್ಳುತ್ತಾರೆ. ಅಂಥವರ ಮಕ್ಕಳಿಗೆ ಉಚಿತ ಬಸ್ ಪಾಸ್ ಕೊಡುತ್ತಾರೆ. ಮೇಲ್ವರ್ಗದವರು ಕೂಲಿಗೆ ಹೋಗುತ್ತಾರೆ, ಅವರ ಮಕ್ಕಳಿಗೆ ಉಚಿತ ಬಸ್ ಪಾಸ್ ಕೊಡುವುದಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮೂಲಭೂತವಾಗಿ ಎಸ್‌ಸಿ–ಎಸ್‌ಟಿ ಮಕ್ಕಳಿಗೆ ಏಕೆ ಕೊಡುತ್ತೀರಿ ಎಂದು ಕೇಳುವ ರೀತಿ ಆಯಿತು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮೇಲ್ವರ್ಗದ ಬಡವರ ಮಕ್ಕಳು ಏನು ಮಾಡಬೇಕು?

**ಶ್ರೀ ಆರ್.ಬಿ.ತಿಮ್ಮಾಪೂರ:–** ಅವರಿಗೂ ಸಹ ಉಚಿತ ಬಸ್ ಪಾಸನ್ನು ಕೊಡುವುದಕ್ಕೆ ಹೇಳಿ ಯಾರು ಬೇಡ ಎಂದು ಹೇಳುತ್ತಾರೆ?

**ಶ್ರೀ ಹೆಚ್.ಎಂ.ರೇವಣ್ಣ:–** ಸಾಮಾಜಿಕ ನ್ಯಾಯದಲ್ಲಿ ನಾವು ಅವರಿಗೆ ಕೊಡಲೇಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸಾಮಾಜಿಕ ನ್ಯಾಯದ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಇವರಿಗೆ ಸಾಮಾಜಿಕ ನ್ಯಾಯ ಬೇಡವೇ? ಎಸ್‌ಸಿ–ಎಸ್‌ಟಿ ಯವರಿಗೆ ಕೊಡಬಾರದು ಎಂದು ನಾನು ಹೇಳುತ್ತಿಲ್ಲ. ಮೇಲ್ವರ್ಗದಲ್ಲಿ ಬಡವರ ಗತಿ ಏನು ಎಂದು ನಾನು ಕೇಳುತ್ತಿದ್ದೇನೆ? ನಾವು ಸುಮ್ಮನೆ ದೊಡ್ಡಸ್ಥನಕ್ಕೆ ಎಲ್ಲರೂ ಮಾತನಾಡುತ್ತೇವೆ. ಆದರೆ ನೈಜ ಪರಿಸ್ಥಿತಿಯನ್ನು ಯಾರು ಅರ್ಥ ಮಾಡಿಕೊಳ್ಳಬೇಕು? ಮೇಲ್ವರ್ಗದ ಬಡವರ ಮಕ್ಕಳು ಮಕ್ಕಳಲ್ಲವೇ? ಮೇಲ್ವರ್ಗದ ಬಡವರ ಮಕ್ಕಳಿಗೂ ಉಚಿತ ಬಸ್ ಪಾಸ್ ಸೌಲಭ್ಯ ಕೊಡಬೇಕಾಗುತ್ತದೆ. 75 ಪರ್ಸೆಂಟ್, 25 ಪರ್ಸೆಂಟ್ ಹಣವನ್ನು ತುಂಬಬೇಕೆಂದು ಮಾನ್ಯ ಸಚಿವರು ಹೇಳಿದರು. ಹಣ ತುಂಬಲಾರದ ಪರಿಸ್ಥಿತಿಯುಳ್ಳವರು ಬಹಳಷ್ಟು ಮಂದಿ ಇದ್ದಾರೆ, ಅವರ ಗತಿ ಏನು ಎಂದು ನಾನು ಕೇಳಬಯಸುತ್ತಿದ್ದೇನೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ವಿದ್ಯಾರ್ಥಿಗಳಿಗೆ ಬಸ್ ಪಾಸ್ ಕೊಡಬೇಕೆನ್ನುವುದು ನಮ್ಮೆಲ್ಲರ ಒತ್ತಾಸೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಚೆನ್ನಾಗಿ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದ ಹಾಗೆ ಎಲ್ಲಾ ವರ್ಗದಲ್ಲೂ ಬಡವರ ಮಕ್ಕಳಿದ್ದಾರೆ. ಮಾನ್ಯ ಸಚಿವರು ಈಗಾಗಲೇ ಜಾರಿಗೆ ತಂದಿರುವುದನ್ನು ನಾವು ಬಹಳ ಸಂತೋಷದಿಂದ ಸ್ವಾಗತ ಮಾಡುತ್ತೇವೆ. ಎಲ್ಲಾ ವರ್ಗದ ಬಡವರ ಮಕ್ಕಳಿಗೂ ಕೂಡ ಉಚಿತ ಸವಲತ್ತು ಸಿಗಬೇಕು. ಶಿಕ್ಷಣ ವ್ಯವಸ್ಥೆಯಲ್ಲಿ ಶಾಲಾ–ಕಾಲೇಜುಗಳಲ್ಲಿ ಈ ತಾರತಮ್ಯ ಮಾಡುವುದು ಬೇಡ ಎನ್ನುವಂಥದ್ದು ನಮ್ಮೆಲ್ಲರ ಕಳಕಳಿಯಾಗಿದೆ. ಎರಡನೆಯದಾಗಿ, ನನ್ನ ಉಪ ಪ್ರಶ್ನೆ ಏನೆಂದರೆ, ನಿನ್ನೆ ಮಂಡಿಸಿದಂತಹ ಬಜೆಟ್‌ನಲ್ಲಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರಿಗೆ ಉಚಿತ ಬಸ್ ಪಾಸ್‌ನಲ್ಲಿ ರಿಯಾಯಿತಿ ಕೊಡುತ್ತೇವೆಂದು ಹೇಳಿದ್ದಾರೆ. ಮೂಲಭೂತವಾಗಿ ಮಕ್ಕಳಿಗೆ ಶಿಕ್ಷಣ ಕೊಡುವುದು ಸರ್ಕಾರದ ಆದ್ಯ ಕರ್ತವ್ಯ. ಶಿಕ್ಷಣ ಕಲಿಯುವಂತಹ ಬಡವರ ಮಕ್ಕಳಿಗೆ, ಗಾರ್ಮೆಂಟ್ಸ್ ಮಹಿಳೆಯರಿಗೂ ವಿಸ್ತರಣೆ ಮಾಡಿ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಶಾಲೆಗೆ ಹೋಗುವಂತಹ ಎಲ್ಲಾ ಬಡವರ ಮಕ್ಕಳಿಗೆ ಉಚಿತ ಬಸ್ ಪಾಸ್ ಕೊಡುವಂತಹ ವ್ಯವಸ್ಥೆ ಮಾಡಿ. ಮಾನ್ಯ ಲಕ್ಷ್ಮಣ ಸವದಿಯವರು ಬಹಳ ಗಟ್ಟಿಯಾದಂತಹ ಉಪ ಮುಖ್ಯಮಂತ್ರಿಗಳು. ಅವರು ಗಟ್ಟಿತನದಿಂದ ಅವರ ಅವಧಿಯಲ್ಲಿ ನಾಡಿನ ಎಲ್ಲ ಬಡ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಲಭ್ಯ ದೊರಕುವಂತೆ ಉತ್ತರವನ್ನು ನೀಡಬೇಕು. ಇದನ್ನು ಯಾವ ಕಾಲಾವಧಿಯಲ್ಲಿ ಜಾರಿಗೆ ತರುತ್ತಾರೆ ಎಂಬುದನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ತಿಳಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಹಲವಾರು ಕಾರ್ಪೋರೇಷನ್‌ಗಳು ನಷ್ಟದಲ್ಲಿವೆ ಎನ್ನುವ ಮಾತು ಇದೆ. ಸರ್ಕಾರದವರು ಮಕ್ಕಳ ಶಿಕ್ಷಣಕ್ಕೆ ವ್ಯಯ ಮಾಡತಕ್ಕಂಥದ್ದರಲ್ಲಿ ಧಾರಾಳವಾಗಿ ಕೊಡಲಿ. ಎಷ್ಟು ಆದಾಯ ಬಂತು, ಎಷ್ಟು ನಷ್ಟವಾಯಿತು ಎಂದು ಕಾರ್ಪೋರೇಷನ್‌ಗಳನ್ನಿಟ್ಟುಕೊಂಡು ಸರ್ಕಾರ ಬಿಸನೆಸ್ ಮಾಡುತ್ತಿದೆಯೇ? ಇವೆಲ್ಲಾ ಸೇವಾ ಮನೋಭಾವದಿಂದ ಮಾಡಿರುವಂಥದ್ದು. ಸರ್ಕಾರದಿಂದ ನಡೆಸುವಂತಹ ಸಂಸ್ಥೆಗಳಿಗೆ ಹಣ ಕೊಡುವಂತಹ ವ್ಯವಸ್ಥೆ ಮಾಡಿ. ಶೇಕಡ 18 ರಷ್ಟು ಎಸ್‌ಸಿ–ಎಸ್‌ಟಿ ಗೆ ಶಾಲಾ ಶುಲ್ಕಕ್ಕಾಗಿ ಕೊಟ್ಟಿದ್ದೇವೆಂದು ಹೇಳುತ್ತಲೇ ಇರುತ್ತಾರೆ. ಇದು ಬೇಧಭಾವ ತರುವಂಥದ್ದು. ಎಲ್ಲಾ ಮಕ್ಕಳಿಗೂ ಕೊಡಿ. ಎಲ್ಲಾ ಜಾತಿಯಲ್ಲೂ ಬಡವರು ಇದ್ದಾರೆ. ಶಿಕ್ಷಣ ಕಲಿಯುವಂತಹ ವಿಷಯದಲ್ಲಿ ಅವರಿಗೂ ಸರ್ಕಾರ ಸಹಾಯ ಮಾಡಲಿ. ಸರ್ಕಾರ ಈಗ ಬೆಲೆ ಏರಿಸಿದೆ, ಅದನ್ನೇನಾದರೂ ನಾವು ಕೇಳಿದ್ದೇವೆಯೇ? ಸರ್ಕಾರ ಸಾಕಷ್ಟು ಬೆಲೆಯನ್ನು ಏರಿಸಿದೆ, ಸರ್ಕಾರ ನಷ್ಟದಲ್ಲಿದೆ ಎಂದು ನಾವು ಸುಮ್ಮನೆ ಇದ್ದೇವೆ. ಇದೇ ಪರಿಸ್ಥಿತಿಯಲ್ಲಿ ನಾವೇನಾದರೂ ಮಾಡಿದ್ದರೆ ಗುಲ್ಲು ಎಬ್ಬಿಸಿಬಿಡುತ್ತಿದ್ದಿರಿ. ಸರ್ಕಾರ ತೊಂದರೆಯಲ್ಲಿದೆ ಎಂದು ಇವತ್ತು ನಾವೆಲ್ಲಾ ಸುಮ್ಮನೆ ಕುಳಿತಿದ್ದೇವೆ. ಮಕ್ಕಳ ಶಿಕ್ಷಣಕೋಸ್ಕರ ವ್ಯಯ ಮಾಡುವುದಕ್ಕೆ ಏನು ತೊಂದರೆ ಆಗುತ್ತಿದೆ ಎಂಬುದನ್ನು ತಿಳಿಸಿ.

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಉಚಿತ ಬಸ್ ಪಾಸ್ ಕೊಡುವುದಕ್ಕೆ ಸರ್ಕಾರ ನಿರ್ಧಾರ ತೆಗೆದುಕೊಂಡಿರುವುದನ್ನು ನಾವು ಸ್ವಾಗತ ಮಾಡುತ್ತೇವೆ. ಅಷ್ಟೇ ಪ್ರಮಾಣದಲ್ಲಿ ಆರ್ಥಿಕವಾಗಿ ಹಿಂದುಳಿದವರು ಕೂಡ ದುರ್ಬಲರಾಗಿದ್ದಾರೆ. ಇದರಲ್ಲಿ ತಾರತಮ್ಯ ಮಾಡುವುದು ಒಳ್ಳೆಯ ಬೆಳವಣಿಗೆ ಅಲ್ಲ. ಅತ್ಯಂತ ಹಿಂದುಳಿದ ಜನಾಂಗದವರಿಗೂ ಕೂಡ ಉಚಿತ ಬಸ್ ಪಾಸ್ ಸೌಲಭ್ಯವನ್ನು ನೀಡಬೇಕು. ಮಾನ್ಯ ಮರಿತಿಬ್ಬೇಗೌಡರು ಹೇಳಿದ ಹಾಗೆ ಮಾನ್ಯ ಲಕ್ಷ್ಮಣ ಸವದಿಯವರು ಬಹಳ ಗಟ್ಟಿ ಉಪ ಮುಖ್ಯಮಂತ್ರಿಗಳಾಗಿದ್ದಾರೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

189/6-3-2020/1-30/ಬಿಕೆಪಿ-ಎಂಡಿ

**ಶ್ರೀ ತಿಪ್ಪಣ್ಣ ಕಮಕನೂರ (ಮುಂದು. . )**

ಜನರು ಇವರ ಮೇಲೆ ಬಹಳ ಆಸೆಯನ್ನಿಟ್ಟುಕೊಂಡಿದ್ದಾರೆ. ಈ ಸದನದ ಬಹಳಷ್ಟು ಸದಸ್ಯರುಗಳ ಆಸೆಯಂತೆ ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಏನು ಸೌಲಭ್ಯವನ್ನು ಕೊಡಲಾಗಿದೆ, ಅದನ್ನು ಅತ್ಯಂತ

ಹಿಂದುಳಿದ ಜನಾಂಗದವರಿಗೆ ಮತ್ತು ಆರ್ಥಿಕವಾಗಿ ದುರ್ಬಲವಾಗಿರುವ ನಮ್ಮ ಜನಾಂಗಕ್ಕೂ ಸೇರ್ಪಡೆ ಮಾಡಬೇಕು. ಶಿಕ್ಷಣದಲ್ಲಿ ಬೇದಭಾವ ಮಾಡಬಾರದು. ದೆಹಲಿಯಲ್ಲಿ ಅರವಿಂದ್ ಕೇಜ್ರಿವಾಲ್‌ರವರು ಯಾವ ರೀತಿಯಲ್ಲಿ ನಿರ್ಧಾರ ತೆಗೆದುಕೊಂಡರು. ಅವರ ಮಾದರಿಯಲ್ಲಿ ಕೆಲಸ ಮಾಡಬೇಕು. ಆಗ ಜನರು ಉಪ ಮುಖ್ಯಮಂತ್ರಿಗಳಿಗೆ ಮೆಚ್ಚಿಗೆ ವ್ಯಕ್ತಪಡಿಸುತ್ತಾರೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ನಮ್ಮ ಎಲ್ಲಾ ಹಿರಿಯ ಸದಸ್ಯರ ಸಾಮಾಜಿಕ ಕಳಕಳಿ, ಸಾಮಾಜಿಕ ಏರಿಳಿತಗಳ ಬಗ್ಗೆ ಅತ್ಯಂತ ಆಲೋಚನೆಗಳನ್ನು ಮಾಡಿಕೊಂಡು ಬಡವರ ಬಗ್ಗೆ ಅತ್ಯಂತ ಹೆಚ್ಚು ಕಾಳಜಿಯನ್ನು ವ್ಯಕ್ತಪಡಿಸುವುದರ ಮೂಲಕ ಬಹಳ ಉತ್ತಮವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ಇವರೆಲ್ಲರ ಸಲಹೆಗಳನ್ನು ಅತ್ಯಂತ ಬಿಚ್ಚು ಮನಸ್ಸಿನಿಂದ ಸ್ವಾಗತ ಮಾಡುತ್ತೇನೆ. ಮುಂದಿನ ದಿನಗಳಲ್ಲಿ ಇದರ ಬಗ್ಗೆ ಅಲೋಚನೆ, ಸಮಾಲೋಚನೆ ಮಾಡಿಕೊಂಡು ಈ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬರುತ್ತೇನೆ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಇದರ ಬಗ್ಗೆ ಯಾವ ಸಮಯದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ತಿಳಿಸಬೇಕು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಈ ಬಗ್ಗೆ ಹಣಕಾಸು ಇಲಾಖೆಯವರ ಅಭಿಪ್ರಾಯ ತೆಗೆದುಕೊಳ್ಳುತ್ತೇನೆ. ಇದರ ಬಗ್ಗೆ collective decision ತೆಗೆದುಕೊಳ್ಳಬೇಕಾಗುತ್ತದೆ. ಜೊತೆಗೆ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರ ಸಲಹೆಯನ್ನೂ ಪಡೆದುಕೊಳ್ಳುತ್ತೇನೆ. ಅದರಲ್ಲೂ ವಿಶೇಷವಾಗಿ ಸಮಾನತೆಯ ಮನೋಭಾವನೆಯನ್ನು ಬಿತ್ತಿರತಕ್ಕಂತಹ ನಮ್ಮ ಹಿರಿಯ ಸದಸ್ಯರಾದ ಸನ್ಮಾನ್ಯ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಸಲಹೆಗಳನ್ನೂ ಸಹ ತೆಗೆದುಕೊಂಡು ಅವರ ಮಾರ್ಗದರ್ಶನದಲ್ಲಿ ಮುಂದುವರಿಯುವ ಕೆಲಸಗಳನ್ನು ನಾನು ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ 462**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇವತ್ತು ನಾನು ಕೇಳಿರತಕ್ಕಂತಹ ಪ್ರಶ್ನೆ ಏನೆಂದರೆ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಅಂತರ್ಜಲ ಸ್ಥಿತಿಗತಿಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ಮಾಹಿತಿ ಇದ್ದಲ್ಲಿ 5 ವರ್ಷಗಳಲ್ಲಿ ರಾಜ್ಯದ ಅಂತರ್ಜಲ ಕುಸಿದಿರುವ ಪ್ರಮಾಣದ ಬಗ್ಗೆ ಸಂಪೂರ್ಣ ಮಾಹಿತಿ ನೀಡುವ ಬಗ್ಗೆ ಕೇಳಿದ್ದೇನೆ. ಈ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲವು ಮಾಹಿತಿಗಳನ್ನು ಕೊಟ್ಟಿದ್ದಾರೆ. ಈಗ ಕೊಟ್ಟಿರುವಂತಹ ಮಾಹಿತಿಯಲ್ಲಿ 4–5 ತಾಲ್ಲೂಕುಗಳು ಬಿಟ್ಟರೆ ಯಾವ ತಾಲ್ಲೂಕುಗಳಲ್ಲಿಯೂ ಸಹ ಅಂತರ್ಜಲ ವೃದ್ಧಿಯಾಗಿಲ್ಲ. ಎಲ್ಲಾ ಕಡೆಯೂ ಅಂತರ್ಜಲ ಕುಸಿದಿದೆ. 10 ಮೀಟರ್‌ಗಿಂತ ಜಾಸ್ತಿ ಬಂದಿರುವುದು ಕೇವಲ 4–5 ತಾಲ್ಲೂಕುಗಳು ಮಾತ್ರ. ಇದಕ್ಕೆ ಕಾರಣ ಏನೆಂದರೆ ಕೆರೆಗಳನ್ನು ತುಂಬಿಸುವಂತಹ ಕೆಲಸ ಮಾಡಿದ ತಾಲ್ಲೂಕುಗಳಲ್ಲಿ ಮತ್ತು ಜಿಲ್ಲೆಗಳಲ್ಲಿ ಮಾತ್ರ ನೀರು ಮೇಲೆ ಬಂದಿರುವಂತಹದ್ದಾಗಿದೆ. ಇನ್ನುಳಿದಂತಹ ಹಲವಾರು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಪ್ರಮಾಣ ಬಹಳ ಕೆಳಗಡೆ ಹೋಗುತ್ತಿದೆ. ಇದರಿಂದ ಸಿಗುವಂತಹ ನೀರಿಗೆ hardness ಜಾಸ್ತಿ ಬರುತ್ತದೆ. Total dissolved solids ಪ್ರಮಾಣ ಬಹಳ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಈ ನೀರಿನಿಂದ ಪ್ರಾಣಕ್ಕೆ ಮತ್ತು ಆರೋಗ್ಯಕ್ಕೆ ಹಾನಿಯಾಗುತ್ತದೆ. ಇವತ್ತು ನೀರು ಇಡೀ ಪ್ರಪಂಚದಲ್ಲಿ right to water is a fundamental right. ಇವತ್ತು ನೀರು Food Act ನಲ್ಲಿ ಬರುತ್ತದೆ. ನಾವು ಇವತ್ತು ನೀರನ್ನು ಸರಿಯಾದ ರೀತಿಯಲ್ಲಿ ಜನರಿಗೆ ಕೊಟ್ಟರೆ ಬಜೆಟ್ ಅರ್ಧ ಹಣ ಬೇಕಾಗುವುದಿಲ್ಲ. Social planning ಬೇಕಾಗುವುದಿಲ್ಲ,

**ಸಭಾಪತಿಯವರು:–** ಸಾಕು, ನಿಲ್ಲಿಸಿ. ನೀವು ಭಾಷಣ ಮಾಡಲಿಕ್ಕೆ ಹೋಗಬೇಡಿ. ಉಪ ಪ್ರಶ್ನೆ ಕೇಳಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇದು ನೀರಿನ ವಿಚಾರ. ನಾನು ವಿಷಯಕ್ಕೆ ಬರುತ್ತೇನೆ. ಇವತ್ತು ಕೆಲವು ಮಾಹಿತಿಗಳನ್ನು ಅನುಬಂಧದಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ಎಲ್ಲಾ ಜಿಲ್ಲೆಯ ಮಾಹಿತಿಯನ್ನು ಕೊಟ್ಟಿದ್ದಾರೆ. Arsenic ಎನ್ನುವುದು ಒಂದು ಕೆಮಿಕಲ್. ಬಹಳ ಹಾನಿಕರವಾದಂತಹ ಒಂದು ಅಂಶ. ನನಗೆ ದೊರಕಿರುವಂತಹ ನ್ಯಾಷನಲ್ ಮತ್ತು ಇಂಟರ್ ನ್ಯಾಷನಲ್ ಮಾಹಿತಿಗಳ ಪ್ರಕಾರ ಕರ್ನಾಟಕದ ಚಿಕ್ಕಬಳ್ಳಾಪುರ, ದಾವಣಗೆರೆ, ಧಾರವಾಡ, ಕಲ್ಬುರ್ಗಿ ಮತ್ತು ಕೋಲಾರದಲ್ಲಿ arsenic ಇದೆ. ಆದರೆ, ಇಲ್ಲಿ ಕೊಟ್ಟಿರುವ ಮಾಹಿತಿ ಪ್ರಕಾರ contamination ಇಲ್ಲವೇ ಇಲ್ಲ. Arsenic ಎನ್ನುವಂತಹ ಪದಾರ್ಥ ಇರುವಂತಹ ಭೂಮಿಯೊಳಗಡೆಯ ಅಂತರ್ಜಲದಲ್ಲಿ ಇಲ್ಲವೇ ಇಲ್ಲ ಎಂದು ಕೊಟ್ಟಿದ್ದಾರೆ. ಆದರೆ, ನಮ್ಮ ಕರ್ನಾಟಕದಲ್ಲಿ ಇದೆ. ಇದರ ಜೊತೆಗೆ bacteria ಎಲ್ಲಿದೆ ಎಂದು ಕೇಳಲಾಗಿದೆ. That is also a part of contamination. ಆದರೆ, ಇಲ್ಲಿ bacteria ಬಗ್ಗೆ ಮಾಹಿತಿಯನ್ನು ಕೊಟ್ಟಿಲ್ಲ. ಇವತ್ತು ಬೆಂಗಳೂರಿನಲ್ಲಿ ಕೆಲವು outskirts ನಲ್ಲಿ industrial effluents ಸಿಕ್ಕಾಪಟ್ಟೆ ಬರುತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಂಗಳೂರಿನಲ್ಲಿಯೇ 50 ರಿಂದ 60% ರಷ್ಟು ಜನಸಂಖ್ಯೆ ಈ ಕುಡಿಯುವ ನೀರಿಗೆ ಕೊಳವೆ ಬಾವಿಯನ್ನೇ ಅವಲಂಭಿಸಿದ್ದಾರೆ.

**ಸಭಾಪತಿಯವರು:–** ಸಚಿವರು ಉತ್ತರ ಕೊಡಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ್ದನ್ನೆಲ್ಲಾ ಒಪ್ಪುತ್ತೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಅಂತರ್ಜಲ ಕುಸಿದಿದೆ, over exploitation ಆಗಿದೆ, 150 ಅಡಿಗಳ ಕೆಳಗಡೆ ಹೋದರೆ ಮಾನ್ಯ ಸದಸ್ಯರು ಏನೇನು ಹೇಳುತ್ತಾರೆ, ಅದು ಕೆಳಗಡೆ ಪ್ರಾರಂಭವಾಗುತ್ತದೆ ಎನ್ನುವುದು ಪ್ರಪಂಚಕ್ಕೆ ಗೊತ್ತು. Arsenic ಎಲ್ಲಿದೆ, fluoride ಎಲ್ಲಿದೆ, ಮತ್ತೊಂದು ಕೆಮಿಕಲ್ ಎಲ್ಲಿದೆ ಎನ್ನುವುದರ ಬಗ್ಗೆ ನಾನೂ ಪೂರ್ಣ ಪಟ್ಟಿಯನ್ನು ಓದುವುದಾದರೆ calcium, magnesium, chlorin, fluoride, iron, nitrate, sulphate ಎಲ್ಲಾ ವಿವರವನ್ನು ತೆಗೆದುಕೊಂಡು ಬಂದಿದ್ದೇನೆ. It needs a debate. ನಮ್ಮ ಮುಂದೆ ಪ್ರಶ್ನೆ ಇರುವುದು ಏನೆಂದರೆ ಅಂತರ್ಜಲ ಸುಮಾರು 1200 ಅಡಿಯವರೆಗೆ ಬೋರ್ ಕೊರೆಯುವಂತಹ ಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿರುವುದಕ್ಕೆ ನಾವುಗಳು ಯಾರೂ ಸಹ ಕಾರಣರಲ್ಲ. ಅನಿವಾರ್ಯತೆ ಸೃಷ್ಟಿಯಾಗಿದೆ, ಕೇಂದ್ರ ಸರ್ಕಾರದವರ ಜೊತೆ ಕರ್ನಾಟಕ ಸರ್ಕಾರ ಸೇರಿಕೊಂಡು ಆಟಲ್ ಭೂ ಜಲ್ ಯೋಜನೆ ಅಡಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದೇವೆ. ಈ ಸಂಬಂಧ 14 ಜಿಲ್ಲೆ 41 ತಾಲ್ಲೂಕುಗಳನ್ನು ಕೇಂದ್ರ ಸರ್ಕಾರದವರು ಗುರುತಿಸಿ ಈ ಕಡೆ ground water level rise ಮಾಡಬೇಕೆಂದು ಹೇಳಿದ್ದಾರೆ. ಅದರ ಜೊತೆ ಜೊತೆಗೆ ನಿನ್ನೆ ಸಹಿತ ನಮ್ಮ ಮಾನ್ಯ ಮುಖ್ಯಮಂತ್ರಿಯವರಿಗೆ lift irrigation ಗೆ 5000 ಕೋಟಿ ರೂಪಾಯಿಗಳನ್ನು ಇಡಬೇಕೆಂದು ಈ ಉದ್ದೇಶದಿಂದಲೇ ಹೇಳಿದ್ದೇವೆ. ಎಲ್ಲೆಲ್ಲಿ ಸಾಧ್ಯವಿದೆ, ಅಲ್ಲಿ ಕೆರೆಗಳನ್ನು ತುಂಬಿಸಿ ಆದಷ್ಟು ಮಟ್ಟಿಗೆ ಈ ground water level ಮೇಲೆ ತರಬೇಕೆನ್ನುವುದೇ ನಮ್ಮ ಸರ್ಕಾರದ ಉದ್ದೇಶ. Nobody is responsible for this, ಆಗಿ ಹೋಗಿದೆ. ಈ ಹಿಂದೆ ಸಚಿವರಾಗಿದ್ದಂತಹ ದಿ॥ ನಜೀರ್ ಸಾಬ್ ರವರು ಕೊಳವೆ ಬಾವಿ ಕೊರೆಯಲಿಕ್ಕೆ ಪ್ರಾರಂಭ ಮಾಡಿದ ಸಮಯದಲ್ಲಿ 150 ಅಡಿಗೆ ನೀರು ಸಿಕ್ಕುತ್ತಿತ್ತು. ಈಗ ಅದು 1050 ಅಡಿ, 1100 ಅಡಿ, 1200 ಅಡಿಗೆ ಹೋಗಿದೆ. ತಾವು ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳು ಎಂದು ನೀವು ಏನು ಹೇಳುತ್ತೀರಿ, ಇಲ್ಲಿ static water level 500–600 ಅಡಿಗಿಂತ ಕೆಳಗಡೆ ಇದೆ. ಈ ಪರಿಸ್ಥಿತಿಯನ್ನು ನಾವುಗಳು ಯಾರೂ ಸಹ ಸರಿ ಮಾಡಲಿಕ್ಕೆ ಆಗುವುದಿಲ್ಲ. ಈ ವಿಚಾರವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ಮಾನ್ಯ ಸಚಿವರಾದ ಶ್ರೀಮಾನ್ ಕೆ.ಎಸ್. ಈಶ್ವರಪ್ಪನವರು ಮತ್ತು ನಾನು ಜಂಟಿಯಾಗಿ ಹೇಳಬೇಕಾಗಿತ್ತು. ಈಗ ನಾನು ಒಬ್ಬನೇ ಈ ವಿಚಾರವಾಗಿ ಹೇಳುತ್ತಿದ್ದೇನೆ. ಈ ಬಗ್ಗೆ ಅಗತ್ಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. RO (Reverse Osmosis) water plants ಕೊಡುತ್ತಿದ್ದೇವೆ. ಮೊದಲು ಮನೆಗೆ ಒಂದು ಯೂನಿಟ್ ಕೊಟ್ಟು ನೋಡಿದ್ದೇವೆ. ಈಗ ಸಮಗ್ರವಾಗಿ ಊರಿಗಳಿಗೇ ಹಾಕಿಕೊಡುತ್ತಿದ್ದೇವೆ. ಎಲ್ಲೆಲ್ಲಿ ಕೆಮಿಕಲ್ಸ್ ಅನ್ನು ಫಿಲ್ಟರ್ ಮಾಡಿ ಆಚೆ ತೆಗೆದುಕೊಳ್ಳಬಹುದು, ಕುಡಿಯುವ ನೀರನ್ನು ಸರಿಯಾಗಿ ಕೊಡಬಹುದು, ಆ ನಿಟ್ಟಿನಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. Over Head Tank ಮೂಲಕ *Multi-Village Water Supply Schemes* ಅಡಿಯಲ್ಲಿ ಕೂಡ ನೀರನ್ನು ಅನ್ನು ಶುದ್ಧೀಕರಿಸಿ ಕೊಡುತ್ತಿದ್ದೇವೆ. ಮುಂಬರುವ ದಿನಗಳಲ್ಲಿ ಸರ್ಕಾರ ಈ ಬಗ್ಗೆ ಗಂಭೀರವಾಗಿ ಕ್ರಮ ಕೈಗೊಳ್ಳುತ್ತದೆ.

ಮಾನ್ಯ ಸಭಾಪತಿಯವರೇ, fluoride ನಿಂದ ಆಗುತ್ತಿರುವ damage on human body ಬಗ್ಗೆ ನಾವು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಕೆರೆಗಳನ್ನು ತುಂಬಿ ಆದಷ್ಟು ಅಂತರ್ಜಲವನ್ನು ಅಭಿವೃದ್ಧಿ ಮಾಡಲಿಕ್ಕೆ ನೋಡುತ್ತಿದ್ದೇವೆ. ಮಾನ್ಯ ಸದಸ್ಯರು ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯ ಬಗ್ಗೆ ಹೇಳಿದ್ದಾರೆ, ಈ ವಿಚಾರದಲ್ಲಿ ನಾವು ಈಗಾಗಲೇ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಿದ್ದೇವೆ. Sewage water ಏನಿತ್ತು, ಸುಮಾರು 370 ರಿಂದ 390 ಎಂಎಲ್‌ಡಿ ಯವರೆಗೆ ಆ ಕಡೆ ಪಂಪ್ ಮಾಡಿ ಕೆರೆಗಳಲ್ಲಿ ನೀರನ್ನು ಸಂಗ್ರಹ ಮಾಡಿರುವುದರಿಂದ ಅದರ ಹಿಂಭಾಗದಲ್ಲಿ ನೀರಿನ ಮಟ್ಟ ಜಾಸ್ತಿಯಾಗುತ್ತಿದೆ. ಆದರೆ, ಈ ವಿಚಾರದಲ್ಲಿ ಎಲ್ಲಿಯೋ ಒಂದು ಕಡೆ complication ಆಗಿದೆ, ಆ ನೀರು ಕುಡಿಯಲಿಕ್ಕೆ ಯೋಗ್ಯವೋ ಅಥವಾ ಯೋಗ್ಯವಲ್ಲವೋ ಎನ್ನುವುದರ ಬಗ್ಗೆ ಕೋರ್ಟ್ ಮುಂದಿದೆ. It is secondary treatment; we have not gone for tertiary treatment. Tertiary treatment ಆಗಿದ್ದರೆ ಈ ನೀರನ್ನು ಕುಡಿಯಿರಿ ಎಂದು ಹೇಳಬಹುದಾಗಿತ್ತು. ಈಗ secondary treatment ಮಾಡಿ fill-up ಮಾಡುತ್ತಿದ್ದೇವೆ. ಭೂಮಿಯಲ್ಲಿ ಏನಾದರೂ ground water ಮೇಲೆ ಬಂದರೆ ಇದು ಸ್ವಾಭಾವಿಕವಾಗಿ ಭೂಮಿಯ ಅಂತರದಲ್ಲಿ ಬಂಡೆ ಮಧ್ಯೆದಲ್ಲಿ ಕೆಮಿಕಲ್ಸ್ ಇದ್ದು, ರಸಾಯಿನಿಕಗಳು generate ಆಗುವುದೆಲ್ಲವೂ ತಪ್ಪುತ್ತದೆ. ಆ ಸಮಯಕ್ಕೆ ಈ ರೀತಿಯ ಪರಿಸ್ಥಿತಿ ಕಡಿಮೆಯಾಗುತ್ತದೆ. ಅಲ್ಲಿಯವರೆಗೆ ಆದಷ್ಟುಮಟ್ಟಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ಪಂಚಾಯತ್ ರಾಜ್ ಇಲಾಖೆಯಿಂದ ನೀರನ್ನು ಶುದ್ಧ ಮಾಡಿ ಜನರಿಗೆ ಕೊಡುವಂತಹ ಸ್ಥಿತಿಯನ್ನು ನಾವು ತರುತ್ತೇವೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಇಲ್ಲಿ ಬಹಳ ಪ್ರಮುಖವಾದ ಅಂಶ ಏನೆಂದರೆ industrial effluents, toxics ಬಹಳ entry ಯಾಗುತ್ತದೆ. ಇದು ನಮ್ಮ ಭೂಮಿಯೊಳಗಡೆ ಶಾಶ್ವತವಾಗಿ ಉಳಿದುಬಿಡುತ್ತದೆ ಎಂದರೆ ಇದನ್ನು ತೆಗೆಯಲಿಕ್ಕೆ ಬಹಳ ಕಷ್ಟವಾಗುತ್ತದೆ. ಯಾವುದೇ ರೀತಿಯಲ್ಲಿ ಈ ನೀರನ್ನು ಮುಂದಿನ ಪೀಳಿಗೆಗೆ ಉಪಯೋಗಿಸಲಿಕ್ಕೆ ಸಾಧ್ಯವಿಲ್ಲ. ಇವತ್ತು ಅಲರಾಂ ಆಗುತ್ತಿದೆ. ಈ ಆಲರಾಂಗೆ ಏನೆಲ್ಲಾ ಕಾರ್ಯಕ್ರಮಗಳು ಇವೆ, ಇವುಗಳನ್ನು ಬಹಳ effective ಆಗಿ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಕೈಗಾರಿಕೆಗಳ ಮೇಲೆ Pollution Control Board ಸರಿಯಾದಂತಹ ಹತೋಟಿಯನ್ನಿಡಬೇಕು. ಇದ್ಯಾವುದೂ ಇಲ್ಲದೇ ಇರುವುದರಿಂದ ಇವತ್ತು contamination ಜಾಸ್ತಿಯಾಗುತ್ತಿದೆ. Bacterial and chemical contamination ಆಗುತ್ತಿದೆ. ಇದನ್ನು ತಡೆಯುವುದಕ್ಕೆ effective programmes ಅನ್ನು ಏನು ಹಾಕಿಕೊಂಡಿದ್ದಾರೆ?

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಬೆಂಗಳೂರು ಸೇರಿದಂತೆ ಎಲ್ಲಾ ಸಿಟಿಗಳಲ್ಲಿ sewage control ಆಗಲೇ ಬೇಕು, treatment ಆಗಲೇ ಬೇಕು. ಅದರಲ್ಲಿ ಏನಾದರೂ ಬಂದಂತಹ solid ಅನ್ನು ಕೂಡ conversion ಮಾಡಬೇಕು. ಇಲ್ಲಿಂದ ಮುಂದಕ್ಕೆ sewage ಅನ್ನು ಏನು drainage ನಲ್ಲಿ ಹರಿಸುತ್ತಿದ್ದೀರಿ, open ಆಗಿ ಬಿಡುತ್ತಿದ್ದಿರಿ, ಇದನ್ನು ಕಂಟ್ರೋಲ್ ಮಾಡಲೇಬೇಕು ಎಂದು ಹೇಳಿ ಈಗಾಗಲೇ ಈ ನಿಟ್ಟಿನಲ್ಲಿ ಎರಡು ಸಭೆಗಳನ್ನು ಮಾಡಿದ್ದೇವೆ. Industrial waste or city waste ಇರಬಹುದು, ಎಲ್ಲಿಯಾದರೂ sewage ಇದೆ ಎಂದರೆ we are planning to treat entire sewage in the state. ಮೊದಲನೆಯ ಹಂತವಾಗಿ ಬೆಂಗಳೂರು ಅನ್ನು ತೆಗೆದುಕೊಂಡಿದ್ದೇವೆ. ಬೆಂಗಳೂರು ಒಂದರಲ್ಲಿಯೇ 17 ಟಿಎಂಸಿ sewage generate ಆಗುತ್ತಿದೆ.

ಮುಂದು. . .

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(190) 6.3.2020, 1.40 KG.MD

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಮುಂದು.):-**

We are able to just treat 4 to 4.5 TMC of water. 4 ರಿಂದ 4.5 ಟಿ.ಎಂ.ಸಿ ನೀರನ್ನು treat ಮಾಡಿ ಕೆರೆಗಳಿಗೆ ಕೊಟ್ಟಿದ್ದೇವೆ. ನಾವೀಗ ನಾಯಗೊಂಡನಹಳ್ಳಿಗೆ ಸಂಬಂಧಿಸಿದ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಬೆಂಗಳೂರಿನಿಂದ 10 ರಿಂದ 11 ಟಿ ಎಂ ಸಿ sewage water treat ಮಾಡುವುದಕ್ಕೆ ರಾಜ್ಯ ಸರ್ಕಾರ ಯೋಜನೆ ಮಾಡಿದೆ. ಈಗ ಕೈಗಾರಿಕೆಯವರು ಮುಂದೆ ಬಂದಿದ್ದಾರೆ. ಎಲ್ಲೆಲ್ಲಿ industrial waste and industrial pollution ನಿಂದ ಕೂಡಿರುವಂತಹ ನೀರು ಬರುತ್ತದೆ ಎಂದು ತಾವು ಹೇಳುತ್ತೀರಿ, ಅವರು ಸಹ ಕೇಳುತ್ತಿದ್ದಾರೆ. ಅವರಿಗೂ ಸಹ ಷರತ್ತುಗಳನ್ನು ಹಾಕುತ್ತಿದ್ದೇವೆ. Except drinking water, waste water treat ಮಾಡಿಕೊಂಡು ಇದನ್ನೇ ಬಳಸಿಕೊಳ್ಳಬೇಕೆಂದು ಹೇಳಿದ್ದೇವೆ. Time will change. ಒಳ್ಳೆಯದು ಆಗುತ್ತದೆಂಬ ಆಸೆಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಆದ್ದರಿಂದ, ಈ ಸಂದರ್ಭದಲ್ಲಿ ಇಷ್ಟು ಹೇಳುವುದಕ್ಕೆ ಬಯಸುತ್ತೇನೆ,

**(ಪ್ರಶ್ನೆ ಸಂಖ್ಯೆ 438 ಮತ್ತು 362)**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅದಕ್ಕೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಂಕಿ-ಅಂಶಗಳನ್ನು ಸಹ ಕೊಟ್ಟಿದ್ದಾರೆ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗ ಸರ್ಕಾರದಿಂದ ಏನಾಗಬೇಕು ಎಂಬುದನ್ನು ಹೇಳುತ್ತೇನೆ. ಹಿಂದಿನ ಕಾಲದಲ್ಲಿ "ಕಂದಯ್ಯ ಆಡಿದರೆ ಚೆಂದದ ಆರಮನೆ" ಎಂಬ ಗಾದೆ ಮಾತನ್ನು ಹೇಳುತ್ತಿದ್ದರು. ಇದರ ಬಗ್ಗೆ ಮಾನ್ಯ ಸಚಿವರಿಗೆ ತುಂಬ ಕಾಳಜಿ ಇದೆ. ನಾನು ಮೊದಲನೆಯದಾಗಿ, ರಾಜ್ಯದಲ್ಲಿರುವ ಒಟ್ಟು ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು ಮತ್ತು ಅವುಗಳಲ್ಲಿ ಸ್ವಂತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೇಂದ್ರಗಳೆಷ್ಟು ಎಂಬ ಪ್ರಶ್ನೆಯನ್ನು ಕೇಳಿದ್ದೆ. ಇದಕ್ಕೆ ಮಾನ್ಯ ಸಚಿವರು ಅಂಕಿ ಅಂಶಗಳ ಸಮೇತವಾಗಿ ಉತ್ತರವನ್ನು ಒದಗಿಸಿದ್ದಾರೆ. ಎರಡನೆದಾಗಿ, ಸ್ವಂತ ಕಟ್ಟಡಗಳಿಲ್ಲದೇ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳಿಗೆ ಯಾವ ರೀತಿ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಅವು ಯಾವುವು ಎಂದು ಕೇಳಿದ್ದೆ. ಇದಕ್ಕೂ ಸಹ ಮಾನ್ಯ ಸಚಿವರು ಉತ್ತರವನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒದಗಿಸಿದ್ದಾರೆ. ಅಲ್ಲಿರುವಂತಹ ಸಮಸ್ಯೆ ಏನೆಂದರೆ, ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿಲ್ಲದೇ ಅವು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ಇತ್ತೀಚಿನ ದಿವಸಗಳಲ್ಲಿ ಬಾಡಿಗೆಗೂ ಸಹ ಕಟ್ಟಡಗಳು ಸಿಗುವುದು ಬಹಳ ಕಷ್ಟವಾಗಿದೆ. ಅಲ್ಲದೇ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ನಿವೇಶನಗಳು ಸಹ ಸಿಗುತ್ತಿಲ್ಲ. ಸರ್ಕಾರಿ ಶಾಲೆಗಳಿರುವಂತಹ ಕಡೆಗಳಲ್ಲಿ ಆ ಶಾಲೆಗಳ ಮೇಲೆ ಅಂಗನವಾಡಿ ಕೇಂದ್ರಗಳನ್ನು ಕಟ್ಟಿಸಿದರೆ ಅನುಕೂಲವಾಗುತ್ತದೆ. ಮಾನ್ಯ ಸಚಿವರು ಈಗಾಗಲೇ ಅಂಗನವಾಡಿ ಕೇಂದ್ರಗಳನ್ನು ಕಟ್ಟುವುದಕ್ಕೆ ಕೊಟ್ಟಿದ್ದೇವೆಂದು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಈ ಕಟ್ಟಡ ನಿರ್ಮಾಣಕ್ಕೆ 'ನರೇಗಾ' ದಿಂದ ಮತ್ತು ಇಲಾಖೆಯಿಂದ ಕೊಡಬೇಕೆಂದು ಇದೆ. ಏಕೆಂದರೆ, ಇದಕ್ಕೆ 'ನರೇಗಾ'ದಿಂದ ಕೊಡುತ್ತಿರುವಂತಹ ಹಣ ಸಾಕಾಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಪ್ರಶ್ನೆ ಕೇಳಿ.

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೇ, ಇದು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಕಟ್ಟಡಗಳನ್ನು ಕಟ್ಟುವುದಿಲ್ಲವೆಂದು ಆಗಲೇ ಆ ಕಾಮಗಾರಿಗಳು ಅರ್ಧದಲ್ಲಿ ನಿಂತಿವೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಪ್ರಶ್ನೆ ಕೇಳಿ. ಯಾವುದೋ ಒಂದು ಕಟ್ಟಡ ಅಲ್ಲ. specific ಆಗಿ ಹೇಳಬೇಕು.

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೇ, ಸಮಸ್ಯೆ ಇರುವುದನ್ನೇ specific ಆಗಿ ಹೇಳುತ್ತಿದ್ದೇನೆ. ಸಾಕಷ್ಟು ಪ್ರಶ್ನೆಗಳನ್ನು ಕೇಳಿದ್ದೆವೆ. ಇಲ್ಲಿ ಏನಾಗಿದೆ ಎಂದರೆ, 'ನರೇಗಾ' ದಿಂದ ಕೊಡುತ್ತಿರುವ ಹಣದಿಂದ ಕಟ್ಟಡಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಮಾನ್ಯ ಸಚಿವರು ಇಲಾಖೆಯಿಂದ ಹೆಚ್ಚಿಗೆ ಹಣ ಕೊಟ್ಟರೆ ಮಾತ್ರ ಕಟ್ಟಡಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ಇನ್ನೂ ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಲು ಇಲಾಖೆಯಿಂದ 20,000/- ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಈ ಹಣದಲ್ಲಿ ಶೌಚಾಲಯಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಕೊನೆಯ ಪಕ್ಷ 30,000 ರೂಪಾಯಿಗಳನ್ನು ಕೊಟ್ಟರೆ ಶೌಚಾಲಯಗಳನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಮಾನ್ಯ ಸಭಾಪತಿಯವರೇ, ನಾನು ಮತ್ತು ಮಾನ್ಯ ಸಚಿವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಒಂದು ಸಮಿತಿಯಲ್ಲಿ ಇದ್ದೆವು. ಅಂಗನವಾಡಿ ಕೇಂದ್ರಗಳಲ್ಲಿ ಅಂಗವಿಕಲ ಮಕ್ಕಳು ಇದ್ದರೆ ಅಂತಹ ಕಡೆಗಳಿಗೆ ಒಂದು ವೀಲ್‌ಚೇರ್‌ನ್ನು ಸಹ ಕೊಡಬೇಕು. ಏಕೆಂದರೆ, ಆ ವೀಲ್‌ಚೇರ್‌ನಲ್ಲಿ ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಗುವನ್ನು ಕೂರಿಸಿಕೊಂಡು ಹೋಗಿ ಬಿಡಬಹುದು. ಸುಮಾರು ಆರು ವರ್ಷದವರೆಗೂ ಆ ಮಗು ಆ ಕೇಂದ್ರದಲ್ಲಿ ಇರುತ್ತದೆ. ಇದನ್ನು ಮಾನ್ಯ ಸಚಿವರ ಗಮನಕ್ಕೆ ಈ ಹಿಂದೆಯೇ ತಂದಿದ್ದೆ. ಇದರ ಬಗ್ಗೆ ಮಾನ್ಯ ಸಚಿವರು ಹೆಚ್ಚು ಗಮನವಹಿಸಿ ವ್ಯವಸ್ಥೆ ಮಾಡಿದರೆ ತುಂಬ ಅನುಕೂಲವಾಗುತ್ತದೆ. ಇದರ ಜೊತೆಗೆ ಅಂಗನವಾಡಿ ಕಾರ್ಯಕರ್ತರ ತೊಂದರೆಯು ಸಹ ಇದೆ. ಎರಡು ಅಂಗನವಾಡಿ ಕೇಂದ್ರಗಳಿಗೆ in-charge ಮಾಡಿದರೆ ಮಕ್ಕಳನ್ನು ನೋಡಿಕೊಳ್ಳುವವರು ಯಾರು? ಆದ್ದರಿಂದ, ಮಾನ್ಯ ಸಚಿವರು ಪ್ರತಿಯೊಂದು ಅಂಗನವಾಡಿಗೂ ಒಬ್ಬೊಬ್ಬರು ಕಾರ್ಯಕರ್ತರನ್ನು ನೇಮಕ ಮಾಡುವುದರ ಬಗ್ಗೆಯೂ ಸಹ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳಿದ್ದಾರೆ. ನನ್ನ ಪ್ರಶ್ನೆಗಳಿಗೂ ಸೇರಿ ಮಾನ್ಯ ಸಚಿವರು ಉತ್ತರವನ್ನು ಕೊಡಲಿ ಎಂದು ಬಯಸುತ್ತೇನೆ. ನನ್ನ ಪ್ರಶ್ನೆ ಏನೆಂದರೆ, ಕಟ್ಟಡಗಳಿಲ್ಲದಿರುವ ಅಂಗನವಾಡಿ ಕೇಂದ್ರಗಳಲ್ಲಿ ಆಹಾರ ಪದಾರ್ಥಗಳನ್ನು ಶೇಖರಿಸಿಡಲು ಸಾಧ್ಯವಾಗದೇ ವಾಪಸ್ ಕಳುಹಿಸುತ್ತಿರುವ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬುದಾಗಿ ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಅಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. "ವಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಕರ್ನಾಲ್ ಗ್ರಾಮದ ವ್ಯಾಪ್ತಿಯಲ್ಲಿ ಆಗಿರುವಂತಹ ಘಟನೆ ಬಗ್ಗೆ ಡಿಸೆಂಬರ್, 17ನೇ ದಿನಾಂಕದಂದು 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಸಂಗ್ರಹವಾಗಿರುವಂತಹ ಆಹಾರ ಪದಾರ್ಥಗಳನ್ನು ಅಲ್ಲಿ ಇಡುವುದಕ್ಕೆ ಜಾಗವಿಲ್ಲವೆಂದು ಅದನ್ನು ವಾಪಸ್ಸು ಕಳುಹಿಸಿರುವಂತಹದ್ದನ್ನು ಮಾನ್ಯ ಸಚಿವರು ಗಮನಿಸಬೇಕೆಂದು ಬಯಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ನನ್ನ ಎರಡನೇ ಪ್ರಶ್ನೆ ಏನೆಂದರೆ, 2020–2021ನೇ ಸಾಲಿನಲ್ಲಿ ಎಷ್ಟು ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಎಂಬುದಾಗಿ ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಅನುದಾನ ಲಭ್ಯತೆಗೆ ಅನುಗುಣವಾಗಿ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಪರಿಶೀಲಿಸಲಾಗುವುದು ಎಂದು ತಿಳಿಸಿದ್ದಾರೆ. ಬಹುಶಃ ಈ ಪ್ರಶ್ನೆಗೆ ಸಮರ್ಪಕವಾಗಿ ಉತ್ತರ ಬಂದಿಲ್ಲವೆಂದು ನಾನು ಭಾವಿಸುತ್ತೇನೆ. ಇದರ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕೆಂದು ಬಯಸುತ್ತೇನೆ. ಇಡೀ ರಾಜ್ಯದಲ್ಲಿ ಬಹಳ ಕಡೆಗಳಲ್ಲಿ ಶೌಚಾಲಯಗಳು ಇರಬಹುದು, ನೀರಿನ ಸಂಪರ್ಕ ಇರಬಹುದು ಈ ತರಹ ಮೂಲಭೂತ ಸೌಕರ್ಯಗಳಿಲ್ಲದೆ ಇರುವಂತಹ ಅಂಗನವಾಡಿ ಕೇಂದ್ರಗಳು ಬಹಳಷ್ಟು ಇವೆ. ಮಾನ್ಯ ಸಚಿವರು ಅಂಗನವಾಡಿ ಕೇಂದ್ರಗಳು ಶೆಡ್‌ಗಳಲ್ಲಿ, ದೇವಸ್ಥಾನಗಳಲ್ಲಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮುದಾಯ ಭವನ, ಮಹಿಳಾ ಮಂಡಲ, ಯುವಕ ಮಂಡಲ ಮುಂತಾದ ಸ್ಥಳಗಳಲ್ಲಿ ನಡೆಸಲು ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂದು ಹೇಳಿದ್ದಾರೆ. ರಾಜ್ಯದಲ್ಲಿರುವ ಒಟ್ಟು ಅಂಗನವಾಡಿ ಕೇಂದ್ರಗಳ ಸಂಖ್ಯೆ 65911 ಮತ್ತು ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ 44312 ರಲ್ಲಿ ಮಾತ್ರ ಈ ವ್ಯವಸ್ಥೆ ಇದೆ ಎಂದು ಉತ್ತರವನ್ನು ನೀಡಿದ್ದಾರೆ. ಅಂಗನವಾಡಿ ಕೇಂದ್ರಗಳಿಗೆ ಕೊಡಬೇಕಾಗಿರುವಂತಹ ವ್ಯವಸ್ಥೆಗಳನ್ನು ನೀಡುವುದಕ್ಕೆ ಆಗುತ್ತಿಲ್ಲ. ಆದ್ದರಿಂದ, ಮಾನ್ಯ ಸಚಿವರು ಇದರ ಕಡೆ ಗಮನಹರಿಸಿ ಅಂಗನವಾಡಿ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತಿದ್ದೇನೆ.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್:-** ಮಾನ್ಯ ಸಚಿವರೇ, ಈ ಪ್ರಶ್ನೆಗಳನ್ನು ಕೇಳಿರುವಂತಹ ಮಾನ್ಯ ಸದಸ್ಯರುಗಳಿಗೆ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಬಹಳ ವರ್ಷಗಳಿಂದ ಅಂಗನವಾಡಿ ಕೇಂದ್ರಗಳು ನಡೆಯುತ್ತಿವೆ. ಅಲ್ಲಿ ಈ ಸರ್ಕಾರ, ಆ ಸರ್ಕಾರ ಎನ್ನುವುದರ ಬದಲು, ಯಾವ ಸರ್ಕಾರ ಇದ್ದರೂ ಸಹ ಅದರ ಕಡೆಗೆ ಹೆಚ್ಚಿನ ಮಹತ್ವ ಕೊಟ್ಟಿದ್ದರೆ, ಏಕೆಂದರೆ, ಅಂಗನವಾಡಿ ಕೇಂದ್ರಗಳಿಗೆ ಬರುವಂತಹ ಮಕ್ಕಳು ಬಡ ಕುಟುಂಬದ ಮತ್ತು ಮಧ್ಯಮ ವರ್ಗದ ಮಕ್ಕಳಾಗಿರುತ್ತಾರೆ. ಆಯಾ ಸರ್ಕಾರಗಳು ಇದ್ದಂತಹ ಕಾಲದಲ್ಲಿಯೇ ಇದರ ಬಗ್ಗೆ ಯೋಚನೆ ಮಾಡಿದ್ದರೆ, ಇವತ್ತಿನ ದಿವಸ ಕಟ್ಟಡಗಳು ಬೇಕು ಎನ್ನುವ ಪ್ರಮೇಯ ಬರುತ್ತಿರಲಿಲ್ಲ. ನಮ್ಮ ರಾಜ್ಯದಲ್ಲಿ ಒಟ್ಟು ಅಂಗನವಾಡಿ ಕೇಂದ್ರಗಳು 65911 ಇವೆ ಅದರಲ್ಲಿ 44312 ಅಂಗನವಾಡಿ ಕೇಂದ್ರಗಳು ಮಾತ್ರ ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿವೆ. ಇನ್ನುಳಿದ ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ಸ್ವಂತ ಕಟ್ಟಡಗಳಿಲ್ಲದ ಅಂಗನವಾಡಿ ಕೇಂದ್ರಗಳು ಇತರೆ ಸರ್ಕಾರಿ ಕಟ್ಟಡಗಳಲ್ಲಿ ಬಾಡಿಗೆ ಕಟ್ಟಡಗಳಲ್ಲಿ, ಸಮುದಾಯ ಭವನಗಳಲ್ಲಿ, ಮಹಿಳಾ ಮಂಡಳಗಳಲ್ಲಿ, ಯುವಕ ಮಂಡಳಗಳಲ್ಲಿ ಮುಂತಾದ ಕಡೆಗಳಲ್ಲಿ ನಡೆಯುತ್ತಿವೆ. ಅಷ್ಟೇ ಅಲ್ಲದೇ ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿಗೆ ಬರುವಂತಹ ಮಕ್ಕಳು ಸಾಮಾನ್ಯ ವರ್ಗದ ಮಕ್ಕಳಾಗಿರುವುದರಿಂದ ಅಲ್ಲಿ ಒಂದು ಒಳ್ಳೆಯ ವಾತಾವರಣ ಇರಬೇಕೆಂದು ನಾನು ಮಹತ್ವ ಕೊಡುತ್ತಿದ್ದೇನೆ. ಏಕೆಂದರೆ, ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನನ್ನ ಉಸ್ತುವಾರಿ ಜಿಲ್ಲೆಯಾದ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವೊಂದು "ಬಾಲಾ ಸ್ನೇಹಿ ಅಂಗನವಾಡಿಗಳು" ಎಂದು pilot project ನ್ನು ಮಾಡುತ್ತಿದ್ದೇವೆ.

ಮುಂದು .,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(191)06-03-2020(1-50)ಎಂವಿ-ಎಕೆ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್ (ಮುಂದು):-**

ಅಲ್ಲಿ ಹೊರಗಡೆ ಮತ್ತು ಒಳಗಡೆ ಚಿತ್ರಗಳನ್ನು ಬರೆದು. ಅಲ್ಲಿರುವಂತಹ ಮೂರು ವರ್ಷದ ಮಕ್ಕಳು ಆಟದ ಜೊತೆಗೆ ಪಾಠವನ್ನು ಕಲಿಯಬೇಕು ಎನ್ನುವಂಥದ್ದು. ಅದೇ ರೀತಿಯಾಗಿ ಅಲ್ಲಿ ಒಂದು ಪ್ರಯೋಗವನ್ನು ಮಾಡಿದಾಗ, ceiling ನ ಮೇಲೂ ಕೂಡ ಸೌರವ್ಯೂಹವನ್ನು ಮಾಡಿ, ಮಕ್ಕಳು ಮಲಗಿಕೊಂಡಾಗ ಕೂಡ ಅದನ್ನು ನೋಡಿ ಕಲಿಯಬೇಕು ಎನ್ನುವಂತಹ ಉದ್ದೇಶವನ್ನು ಇಟ್ಟುಕೊಂಡು ಮಾಡಿದಾಗ, ಅಲ್ಲಿನ ಪಾಲಕರಿಂದ ಬಹಳ ಉತ್ತಮವಾದ ಪ್ರತಿಕ್ರಿಯೆ ಬಂದಿದೆ. ಅದೇ ರೀತಿಯಾಗಿ ಇಲ್ಲಿಯವರೆಗೆ ಅಂಗನವಾಡಿ ಕೇಂದ್ರಗಳಿಗೆ ಆಟಿಕೆ ಸಾಮಾನುಗಳನ್ನು ಕೊಡುತ್ತಿದ್ದೆವು. ಅದು ಏನೆಂದರೆ, ಸುಮಾರು 20 ರಿಂದ 25 ವರ್ಷಗಳ ಹಳೆಯ ಆಟಿಕೆ ಸಾಮಾನುಗಳು, ಅಂದರೆ, ಮುತ್ತು ಪೋಣಿಸುವುದು ಮತ್ತು ಬ್ಲಾಕ್ ಜೋಡಿಸುವುದು ಇತ್ತು. ಆದರೆ, ಇವತ್ತಿನ ಕಾಲಕ್ಕೆ ತಕ್ಕಂತೆ ನಾವು ಕೂಡ ಬದಲಾವಣೆಯಾಗಬೇಕು ಮತ್ತು ನಮ್ಮ ಮಕ್ಕಳು ಕೂಡ ಒಳ್ಳೆಯ ರೀತಿಯಲ್ಲಿ ಬೆಳೆಯಬೇಕು ಎಂದು, ನಾನು ಈಗಾಗಲೇ ನಮ್ಮ ಹಿರಿಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಯಾವ ರೀತಿ ಎಲ್ಲಾ ಕಡೆ ಇ-ಲರ್ನಿಂಗ್ ಎನ್ನುತ್ತೇವೆ ಮತ್ತು ಅವರು ಕಂಪ್ಯೂಟರ್ ಕಲಿಯಬೇಕೆಂದು ಹೇಳುತ್ತೇವೆ. ಆ ಮಕ್ಕಳು ಕೂಡ ಒಳ್ಳೆಯ ರೀತಿಯಿಂದ ಕಲಿಯಬೇಕೆಂದು ಒಂದು ಹೊಸ ರೀತಿಯ ಪ್ರಯೋಗವನ್ನು ಮಾಡುತ್ತಿದ್ದೇವೆ. ಆ ರೀತಿಯಾಗಿ ಈಗಾಗಲೇ ಕಾರವಾರದಲ್ಲಿ ಮಾಡಿದ್ದೇವೆ. ಅಲ್ಲೂ ಕೂಡ ಪಾಲಕರಿಂದ ಬಹಳ ಒಳ್ಳೆಯ ಪ್ರತಿಕ್ರಿಯೆ ಬಂದಿರುವುದರಿಂದ, ಮುಂದಿನ ದಿನಗಳಲ್ಲಿ ಅದನ್ನು ಇಡೀ ಕರ್ನಾಟಕದಲ್ಲಿ ಮಾಡುವಂತಹ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಮತಿ ಜಯಮ್ಮನವರು ಹೇಳಿದ ಹಾಗೆ, ಅಲ್ಲಿ ಬರುವಂತಹ ವಿಕಲಚೇತನ ಮಕ್ಕಳ ತಾಯಂದಿರ ನೋವು ಏನೆಂದು ನನಗೂ ಕೂಡ ಗೊತ್ತಿದೆ. ಅಲ್ಲಿಗೆ ಬರುವಂತಹ ವಿಕಲಚೇತನ ಮಕ್ಕಳಿಗೆ ವ್ಹೀಲ್‌ಚೇರ್ ಕೊಡಬೇಕೆಂದು ಕಳೆದ ಐದು ವರ್ಷಗಳಿಂದ ಸಮಿತಿಯಲ್ಲಿ ಚರ್ಚೆ ಮಾಡುತ್ತಾ ಬಂದಿದ್ದೇವೆ. ಇವತ್ತಿನ ದಿವಸ ಮಾನ್ಯ ಸದಸ್ಯರು ಹೇಳಿರುವಂಥದ್ದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು, ಅಂತಹ ಮಕ್ಕಳಿಗೆ ವ್ಹೀಲ್‌ಚೇರ್ ಕೊಡುವಂತಹ ಕಾರ್ಯಕ್ರಮವನ್ನು ಮಾಡಬಹುದೇ ಎಂದು ಯೋಚಿಸಿ ಅದನ್ನು ಪರಿಶೀಲನೆ ಮಾಡಿ, ಅದನ್ನು ಮಾಡುವಂತಹ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದೇರೀತಿ ಈಗಾಗಲೇ ಅಂಗನವಾಡಿ ಕಟ್ಟಡಗಳಿಗೆ ಎನ್.ಆರ್.ಇ.ಜಿ.ಯಿಂದ ಐದು ಲಕ್ಷ ಮತ್ತು ನಮ್ಮ ಇಲಾಖೆಯಿಂದ ಐದು ಲಕ್ಷವನ್ನು ಕೊಡುತ್ತೇವೆ. ಅದು ಸಾಕಾಗುವುದಿಲ್ಲ ಎನ್ನುವಂತಹ ಮಾತು ನಿಜ. ಏಕೆಂದರೆ, ಇವತ್ತಿನ ದಿವಸ ಕಾಸ್ಟ್ ಎಸ್ಟಿಮೇಟ್ ಅನ್ನು ನೋಡಿದರೆ, ಸುಮಾರು 18 ಲಕ್ಷಕ್ಕೆ ಒಂದು ಒಳ್ಳೆಯ ಅಂಗನವಾಡಿ ಕಟ್ಟಡವನ್ನು ಕಟ್ಟುತ್ತೇವೆ. ಈಗಾಗಲೇ ನಿನ್ನೆಯ ಬಜೆಟ್ ಮಂಡನೆಯಲ್ಲಿ ಸುಮಾರು 840 ಅಂಗನವಾಡಿಗಳನ್ನು RIDF (Rural Infrastructure Development Fund), NABARD (National Bank for Agriculture and Rural Development) ನಿಂದ ತೆಗೆದುಕೊಂಡಿದ್ದೇವೆ. ಮುಂದೆ ಬರುವಂತಹ ದಿನಗಳಲ್ಲಿ ಕೂಡ ಪ್ರಯತ್ನ ನಡೆದಿದೆ. ಸರ್ಕಾರ ಇರಬಹುದು, ನಬಾರ್ಡ್ ಇರಬಹುದು ಮತ್ತು CSR (Corporate Social Responsibility) Fund ಇರಬಹುದು. ಆದರೆ, ನಾವು ಪ್ರಯತ್ನ ಮಾಡುತ್ತಿದ್ದೇವೆ. ಮುಂದಿನ ಮೂರು ವರ್ಷಗಳಲ್ಲಿ ಸಾಧ್ಯವಾದಷ್ಟು ಅಂಗನವಾಡಿ ಕಟ್ಟಡಗಳನ್ನು ಒಂದು ಒಳ್ಳೆಯ ರೀತಿಯಿಂದ ಕಟ್ಟಿಸಿಕೊಡುವಂಥದ್ದನ್ನು ಮಾಡುತ್ತೇವೆ.

ಎರಡನೆಯದಾಗಿ, ಸದಸ್ಯರಾದ ಮಾನ್ಯ ಟಿ.ಎ.ಶರವಣರವರು ಶೌಚಾಲಯಗಳು ಮತ್ತು ನೀರಿನ ವ್ಯವಸ್ಥೆ ಇಲ್ಲವೆಂದು ಹೇಳಿದರು. ನಮ್ಮ ರಾಜ್ಯದಲ್ಲಿ ಸುಮಾರು 8716 ಅಂಗನವಾಡಿ ಕೇಂದ್ರಗಳು ಬೇರೆ ಬೇರೆ ಕಟ್ಟಡಗಳಲ್ಲಿ ನಡೆಯುವುದರಿಂದ, ಅಲ್ಲಿ ಶೌಚಾಲಯಗಳು ಇಲ್ಲ. ಇಲ್ಲಿಯವರೆವಿಗೂ ನಮಗೆ ಯಾವುದೇ ರೀತಿಯ ಯೋಚನೆಗಳು ಇರಲಿಲ್ಲ. ಆದರೆ, ನಮ್ಮ ಸರ್ಕಾರ ಬಂದ ಮೇಲೆ, ಅದರ ಬಗ್ಗೆ ಯೋಜನೆ ಮಾಡಿ, ಈಗಾಗಲೇ ನಿರ್ದೇಶನವನ್ನು ಕಳುಹಿಸಿದ್ದೇವೆ. ಈಗ ಎಲ್ಲಿ ಬಾಡಿಗೆ ಕಟ್ಟಡ ಇರುತ್ತದೆಯೋ ಅವರು ಶೌಚಾಲಯವನ್ನು ಕಟ್ಟಿಸಿಕೊಡುವಂಥದ್ದು ಆಗಬಹುದು. ಅವರು ಶೌಚಾಲಯ ಕಟ್ಟಿಸಿಕೊಡುವುದಕ್ಕೆ ಆಗಲಿಲ್ಲವೆಂದರೆ, ಅದನ್ನು ಬೇರೆ ಕಡೆಗೆ ಶಿಫ್ಟ್ ಮಾಡಬಹುದು ಅಥವಾ ಇಲಾಖೆಯವರೇ ಅದನ್ನು ಕಟ್ಟಿಸಿಕೊಡುವಂತಹ ಯೋಚನೆ ಮಾಡುತ್ತಿದ್ದೇವೆ. ಈಗಾಗಲೇ ಎಲ್ಲಾ ಜಿಲ್ಲೆಯ ಅಧಿಕಾರಿಗಳಿಗೆ ತಿಳಿಸಿ ಅದಕ್ಕೆ ಸಂಬಂಧಪಟ್ಟಂತೆ ಕ್ರಮ ಕೈಗೊಳ್ಳುತ್ತಿದ್ದೇವೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಅಂಗನವಾಡಿಗಳಿಗೆ ಆಹಾರ ಧಾನ್ಯಗಳನ್ನು ಕಳುಹಿಸಿ ಕೊಡುವುದರ ಬಗ್ಗೆ ತಿಳಿಸಲಿ.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆಯೂ ಸಹ ಹೇಳುತ್ತೇನೆ. ಕಟ್ಟಡಗಳ ಸಮಸ್ಯೆ ಇರುವುದರಿಂದ ಅಲ್ಲಿಗೆ ಬರುವಂತಹ ಆಹಾರ ಧಾನ್ಯಗಳನ್ನು ಇಡುವುದಕ್ಕೆ ಜಾಗವಿಲ್ಲ ಎಂದು ಹೇಳಿದ್ದಾರೆ. ಆದರೆ ನಾವು ಕೊಟ್ಟಿರುವ ಉತ್ತರದಲ್ಲಿ ಅದು ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಮನಕ್ಕೆ ಇಲ್ಲವೆಂದು ಇದೆ. ಆದರೆ, ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಇದನ್ನು ಉಲ್ಲೇಖಿಸಿದ್ದಾರೆ. ಇದರ ಬಗ್ಗೆ ಅಲ್ಲಿನ ವಿಜಯಪುರದ ಉಪ ನಿರ್ದೇಶಕರಿಗೆ ತಿಳಿಸಿ, ಅದರ ಮಾಹಿತಿಯನ್ನು ತರಿಸಿಕೊಂಡು ಮಾನ್ಯ ಸದಸ್ಯರಿಗೆ ನೀಡುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ. ಅಲ್ಲಿ ಏನಾದರೂ ಆ ರೀತಿಯ ಸಮಸ್ಯೆಯಾಗಿದ್ದರೆ, ಅದಕ್ಕೆ ಸಮರ್ಪಕವಾಗಿ ಏನು ಮಾಡಬೇಕು ಅದನ್ನು ನಾವು ಮಾಡುತ್ತೇವೆ. ಅನುದಾನ ಲಭ್ಯತೆಗನುಸಾರವಾಗಿ ಎಂದು CSR Fund ಬಗ್ಗೆ ಹೇಳಿದ್ದೇನೆ.

**ಸಭಾಪತಿಯವರು:–** ತಾವು ಪ್ರಶ್ನೆ ಕೇಳಿರುವುದಕ್ಕೆ ಮಾತ್ರ ಉತ್ತರ ನೀಡಿ. ಮಾನ್ಯ ಸದಸ್ಯರು ಭಾಷಣ ಮಾಡಿದ್ದಾರೆಂದು ನೀವು ಭಾಷಣ ಮಾಡಿದರೆ ಹೇಗೆ?

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಈಗ ಸ್ವಂತ ಕಟ್ಟಡಗಳು ಇದ್ದರೆ, ಇದಕ್ಕೆಲ್ಲಾ ಪರಿಹಾರ ಸಿಗುತ್ತದೆ ಎಂಬುದು ನನ್ನ ಭಾವನೆ. ಇಲ್ಲಿ ಸಂಗ್ರಹ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಮಾನ್ಯ ಸಚಿವರು ಇದರ ಗಮನ ಹರಿಸಿದರೆ ಪರಿಣಾಮಕಾರಿಯಾಗಿ ನಡೆಯುತ್ತದೆ ಎಂಬುದು ನನ್ನ ಉದ್ದೇಶ.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್:–** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೂ ಆಗದೇ ಇರುವುದನ್ನು ನಾವು ಮಾಡುತ್ತೇವೆ.

**ಸಭಾಪತಿಯವರು:–** ಈಗ ಮಾನ್ಯ ಸದಸ್ಯರಾದ ಶ್ರೀಮತಿ ಜಯಮ್ಮನವರು ಒಂದು ಪ್ರಶ್ನೆಯನ್ನು ಕೇಳಬಹುದು.

**ಶ್ರೀಮತಿ ಜಯಮ್ಮ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡುವುದು ಏನೆಂದರೆ, ಅಂಗನವಾಡಿ ಕೇಂದ್ರಗಳಲ್ಲಿ ಜಾಗವಿಲ್ಲದೇ ಇರುವುದರಿಂದ ಪದಾರ್ಥಗಳು ವಾಪಸ್ಸು ಹೋಗುತ್ತೇವೆಂದು ಹೇಳಿದರು. ಅಲ್ಲಿ ಜಾಗವಿದ್ದರೂ ಕೂಡ ಪದಾರ್ಥಗಳನ್ನು ಸಂಗ್ರಹ ಮಾಡುವುದಕ್ಕೆ ಬಾಕ್ಸ್‌ಗಳು ಇಲ್ಲ. ಇನ್ನೂ ಕೆಲವು ಕಡೆಗಳಲ್ಲಿ ಅಲ್ಲೊಂದು ಇಲ್ಲೊಂದು ಅಂಗನವಾಡಿ ಕೇಂದ್ರಗಳು ಸಮುದಾಯ ಭವನಗಳಲ್ಲಿ ನಡೆಯುತ್ತಿವೆ. ಅಂಗನವಾಡಿ ಕೇಂದ್ರಗಳಲ್ಲಿ ದಾಖಲೆಗಳನ್ನು ಕೇಳುತ್ತಾರೆ. ಅವರು ದಾಖಲೆಗಳನ್ನು ಎಲ್ಲಿಂದ ತಂದು ಕೊಡುತ್ತಾರೆ. ಅಂಗನವಾಡಿ ಕೇಂದ್ರಗಳಿಗೆ ಬೀರುಗಳನ್ನು ಕೊಡಬೇಕು. ಏಕೆಂದರೆ, ಕೆಲವು ಅಂಗನವಾಡಿಗಳಲ್ಲಿ ಇಲಿ ಮತ್ತು ಹೆಗ್ಗಣಗಳಿವೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಅಲ್ಲಿ ಇರುವುದು ಎರಡು ಕಾಲಿನ ಇಲಿ ಮತ್ತು ಹೆಗ್ಗಣಗಳೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವುದು ಎಲ್ಲವೂ ಸಹ ಸತ್ಯವಿದೆ. ಮಾನ್ಯ ಸದಸ್ಯರು ಇದ್ದಾಗಲೂ ಸಹ ಇದರ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ಆದರೆ, ಅವರು ಮಾಡಲಿಲ್ಲ. ಈಗ ನಾನು ಪ್ರಾಮಾಣಿಕವಾಗಿ ಮಾಡುತ್ತೇನೆ.

**ಶ್ರೀಮತಿ ಜಯಮ್ಮ:–** ಮಾನ್ಯ ಸಭಾಪತಿಯವರೇ, ನಾವು ಸಾಕಷ್ಟು ಮಾಡಿದ್ದೇವೆ. ಇನ್ನು ಮಾಡದೇ ಇರುವುದನ್ನು ಅವರು ಮಾಡಬೇಕು.

**(ಪ್ರಶ್ನೆ ಸಂಖ್ಯೆ: 387)**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ಅವರ ಉತ್ತರದಿಂದ ನನಗೆ ಸ್ವಲ್ಪ ಸಮಾಧಾನ ಕೂಡ ಆಗಿದೆ. ಆದರೆ, ಕ್ರೀಡಾ ಜಿಲ್ಲೆಯೆಂದು ಖ್ಯಾತಿ ಪಡೆದಂತಹ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳನ್ನು ಪಡೆದಿರುವಂತಹ ನಮ್ಮ ಕೊಡುಗು ಜಿಲ್ಲೆಯಲ್ಲಿ, 'ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ' ಯವರು ಸುಮಾರು 100 ಕೋಟಿ ರೂಪಾಯಿಯಲ್ಲಿ ಒಂದು ಸ್ಟೇಡಿಯಂ ಕಟ್ಟುವುದಕ್ಕೆ 2015ರಲ್ಲಿ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿ ಇದಕ್ಕೆ ಮಂಜೂರಾತಿ ದೊರೆತಿದೆ. ಮಡಿಕೇರಿ ತಾಲ್ಲೂಕು, ಹೊದ್ದೂರು ಪಾಲೇಮಾಡು ಎಂಬ ಜಾಗದಲ್ಲಿ ಸುಮಾರು 12.70 ಎಕರೆಯಷ್ಟು ಜಾಗವನ್ನು ಗುರುತು ಮಾಡಿ, ಸರ್ವೆ ಆಗುವಂತಹ ಸಂದರ್ಭದಲ್ಲಿ, ಅಲ್ಲಿ ಸ್ಮಶಾನಕ್ಕೆ ಸ್ವಲ್ಪ ಜಾಗ ಬೇಕೆಂದು, ಆ ಪ್ರಕರಣ ಕೋರ್ಟ್‌ಗೆ ಹೋಗಿತ್ತು. ಈಗ ಅದೆಲ್ಲಾ ಇತ್ಯರ್ಥವಾಗಿ ಸುಮಾರು ಒಂದೂವರೆ ವರ್ಷ ಕಳೆದಿದೆ. ಇದು ಮಾನ್ಯ ಸಚಿವರ ಗಮನಕ್ಕೆ ಬರಬೇಕು.

**ಸಭಾಪತಿಯವರು:–** ಅದು ಸಚಿವರ ಉತ್ತರದಲ್ಲಿ ಇದೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ದಿನಾಂಕ: 03.03.2020ರಲ್ಲಿ ಅಂದರೆ ನಾನು ಪ್ರಶ್ನೆ ಕೇಳಿದ ಮೇಲೆ, ಬಹುಶಃ ಜಿಲ್ಲಾಡಳಿತದಿಂದ ಅವರಿಗೆ ಉತ್ತರ ಬಂದಿದೆ ಎಂದು ಹೇಳುತ್ತೇನೆ. ಏಕೆಂದರೆ, ಒಂದೂವರೆ ವರ್ಷದಲ್ಲಿ ಎಲ್ಲವೂ ಕ್ಲಿಯರ್ ಆದರೂ ಸಹ ಆ ಜಾಗವನ್ನು ಅವರಿಗೆ ಹಸ್ತಾಂತರ ಮಾಡಿಲ್ಲ. ಜಿಲ್ಲಾಡಳಿತದ ಬೇಜವಾಬ್ದಾರಿ ಯಾವ ರೀತಿ ಇದೆ ಎಂದು ಹೇಳಿದರೆ, ಒಂದು ಸರ್ವೆ ಮಾಡಿದರೆ ಅಷ್ಟೆ ಸಾಕಾಗಿತ್ತು. ಇದಕ್ಕೆ ಮಾನ್ಯ ಸಚಿವರು ಒಂದು ಕಠಿಣವಾದ ಆದೇಶವನ್ನು ಕೊಡಬೇಕು. ಏಕೆಂದರೆ, ಕೆ.ಎಸ್.ಸಿ.ಎ.ಯವರಿಗೆ ಸರ್ಕಾರದಿಂದ ಒಂದೇ ಒಂದು ಬಿಡಿಗಾಸು ಸಹ ಬೇಕಾಗಿಲ್ಲ. ಅವರು ಸಾವಿರಾರು ಕೋಟಿ ರೂಪಾಯಿ ಹಣ ಖರ್ಚು ಮಾಡಿ ಸ್ಟೇಡಿಯಂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೆ. ಇಂತಹವರು ಅಲ್ಲಿಗೆ ಬಂದು, ಕೊಡಗಿನಲ್ಲಿ ಒಂದು ಉತ್ತಮವಾದ ಕ್ರಿಕೆಟ್ ಸ್ಟೇಡಿಯಂ ಆಗಬೇಕು ಎಂದು ಹೇಳುವಾಗ, ಇಲಾಖೆಯಲ್ಲಿ ಆಗುವಂತಹ ವಿಳಂಭವನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ನಾನು ವಿವರವಾದ ಉತ್ತರವನ್ನು ಒದಗಿಸಿದ್ದೇನೆ. ಅವರಿಗೆ ಜಾಗ ಕೊಡಬೇಕೆಂದು ದಿನಾಂಕ 31.12.2015ರಂದು ಸರ್ಕಾರದಿಂದ ನಿರ್ಣಯವಾಗುತ್ತದೆ. ದಿನಾಂಕ 06.06.2016ಕ್ಕೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಜೊತೆ ಎರಡು ವರ್ಷದ ಒಳಗೆ ಸ್ಟೇಡಿಯಂ ಪೂರ್ಣಗೊಳಿಸಬೇಕು ಎಂಬ ಷರತ್ತಿನೊಂದಿಗೆ ಡೀಡ್ ಮಾಡಿಕೊಡಲಾಗಿರುತ್ತದೆ. ಅದು ಆದಮೇಲೆ ಅರ್ಧ ಎಕರೆ ಜಾಗವನ್ನು ಸ್ಮಶಾನಕ್ಕೆ ನೀಡುತ್ತಾರೆ. ಆದರೆ, ಅಲ್ಲಿನ ಸ್ಥಳೀಯರು ಅದಕ್ಕೆ ಎರಡು ಎಕರೆ ಭೂಮಿ ಬೇಕೆಂದು ಜಗಳ ಮಾಡುತ್ತಿದ್ದಾರೆ. ಹಾಗಾಗಿ ಅದು ನ್ಯಾಯಾಲಯಕ್ಕೆ ಹೋಗುತ್ತದೆ. ಈಗ ನನಗಿರುವಂತಹ ಮಾಹಿತಿಯ ಪ್ರಕಾರ W.P.No.2386/2017 ಇನ್ನು ಇತ್ಯರ್ಥವಾಗಿಲ್ಲ. ಈಗ ಅರ್ಧ ಎಕರೆಯನ್ನು ಬಿಟ್ಟು ಗಡಿ ಗುರುತಿಸಿಕೊಡಿ ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ. ಅವರು ಸರ್ವೇ ಮಾಡಿ ಗಡಿ ಗುರುತಿಸಿ ಕೊಟ್ಟರೆ, KSCA (Karnataka State Cricket Association) ಯವರು ಸ್ಟೇಡಿಯಂ ಮಾಡುವುದಕ್ಕೆ ತಯಾರಿದ್ದಾರೆ. ಈಗ ಗಡಿ ಗುರುತಿಸಿಕೊಡುವಂತಹ ಕೆಲಸವಾಗಬೇಕು. ಈಗ ಜಿಲ್ಲಾಧಿಕಾರಿಗಳಿಗೆ ಇಲಾಖೆಯ ಆಯುಕ್ತರಿಂದ ಪತ್ರವನ್ನು ಬರೆದಿದ್ದೇವೆ. ನಾನು ಅವರಲ್ಲಿ ವಿನಂತಿ ಮಾಡುವುದು, ಜಿಲ್ಲೆಯಲ್ಲಿ KDP (Karnataka Development Programme) ಸಭೆ ನಡೆಯುತ್ತದೆ, ಜಿಲ್ಲಾಧಿಕಾರಿಗಳು ಅಲ್ಲೇ ಇರುತ್ತಾರೆ. ಆ ಸಂದರ್ಭದಲ್ಲಿ ಅವರಿಗೆ ನೇರವಾಗಿ ನಿರ್ದೇಶನ ಕೊಡಬಹುದು. ಅಲ್ಲಿ ಗಡಿ ಗುರುತಿಸುವ ಕೆಲಸವಾದರೆ, ಕೆ.ಎಸ್.ಸಿ.ಎ. ಕಡೆಯಿಂದ ತಕ್ಷಣ ಕಾಮಗಾರಿ ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಈಗ ನಮ್ಮ ದುರ್ದೈವ ಏನೆಂದು ಹೇಳಿದರೆ, ನಾವು ನಗರ ನಿರ್ಮಾಣದ ಸಮಯದಲ್ಲಿ ಆಟದ ಮೈದಾನಕ್ಕೆ ಬೇಕಾದಂತಹ ಜಾಗವನ್ನು ಬಹುತೇಕ ಜಿಲ್ಲೆಗಳಲ್ಲಿ ಗುರುತಿಸಿಲ್ಲ. ತಾಲ್ಲೂಕುಗಳಲ್ಲಿ ಆದರೆ ಅದು ಸೆಕೆಂಡರಿ. ಗಡಿ ಗುರುತಿಸದೇ ಇರುವುದು ಈ ಕ್ರೀಡಾಂಗಣದ ನಿರ್ಮಾಣಕ್ಕೆ ಇರುವಂತಹ ಕೊರತೆಗೆ ಒಂದು ಕಾರಣ. ನಮಗೆ ಕ್ರೀಡಾಂಗಣದ ಬಗ್ಗೆ ಆದ್ಯತೆ ಇದೆ. ನಾನು ಈ ಇಲಾಖೆಯ ಜವಾಬ್ದಾರಿ ತೆಗೆದುಕೊಂಡು ಒಂದು ತಿಂಗಳು ಕೂಡ ಆಗಿಲ್ಲ. ನಾನು ಈಗ ಪ್ರಿಲಿಮಿನರಿ ಸಭೆಯನ್ನು ಮಾಡಿದ್ದೇನೆ. ಎಲ್ಲೆಲ್ಲಿ ಸಮಸ್ಯೆಗಳಿವೆ ಎಂದು ಗುರುತಿಸುವಂತಹ ಕೆಲಸವನ್ನು ಮಾಡುತ್ತಿದ್ದೇನೆ. ಎಲ್ಲೆಲ್ಲಿ ಖಾಸಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹಭಾಗಿತ್ವ ಮತ್ತು ಕೆ.ಎಸ್.ಸಿ.ಎ.ಯಂತಹ ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಂಡು, ಕ್ರೀಡೆ ಮತ್ತು ಕ್ರೀಡಾಂಗಣಗಳಿಗೆ ಉತ್ತೇಜನ ಕೊಡುವಂತಹ ಕೆಲಸವನ್ನು ಮಾಡುತ್ತೇವೆ.

**(ಪ್ರಶ್ನೆ ಸಂಖ್ಯೆ: 406)**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸವಿಸ್ತಾರವಾದ ಉತ್ತರವನ್ನು ನೀಡಿದ್ದಾರೆ. ನಾನು ಶುದ್ಧ ಕುಡಿಯುವ ನೀರಿನ ಘಟಕಗಳ ಬಗ್ಗೆ ಪ್ರಶ್ನೆ ಕೇಳುತ್ತಿರುವುದು ಇದು ಮೊದಲ ಬಾರಿಯಲ್ಲ, ಆರು ವರ್ಷಗಳಲ್ಲಿ ನಾಲ್ಕನೆ ಬಾರಿ ಪ್ರಶ್ನೆ ಕೇಳುತ್ತಿದ್ದೇನೆ. ಮಾನ್ಯ ಸಚಿವರು ಸಂಪೂರ್ಣವಾದ ಅಂಕಿ-ಅಂಶಗಳನ್ನು ನೀಡಿದ್ದಾರೆ. ಈ ಹಿಂದೆ ಇದ್ದಂತಹ ಸರ್ಕಾರ ಮತ್ತು ಸಚಿವರು ಕೂಡ, ಶುದ್ಧ ಕುಡಿಯುವ ನೀರಿನ ಘಟಕಗಳು ಸಮರ್ಪಕವಾಗಿ ಕೆಲಸ ಮಾಡದೇ ಇರುವುದರ ಬಗ್ಗೆ ಸದನದ ಗಮನಕ್ಕೆ ತಂದಿದ್ದಾರೆ.

**(ಮುಂದು...)**

(192) 06.03.2020 02.00 LL-AK

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ(ಮುಂದುವರೆದಿದ್ದು...)**

ಉತ್ತರದಲ್ಲಿ ಕೊಟ್ಟಿರುವಂತಹ ಮಾಹಿತಿಯಂತೆ ರಾಜ್ಯದಲ್ಲಿ ಸುಮಾರು 17,154 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ರಾಜ್ಯ ಸರ್ಕಾರದಿಂದ ಸ್ಥಾಪನೆ ಮಾಡಲಾಗಿರುತ್ತದೆ. ಸರ್ಕಾರವೇ ಒಪ್ಪಿಕೊಂಡಿರುವ ಪ್ರಕಾರ ಸುಮಾರು 4,552 ಶುದ್ಧ ಕುಡಿಯುವ ನೀರಿನ ಘಟಕಗಳು ಪ್ರಸ್ತುತ ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಸುಮಾರು 1,465/- ಕೋಟಿ ರೂಪಾಯಿ ವೆಚ್ಚದಲ್ಲಿ ಈ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ. ಇದಕ್ಕೆ ಮೊದಲು ಇದೇ ವಿಷಯಕ್ಕೆ ಸಂಬಂಧಪಟ್ಟಂತಹ ಬೇರೆ ಪ್ರಶ್ನೆಗೆ ಉತ್ತರ ನೀಡುವಾಗ, ಈ ಬಗ್ಗೆ ಸಮರ್ಪಕವಾಗಿ ಚರ್ಚೆ ಮಾಡಲಾಗಿರುತ್ತದೆ. ಒಂದು ಮಹತ್ತರ ಉದ್ದೇಶ ಇಟ್ಟುಕೊಂಡು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ ಮಾಡಲಾಗಿರುತ್ತದೆ. ಆದರೆ, ಸರ್ಕಾರ ಯಾವ ಗುರಿ ಇಟ್ಟುಕೊಂಡು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪ್ರಾರಂಭ ಮಾಡಲಾಗಿತ್ತು, ಆ ಉದ್ದೇಶ ಈಡೇರಿರುವುದಿಲ್ಲ. ಈ ಬಗ್ಗೆ ಮಾನ್ಯ ಸಚಿವರು ಉತ್ತರದಲ್ಲಿ, "ನಿರ್ವಹಣಾ ಅವಧಿ ಮುಗಿದಿರುವ ಹಾಗೂ ನಿರ್ವಹಣೆ ಸಮಸ್ಯೆ ಇರುವ 8,142 ಶುದ್ಧ ಕುಡಿಯುವ ನೀರಿನ ಘಟಕಗಳಿಗೆ 134 ಪ್ಯಾಕೇಜ್ ಮಾಡಿ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆದಿದ್ದೇವೆಂದು" ಹೇಳಿದ್ದಾರೆ. ತುಂಬಾ ಸಂತೋಷ. ಅದನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

decentralize ಮಾಡಿ ಯಾವುದೋ ಒಂದು ಕಂಪನಿಗೆ ಇಡೀ ರಾಜ್ಯದ ಟೆಂಡರ್ ಕೊಡುವ ಬದಲಾಗಿ 134 ಸೆಂಟರ್‌ಗಳನ್ನು ಪ್ಯಾಕೇಜ್‌ಗಳಾಗಿ ಮಾಡಿ decentralize ಮಾಡಿ ನಿಯಂತ್ರಣ ಮಾಡುವಂತಹ ಪ್ರಯತ್ನ ಮಾಡುತ್ತಿರುವುದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ, ಈ ಹಿಂದೆ ಈ ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯ ಮಾಡುತ್ತಿಲ್ಲ ಎನ್ನುವಂತಹ ಸಂದರ್ಭದಲ್ಲಿ ನನಗೆ ಕೊಟ್ಟಂತಹ ಉತ್ತರದಲ್ಲಿ ಅಂದರೆ, ದಿನಾಂಕ:09.07.2018ರಂದು ಉತ್ತರ ಕೊಟ್ಟಿರುವ ಪೈಕಿ ಸುಮಾರು 11 ಜಿಲ್ಲೆಗಳಲ್ಲಿ 4 ಕಂಪನಿಗಳಿಂದ 819 ಲಕ್ಷ ರೂಪಾಯಿ ಡೆಪಾಸಿಟ್ ಹಣವನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆಂದು ಉತ್ತರ ನೀಡಲಾಗಿರುತ್ತದೆ. ಹಿಂದೆ ಕೂಡ ಈ ರೀತಿ ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆ ಕೊಟ್ಟಿರುವುದನ್ನು ಸರಿಯಾಗಿ ಮಾಡುವುದಕ್ಕೆ ಆಗಿರುವುದಿಲ್ಲ. ಈಗ ಕೂಡ ಹೊಸ ಪ್ಯಾಕೇಜ್ ಮಾಡಿ ಪುನಃ ನಿರ್ವಹಣೆಗೆ ಕೊಡುತ್ತಿರುವುದು ಒಂದು ಪ್ರಯತ್ನ. ನಾನು ಅದನ್ನು ತಪ್ಪು ಎಂದು ಹೇಳುತ್ತಿಲ್ಲ. ಆದರೆ, ನಾನು ಏನು ಹೇಳುವುದಕ್ಕೆ ಇಚ್ಛೆಪಡುತ್ತೇನೆಂದರೆ, 1,465/- ಕೋಟಿ ರೂಪಾಯಿ ವೆಚ್ಚದಲ್ಲಿ ಮಾಡಿದಂತಹ ಯೋಜನೆ ಒಟ್ಟಾರೆಯಾಗಿ ಸಮರ್ಪಕವಾಗಿ ಅನುಷ್ಠಾನವಾಗುತ್ತಿಲ್ಲ. ಇವೊತ್ತಿನ ದಿವಸ ನಾವು ಯಾವುದೇ ಊರಿಗೆ ಹೋದರೂ ಸಹ ಶುದ್ಧ ಕುಡಿಯುವ ನೀರಿನ ಘಟಕಗಳು ಸರಿಯಾಗಿ ಕೆಲಸ ಮಾಡದೇ ಬಾಗಿಲು ಮುಚ್ಚಿರುತ್ತವೆ. ಅದಕ್ಕೆ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ... ಅವರು ಹಿರಿಯರು, ಅವರ ಮಾರ್ಗದರ್ಶನದಲ್ಲಿ ಬೆಳೆದಂತಹ ಕಾರ್ಯಕರ್ತರು ನಾವು. ನಾವು ಈ ಹಿಂದೆ ವಿರೋಧ ಪಕ್ಷದಲ್ಲಿದ್ದಾಗ ಈ ವಿಷಯದ ಬಗ್ಗೆ ಅವರ ನೇತೃತ್ವದಲ್ಲಿ ಬಹಳಷ್ಟು ಹೋರಾಟ ಮಾಡಿದ್ದೇವೆ. ಶುದ್ಧ ಕುಡಿಯುವ ನೀರಿನ ಘಟಕಗಳು ಸರಿಯಾಗಿ ಸಮೀಕ್ಷೆ ಆಗುತ್ತಿಲ್ಲ; ಸರಿಯಾಗಿ ನಿರ್ವಹಣೆ ಆಗುತ್ತಿಲ್ಲ; ದುಡ್ಡು ಖರ್ಚಾಗುವುದು ನಿಲ್ಲುತ್ತಿಲ್ಲ; ಏತಕ್ಕೆ ಈ ಯೋಜನೆ ಅನುಷ್ಠಾನವಾಗಿರುವುದಿಲ್ಲ; ಇದಕ್ಕೆ ಕಾರಣ ಏನು? ಆದಾಗ್ಯೂ, ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆ ಸಮಸ್ಯೆ ಬಗೆಹರಿದಿಲ್ಲ. ಹಾಗಾಗಿ, ನಾನು ಘನ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಈ ವಿಷಯದ ಬಗ್ಗೆ ಒಂದು ಸದನ ಸಮಿತಿ ರಚನೆ ಮಾಡಿ,.. ಸಚಿವರು ಕೂಡ ಎಲ್ಲಾ ಜಿಲ್ಲೆಗಳಿಗೆ ಪ್ರವಾಸ ಮಾಡಿ ಈ ಯೋಜನೆ ಏತಕ್ಕೆ ಅನುಷ್ಠಾನವಾಗುತ್ತಿಲ್ಲ, ಏನು ಕಾರಣ ಇದೆ ಎನ್ನುವ ಬಗ್ಗೆ ಸವಿಸ್ತಾರವಾದಂತಹ ವರದಿ ಪಡೆಯುವುದಕ್ಕೆ ಒಂದು ಸದನ ಸಮಿತಿ ರಚನೆಯಾದಲ್ಲಿ ಈ ಯೋಜನೆಯ ನಿಜಾಂಶಗಳು ಹೊರಬರುವುದೆಂಬ ವಿನಂತಿಯನ್ನು ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇಡೀ ಕರ್ನಾಟಕ ರಾಜ್ಯದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ಅವ್ಯವಹಾರವಾಗಿದೆ ಎನ್ನುವುದರಲ್ಲಿ ಯಾರ ಅನುಮಾನ ಕೂಡ ಇಲ್ಲ. ಇದರಲ್ಲಿ ಯಾವ ಪ್ರಶ್ನೆ ಕೂಡ ಇಲ್ಲ. ಆದರೆ, ಯಾವ ರೂಪದಲ್ಲಿ ಈ ಅವ್ಯವಹಾರವನ್ನು ತಡೆಯಬೇಕು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮತ್ತು ಶುದ್ಧ ಕುಡಿಯುವ ನೀರನ್ನು ಕೊಡಬೇಕು ಎನ್ನುವುದರ ಬಗ್ಗೆ ನಮ್ಮ ಸರ್ಕಾರ ಸಾಕಷ್ಟು ಚಿಂತನೆಗಳನ್ನು ಮಾಡಿ, ಈಗಾಗಲೇ ಇದರಲ್ಲಿ 4552 ಶುದ್ಧ ಕುಡಿಯುವ ನೀರಿನ ಘಟಕಗಳು ಈಗಾಗಲೇ ಕೆಟ್ಟು ನಿಂತಿವೆ ಎನ್ನುವಂತಹ ಅಂಶಗಳು ಈಗಿನ ಸರ್ವೆ ಪ್ರಕಾರ ನಮಗೆ ಸಿಕ್ಕಿರುತ್ತದೆ. ಇದು ಎಷ್ಟರಮಟ್ಟಿಗೆ ಸರಿ ಇದೆ, ತಪ್ಪು ಇದೆ ಎಂದು ತಿಳಿದುಕೊಳ್ಳುವುದಕ್ಕೆ ಒಂದು ವಿಶೇಷವಾದ ಸಂಸ್ಥೆಗೆ ಸರ್ವೆ ಮಾಡುವುದಕ್ಕೆ ನಾವು ಅವಕಾಶ ಮಾಡಿಕೊಟ್ಟಿದ್ದೇವೆ. IPSOS Research Private Limited ಎನ್ನುವಂತಹ ಸಂಸ್ಥೆಗೆ ದಿನಾಂಕ:24.01.2020ರಂದು ಆದೇಶ ಕೊಟ್ಟಿರುತ್ತೇವೆ. ಅವರು ಈಗಾಗಲೇ ಸುಮಾರು 850 ಜನರನ್ನು ಹೆಚ್ಚು ಕಡಿಮೆ ಬಿಟ್ಟಿದ್ದಾರೆ. 130 ಸಿಬ್ಬಂದಿ ಇದರಲ್ಲಿ ತರಬೇತಿ ತೆಗೆದುಕೊಳ್ಳುತ್ತಿದ್ದಾರೆ. 50 ಜನರಿಗೆ ನಾವೇ ಸ್ವತಃ ತರಬೇತಿ ಕೊಟ್ಟಿರುತ್ತೇವೆ. ಇಷ್ಟು ದಿನಗಳಲ್ಲಿ ವರದಿ ನೀಡಬೇಕೆಂದು ಅಂತಿಮ ಗಡವು ನೀಡಿರುತ್ತೇವೆ. ಅದರಂತೆ, ಮಾರ್ಚ್ ತಿಂಗಳ ಅಂತ್ಯದಿಂದ ಏಪ್ರಿಲ್ ತಿಂಗಳ ಅಂತ್ಯದೊಳಗೆ ಶುದ್ಧ ಕುಡಿಯುವ ನೀರಿನ ಘಟಕಗಳು ಎಷ್ಟು ಹಾಳಾಗಿವೆ ಎಂಬುದನ್ನು ತುಂಬಾ ಸ್ಪಷ್ಟವಾಗಿ ವರದಿ ಕೊಡುವವರಿದ್ದಾರೆ. ಆ ವರದಿ ಆಧಾರದ ಮೇಲೆಗೆ ಮುಂದಿನ ಕಾರ್ಯಗಳನ್ನು ಏನೇನು ಮಾಡಬೇಕು ಅವುಗಳನ್ನು ಮಾಡುತ್ತೇವೆ. ಇದರಲ್ಲಿ ಸಮಾಧಾನ ಆಗದೇ ಇದ್ದರೆ ಮಾನ್ಯ ಸದಸ್ಯರು ಹೇಳಿದ ರೀತಿ ಸದನ ಸಮಿತಿ ರಚನೆ ಮಾಡುವ ಅವಶ್ಯಕತೆ ಇದ್ದರೆ ಅದರ ಕಡೆಗೆ ಗಮನಹರಿಸುತ್ತೇವೆ.

**ಶ್ರೀ ಐವನ್ ಡಿ’ಸೋಜಾ:–** ಮಾನ್ಯ ಸಭಾಪತಿಯವರೇ, ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಎಷ್ಟು ನಿರ್ಮಾಣ ಮಾಡಿದ್ದಾರೆ. ಅದರಲ್ಲಿ ಶೇಕಡ 90ರಷ್ಟು ಘಟಕಗಳು ಕಾರ್ಯನಿರ್ವಹಿಸುತ್ತಿಲ್ಲ. ಈ ಬಗ್ಗೆ ಜಿಲ್ಲಾ ಪಂಚಾಯಿತಿಯಲ್ಲಿ ಹಾಗೂ K.D.P. (Karnataka Development Programme) ಸಭೆಯಲ್ಲಿ ಚರ್ಚೆಯಾಗಿರುತ್ತವೆ. ಜೊತೆಗೆ, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಎಲ್ಲೆಲ್ಲಿ ಸ್ಥಾಪಿಸಲಾಗಿರುತ್ತದೆ ಅಲ್ಲಿಗೆ ಜನರು ಹೋಗುವುದಕ್ಕೆ ದಾರಿ ಕೂಡ ಇರುವುದಿಲ್ಲ. ಕೆಲವು ಕಡೆ ಅವರಿಗೆ ಇಷ್ಟಬಂದಂತೆ, ಪಂಚಾಯಿತಿಗಳ ಅನುಮತಿ ಇಲ್ಲದೇ, ಈ ಬಗ್ಗೆ ಯಾರನ್ನೂ ಕೇಳದೇ, ಆ ಘಟಕಗಳಿಗೆ ಹೋಗುವುದಕ್ಕೆ ಆಗದ ರೀತಿ ಅವುಗಳನ್ನು ಸ್ಥಾಪನೆ ಮಾಡಲಾಗಿರುತ್ತದೆ. ಇದರಿಂದಾಗಿ, ಎಲ್ಲಿಯೋ ಒಂದು ಕಡೆ ಸರ್ಕಾರದ ದುಡ್ಡು ಪೋಲಾಗುತ್ತಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇವೊತ್ತಿನ ದಿವಸ ವಿರೋಧ ಪಕ್ಷದ ಸ್ಥಾನದಲ್ಲಿ ನಿಂತುಕೊಂಡು ಏನು ಹೇಳುತ್ತಿದ್ದಾರೆ, ಅದು ಸತ್ಯ. ಅದಕ್ಕಾಗಿಯೇ ನಾನು ಪ್ರಾರಂಭದಲ್ಲಿ ಉತ್ತರ ಕೊಡುವಂತಹ ಸಂದರ್ಭದಲ್ಲಿ ಈ ಬಗ್ಗೆ ಹೇಳಿದ್ದೇನೆ. ಈ ಹಿಂದೆ ನಾನು ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ಇದ್ದಾಗಲೇ, ಈಗ ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಯನ್ನು ನಾನು ಆಗಲೇ ಅವರ ಸರ್ಕಾರಕ್ಕೆ ಕೇಳಿದ್ದೆನು. ಈಗ ಅದಕೋಸ್ಕರವಾಗಿ ಬಹಳ ಸ್ಪಷ್ಟವಾಗಿ ಹೇಳುವುದೇನೆಂದರೆ, ಈ ಬಗ್ಗೆ ತನಿಖೆ ಮಾಡುವುದಕ್ಕಾಗಿ ಒಂದು ವಿಶೇಷವಾದ ಸಂಸ್ಥೆಗೆ ಈಗಾಗಲೇ ಟೆಂಡರ್ ಕರೆದು ಜವಾಬ್ದಾರಿ ಕೊಟ್ಟಿರುತ್ತೇವೆ. ಆ ಸಂಸ್ಥೆಯವರು ಏಪ್ರಿಲ್ ತಿಂಗಳ ಅಂತ್ಯದೊಳಗೆ ವರದಿ ಕೊಡುತ್ತಾರೆ. ಆ ವರದಿ ಕೊಟ್ಟ ನಂತರ ಮಾನ್ಯ ಸದಸ್ಯರುಗಳು ಏನೇನು ಪ್ರಶ್ನೆ ಕೇಳುತ್ತಿದ್ದಾರೆ. ಅದರಂತೆ, ಈ ಯೋಜನೆಯಲ್ಲಿ ಯಾರ್‍ಯಾರು ತಪ್ಪಿತಸ್ಥರಿದ್ದಾರೆ ಖಂಡಿತ ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೆಲವು ಕಡೆಗಳಲ್ಲಿ ಜನಗಳ ಬೇಡಿಕೆಗಳಿಗೆ ಅನುಗುಣವಾಗಿ ಕೆಲವು ಮಾನ್ಯ ಸಂಸದರು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ ಮಾಡಿದ್ದಾರೆ. ಆ ಘಟಕಗಳು ಅನುಷ್ಠಾನವಾದ ನಂತರ ಅವುಗಳನ್ನು ಜಿಲ್ಲಾಧಿಕಾರಿಗಳ ಮುಖಾಂತರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡಲಾಗಿರುತ್ತದೆ. ಆದರೆ, ಸಂಬಂಧಪಟ್ಟ ಪಂಚಾಯಿತಿಗಳು, "ನಮಗೆ ಪಂಚಾಯಿತಿ ನಡೆಸುವುದಕ್ಕೆ ಅನುದಾನವಿಲ್ಲವೆಂದು, ಈ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಹೇಗೆ ನಿರ್ವಹಣೆ ಮಾಡಬೇಕೆಂದು" ಹೇಳುತ್ತಾರೆ. ಜೊತೆಗೆ, ಯಾವುದೋ ಒಂದು ಸರ್ಕಾರದ ಎಂ.ಪಿ. ಅಥವಾ ಎಂ.ಎಲ್.ಸಿ. ಅನುದಾನದಿಂದ ಒಂದು ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪನೆ ಮಾಡುತ್ತಾರೆ. ಆದರೆ, ಅಲ್ಲಿರುವಂತಹ ಸ್ಥಳೀಯ ಸಂಸ್ಥೆ ವಿರೋಧ ಪಕ್ಷ ಆಗಿದ್ದರೆ ಆ ಘಟಕಗಳ ಕಥೆ ಮುಗಿಯುತ್ತದೆ. ಅದರ ಬಗ್ಗೆ ಕೂಡ ಮಾನ್ಯ ಸಚಿವರು ದಯಮಾಡಿ ಗಮನ ಹರಿಸಬೇಕು. ಇದು ರಾಮನಗರ ಜಿಲ್ಲೆ ಅಥವಾ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಇರಬಹುದು ಇದರ ಬಗ್ಗೆ ಕೂಡ ಬಹಳ ಗಮನಹರಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿ ಇದೆ. ಈ ಹಿಂದೆ ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಮಾನ್ಯ ಸಂಸದರಾದ ಶ್ರೀ ಡಿ.ಕೆ. ಸುರೇಶ್‌ರವರಿಗೆ ಈ ಸದನದಿಂದ ಅಭಿನಂದನೆಯನ್ನು ಸಲ್ಲಿಸಿದ್ದೆನು. ಏಕೆಂದರೆ, ಒಳ್ಳೆಯ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ ಮಾಡಿ, ಅವುಗಳ ನಿರ್ವಹಣೆ ಕೂಡ ಮಾಡುವುದಕ್ಕೆ ಹೆಚ್ಚಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಮನವನ್ನು ಅವರು ಕೊಟ್ಟಿದ್ದರು. ಆದಾಗ್ಯೂ, ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅವುಗಳನ್ನು ಸ್ವೀಕಾರ ಮಾಡಿ ಅದಕ್ಕೆ ಒಂದು ರೂಪ ಕೊಡುತ್ತೇವೆ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಒಂದು ವೇಳೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ವಹಣೆ ಮಾಡುವುದಕ್ಕೆ ಸರ್ಕಾರದಿಂದ ಆಗದೇ ಇದ್ದರೆ ನಾವೇ ನಿರ್ವಹಣೆ ಮಾಡುತ್ತೇವೆಂದು ಹೇಳುತ್ತೇವೆ. ಆದರೆ, "ಸರ್ಕಾರದ ನಿಯಮಗಳಲ್ಲಿ ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ. ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅನುಷ್ಠಾನಗೊಳಿಸಿದ ಮೇಲೆ ಅವುಗಳು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಆಗಲೇಬೇಕು" ಎಂದು ಜಿಲ್ಲಾಧಿಕಾರಿಗಳು ಬಲವಂತವಾಗಿ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಿದ್ದಾರೆ. ಆದರೆ, ಅವುಗಳ ನಿರ್ವಹಣೆ ಬಗ್ಗೆ ತಾವು ದಯಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಏನು ಸಲಹೆ ಕೊಡುತ್ತಾರೆ. ಅದರ ಬಗ್ಗೆ ಅವರ ಜೊತೆ ಕುಳಿತು, ಚರ್ಚೆ ಮಾಡಿ ಅದನ್ನು ಅನುಷ್ಠಾನಗೊಳಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಮಾನ್ಯ ಸಚಿವರು ಒಂದು ಖಾಸಗಿ ಸಂಸ್ಥೆ ನೇಮಕ ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಇಂತಹ ಅವ್ಯವಹಾರಗಳು ಯಾವಾಗಲೂ ನಡೆಯುತ್ತಲೇ ಇರುತ್ತವೆ. ಇಷ್ಟು ಭ್ರಷ್ಟಾಚಾರವನ್ನು ಕುಡಿಯುವ ನೀರಿನಲ್ಲಿ ಮಾಡಿದರೆ ಹೇಗೆ? ಮೊನ್ನೆಯ ದಿವಸ ಬೆಳಗಾವಿಯಿಂದ ಒಬ್ಬರು ನನಗೆ ಫೋನ್ ಮಾಡಿ, "ಕೊರೋನಾ ವೈರಸ್ ಹರಡದಂತೆ ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ಮುಖಕ್ಕೆ ಧರಿಸುವಂತಹ 3 ರೂಪಾಯಿ ಬೆಲೆ ಬಾಳುವಂತಹ ಮಾಸ್ಕ್ ಅನ್ನು 60 ರೂಪಾಯಿಗೆ ಮಾರುತ್ತಿದ್ದಾರೆಂದು" ಹೇಳಿದ್ದಾರೆ. ಇವರಿಗೆ ಮನುಷ್ಯತ್ವ ಇರುವುದಿಲ್ಲ. ಕುಡಿಯುವ ನೀರಿನ ವಿಚಾರದಲ್ಲಿ ಭ್ರಷ್ಟಾಚಾರ ಮಾಡುವಂತಹವರಿಗೆ ಕ್ರಮ ತೆಗೆದುಕೊಳ್ಳಬೇಕಲ್ಲವೇ? ನಾನು ಹೇಳುವುದು ಸರಿ ಅಥವಾ ತಪ್ಪು ಎಂದು ನನಗೆ ಗೊತ್ತಿಲ್ಲ. ಆದರೆ, ಭ್ರಷ್ಟಾಚಾರದ ಬಗ್ಗೆ ಸಮಿತಿ ರಚನೆ ಮಾಡಿದರೆ, ಆ ಸಮಿತಿ ರಚನೆ ಮಾಡಿದವರನ್ನು ಬುಕ್ ಮಾಡುವಂತಹ ಪರಿಸ್ಥಿತಿ ಇದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ಆ ಸಮಿತಿಗೆ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರನ್ನೇ ಅಧ್ಯಕ್ಷರನ್ನಾಗಿ ಮಾಡುತ್ತೇವೆ. ಅವರು ಬುಕ್ ಆಗುವುದು ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ತಾವು ಹೇಳಿದಂತೆ ಸದನ ಸಮಿತಿ ರಚನೆ ಮಾಡಿ ಅಥವಾ ಭರವಸೆಗಳ ಸಮಿತಿಗೆ ಬಂದಾಗ ನಾನು ಆಗ ಮಾತನಾಡುತ್ತೇನೆ. ಆದರೆ, ಇಂತಹ ಪ್ರಕರಣಗಳಲ್ಲಿ ಒಂದು ಗಟ್ಟಿಯಾದ ತೀರ್ಮಾನ ತೆಗೆದುಕೊಂಡು ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆ ಮಾಡಿದರೆ ಇದು ಸರಿಯಾಗುತ್ತದೆ. ಏಕೆಂದರೆ, ಹೊರಗಡೆ ಜನ, "ಶಾಸಕರು ಎಲ್ಲಾ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾರೆ. ಆದರೆ, ಎಲ್ಲರೂ ಕೂಡ ಅವರೇ" ಎಂದು ಮಾತನಾಡಿಕೊಳ್ಳುತ್ತಾರೆ. ಈ ರೀತಿ ಆಗಬಾರದು. ಈ ವಿಷಯದ ಬಗ್ಗೆ ತಾವು ಈ ಹಿಂದೆ ಸಾಕಷ್ಟು ಚರ್ಚೆ ಮಾಡಿದ್ದೇರೆಂದು ನನಗೆ ಗೊತ್ತಿದೆ. ಆದುದರಿಂದ, ಈ ಬಗ್ಗೆ ತಾವು ಒಂದು ಸರಿಯಾದ ತೀರ್ಮಾನ ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಎನ್. ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದಾಗ ಈ ವಿಷಯದ ಬಗ್ಗೆ ಬಹಳ ಸವಿಸ್ತಾರವಾಗಿ ಚರ್ಚೆ ಮಾಡಿದ್ದಾರೆ. ಈ ಬಗ್ಗೆ ನನ್ನ ಸಲಹೆ ಏನೆಂದರೆ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಇದೆ. ನಾನು ನಾಗಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ನಮ್ಮ ಅನುದಾನವನ್ನು ನೇರವಾಗಿ ಆ ಸಂಸ್ಥೆಗೆ ಕೊಡುವುದಕ್ಕೆ ಅವಕಾಶವಿರುವುದಿಲ್ಲ. ನಾವು ಬೇರೆ ರೀತಿಯ ದಾನಿಗಳಿಂದ ಅಥವಾ ಸ್ವಂತ ಹಣದಿಂದ ಶೇಕಡ 50 ರಷ್ಟು ಹಣವನ್ನು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಕೊಟ್ಟರೆ, ಉಳಿದ ಶೇಕಡ 50 ರಷ್ಟು ಹಣವನ್ನು ಅವರೇ ಹಾಕುತ್ತಾರೆ. ಈ ಒಟ್ಟು ಹಣದಿಂದ ಸುಮಾರು 15 ವರ್ಷಗಳ ಅವಧಿಯವರೆಗೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ವಹಣೆ ಮಾಡುತ್ತಾರೆ. ಶುದ್ಧ ಕುಡಿಯುವ ನೀರಿನ ಘಟಕಗಳು ನಿಜವಾಗಲೂ ಒಂದು ದೊಡ್ಡ ದಂಧೆಯ ವ್ಯಾಪಾರವಾಗಿದೆ. ಇದರಲ್ಲಿ ಎರಡನೇ ಮಾತಿಲ್ಲ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಸದನದಲ್ಲಿರುವುದರಿಂದ ಅವರಲ್ಲಿ ನನ್ನ ಬೇಡಿಕೆ ಏನೆಂದರೆ, ಶಾಸಕರು ತಮ್ಮ ಅನುದಾನದಿಂದ ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಹಣ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ನಿಜವಾಗಿಯೂ ಈ ದಂಧೆಯನ್ನು ತಪ್ಪಿಸಬಹುದಾಗಿರುತ್ತದೆ.

(ಮುಂದುವರಿದಿದೆ...)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(193)06.03.2020/2.00/ವೈಎಲ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಅಪ್ಪಾಜಿಗೌಡ(ಮುಂದು):-**

ಜೊತೆಗೆ ಧರ್ಮಸ್ಥಳದ ಗ್ರಾಮೀಣಾಭಿವೃದ್ಧಿ ಸಂಸ್ಥೆ ಸುಮಾರು 15 ವರ್ಷಗಳಿಂದ ನಿರ್ವಹಣೆ ಮಾಡುತ್ತಿದ್ದು, 15 ವರ್ಷಗಳ ಖಾತರಿಯನ್ನು ಸಹ ನೀಡುತ್ತಿದ್ದಾರೆ. ಯಾವ್ಯಾವ ಘಟಕ ನಿಲ್ಲುತ್ತದೆ ಅವರ

centralized ಕಛೇರಿಯಿದ್ದು, ಆ ಕಛೇರಿ ವತಿಯಿಂದಲೇ ನಿರ್ವಹಣೆ ಮಾಡಿಸುತ್ತಾರೆ. ಖಾಸಗಿಯವರಿಗೆ ನೀಡುವಂತಹ ವ್ಯವಸ್ಥೆ ಏನಿದೆ ಅವರೆಲ್ಲರೂ ಸಹ sub-standard material ಅಳವಡಿಸುತ್ತಾರೆ. ಜೊತೆಗೆ ಅದು ಕೇವಲ ಒಂದು ವರ್ಷ ಮಾತ್ರ ಬಾಳಿಕೆ ಬರುತ್ತದೆ. ಹಾಗಾಗಿ ಮಾನ್ಯ ಸಭಾಪತಿಯವರ ಮೂಲಕ ಗ್ರಾಮೀಣಾಭಿವೃದ್ಧಿ ಸಚಿವರಿಗೆ ನನ್ನ ವಿನಂತಿಯೇನೆಂದರೆ, ಯಾವ್ಯಾವ ಶಾಸಕರಿಗೆ ಆಸಕ್ತಿ ಇದೆ ಅಂತಹ ಶಾಸಕರು ಅವರ ಅನುದಾನದಲ್ಲಿ ಹಣ ಒದಗಿಸುವಂಥ ವ್ಯವಸ್ಥೆ ಮಾಡಬೇಕು. ಈ ಘಟಕಕ್ಕೆ ಸುಮಾರು ಐದರಿಂದ ಹತ್ತು ಲಕ್ಷ ರೂಪಾಯಿಗಳಷ್ಟು ಹಣವನ್ನು ಶಾಸಕರ ಅನುದಾನದಿಂದ ಒದಗಿಸಿದರೆ ಸಾಕಾಗುತ್ತದೆ. ಉಳಿದ ಅನುದಾನವನ್ನು ಅವರೇ ಒದಗಿಸುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆಯನ್ನು ನೀಡಿದ್ದಾರೆ. ಖಂಡಿತವಾಗಿ ಕರ್ನಾಟಕ ರಾಜ್ಯದ 300 ಶಾಸಕರಿಗೆ ಮನವಿ ಮಾಡುವುದೇನೆಂದರೆ, ಮೊದಲನೆಯದಾಗಿ, ಶಾಸಕರಿಗೆ ಬರತಕ್ಕಂಥ ಶಾಸಕರ ನಿಧಿಯಿಂದ ಎಲ್ಲೆಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ತೆರೆಯಲು ಇಷ್ಟ ಪಡುತ್ತಾರೆ, ಅಲ್ಲೆಲ್ಲಾ ಶುದ್ಧ ಕುಡಿಯುವ ನೀರಿನ ಘಟಕವನ್ನು ತೆರೆಯಲು ಅನುಮತಿ ಕೊಡಿಸುತ್ತೇವೆ. ಎರಡನೆಯದಾಗಿ, ಮಾನ್ಯ ಹಿರಿಯ ಶಾಸಕರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಪ್ರಶ್ನೆಯನ್ನು ಮಾಡಿದ್ದು, ಸಂಸ್ಥೆಗೆ ವರದಿ ನೀಡುವಂತೆ ಕೇಳಿರುತ್ತಾರೆ, ಏಪ್ರಿಲ್ ಮಾಹೆಯ ಅಂತ್ಯದೊಳಗೆ ವರದಿ ಬರುತ್ತದೆ. ವರದಿ ಬಂದ ತಕ್ಷಣ ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಗಮನ ಹರಿಸಿ, ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಕ್ರಮ ತೆಗೆದುಕೊಳ್ಳುವುದರಲ್ಲಿ ಶಾಸಕರ ಸಹಕಾರ ಅವಶ್ಯಕತೆ ಇದ್ದರೆ ಸದನ ಸಮಿತಿಯನ್ನು ಸಹ ನಡೆಸಲು ತಯಾರಿದ್ದೇವೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಚಿವರಿಗೆ ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಎರಡು ತಿಂಗಳ ಹಿಂದೆ ಬೆಂಗಳೂರು ನಗರದ...

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಧರ್ಮಸ್ಥಳದವರ ಜೊತೆ ಮಾತುಕತೆ ಇಟ್ಟುಕೊಂಡು ಅವರು ಶೇಕಡಾ 50 ರಷ್ಟು ಅನುದಾನವನ್ನು ನಾವು ಭರಿಸುವುದಕ್ಕೆ ಅವಕಾಶ ನೀಡಿದರೆ ಅದಕ್ಕೂ ಸಹ ನಾವು ತಯಾರಿದ್ದೇವೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ನಾಗಮಂಗಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು ಶುದ್ಧ ಕುಡಿಯುವ ನೀರಿನ ಘಟಕವನ್ನು...

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಸಹ ಅದಕ್ಕೆ ಒಪ್ಪಿಗೆ ಸೂಚಿಸಿದ್ದೇನೆ. ನಾನು ಪೂಜ್ಯ ಶ್ರೀ ವಿರೇಂದ್ರ ಹೆಗಡೆಯವರ ಹತ್ತಿರ ಹೋಗಿ ಕುಳಿತುಕೊಂಡು ಮಾತನಾಡಿ ಶೇಕಡಾ 50 ರಷ್ಟು ಅನುದಾನವನ್ನು ಸರ್ಕಾರದಿಂದ ಹಾಗೂ ಶೇಕಡಾ 50 ರಷ್ಟು ಅನುದಾನವನ್ನು ಧರ್ಮಸ್ಥಳದವರು ಒದಗಿಸುವ ವ್ಯವಸ್ಥೆಯನ್ನು ಮಾಡಿಸುತ್ತೇವೆ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಇದು ಕಾರ್ಯಗತವಾಗಿ ಸುಮಾರು 3 ವರ್ಷಗಳಿಂದ ನಡೆದುಕೊಂಡು ಬಂದಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾಡಿಸುತ್ತೇವೆ ಎಂದು ಹೇಳಿದ್ದೇನೆ. ಮತ್ತೇ ನಾನು ಏನು ಹೇಳಲಿ.

**ಶ್ರೀಮತಿ ಜಯಮ್ಮ:–** ಮಾನ್ಯ ಸಭಾಪತಿಯವರೇ, ಕುಡಿಯುವ ನೀರಿನ ಘಟಕದ ಬಗ್ಗೆ ಮಾತನಾಡಲು ನನಗೂ ಸ್ವಲ್ಪ ಅವಕಾಶ ಒದಗಿಸಿ.

**ಶ್ರೀ ಹೆಚ್.ಎಂ.ರಮೇಶಗೌಡ:–** ಮಾನ್ಯ ಸಭಾಪತಿಯವರೇ, ನಾವು ಗ್ರಾಮೀಣ ಭಾಗದಲ್ಲಿರುವ ಅಥವಾ ಬೇರೆ ಎಲ್ಲೋ ಇರುವ ಶುದ್ಧ ನೀರಿನ ಘಟಕದ ಬಗ್ಗೆ ಮಾತನಾಡುತ್ತಿದ್ದೇವೆ. ವಿಧಾನಸೌಧದಲ್ಲಿರುವ ಶುದ್ಧ ನೀರಿನ ಘಟಕವೇ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಅದನ್ನೂ ಸಹ ಮಾನ್ಯ ಸಚಿವರು ಗಮನಿಸಬೇಕು.

**ಪ್ರಶ್ನೆ ಸಂಖ್ಯೆ 383**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಂದ ವಿವರವಾಗಿ ಉತ್ತರ ಬಂದಿದೆ. ಸ್ವಚ್ಛ ಭಾರತ್ ಮಿಷನ್ ಯೋಜನೆಯಲ್ಲಿರುವ ಕೆಲವೊಂದು ನ್ಯೂನತೆಗಳನ್ನು ಸರಿಪಡಿಸಬೇಕಾಗುತ್ತದೆ. ಮೊಟ್ಟಮೊದಲನೆಯದಾಗಿ, ಶೌಚಾಲಯ ನಿರ್ಮಾಣಕ್ಕೆ ಮೀಸಲಿರಿಸಿರುವ ಸಹಾಯ ಧನ ಸಾಕಾಗುತ್ತಿಲ್ಲ. ಇದರಿಂದಾಗಿ ಗುಣಮಟ್ಟವಾದ, ದೀರ್ಘಕಾಲ ಬಾಳಿಕೆ ಬರುವಂಥ quality and durability ಇರುವ ಶೌಚಾಲಯವನ್ನು ನಿರ್ಮಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಏಕೆಂದರೆ, ಬಹುಶಃ ಈಗ ಕಟ್ಟಿರುವಂತಹ ಶೌಚಾಲಯಗಳು 8–10 ವರ್ಷಗಳು ಸಹ ಬಾಳಿಕೆ ಬರುವುದಿಲ್ಲ. ಗ್ರಾಮ ಪಂಚಾಯಿತಿಯಲ್ಲಿ ಈಗಿರುವ ಘನ ತ್ಯಾಜ್ಯ ನಿರ್ವಹಣೆಯ ಪದ್ಧತಿ ಏನಿದೆ ಅದು ಸರಿಯಾದ ರೀತಿಯಲ್ಲಿಲ್ಲ. ಈ ಯೋಜನೆಗಳಲ್ಲಿ ಕೇಂದ್ರ ಸರ್ಕಾರ ನೀಡುವ ಮಾರ್ಗದರ್ಶನ ಏನಿದೆ, ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ತರಬೇತಿಯು ಮತ್ತು capacity building ಸರಿಯಾದ ರೂಪದಲ್ಲಿ ಸಿಗುತ್ತಿಲ್ಲ. ಇದರಿಂದಾಗಿ ಕೆಲಸ ಮಾಡುವ ಅನುಭವ ಮತ್ತು ಅರ್ಹತೆ supervision consultants ಇರುವುದಿಲ್ಲ. ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯನ್ನು ಅನುಷ್ಠಾನಗೊಳಿಸುವಂಥ ಸಿ.ಇ.ಓ. ಗಳು ಸಮಾರಂಭ, ಸಭೆ, ಸಚಿವರ ಪ್ರವಾಸ ಕಾರ್ಯಕ್ರಮಕ್ಕೆ ಭೇಟಿ ನೀಡುತ್ತಿರುವುದರಿಂದ ಅವರಿಗೂ ಸಾಕಷ್ಟು ಸಮಯ ಸಿಗುವುದಿಲ್ಲ. ಅದಕ್ಕೂ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಘನ ತ್ಯಾಜ್ಯ ನಿರ್ವಹಣೆ ದೊಡ್ಡ ದುರಂತವಾಗುತ್ತಿದೆ.

ಈ ರಾಜ್ಯದ ಪ್ರತಿಯೊಂದು ಗ್ರಾಮದಲ್ಲಿಯು Poultry shops, Mutton shops and Fish stall ಗಳಿಂದ ಬರುವ ಘನ ತ್ಯಾಜ್ಯ ಹೆಚ್ಚಾಗುತ್ತಿದ್ದು, ಪ್ರತಿದಿನ ಸಾಕಷ್ಟು ಘನತ್ಯಾಜ್ಯವನ್ನು ತೆಗೆದುಕೊಂಡು ಹೋಗಿ, ಆ ಊರಿನ ತಿಪ್ಪೆಗುಂಡಿ ಅಥವಾ ಹೊಲದೊಳಗೆ ಸುರಿಯುತ್ತಿದ್ದಾರೆ. ನಂತರ ಗ್ರಾಮಗಳ ಹತ್ತಿರವೇ ಇರುವಂಥ ಅರಣ್ಯಗಳಿಂದ ಚಿರತೆಗಳು ಬಂದು ಅವುಗಳನ್ನು ತಿನ್ನುತ್ತವೆ. ತದನಂತರ ಊರಿನೊಳಗೆ ಬಂದು ನಾಯಿ, ಕುರಿ, ಮೇಕೆಗಳನ್ನು ತಿನ್ನುತ್ತವೆ, ಊರಿಗೆ ಬಂದ ಚಿರತೆಗಳು ಆಮೇಲೆ ಮಕ್ಕಳನ್ನು ಎಳೆದುಕೊಂಡು ಹೋಗಿ ತಿನ್ನುತ್ತವೆ. ಈ ರೀತಿ ತುಮಕೂರಿನಲ್ಲಿ ನಾಲ್ಕು ಪ್ರಕರಣಗಳು ಸಂಭವಿಸಿದೆ. ಈ ಹಿಂದೆ ಗ್ರಾಮ ಪಂಚಾಯಿತಿ ವತಿಯಿಂದ compost ತಯಾರಿಸುವ ಪದ್ಧತಿ ಇತ್ತು. ಅದೇ ರೀತಿ ಈ ಘನ ತ್ಯಾಜ್ಯಗಳಿಗೆ ಏನಾದರೂ ವ್ಯವಸ್ಥೆ ಮಾಡುವುದರ ಕಡೆಗೆ ಪರಿಶೀಲನೆ ಮಾಡುತ್ತಾರೆಯೇ ಎಂಬುದನ್ನು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಬಹಳ ಹಿರಿಯ ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಸ್ವಚ್ಛ ಭಾರತ್ ಮಿಷನ್ ಯೋಜನೆಯು ಅಸ್ತಿತ್ವದಲ್ಲಿದ್ದು, ಈ ಕೆಲಸವೂ ಒಬ್ಬರಿಂದ, ಇಬ್ಬರಿಂದ ಮಾಡುವುದಕ್ಕಾಗುವುದಿಲ್ಲ. ಇಡೀ ಸಮಾಜವೇ ಇದರಲ್ಲಿ ಭಾಗಿಯಾಗಲಿಲ್ಲವೆಂದರೆ, ಈ ಯೋಜನೆ ಸಂಪೂರ್ಣವಾಗಿ ಯಶಸ್ವಿಯಾಗುವುದಕ್ಕೆ ಸಾಧ್ಯವೇ ಇಲ್ಲ. ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ 6021 ಗ್ರಾಮ ಪಂಚಾಯಿತಿಗಳಿವೆ. ಈಗಾಗಲೇ ಕೇಂದ್ರ ಸರ್ಕಾರ ಪ್ರತಿ ಗ್ರಾಮ ಪಂಚಾಯಿತಿಗೂ ಸಹ ಘನ ಮತ್ತು ದ್ರವತ್ಯಾಜ್ಯವನ್ನು ನಿರ್ವಹಣೆ ಮಾಡುವುದಕ್ಕೆ ರೂ.20.00 ಲಕ್ಷಗಳನ್ನು ನೀಡಿದೆ. ಸರ್ಕಾರದವರು ಭೂಮಿ ಒದಗಿಸಬೇಕೆಂದು ತೀರ್ಮಾನ ಮಾಡಿದ್ದರಿಂದ, ಈಗಾಗಲೇ ಕರ್ನಾಟಕ ರಾಜ್ಯದಲ್ಲಿ 1021 ಗ್ರಾಮ ಪಂಚಾಯಿತಿಗೆ ಭೂಮಿ ಒದಗಿಸಲಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎರಡನೆಯದಾಗಿ, ಅನೇಕ ಜಿಲ್ಲೆಗಳಲ್ಲಿ ರೂ.20.00 ಲಕ್ಷಗಳನ್ನು ಬಳಸಿಕೊಳ್ಳಬೇಕೆನ್ನುವ ಯೋಚನೆಯಿಂದ... ನಾನು ಒಂದು ವಾರದ ಹಿಂದೆ ಬಳ್ಳಾರಿ ನಗರಕ್ಕೆ ಭೇಟಿ ನೀಡಿದ್ದೆ. ಈಗಾಗಲೇ 96 ಗ್ರಾಮ ಪಂಚಾಯಿತಿಗಳಿಗೆ ಕೊಡಲು ಒಟ್ಟಿಗೆ ವಾಹನಗಳನ್ನು ನಿಲ್ಲಿಸಿದ್ದು, ಆ ವಾಹನಗಳನ್ನು ವಿತರಣೆ ಮಾಡಲಾಗಿತ್ತು. ಎಲ್ಲಾ ಶಾಸಕರಿಗೂ ಪ್ರಾರ್ಥಿಸುವುದೇನೆಂದರೆ, ಗ್ರಾಮ ಪಂಚಾಯಿತಿಗಳಿಗೆ ರೂ.20.00 ಲಕ್ಷಗಳನ್ನು ಕೊಡುವಂಥ ಸಂದರ್ಭದಲ್ಲಿ ವಾಹನಗಳನ್ನು ಖರೀದಿ ಮಾಡಬೇಕು. ಈಗಾಗಲೇ ಮಾನ್ಯ ಸದಸ್ಯರು ಘನ ತ್ಯಾಜ್ಯದಿಂದಾಗಿ ಚಿರತೆ ಬಂದು ನಾಯಿ, ನರಿಗಳನ್ನು ತಿಂದುಕೊಂಡು ಹೋಗುತ್ತವೆ ಎಂದು ಹೇಳಿದ್ದಾರೆ. ಈ ಪ್ರಶ್ನೆ ಉದ್ಭವಿಸುವುದಿಲ್ಲ. ಅಲ್ಲಿಯ ಗ್ರಾಮ ಪಂಚಾಯಿತಿಯ ಪ್ರಮುಖರುಗಳು, ಅಧ್ಯಕ್ಷರು, ಪಿ.ಡಿ.ಓ. ಗಳು, ಅಧಿಕಾರಿಗಳು, ಸದಸ್ಯರೆಲ್ಲರೂ ಒಟ್ಟಿಗೆ ಸೇರಿಕೊಂಡು ನಮ್ಮ ಗ್ರಾಮವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕೆಂದು ತೀರ್ಮಾನ ಮಾಡಬೇಕು. ಈಗಾಗಲೇ ಇಡೀ ರಾಜ್ಯದಲ್ಲಿ ಬಹಳ ವೇಗವಾಗಿ ಈ ಕಾರ್ಯ ಯಶಸ್ವಿಯಾಗುತ್ತಿದೆ. ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯಕ್ರಮಗಳನ್ನು ಶುರು ಮಾಡಲಾಗಿದ್ದು, ಅದಕ್ಕಾಗಿಯೇ ಕೇಂದ್ರ ಸರ್ಕಾರವು ಕರ್ನಾಟಕ ರಾಜ್ಯಕ್ಕೆ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂದು ಬಹುಮಾನ ಸಹ ನೀಡಿದ್ದೆ. ಅದಕ್ಕಾಗಿ ತರಬೇತಿಯ ಅವಶ್ಯಕತೆ ಏನೇನಿದೆ, ಅದೆಲ್ಲಾ ತರಬೇತಿಯನ್ನು ಸಹ ನೀಡಲಾಗಿದೆ. ಈಗಾಗಲೇ ರಾಜ್ಯದಲ್ಲಿರುವ ಪಿ.ಡಿ.ಓ.ಗಳಿಗೆ, ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಉಪಾಧ್ಯಕ್ಷರಿಗೆ ತರಬೇತಿಯನ್ನು ಸಹ ನೀಡಿದ್ದು, ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಜೊತೆಗೆ ಮಾನ್ಯ ಸದಸ್ಯರು ಸಿ.ಇ.ಓ. ಗಳಿಗೆ ಕೆಲಸ ಜಾಸ್ತಿ ಇರುತ್ತದೆ ಎಂಬ ಮಾತನ್ನು ಹೇಳಿದ್ದರು. ಅವರಿಗೆ ಕೆಲಸ ಜಾಸ್ತಿ ಎಂದು ಬೇರೆ ಸಿ.ಇ.ಓ.ಗಳನ್ನು ನೇಮಿಸುವುದಕ್ಕೆ ಆಗುವುದಿಲ್ಲ. ಅನೇಕ ಜಿಲ್ಲೆಗಳಲ್ಲಿ ಸಿ.ಇ.ಓ. ಗಳೇ ವೈಯಕ್ತಿಕವಾಗಿ ಗಮನಹರಿಸಿ ಜಾಗದ ವ್ಯವಸ್ಥೆಯನ್ನು ಕಲ್ಪಿಸುತ್ತಿದ್ದು, ವಾಹನಗಳನ್ನು ಒದಗಿಸುವುದರ ಜೊತೆಗೆ ತರಬೇತಿಯನ್ನು ಸಹ ಒದಗಿಸುತ್ತಿದ್ದಾರೆ. ಈ ರೀತಿ ಎಲ್ಲಾ ಕೆಲಸವೂ ಆಗುತ್ತಿದೆ.

ಅದಕ್ಕಾಗಿ ತಮ್ಮಗೆಲ್ಲಾ ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು ತಮ್ಮ ತಮ್ಮ ಗ್ರಾಮ ಪಂಚಾಯಿತಿ ಏನಿದೆ, ಅಲ್ಲಿಗೆ ಕೇಂದ್ರ ಸರ್ಕಾರವು ರೂ.20.00 ಲಕ್ಷಗಳನ್ನು ಭರಿಸುತ್ತಿದ್ದೇವೆ, ಜೊತೆಗೆ ಹದಿನಾಲ್ಕನೇ ಹಣಕಾಸು ಆಯೋಗದಿಂದಲೂ ಹಣ ತೆಗೆದುಕೊಳ್ಳುತ್ತಿದ್ದಾರೆ. ಇನ್ನೂ ಕೆಲವರು ಶಾಸಕರ ನಿಧಿಯಿಂದಲೂ ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ. ಒಟ್ಟಾರೆಯಾಗಿ ಆ ಗ್ರಾಮ ಪಂಚಾಯಿತಿ ಯಶಸ್ವಿಯಾಗುತ್ತಿರುವ ಸಂದರ್ಭದಲ್ಲಿ ನಾವು ಅಧ್ಯಕ್ಷರಿಗೆ, ಪಿ.ಡಿ.ಓ. ಗಳಿಗೆ ಬೆನ್ನು ತಟ್ಟಿದರೆ ಖಂಡಿತವಾಗಿ ಸ್ವಚ್ಛ ಭಾರತ್ ಮಿಷನ್ ಯೋಜನೆ 100% ಯಶಸ್ವಿಯಾಗುತ್ತದೆ. ಇದರಿಂದಾಗಿ ನಾನು ಎಲ್ಲಾ ಶಾಸಕರಿಗೂ ಈ ಸದನದ ಮೂಲಕ ಪ್ರಾರ್ಥಿಸುವುದೇನೆಂದರೆ, ಇದೊಂದು ವಿಶೇಷವಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆಯಾಗಿದೆ. ಒಂದು ಗ್ರಾಮ ಪಂಚಾಯಿತಿಗೆ ರೂ.20.00 ಲಕ್ಷಗಳನ್ನು ಭರಿಸುವುದು ಅಷ್ಟು ಸುಲಭವಲ್ಲ. ಈ ಹಣವನ್ನು ಸಂಪೂರ್ಣವಾಗಿ ಸದುಪಯೋಗ ಮಾಡಿಕೊಂಡರೆ ಒಳ್ಳೆಯದು. ಮನೆಗಳಲ್ಲಿ ವೇಸ್ಟ್ ತ್ಯಾಜ್ಯವನ್ನು ತೆಗೆದುಕೊಂಡು ಹೋಗುವುದಕ್ಕೆ ತಿಂಗಳಿಗೆ ಮೂವತ್ತು ರೂಪಾಯಿಗಳನ್ನು ಅವರೇ ಭರಿಸುತ್ತಾರೆ. ಆ ಮೂವತ್ತು ರೂಪಾಯಿಗಳಿಗೆ ತೆಗೆದುಕೊಂಡು ಹೋಗುವ ವೇಸ್ಟ್ ತ್ಯಾಜ್ಯವನ್ನು ಒಂದು ಕಡೆ ಶೇಖರಿಸಿ ಆ ನೌಕರರೇ ಸ್ವಚ್ಛಗೊಳಿಸುತ್ತಾರೆ. ಇದರಿಂದಾಗಿ ಕೆಲವು ಗ್ರಾಮ ಪಂಚಾಯಿತಿಗೆ ಹೋಗಿ ನೋಡಿದಾಗ ಬಹಳ ಖುಷಿಯಾಗುತ್ತದೆ.

(ಮುಂದು) . . .

(194)/06.03.2020/2.20/ಎಸ್‌ಕೆ-ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್ ಈಶ್ವರಪ್ಪ (ಮುಂದು):-**

ಕೊಪ್ಪಳ ಜಿಲ್ಲೆಯ ಹುಲಿಗೆಮ್ಮ ದೇವಸ್ಥಾನದಲ್ಲಿ cluster scheme ತಂದಿದ್ದಾರೆ. ಇದರಲ್ಲಿ ಹತ್ತು ಗ್ರಾಮ ಪಂಚಾಯಿತಿಗಳು ಒಟ್ಟಿಗೆ ಸೇರಿಕೊಂಡಿದೆ. ಇವರಿಗೆ ಎರಡು ಕೋಟಿ ರೂಪಾಯಿಗಳಷ್ಟು ಹಣ ಸಿಕ್ಕಿದೆ. ಅಲ್ಲಿ ಒಂದು ದೊಡ್ಡ ಜಾಗವನ್ನು ತೆಗೆದುಕೊಂಡು ಜಿಲ್ಲಾ ಪರಿಷತ್ತಿನ ಅಧ್ಯಕ್ಷ ಆಗಿರುವಂತಹ ವ್ಯಕ್ತಿ, ಅವರೇ ನೇರವಾಗಿ ನಿಂತು ಹತ್ತು ಗ್ರಾಮ ಪಂಚಾಯಿತಿಯಲ್ಲಿ ಏನೇನು ಕೆಲಸ ಬರುತ್ತದೆಂಬುದರ ಬಗ್ಗೆ ಜೋಡಿಸುತ್ತಿದ್ದಾರೆ. ಅಲ್ಲಿ ಕಾಂಪೋಸ್ಟ್ ಗೊಬ್ಬರವನ್ನು ಕೂಡ ತಯಾರು ಮಾಡುತ್ತಿದ್ದಾರೆ. ಹುಲಿಗೆಮ್ಮ ದೇವಸ್ಥಾನವೆಂದರೆ, ಅದೊಂದು ದೊಡ್ಡ ಜಾತ್ರೆ ತರಹ ಇರುತ್ತದೆ. ಪ್ರತಿ ಮಂಗಳವಾರ ಮತ್ತು ಶುಕ್ರವಾರ ದೊಡ್ಡ ಜಾತ್ರೆ ತರಹ ಆಗುತ್ತದೆ. ಅಲ್ಲಿ ಅತಿ ಹೆಚ್ಚು ಕಸ ಸಿಗುತ್ತದೆ. ಆ ವಾರಗಳನ್ನು ಬಿಟ್ಟು, ಬೇರೆ ವಾರಗಳಲ್ಲಿ ಹೋದರೆ, ಅಲ್ಲಿ ಒಂದು ತುಂಡು ಕಸ ಸಹ ಸಿಗುವುದಿಲ್ಲ. ಅಲ್ಲಿ ಸ್ವಚ್ಛತೆಯ ಬಗ್ಗೆ ಅಷ್ಟು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ನಾನು ಎಲ್ಲರಿಗೂ ಪ್ರಾರ್ಥನೆ ಮಾಡುವುದೇನೆಂದರೆ, ಈ ಯೋಜನೆ ಕೇಂದ್ರ ಸರ್ಕಾರದಿಂದ ಬಂದಿದೆ. ನನ್ನ ಗುರಿ ಏನೆಂದರೆ, ಸುಮಾರು 6021 ಗ್ರಾಮ ಪಂಚಾಯಿತಿಗಳಿವೆ. ಈ ವರ್ಷದಲ್ಲಿಯಾದರೂ ಕನಿಷ್ಟ ಸುಮಾರು 3,000 ಗ್ರಾಮ ಪಂಚಾಯಿತಿಗಳಲ್ಲಿ ಈ ಒಂದು ಯೋಜನೆಯನ್ನು ಮುಗಿಸಬೇಕು. ಮುಂದಿನ ದಿನಗಳಲ್ಲಿ ಉಳಿದಂತಹ ಮೂರು ಸಾವಿರ ಗ್ರಾಮ ಪಂಚಾಯಿತಿಗಳಿಗೆ ಗಮನಕೊಡಬೇಕೆಂಬ ಯೋಚನೆ ನಡೆಯುತ್ತಿದೆ. ಮುಂಚಿತವಾಗಿ ತಮ್ಮ ತಮ್ಮ ಗ್ರಾಮ ಪಂಚಾಯಿತಿಗಳ ಅಧಿಕಾರಿಗಳ ಜೊತೆಗೆ ಮಾತನಾಡಿ, ಇನ್ನು ಯಾವ ಗ್ರಾಮ ಪಂಚಾಯಿತಿಗೆ ಜಾಗ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಕ್ಕಿಲ್ಲವೆಂಬುದರ ಬಗ್ಗೆ ನಮ್ಮ ಅಧಿಕಾರಿಗಳು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ತಾವು ಕೂಡ ಗ್ರಾಮ ಪಂಚಾಯಿತಿಗೆ ಜಾಗವನ್ನು ಕೊಡಿಸುವ ಪ್ರಯತ್ನವನ್ನು ಮಾಡಿದರೆ, ಉಳಿದಿದ್ದೆಲ್ಲವೂ ಕೂಡ ನಾವು ಪ್ರಯತ್ನ ಮಾಡಿ ಯಶಸ್ವಿಯಾಗುತ್ತೇವೆಂಬ ವಿಶ್ವಾಸವಿದೆ. ಈ ಸ್ವಚ್ಛ ಭಾರತ್ ಮಿಷನ್ ತಂದಿರುವುದು ತಮ್ಮೆಗೆಲ್ಲರಿಗೂ ಗೊತ್ತಿದೆ. ಈ ದೇಶದ ಪ್ರಧಾನಿಯಾದ ಮಾನ್ಯ ನರೇಂದ್ರ ಮೋದಿಯವರು ವೈಯಕ್ತಿಕವಾಗಿ ಆಸಕ್ತಿ ವಹಿಸಿ ಮಾಡುತ್ತಿದ್ದಾರೆ. ಆದ್ದರಿಂದಲೇ ಇಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡುತ್ತಿದ್ದಾರೆ. ಇದನ್ನು ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣವಾಗಿ ಸದುಪಯೋಗಪಡಿಸಿಕೊಳ್ಳಬೇಕು. ಎಲ್ಲಾ ಶಾಸಕರು, ಸಂಘ ಸಂಸ್ಥೆಗಳು ಹಾಗೂ ನಾಗರೀಕರು ಈ ಯೋಜನೆ ಯಶಸ್ವಿಯಾಗುವ ದಿಕ್ಕಿನಲ್ಲಿ ಎಲ್ಲರೂ ಸಹಕಾರ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಈ ಕುಡಿಯುವ ನೀರಿನ ನಿರ್ವಹಣೆ ಮಾಡುವಂತಹ ಅಧಿಕಾರಿಗಳು ಮತ್ತು ಶೌಚಾಲಯದ ನಿರ್ಮಾಣ ಮಾಡುವಂತಹ ಅಧಿಕಾರಿಗಳಿಗೆ ಏನು ಕರ್ತವ್ಯಗಳಿವೆ, ಅವು overlap ಆಗುತ್ತಿದೆ. ಅದರಿಂದಾಗಿ ಅವರಿಗೆ ಜವಾಬ್ದಾರಿ ಬರುತ್ತಿಲ್ಲ. ದಯವಿಟ್ಟು, ಅದನ್ನು ಸರಿಪಡಿಸಿದರೆ ಒಳ್ಳೆಯದು.

**ಶ್ರೀ ಕೆ.ಎಸ್ ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಅದಕ್ಕೂ ಕೂಡ ಗಮನಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ 460**
**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ ಪರವಾಗಿ):–** ಮಾನ್ಯ ಸಭಾಪತಿಯವರೇ, ಇದೊಂದು ದುರಂತ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. 2011ನೇ ಸಾಲಿನಲ್ಲಿ ಸುಮಾರು 733 ಬಿಆರ್‌ಸಿ/ಸಿಆರ್‌ಸಿಗಳನ್ನು ನೇಮಕಾತಿ ಮಾಡಿದರು. ಇಲ್ಲಿ ವಿಚಿತ್ರವೇನೆಂದರೆ, 2011–12 ನೇ ಸಾಲಿನಲ್ಲಿ ಸರ್ಕಾರ ನಿಯಮ ಮಾಡಿತು. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯಲ್ಲಿ ಬ್ಲಾಕ್ ಹಾಗೂ ಕ್ಲಸ್ಟರ್ ಮಟ್ಟದ ಸಮಾಲೋಚಕರ ಕುಂದು–ಕೊರತೆ ಎಂದು ಹೇಳಿ. ಅಲ್ಲಿ ಸುಮಾರು 471 ಇಂಜಿನಿಯರ್‌ಗಳ ಸೇವೆಯನ್ನು ಸಕ್ರಮಗೊಳಿಸಲು ವಿಶೇಷ ನಿಯಮಗಳನ್ನು ಅಳವಡಿಸಿಕೊಂಡು ಮುಂದಿನ ಕ್ರಮವಿಡಲು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಆ 471 ಇಂಜಿನಿಯರ್‌ಗಳನ್ನು ಮುಂದುವರೆಸಬೇಕೆಂಬ ತೀರ್ಮಾನವನ್ನು ಸರ್ಕಾರ ಮಾಡಿದೆಯೇ? ಈ ಹಿಂದೆ ಇದ್ದಂತಹ ಮಂತ್ರಿಗಳು ಅವರನ್ನು ಮುಂದುವರೆಸಬೇಕೆಂಬ ತೀರ್ಮಾನವನ್ನು ಮಾಡಿದರು. ಮಾನ್ಯ ಸಚಿವರು ಇವತ್ತಿನವರೆಗೆ ಸೂಚಿಸಿರುತ್ತಾರೆಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ದಿನಾಂಕದವರೆಗೆ ಸೂಚಿಸಿರುತ್ತಾರೆ, ಇದು ಏನಾಗಿದೆ ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು.

ಎರಡನೆಯದಾಗಿ, ಇವತ್ತು ಕಡತವನ್ನು ಮಂಡಿಸಿ, 'ಸಮಾಲೋಚನಾ ವೇತನವನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಬೇರೆ ಕಡತದಲ್ಲಿ ಮಂಡಿಸುವುದು' ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಸೂಚಿಸಿರುತ್ತಾರೆ. ಇದಕ್ಕೆ ಉತ್ತರವಿಲ್ಲ. ಯಾವಾಗ ಸೂಚಿಸಿದ್ದಾರೆ ಮತ್ತು ಅದು ಯಾವಾಗ ಮಾಡಿದ್ದಾರೆ? ಅದರ ಪಗ್ರತಿ ಏನು? ನಾಲ್ಕು ಪ್ರಮುಖವಾದ ಪ್ರಶ್ನೆಗಳಿವೆ. ನಾನು ಮೂಲವಾಗಿ ಹೇಳುವುದೇನೆಂದರೆ, ಇದರಲ್ಲಿ ಸರ್ಕಾರ ಆದೇಶ ಮಾಡಿದರು. ಎನ್‌ಆರ್‌ಡಿಡಬ್ಲ್ಯೂಪಿ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಬಿಆರ್‌ಸಿ/ಸಿಆರ್‌ಸಿ ರವರು ಕರ್ನಾಟಕ ಘನ ಉಚ್ಛ ನ್ಯಾಯಾಲಯದಲ್ಲಿ ಡಬ್ಲ್ಯೂಪಿ ನಂಬರ್:23849/2012 ಸಲ್ಲಿಸಿರುತ್ತಾರೆ. ಸದರಿ ಡಬ್ಲ್ಯೂಪಿ ನಂಬರ್ 23849/2012ರಲ್ಲಿ ಕರ್ನಾಟಕ ಘನ ಉಚ್ಛ ನ್ಯಾಯಾಲಯವು ದಿನಾಂಕ 20.07.2012 ರಂದು ಈ ಕೆಳಕಂಡಂತೆ ಆದೇಶಿಸಿರುತ್ತದೆ:

> *"The Taluk Panchayat has informed the Zilla Panchayat as to the need of continuing the services of these petitioners. Respondent No,-2 Zilla Panchayat may consider as to whether the services of these petitioners is required to be continued and if there is requirement, the respondents shall continue their services at-least till the completion of the scheme. Further, if the petitioners are already working and if there is need of their services, they need not be discontinued till the completion of the scheme"*

ಈ ಯೋಜನೆ ಮುಗಿಯುವವರೆಗೂ ಇವರನ್ನು ತೆಗೆಯಬಾರದೆಂದು ಹೇಳಿದ್ದಾರೆ. ಕೊನೆಗೆ ಇವರ ಉತ್ತರವೇನೆಂದರೆ, ಈ ಹಿಂದೆ ಮಾನ್ಯ ಹೆಚ್.ಕೆ ಪಾಟೀಲ್‌ರವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಇದ್ದಾಗ ದಿನಾಂಕ 10.06.2012 ರಂದು 'ಬಿಆರ್‌ಸಿ/ಸಿಆರ್‌ಸಿ ಗಳನ್ನು ವೈಯಕ್ತಿಕ ಸಮಾಲೋಚನಾ ವೇತನ (Individual Consultant Basis) ಆಧಾರದ ಮೇಲೆ ಯೋಜನೆ ಮುಗಿಯುವವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಲು ಆದೇಶ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊರಡಿಸುವುದು. ಸಮಾಲೋಚನಾ ವೇತನವನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಬೇರೆ ಕಡತದಲ್ಲಿ ಮಂಡಿಸುವುದು' ಎಂದು ಸೂಚಿಸಿರುತ್ತಾರೆ.

ಮಾನ್ಯ ಸಭಾಪತಿಯವರೇ, ಇವತ್ತಿನವರೆಗೂ ಮಾನ್ಯ ಸಚಿವರು ನಿರ್ದೇಶನ ಕೊಟ್ಟಿದ್ದಾರೆ. ಇಂಜಿನೀಯರ್‌ಗಳನ್ನು ತೆಗೆದುಕೊಂಡಿದ್ದಾರೆ. ಇವರನ್ನು ತೆಗೆದುಕೊಳ್ಳುವುದಿಲ್ಲವೆಂದರೆ, ಇದರ ಪದ್ಧತಿ ಏನು? ನಾನು ಹೇಳುವುದೇನೆಂದರೆ, ಇವತ್ತು ಸರ್ಕಾರದಲ್ಲಿ ಜನಪ್ರತಿನಿಧಿಯಾದಂತಹ ಸಚಿವರ ನಿರ್ದೇಶನಕ್ಕೂ ಒಂದಿಷ್ಟು ಗೌರವವಿಲ್ಲವೆಂದರೆ ಹೇಗೆ? ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಸುಮಾರು 471 ಇಂಜಿನೀಯರ್‌ಗಳನ್ನು ಏನು ತೆಗೆದುಕೊಂಡಿದ್ದೀರಿ, ಅದೇ ರೀತಿ ಈ ಸ್ಕೀಂ ಮುಗಿಯುವವರೆಗೂ ಮಾಡಿ, ಅವರ ಸೇವೆಯನ್ನು ಮುಂದುವರೆಸಿ ಎಂದು ಮಾನ್ಯ ಉಚ್ಚ ನ್ಯಾಯಾಲಯವು ಆದೇಶ ಮಾಡಿದೆ. ಇಂಜಿನೀಯರ್‌ಗಳಿಗೆ ಏನು ಮಾಡಿದ್ದೀರಿ? ಒಂದೇ ಇಲಾಖೆಯಲ್ಲಿ ಒಂದೇ ನಿಯಮಗಳನ್ನು ಮಾಡುವುದನ್ನು ಬಿಟ್ಟು, ಬೇರೆ ಬೇರೆ ಮಾಡುವುದು ಸರಿಯಲ್ಲ. ಇಂಜಿನೀಯರ್‌ಗಳನ್ನು confirm ಮಾಡಿದರೆ ಅದು ಬೇರೆ ಅರ್ಥವಾಗುತ್ತದೆ. ಬಿಆರ್‌ಸಿ/ಸಿಆರ್‌ಸಿಗಳು ಏನೂ ಇಲ್ಲದವರು ಎಂಬುದು ಅರ್ಥವಾಗುತ್ತದೆ. ದಯವಿಟ್ಟು, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ಈ ಸ್ಕೀಂ ಮುಗಿಯುವವರೆಗೆ ಇವರನ್ನು ಮುಂದುವರೆಸಿ. ಪ್ರಸಂಗ ಬಂದರೆ, ಇವರು 2011 ನೇ ಸಾಲಿನಲ್ಲಿ ನೇಮಕಾತಿಯಾಗಿದ್ದು, ಈಗಾಗಲೇ ಸುಮಾರು ಒಂಭತ್ತು ವರ್ಷಗಳು ಕಳೆದಿವೆ. ಅವರ ಸೇವೆಯನ್ನು ಖಾಯಂ ಮಾಡುವುದಕ್ಕೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರು ಹೇಳಿದ್ದಷ್ಟೂ ಸತ್ಯವಾಗಿದೆ. ಕೆಲವು ಕಡೆ ಮಾತ್ರ ಅವರು ಕಾನೂನು ಮೀರಿ ಕೆಲವರನ್ನು ತೆಗೆದುಕೊಂಡರು. ಆದರೆ ಇಲ್ಲಿ ಪ್ರಶ್ನೆ ಬಂದಿರುವುದು ಒಂದು ವರ್ಷಕ್ಕೆ ಸೀಮಿತ ಎಂದು ಮಾಡಿದರು. ಒಟ್ಟು 865 ಜನರನ್ನು ತೆಗೆದುಕೊಂಡಂತಹ ಸಂದರ್ಭದಲ್ಲಿ, ಇದು ಆಗುವಂತಹ ಕೆಲಸವಲ್ಲವೆಂದು ಕೊನೆಗೆ ಮಾನ್ಯ ಬಸವರಾಜ ಹೊರಟ್ಟಿಯವರೇ ತಿಳಿದುಕೊಳ್ಳಿ: ಮೊದಲು ಈ ಸ್ಕೀಂ ಮುಗಿಯಿತು. ಆ ಆದೇಶದ ಪ್ರಕಾರ ಏನೇನು ಮಾಡಬೇಕು ಬಿಡಬೇಕೆಂದರೆ, ಈಗ 865 ಜನರ ಪೈಕಿ ಸುಮಾರು 120 ರಿಂದ 200 ಜನರು ಉಳಿದಿರಬಹುದು. ಮಾನ್ಯ ಸಭಾಪತಿಯವರೇ, ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ, ಈಗ ಎಷ್ಟು ಜನ ಉಳಿದಿದ್ದಾರೋ ಅಷ್ಟು ಜನರಿಗೂ ಕೂಡ ಮಾನವೀಯತೆ ದೃಷ್ಟಿಯಿಂದ ಏನು ಅನುಕೂಲವಾಗುತ್ತದೆಯೋ ಅದನ್ನು ಮಾಡುತ್ತೇನೆ. ಏಕೆಂದರೆ, ಕಾನೂನು, ಕೋರ್ಟು-ಕಛೇರಿ ಎಂದು ಅಲೆದು ಈಗಾಗಲೇ ಒಂದು ವರ್ಷ ಕಳೆದು ಹೋಯಿತು. ಸ್ಕೀಂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಗಿಯುವ ತನಕ ಎಂದು ಅವರನ್ನು ತೆಗೆದುಕೊಂಡಾಯಿತು. ಇವರನ್ನು ತೆಗೆದುಕೊಂಡಿರುವ ರೂಪ ಸರಿಯೇ-ತಪ್ಪೇ ಎಂದು ಚರ್ಚೆ ಮಾಡಿಕೊಳ್ಳುತ್ತಾ ಕುಳಿತುಕೊಂಡರೆ, ಈಗ ಏನೂ ಉಪಯೋಗವಿಲ್ಲ. ಈಗ ಎಷ್ಟು ಜನ ಉಳಿದಿದ್ದಾರೋ, ಅಂತಹವರಿಗೆ ಮಾನವೀಯತೆಯ ದೃಷ್ಟಿಯಿಂದ ಏನು ಅನುಕೂಲವಾಗುತ್ತದೆಯೋ ಅದನ್ನು ನಾನು ಮಾಡಿಕೊಡುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯಡಿಯಲ್ಲಿ ಬಿಆರ್‌ಸಿ/ಸಿಆರ್‌ಸಿ ಅಡಿಯಲ್ಲಿ ಗ್ರಾಮೀಣ ಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯನ್ನು ಕ್ಲೋಸ್ ಮಾಡಿ, ಈಗ 'ಜಲಜೀವನ್ ಮಿಷನ್' ಪ್ರಾರಂಭವಾಗಿದೆ. ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರು ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟರು. ಆ ಸ್ಕೀಂ ಮುಕ್ತಾಯವಾಗಿ 'ಜಲಜೀವನ್ ಮಿಷನ್' ಪ್ರಾರಂಭವಾದರೂ ಕೂಡ ಮಾನವೀಯತೆಯ ದೃಷ್ಟಿಯಿಂದ ಅವರನ್ನು ಮುಂದುವರೆಸುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾನು ಮುಂದುವರೆಸುತ್ತೇನೆಂದು ಹೇಳಿಲ್ಲ. ಮಾನವೀಯತೆಯ ದೃಷ್ಟಿಯಿಂದ ಅವರಿಗೆ ಏನು ಅನುಕೂಲವಾಗುತ್ತದೆಯೋ, ನಿಮ್ಮ ಜೊತೆಗೆ ನಾನು ಕನ್ಸಲ್ಟ್ ಮಾಡಿ ಮಾಡುತ್ತೇನೆಂದು ಹೇಳುತ್ತಿದ್ದೇನೆ. ಇದು ರೆಕಾರ್ಡ್‌ಗೆ ಹೋಗುತ್ತದೆ. ಮತ್ತೆ ನಿಮ್ಮ ಮಾತು ನನ್ನ ಬಾಯಿಯಲ್ಲಿ ಹೇಳಿಸಬೇಡಿ.

ಮಾನ್ಯ ಸಭಾಪತಿಯವರೇ, ನಾನು ಸ್ಪಷ್ಟವಾಗಿ ಹೇಳಿದ್ದೇನೆ. ತಮ್ಮನ್ನು ಮತ್ತು ಮಾನ್ಯ ಬಸವರಾಜ ಹೊರಟ್ಟಿಯವರನ್ನು ಹಾಗೂ ಪ್ರಶ್ನೆ ಕೇಳಿದಂತಹ ಮಾನ್ಯ ಸದಸ್ಯರು ಅಂದರೆ ಮೂರು ಜನ ಸದಸ್ಯರನ್ನು ಕರೆದು ಚರ್ಚೆ ಮಾಡುತ್ತೇನೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಇಲ್ಲಿ ಮಾಡಿರುವುದು ಸರಿಯೋ ಅಥವಾ ತಪ್ಪೋ? ಈ ಹಿಂದೆ ಇದ್ದಂತಹ ಸಚಿವರು ಏತಕ್ಕೆ ಮಾಡಲಿಲ್ಲ? ಇಲ್ಲಿ ರಾಜಕಾರಣ ಮಾಡುವಂತಹ ಪ್ರಶ್ನೆಯಲ್ಲ. ಇದು ಅವರ ಜೀವನದ ಪ್ರಶ್ನೆ. ಅದಕ್ಕೋಸ್ಕರ ಅವರಿಗೆ ಏನು ಅನುಕೂಲವಾಗಬೇಕೋ, ಆ ವಿಚಾರದಲ್ಲಿ ಖಂಡಿತವಾಗಿ ಕುಳಿತುಕೊಂಡು ಚರ್ಚೆ ಮಾಡಿ. ಅದನ್ನು ಒಂದು ರೂಪಕ್ಕೆ ತರೋಣ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಗೆ ಮಹತ್ವದ ವಿಷಯವನ್ನು ಗಮನಕ್ಕೆ ತರುತ್ತೇನೆ ಈ ಹಿಂದೆ ನಮ್ಮ ರಾಜ್ಯದೊಳಗೆ ಪಿಯುಸಿ ಸಮಾನವಾಗಿ JOC ಪ್ರಾರಂಭವಾಯಿತು. ಆ ಸ್ಕೀಂ ಬಂದ್ ಆಯಿತು. ಆ ಸ್ಕೀಂ ಬಂದ್ ಆದಾಗ ಆ ನೌಕರರುಗಳನ್ನೆಲ್ಲಾ ಮಾನವೀಯತೆಯ ದೃಷ್ಟಿಯಿಂದ ಬೇರೆ ಬೇರೆ ಇಲಾಖೆಗಳಿಗೆ ವಿಲೀನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದಂತಹ ಉದಾಹರಣೆಗಳಿವೆ. ಮಾನ್ಯ ವಿಶ್ವೇಶ್ವರಯ್ಯ ಕಾಗೇರಿಯವರು ಇದ್ದಾಗ ನಮ್ಮ ಸರ್ಕಾರವೇ ಮಾಡಿದೆ. ನನ್ನ ವಿನಂತಿ ಏನೆಂದರೆ, ..

**ಶ್ರೀ ಕೆ.ಎಸ್. ಈಶ್ವರಪ್ಪ:-**ಮಾನ್ಯ ಸಂಕನೂರ್‌ರವರೇ, ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತಿದ್ದೇನೆ. ಈ ಹಿಂದೆ ಯಾರ್ಯಾರು ಏನೇನು ಮಾಡಿದರು ಎಂದು ನಾನು ಹೇಳುವುದಕ್ಕೆ ಹೋಗುತ್ತಿಲ್ಲ. ನಾನು ಹೇಳುತ್ತಿರುವುದೇನೆಂದರೆ, ತಮ್ಮನ್ನು ಮತ್ತು ಮಾನ್ಯ ಬಸವರಾಜ ಹೊರಟ್ಟಿಯವರನ್ನು ಹಾಗೂ ಪ್ರಶ್ನೆ ಕೇಳಿದಂತಹ ಮೂರು ಜನ ಮಾನ್ಯ ಸದಸ್ಯರನ್ನು ಕರೆದು ಮಾನವೀಯತೆಯ ದೃಷ್ಟಿಯಿಂದ ಅವರ ಮೇಲೆ ನಿಮಗೆ ಏನು ಅಪೇಕ್ಷೆ ಇದೆಯೋ ಅದಕ್ಕೆ ಪ್ರಯತ್ನವನ್ನು ನಡೆಸುತ್ತೇನೆ. ಅದಕ್ಕೆ ನಾನು ಇನ್ಯಾವ ಪದವನ್ನು ಬಳಸಲಿ?

**ಪ್ರಶ್ನೆ ಸಂಖ್ಯೆ 338**
**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀ ಆರ್. ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ 14ನೇ ಹಣಕಾಸಿನ ಕ್ರಿಯಾ ಯೋಜನೆ ಮಾಡಬೇಕಾದರೆ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಒಪ್ಪಿಗೆ ಕೊಡಬೇಕೆಂಬುದು ಇತ್ತು. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಈ 14ನೇ ಹಣಕಾಸು ಆಯೋಗದ ಅವಧಿ ಈ ಮಾರ್ಚ್ ತಿಂಗಳ ಕೊನೆಯಲ್ಲಿ ಮುಗಿಯುತ್ತದೆ. ಮುಂದೆ 15ನೇ ಹಣಕಾಸು ಆಯೋಗದ ಯೋಜನೆ ಬರುತ್ತದೆ. ಅಂತಹ ಸಂದರ್ಭಗಳಲ್ಲಿ 15ನೇ ಹಣಕಾಸಿನ ಕ್ರಿಯಾ ಯೋಜನೆಯನ್ನು ಆ ಗ್ರಾಮ ಪಂಚಾಯಿತಿಯವರೇ ಮಾಡುತ್ತಾರೆಂದು ಹೇಳಿ, ಅವರಿಗೆ ಅಧಿಕಾರ ಇರುತ್ತದೆಂದು ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಕೊಟ್ಟಿದ್ದಾರೆ.

(ಮುಂದು...)

(195) 06.03.2020 2.30 ಟಿಸಿಹೆಚ್-ವಿಕೆ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆರ್ ಪ್ರಸನ್ನಕುಮಾರ್ (ಮುಂದು):-**

ಆದ್ದರಿಂದ ಸರ್ಕಾರ ಯಾವ ರೀತಿಯ ಹೇಳಿಕೆಯನ್ನು ಕೊಟ್ಟಿದೆ, ಅದಕ್ಕೆ ಬದ್ಧರಾಗಿರಬೇಕು. ಏಕೆಂದರೆ, ಹಿಂದಿನ ಸುತ್ತೋಲೆ ಪ್ರಕಾರ ತಾಲ್ಲೂಕು ಪಂಚಾಯಿತಿಯ ಅಧಿಕಾರಿಗೆ ಇದ್ದಂತಹ ಅಧಿಕಾರವನ್ನು ಜಿಲ್ಲಾ ಪಂಚಾಯಿತಿ ಸಿ.ಇ.ಓಗೆ ಅಧಿಕಾರ ಕೊಟ್ಟಿದ್ದಾರೆ. ಗ್ರಾಮ ಪಂಚಾಯಿತಿಯ ಪರಿಸ್ಥಿತಿ ಏನಿದೆ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಂಗಳೂರಿನಲ್ಲಿ ಕುಳಿತುಕೊಂಡಿರತಕ್ಕಂಥ ಅಧಿಕಾರಿಗಳಿಗೆ ಗೊತ್ತಾಗುವುದಿಲ್ಲ. ಜಿಲ್ಲಾ ಪಂಚಾಯಿತಿ ಸಿ.ಇ.ಓ.,ರವರಿಗೆ ಅಧಿಕಾರ ಕೊಟ್ಟು ಗ್ರಾಮ ಪಂಚಾಯಿತಿಯವರು ಅಲೆದಾಡುವಂತಹ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ. ಆದ್ದರಿಂದ 15ನೇ ಹಣಕಾಸಿನ ಆಯೋಗ ಯಾವ ಮಾನದಂಡವನ್ನು ನಿಗದಿಪಡಿಸಲಾಗಿದೆ, ಆ ಮಾನದಂಡದ ಪ್ರಕಾರವೇ ಇರಬೇಕು. ಬೆಂಗಳೂರಿನಲ್ಲಿ ಕುಳಿತುಕೊಂಡು ಬೇರೆ ಬೇರೆ ರೀತಿಯ ಸುತ್ತೋಲೆಗಳನ್ನು ಹೊರಡಿಸುವಂತಹ ಕೆಲಸ ಆಗಬಾರದು. ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಏನು ಉದ್ದೇಶವಿದೆ, ಅದು ಸಫಲವಾಗಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಅಪೇಕ್ಷೆಯ ಪ್ರಕಾರವೇ ನಾನು ಉತ್ತರ ಕೊಟ್ಟಿದ್ದೇನೆ. ಅದನ್ನೇ ಜಾರಿಗೆ ತರುತ್ತೇವೆ.

**(ಪ್ರಶ್ನೆ ಸಂಖ್ಯೆ. 327 ಶ್ರೀ ಎಂ.ಎ.ಗೋಪಾಲಸ್ವಾಮಿಯವರು ಸದನಕ್ಕೆ ಗೈರುಹಾಜರಾಗಿರುತ್ತಾರೆ)**

**ಚುಕ್ಕೆ ಗುರುತಿನ ಪ್ರ.ಸಂ.380**
**(ಉತ್ತರ ಲಗತ್ತಿಸಿದೆ)**

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ಮಂಜೂರಾದ ಅನುದಾನವೆಷ್ಟು; ಬಿಡುಗಡೆಗೊಳಿಸಿದ ಅನುದಾನವೆಷ್ಟು; ಬಾಕಿ ಉಳಿದಿರುವ ಅನುದಾನವೆಷ್ಟು ಎಂದು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಮ್ಮ ರಾಜ್ಯದ ಒಟ್ಟಾರೆ ಬಜೆಟ್ 2,33,134 ಕೋಟಿ ರೂಪಾಯಿಗಳು ಆಗಿರುತ್ತದೆ. ತಾವು ಕೊಟ್ಟಿರತಕ್ಕಂಥ ಉತ್ತರದಲ್ಲಿ 2016–17, 2017–18 ಮತ್ತು 2018–19 ರಲ್ಲಿ ಮಂಜೂರಾದ ಅನುದಾನ, ಬಿಡುಗಡೆಯಾದ ಅನುದಾನ ಮತ್ತು ಬಾಕಿ ಅನುದಾನದ ಬಗ್ಗೆ ಅಂಕಿ–ಅಂಶವನ್ನು ಒದಗಿಸಿದ್ದೀರಿ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಅತ್ಯುಮವಾದ ಪ್ರೇಕ್ಷಣೀಯ ಸ್ಥಳಗಳಿವೆ. ಆದರೆ, ಅದನ್ನು ಗುರ್ತಿಸಿ ಅಭಿವೃದ್ಧಿಪಡಿಸುವುದಕ್ಕೆ ಹೆಚ್ಚಿನ ಅನುದಾನವನ್ನು ಮೀಸಲಿಡಬೇಕಾಗುತ್ತಿದೆ. ಬೇರೆ ರಾಜ್ಯಗಳಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆ. ನಾವು ವಿಮಾನದಲ್ಲಿ ಬೇರೆ ಬೇರೆ ರಾಜ್ಯಗಳಿಗೆ ಪ್ರಯಾಣ ಮಾಡಿ ನೋಡಿದರೆ, ಪ್ರವಾಸಿ ತಾಣಗಳು ಯಾವ ರೀತಿ ಇದೆಯೆಂದು ನಮಗೆ ಗೊತ್ತಾಗುತ್ತದೆ. ಬೇರೆ ರಾಜ್ಯಗಳಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ಯುವಕರು ಹಾಗೂ ಬಹಳ ಕ್ರಿಯಾಶೀಲರಾಗಿದ್ದಾರೆ. ಅವರಿಗೆ ನಿಜವಾಗಲೂ ಈ ಸಂದರ್ಭದಲ್ಲಿ ನಾನು ಧನ್ಯವಾದಗಳನ್ನು ಹೇಳಬಯಸುತ್ತೇನೆ. ಏಕೆಂದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲವು ಶಾಸಕರು ಪಿ.ಡಬ್ಲ್ಯೂ.ಡಿ ಸಚಿವರ ಖಾತೆಯೇ ಬೇಕು ಅಥವಾ ಬೇರೊಂದು portfolio ತೆಗೆದುಕೊಳ್ಳಲು ಆಸೆಪಡುತ್ತಾರೆ. ಆದರೆ, ಇಂತಹ ಒಬ್ಬರು ಕ್ರಿಯಾಶೀಲ ಸಚಿವರಿಗೆ ಪ್ರವಾಸೋದ್ಯಮ ಇಲಾಖೆ ಸಿಕ್ಕಿರುವುದು ನಮಗೆ ಸಂತೋಷವಾಗಿದೆ. ಏಕೆಂದರೆ, ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಪ್ರವಾಸಿಗರನ್ನು ಆಕರ್ಷಣೆ ಮಾಡುವುದಕ್ಕೆ ಅತ್ಯುತ್ತಮವಾದ ಪ್ರವಾಸಿ ತಾಣಗಳಿವೆ. ಹಾಗಾಗಿ, ನಾವು ಮಾನ್ಯ ಸಚಿವರಲ್ಲಿ ಉತ್ತರವನ್ನು ಬಯಸುತ್ತೇನೆ. ತದನಂತರ ನಾನು ಮಾತನಾಡುತ್ತೇನೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಹೆಚ್.ಎಂ.ರಮೇಶ್‌ಗೌಡ ರವರು ಏನು ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ನಾನು ಸಂಶಯಕ್ಕೆ ಆಸ್ಪದವಿಲ್ಲದ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದೇನೆ ಎಂದು ಭಾವಿಸುತ್ತೇನೆ. ಆ ಉತ್ತರದಲ್ಲಿ ಏನಾದರು ಅವರಿಗೆ ಪೂರಕ ಪ್ರಶ್ನೆಗಳಿದ್ದರೆ, ಅವರ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಒಂದುವೇಳೆ, ನನಗೆ ಈ ಖಾತೆ ಜೊತೆಗೆ ಹಣಕಾಸು ಇಲಾಖೆಯನ್ನು ಕೊಟ್ಟಿದ್ದರೆ, ಬೇರೆ ರೀತಿಯಲ್ಲಿಯೇ ನಾನು ಪ್ರವಾಸೋದ್ಯಮಕ್ಕೆ ನಿರೀಕ್ಷೆ ಮೀರಿ ರಾಜ್ಯದ ಜನರಿಗೆ ಸಂತೃಪ್ತಿಯಾಗುವ ರೀತಿಯಲ್ಲಿ ಹಣಕಾಸನ್ನು ಒದಗಿಸುತ್ತಿದ್ದೆ. ಆದರೆ, ಆ ಯೋಗ ನನಗೆ ಇನ್ನೂ ಕೂಡಿ ಬಂದಿಲ್ಲ, ಯೋಗ ಕೂಡಿ ಬಾರದೇ ಇರುವ ಕಾರಣ, ಈಗ ಇರುವ ಮಿತಿಯಲ್ಲಿಯೆ ನಾನು ಹಣವನ್ನು ಒದಗಿಸಬೇಕಾಗುತ್ತದೆ. ಪ್ರತಿಯೊಬ್ಬರು ಮಹತ್ವಾಕಾಂಕ್ಷಿಯಾಗಿದ್ದರೆ, ಮಾತ್ರ ಮುಂದೆ ಹೆಜ್ಜೆ ಎತ್ತಿಡುತ್ತಾನೆ, ಇಲ್ಲದಿದ್ದರೆ ಸ್ಟ್ಯಾಂಡ್ ಹಾಕಿರುವ ಸೈಕಲ್ ಅನ್ನು ತಿರುಗಿಸುತ್ತಿರುತ್ತಾನೆ. ನಾನು ಆ ಸ್ಟಾಂಡ್ ಹಾಕಿರುವ ಸೈಕಲ್ ಅನ್ನು ತಿರುಗಿಸುವವನು ಅಲ್ಲ, ಮುಂದಕ್ಕೆ ಓಡಿಸುವವನು. ಹಾಗಾಗಿ, ಈಗ ಕೊಟ್ಟಿರತಕ್ಕಂಥ ಉತ್ತರದಲ್ಲಿ ಸಂಶಯವಿದ್ದರೆ, ಅವರು ಈಗಲೇ ಹೇಳಲಿ, ಅವರ ಕಳಕಳಿಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ನೂರಕ್ಕೆ ನೂರರಷ್ಟು ಪ್ರವಾಸೋದ್ಯಮ ಒಂದು ಪ್ರಮುಖವಾಗಿರತಕ್ಕಂಥ ಆಕರ್ಷಣೀಯ ವಲಯ. ಹೆಚ್ಚು ಉದ್ಯೋಗ ಸೃಷ್ಟಿಗೆ ಅವಕಾಶವಿರತಕ್ಕಂಥ ಕ್ಷೇತ್ರ. ಈ ಮೂಲಕ ಹೆಚ್ಚು job generate ಮಾಡಬಹುದು and revenue ಕೂಡ generate ಮಾಡಬಹುದು. ಅದರಲ್ಲಿ ಏನೂ ಸಂಶಯವಿಲ್ಲ. ಮಾನ್ಯ ಹೆಚ್.ಎಂ.ರಮೇಶ್‌ಗೌಡ ರವರು ಹೇಳಿದ್ದು ಸರಿಯಾಗಿದೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಎರಡನೆದಾಗಿ, ಹಿಂದುಳಿದ ಪ್ರದೇಶಗಳಾದ ಉತ್ತರ ಕರ್ನಾಟಕ, ಹೈದ್ರಾಬಾದ್-ಕರ್ನಾಟಕ ಹಾಗೂ ಮುಂಬೈ-ಕರ್ನಾಟಕ ಪ್ರದೇಶಗಳಲ್ಲಿರುವ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ಎಂದು ಪ್ರಶ್ನೆ ಕೇಳಿದ್ದೆನು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಚಿವರು ಹೇಳಿದರಲ್ಲವೇ? ಕೊಟ್ಟಿರತಕ್ಕಂಥ ಉತ್ತರದಲ್ಲಿ ನಿಮಗೆ ಏನಾದರು ಕೇಳುವುದು ಇದ್ದರೆ ಕೇಳಬಹುದು.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ಒಟ್ಟು ಕಾಮಗಾರಿಗಳ ಸಂಖ್ಯೆ 597. ಮಂಜೂರಾದ ಅನುದಾನ 481.46 ಕೋಟಿ ರೂಪಾಯಿಗಳು ಮತ್ತು ಬಿಡುಗಡೆಯಾದ ಅನುದಾನ 254.43 ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ. ಕೊಟ್ಟಿರತಕ್ಕಂಥ ಅನುದಾನ ಕೂಡ ಸರ್ಕಾರಕ್ಕೆ ವಾಪಸ್ಸು ಹೋಗಿದೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಂ.ರಮೇಶ್‌ಗೌಡರವರು ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಒದಗಿಸಿರತಕ್ಕಂಥ ಅನುದಾನದ ಬಗ್ಗೆ ಕಳೆದ ಮೂರು ವರ್ಷಗಳದ್ದು ಕೇಳಿದ್ದಾರೆ. ಈ 3 ವರ್ಷದಲ್ಲಿ 1290 ಕೋಟಿ ರೂಪಾಯಿಗಳು ಮಂಜೂರಾಗಿದೆ. 1284 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಬಾಕಿ ವಾಪಸ್ಸು ಹೋಗಿರುವ ಅನುದಾನ 6.18 ಕೋಟಿ ರೂಪಾಯಿಗಳು ಮಾತ್ರ, ಅಂದರೆ ಬಹಳ ಕಡಿಮೆ ಮೊತ್ತ ವಾಪಸ್ಸು ಹೋಗಿದೆ. ಬೇರೆ ಇಲಾಖೆಗೆ ಹೋಲಿಸಿದರೆ ಕಡಿಮೆ ಹಣ ವಾಪಸ್ಸು ಹೋಗಿರುತ್ತದೆ. ಬಹುಶಃ ಈ ವರ್ಷದ್ದು ಸೇರಿಸಿ ಹೇಳಿದ್ದರೆ, ಮಾನ್ಯ ಸದಸ್ಯರ ಮಾತನ್ನು ನಾನು ಒಪ್ಪಿಕೊಳ್ಳುತ್ತಿದ್ದೆ. ಈ ವರ್ಷದಲ್ಲಿ current year ಅಂದರೆ 2019-20ನೇ ಸಾಲಿನಲ್ಲಿ 117 ಕೋಟಿ ರೂಪಾಯಿಗಳನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಆದರೆ ನಿನ್ನೆ ಮಂಡನೆಯಾದಂತಹ ಮುಂಗಡ ಪತ್ರದಲ್ಲಿ ಪ್ರವಾಸೋದ್ಯಮ ಇಲಾಖೆಗೆ 500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಂದರೆ 3 ಕೋಟಿ ರೂಪಾಯಿಗಳಷ್ಟು ಹೆಚ್ಚುವರಿಯಾಗಿ ಕೊಟ್ಟಿದ್ದಾರೆ. ಅದು ಅಲ್ಲದೇ ನಮ್ಮ ಪೂರಕ ಬೇಡಿಕೆಗಳು ಕೂಡ ಇವೆ, ಅದನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯತೆಗಳಿವೆ, ತೆಗೆದುಕೊಳ್ಳುತ್ತೇವೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಂ. ರಮೇಶ್‌ಗೌಡರವರು ಅಧಿಕಾರದಲ್ಲಿದ್ದಾಗ ಎಷ್ಟು ವಾಪಸ್ಸು ತೆಗೆದುಕೊಂಡಿದ್ದರು.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಇನ್ನು ಮೂರನೆಯದಾಗಿ, ರಾಜ್ಯದ ಬಹಳಷ್ಟು ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರಿಗೆ ಅಗತ್ಯವಿರುವ ಮೂಲಸೌಕರ್ಯವಿಲ್ಲ ಎನ್ನುವ ದೂರುಗಳು ಕೇಳಿ ಬಂದಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಯಾತ್ರಿ ನಿವಾಸಿ ತಾಣಗಳು ಮತ್ತು dormitory ಸ್ಥಳಗಳು ಏನಿವೆ, ಅವುಗಳಿಗೆ ನಿಜಕ್ಕೂ ಸಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೂಲಸೌಕರ್ಯಗಳಿಲ್ಲ. ಉದಾಹರಣೆಗೆ ಮಾಧ್ಯಮದಲ್ಲಿ ಜೋತಿಷಿಗಳು ಏನಾದರು ಶ್ರದ್ಧಾ ಕಾರ್ಯಕ್ರಮಗಳು ಮಾಡಬೇಕೆಂದು ಹೇಳಿದರೆ, ಬಹಳಷ್ಟು ಪ್ರವಾಸಿಗರು ರಜಾ ಇರತಕ್ಕಂಥ ಸಂದರ್ಭಗಳಲ್ಲಿ ಗೋಕರ್ಣದ ಓಂ ಬೀಚ್‌ಗೆ ಹೋಗುತ್ತಾರೆ. ಅಲ್ಲಿ ಮೂಲಸೌಕರ್ಯಕ್ಕೆ ಸಾಕಷ್ಟು ತೊಂದರೆಯಾಗುತ್ತಿದೆ. ಅದರ ಬಗ್ಗೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ? ಅಲ್ಲಿಗೆ ಮೂಲಸೌಕರ್ಯಗಳನ್ನು ಒದಗಿಸಿ ಅಭಿವೃದ್ಧಿಪಡಿಸುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆಂದು ಮಾನ್ಯ ಸಚಿವರು ದಯವಿಟ್ಟು ತಿಳಿಸಬೇಕು.

**ಶ್ರೀ ಅರುಣ ಶಹಾಪುರ:–** ಶ್ರೀ ಹೆಚ್.ಎಂ.ರಮೇಶ್‌ಗೌಡರವರೇ, ನೀವೇ ಉತ್ತರ ಕೊಟ್ಟುಬಿಡಿ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸದಸ್ಯರೇ, ತಾವು ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ. ನೀವೇನು ಆಡಳಿತ ಪಕ್ಷದಲ್ಲಿ ಇದ್ದೀರೊ ಅಥವಾ ವಿರೋಧ ಪಕ್ಷದಲ್ಲಿ ಇದ್ದೀರೊ ನನಗೆ ಅರ್ಥವಾಗುತ್ತಿಲ್ಲ; ಮಾನ್ಯ ಸಚಿವರು ಉತ್ತರ ಕೊಡುವುದಕ್ಕೂ ಬಿಡುವುದಿಲ್ಲವಲ್ಲಾ, ಅವರು ಉತ್ತರ ಕೊಡುವಾಗ ನೀವು ಮಧ್ಯೆ ಬಾಯಿ ಹಾಕಿದರೆ ಹೇಗೆ? ನಾನು ಕೇಳುತ್ತಿರುವುದೇನೆಂದರೆ, ಶಾಸಕರುಗಳಾದ ನಾವುಗಳು ಅಲ್ಲಿಗೆ ಹೋದಾಗ ಸುಸಜ್ಜಿತ ಕೊಠಡಿಯ ವ್ಯವಸ್ಥೆ ಇರುತ್ತದೆ. ನಮಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಪಡೆದುಕೊಳ್ಳುವುದಕ್ಕೆ ಶಕ್ತಿಯಿದೆ. ಆದರೆ, ನಮ್ಮ ರಾಜ್ಯದ ಜನರು ಹಳ್ಳಿಯಿಂದ ಯಾರಾದರು ಪ್ರವಾಸಕ್ಕೆಂದು ಹೋದಾಗ ಅವರ ಪರಿಸ್ಥಿತಿಯನ್ನು ನೋಡಿದರೆ, ನಿಜಕ್ಕೂ ಚಿಂತಾಜನಕವಾಗಿದೆ. ಇಂತಹ ಸಂದರ್ಭದಲ್ಲಿ ಸರಿಯಾದ ರೀತಿಯಲ್ಲಿ ತಮ್ಮ ಮೂಲಕ ಮಾನ್ಯ ಸಚಿವರಿಗೆ ಈ ರಾಜ್ಯದ ಜನತೆಗೆ ಒಳ್ಳೆಯದಾಗಲಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಅದಕ್ಕೆ ಸಂಬಂಧಪಟ್ಟಂತೆ ಯಾರೇ ಮಾನ್ಯ ಸದಸ್ಯರು ಈ ರೀತಿ ಮಧ್ಯೆ ಮಾತನಾಡುವುದು, ಸರಿಯಲ್ಲ. ಈ ರೀತಿ ಮಧ್ಯೆ ಮಾತನಾಡಿದರೆ, ಮಾನ್ಯ ಸಚಿವರಿಗೆ ಏನು ಅರ್ಥವಾಗುತ್ತದೆ ಹೇಳಿ? ಅದಕ್ಕೆ ನಾನು ಮಾನ್ಯ ಸಚಿವರಿಗೆ ಕೇಳುವುದೇನೆಂದರೆ, ಇಂತಹ ಒಂದು ಪರಿಸ್ಥಿತಿ ಗೋಕರ್ಣದಲ್ಲಿದೆ. ಅದೇ ರೀತಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಬೇಕಾದರೆ, ನಮ್ಮ ಬೆಂಗಳೂರು ಸುತ್ತಮುತ್ತಲು ಸ್ಕಂದಗಿರಿ ಬೆಟ್ಟ ಇದೆ, ಅದೇ ರೀತಿ ಸುಮಾರು 107–108 ಬೆಟ್ಟಗಳಿವೆ. ಪ್ರವಾಸೋಧ್ಯಮ ಇಲಾಖೆ ಎಂದರೆ, ಕೇವಲ ಪ್ರವಾಸಿಗರನ್ನು ಆಕರ್ಷಣೆ ಮಾಡುವುದಷ್ಟೇ ಅಲ್ಲದೇ, ಸರ್ಕಾರ ಸ್ವಲ್ಪಮಟ್ಟಿಗಾದರೂ ಅಲ್ಲಿ ಅಭಿವೃದ್ಧಿಪಡಿಸಲು ಪ್ರಯತ್ನಪಟ್ಟರೆ, ಕನಿಷ್ಠಪಕ್ಷ ಪ್ರವಾಸಿಗರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಯ ಸುತ್ತಮುತ್ತಲು ಸುಮಾರು 12–13 ಬೆಟ್ಟಗಳಿವೆ, ಅಲ್ಲಿ ಯಾವುದೇ ರೀತಿಯ ಮೂಲಸೌಕರ್ಯಗಳಿಲ್ಲ. ಸರ್ಕಾರ ಅಲ್ಲಿಗೆ ಸ್ವಲ್ಪಮಟ್ಟಿಗಾದರೂ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮೂಲಸೌಕರ್ಯಗಳನ್ನು ಒದಗಿಸಿ, ಅಭಿವೃದ್ಧಿಪಡಿಸಲು ಒತ್ತುಕೊಟ್ಟರೆ, ಒಂದೊಂದು ಜಾಗದಲ್ಲಿ ಸುಮಾರು 25–30 ಜನರಿಗೆ ಉದ್ಯೋಗ ಸಿಗುತ್ತದೆ. ಅದೇ ರೀತಿ ಬೆಂಗಳೂರು ಸುತ್ತಮುತ್ತಲು ಸುಮಾರು 107–108 ಬೆಟ್ಟಗಳಿದ್ದು, ಇಲ್ಲಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿದರೆ ಹಲವು ಜನರಿಗೆ ಉದ್ಯೋಗ ಕಲ್ಪಿಸಿಕೊಟ್ಟಂತಾಗುತ್ತದೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ರಾಜ್ಯ ಸರ್ಕಾರ 319 ಪ್ರವಾಸಿ ಕೇಂದ್ರಗಳಿವೆಯೆಂದು ಗುರ್ತಿಸಿದೆ. ಅದರಲ್ಲಿ ವಿಶೇಷವಾಗಿ 41 ಪ್ರವಾಸಿ ಕೇಂದ್ರಗಳನ್ನು ಗುರ್ತಿಸಿದ್ದೇವೆ. ನಾವು ಮೂಲ ಸೌಕರ್ಯಗಳನ್ನು ಒದಗಿಸುವುದಕ್ಕೆ connectivity, hospitality and activity. ಈ ಮೂರು ಕೇಂದ್ರವಾಗಿಟ್ಟುಕೊಂಡು ಯೋಜನೆಯನ್ನು ತಯಾರಿಸಿದ್ದೇವೆ.

(ಮುಂದು...)

**(196)6.3.2020/2.40/ಎಂ.ಎಂ–ವಿ.ಕೆ**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಟಿ. ರವಿ (ಮುಂದು):–**

ನಮ್ಮ ಹಣಕಾಸಿನ ಲಭ್ಯತೆಯಲ್ಲಿ ಈಗಾಗಲೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಕೆಲಸ ಮಾಡುತ್ತಿದ್ದೇವೆ. ಇದರ ಜೊತೆಗೆ ಖಾಸಗಿ ಸಂಸ್ಥೆಗಳ *CSR (Corporate Social Responsibility*) fund ಅನ್ನು ಬಳಸಿಕೊಳ್ಳುವುದಕ್ಕೆ ಕೂಡ ಒಂದು ಚಿಂತನೆ ನಡೆಸಿದ್ದೇವೆ. ಸದ್ಯದಲ್ಲಿಯೇ ಅವರ ಜೊತೆಯಲ್ಲಿ ಒಂದು High Tea ಕರೆದು ಸಮಾಲೋಚನೆ ನಡೆಸಿ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವ ಮನಸ್ಥಿತಿ ಇನ್ನೂ ಬಂದಿಲ್ಲ. ಈಗಾಗಲೇ ವಿವರವಾದ ಉತ್ತರವನ್ನು ಗ್ರಾಮೀಣಾಭಿವೃದ್ಧಿ ಸಚಿವರು ಕೊಟ್ಟರು. ಆ ಮನಸ್ಥಿತಿಯನ್ನು ಸರಿ ಮಾಡದೇ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಆಗುವುದಿಲ್ಲ. ಆ ಮನಸ್ಥಿತಿಯನ್ನು ಸುಧಾರಿಸುವುದಕ್ಕೆ ಶಿಕ್ಷಣದಿಂದಲೇ ಆಗಬೇಕು. ನಾವು ಕೂಡ ಅದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಈಗ ನಾವು ಕಠಿಣವಾಗಿ ಕ್ರಮ ತೆಗೆದುಕೊಂಡರೆ ಅದನ್ನು ಸ್ವೀಕಾರ ಮಾಡುವ ಮನಸ್ಥಿತಿಯಲ್ಲಿ ನಾವಿಲ್ಲ. ಬೇರೆ ಕಡೆಗಳಲ್ಲಿ ಕಸ ಹಾಕಿದರೆ ದಂಡ ಹಾಕುತ್ತಾರೆ, ನಾಯಿಗಳೇನಾದರೂ 1–2 ಮಾಡಿದರೆ ಅವರೇ ಎತ್ತಿಕೊಂಡು ಹೋಗಬೇಕು. ಅದು ಇಲ್ಲಿ ಆಗುತ್ತದೆಯೇ? ಆ ಸ್ಥಿತಿ ಇರುವುದರಿಂದಾಗಿ ಮನಸ್ಥಿತಿಯನ್ನು ಬದಲಾಯಿಸದೇ ಪರಿಸ್ಥಿತಿ ಸುಧಾರಿಸುವುದಕ್ಕೆ ಆಗುವುದಿಲ್ಲ. ಯಾತ್ರಿ ನಿವಾಸಗಳನ್ನು ಕಟ್ಟುವುದಷ್ಟೇ ಪ್ರವಾಸೋದ್ಯಮ ಇಲಾಖೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸ. ಯಾತ್ರಿ ನಿವಾಸಗಳ ನಿರ್ವಹಣೆಯನ್ನು ಆಯಾ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಿದ್ದೇವೆ, ಅವರು ನಿರ್ವಹಣೆ ಮಾಡಬೇಕು.

**ಶ್ರೀ ಎನ್. ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ ನಾನೊಂದು ಪ್ರಶ್ನೆ ಕೇಳಿದ್ದೆ. ಇದು 2016ರಲ್ಲಿಯೇ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ, ಕಂದಾಯ ಇಲಾಖೆಯಿಂದ ಆಗಿತ್ತು. ಇಲ್ಲಿ ಸಚಿವರು ಮತ್ತು ಕಾನೂನು ಸಚಿವರಿರುವುದರಿಂದ ಬಹಳ ಪ್ರಮುಖವಾದ ವಿಷಯವಾಗಿದೆ.

**ಸಭಾಪತಿಯವರು:-** ಮಾನ್ಯ ಅಪ್ಪಾಜಿಗೌಡರೇ, ಯಾವ ಪ್ರಶ್ನೆ ಅದು?

**ಶ್ರೀ ಎನ್. ಅಪ್ಪಾಜಿಗೌಡ:-** ನನ್ನ ಪ್ರಶ್ನೆ ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆಯಲ್ಲಾ ಆ ವಿಷಯವಾಗಿದೆ. ಇಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರು ಇರುವುದರಿಂದ ಕೇಳುತ್ತಿದ್ದೇನೆ.

**ಸಭಾಪತಿಯವರು:-** ಆಗುವುದಿಲ್ಲ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 6ನೇ ಮಾರ್ಚ್, 2020ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 109 ಪ್ರಶ್ನೆಗಳ ಪೈಕಿ 74 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

3. **ದಿನಾಂಕ 04-3-2020ರಂದು ಶೂನ್ಯವೇಳೆಯಲ್ಲಿ ಹಾಗೂ 20-2-2020ರಂದು ನಿಯಮ 330ಎ ಅಡಿಯಲ್ಲಿ ಪ್ರಸ್ತಾಪಿಸಲಾದ ವಿಷಯಗಳಿಗೆ ಸಚಿವರಿಂದ ಲಿಖಿತ ಹೇಳಿಕೆಗಳ ಮಂಡನೆ**

**ಅ) ವಿಷಯ:- ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇತ್ತೀಚೆಗೆ ಶೇಕಡ 12ರಷ್ಟು ಪ್ರಯಾಣ ದರ ಏರಿಕೆ ಮಾಡಿರುವ ಕುರಿತು.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 4-3-2020ರಂದು ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣ ಕಮಕನೂರರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಉಪಮುಖ್ಯಮಂತ್ರಿಯವರಾದ ಶ್ರೀ ಲಕ್ಷ್ಮಣ ಸಂಗಪ್ಪ ಸವದಿ ರವರ ಪರವಾಗಿ ಉತ್ತರವನ್ನು ಸದನದಲ್ಲಿ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ವಿಷಯ:– ರಿಕ್ಷಾಚಾಲಕರು ತಮ್ಮ ರಿಕ್ಷಾಗಳನ್ನು ಮಾರಾಟ ಮಾಡಲು ಅಥವಾ ವರ್ಗಾವಣೆ ಮಾಡಲು ತೊಂದರೆಯಾಗುತ್ತಿರುವ ಬಗ್ಗೆ.**

– – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 4–3–2020ರಂದು ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಉಪಮುಖ್ಯಮಂತ್ರಿಯವರಾದ ಶ್ರೀ ಲಕ್ಷ್ಮಣ ಸಂಗಪ್ಪ ಸವದಿ ರವರ ಪರವಾಗಿ ಉತ್ತರವನ್ನು ಸದನದಲ್ಲಿ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

**ಇ) ವಿಷಯ:– ಉಚಿತ ಲ್ಯಾಪ್‌ಟಾಪ್‌ನಲ್ಲಿ ಹಲವು ನ್ಯೂನತೆಗಳಿರುವ ಕುರಿತು.**

– – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 4–3–2020ರಂದು ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಉಪಮುಖ್ಯಮಂತ್ರಿಯವರಾದ ಶ್ರೀ ಡಾ॥ ಸಿ.ಎನ್. ಅಶ್ವಥ್ ನಾರಾಯಣ ರವರ ಪರವಾಗಿ ಉತ್ತರವನ್ನು ಸದನದಲ್ಲಿ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

**ಈ) ವಿಷಯ:– ಕರ್ನಾಟಕ ರಸ್ತೆ ಸಾರಿಗೆ ನಿಗಮದ ನೌಕರರನ್ನು ರಾಜ್ಯ ಸರ್ಕಾರಿ ನೌಕರರಾಗಿ ಪರಿಗಣಿಸಲು ಕೋರಿರುವ ಬಗ್ಗೆ.**

– – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 20–2–2020ರಂದು ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ ರವರು ನಿಯಮ 330(ಎ)ರಡಿಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉ) ವಿಷಯ:– ಮಲೆನಾಡು ಭಾಗದಲ್ಲಿ ಸಹಕಾರಿ ಸಂಚಾರ ಸಾರಿಗೆ ಸ್ಥಗಿತಗೊಂಡಿರುವ ಬಗ್ಗೆ.**

– – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 20–2–2020ರಂದು ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಜಯಮಾಲರವರು ನಿಯಮ 330(ಎ)ರಡಿಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

**ಸಭಾಪತಿಯವರು:–** ಮಂಡಿಸಲಾಯಿತು.

4. **ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:**

**ಅ) ವಿಷಯ:– ಕಾರವಾರ ಜಿಲ್ಲೆಯ ಜೋಯಿಡಾ ತಾಲ್ಲೂಕಿನಲ್ಲಿ ಸಿವಿಲ್ ನ್ಯಾಯಾಲಯ ಸ್ಥಾಪಿಸುವ ಬಗ್ಗೆ.**

– – – –

**ಶ್ರೀ ಶ್ರೀಕಾಂತ್ ಎಲ್. ಘೋಟ್ನೇಕರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ 1964ರ ಸಿವಿಲ್ ಕೋರ್ಟ್ ಕಾಯ್ದೆ 1ನೇ ಪ್ರಕಾರ ಪ್ರತಿ ತಾಲ್ಲೂಕು ಕೇಂದ್ರದಲ್ಲಿ ಒಂದು ಸಿವಿಲ್ ನ್ಯಾಯಾಲಯ ಪ್ರಾರಂಭಿಸಬೇಕೆಂದು ನಿಯಮ ಇದೆ. ಆದರೆ ದೌರ್ಭಾಗ್ಯವೆನ್ನುವಂತೆ ದೇಶ ಸ್ವತಂತ್ರವಾಗಿ 7 ದಶಕಗಳು ಸಂದರೂ ಜೋಯಿಡಾ ತಾಲ್ಲೂಕಿನಲ್ಲಿ ಇಂದಿಗೂ ನ್ಯಾಯಾಲಯ ಸ್ಥಾಪಿಸದೇ ಸಾರ್ವಜನಿಕರು ಪರದಾಡುವಂತಾಗಿದೆ. ದೂರದ ದಾಂಡೇಲಿಯ ನ್ಯಾಯಾಲಯಕ್ಕೆ ಅಲೆದಾಡಲು ಒಂದು ದಿನದ ಕೆಲಸಕ್ಕೆ ಮೂರು ದಿವಸ ಹಾಳು ಮಾಡುವಂತಹ ಪರಿಸ್ಥಿತಿ ಇದೆ. ಈ ಕುರಿತು ಜೋಯಿಡಾ ತಾಲ್ಲೂಕಿನಲ್ಲಿ ಬೃಹತ್ ಪ್ರತಿಭಟನೆ ನಡೆದಿದ್ದು ಇರುತ್ತದೆ. ನ್ಯಾಯಾಲಯ ಸ್ಥಾಪನೆ ಮಾಡದೇ ಇರುವ ದುರುದ್ದೇಶ ಬೇರೆಯದೇ ಇದೆ. ಜೋಯಿಡಾದ ಅಸ್ತಿತ್ವ ಹಾಳು ಮಾಡಲು ಒಳಗಿಂದೊಳಗೆ ರಣತಂತ್ರಗಳು ನಡೆಯುತ್ತಿದೆಯೆಂದು ತಾಲೂಕಿನ ಸಮಸ್ತ ಜನರು ಮತ್ತೇ ಒಂದಾಗಿ ಹೋರಾಟ ಮಾಡದೇ ಇದ್ದರೆ ನಮ್ಮ ತಾಲೂಕಿನ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯ ಇಲ್ಲವೆಂದು ತಿಳಿಸಿರುವುದರ ಪ್ರಯುಕ್ತ ರಾಜ್ಯದಲ್ಲಿಯೇ ಅತೀ ಹಿಂದುಳಿದ ತಾಲ್ಲೂಕು ಜೋಯಿಡಾದಲ್ಲಿ ಸಾರ್ವಜನಿಕರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿತದೃಷ್ಟಿಯಿಂದ ಕೂಡಲೇ ಸಿವಿಲ್ ನ್ಯಾಯಾಲಯ ಸ್ಥಾಪನೆ ಮಾಡಲು ಸೂಕ್ತ ಕ್ರಮಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಕಾನೂನು ಸಚಿವರ ಮುಖಾಂತರ ಸರಕಾರಕ್ಕೆ ವಿನಂತಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರು ಸದನದಲ್ಲಿ ಇದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಉತ್ತರ ಇನ್ನೂ ಸಿದ್ಧವಾಗಿಲ್ಲ, ನಂತರ ಒದಗಿಸುತ್ತೇನೆ.

**ಶ್ರೀ ಶ್ರೀಕಾಂತ್ ಎಲ್. ಘೋಟ್ನೇಕರ್:–** ಮಾನ್ಯ ಸಭಾಪತಿಯವರೇ, ಇದು ಹಿಂದುಳಿದ ತಾಲ್ಲೂಕಾಗಿದ್ದು, ಇದರ ಸಲುವಾಗಿ ಬಹಳ ಸಲ ಪ್ರತಿಭಟನೆ ಮಾಡಿದ್ದೇವೆ. ಜೋಯಿಡಾ ತಾಲ್ಲೂಕಿನಲ್ಲಿ ಇನ್ನೂ ನ್ಯಾಯಾಲಯ ಸ್ಥಾಪನೆಯಾಗಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಆಮೇಲೆ ಕಳುಹಿಸಿಕೊಡುತ್ತೇವೆ.

ಆ) **ವಿಷಯ:– ಪತ್ರಿಕಾ ಸಂಸ್ಥೆಯಲ್ಲಿನ ಹಾಲಿ ಮತ್ತು ನಿವೃತ್ತ ಪತ್ರಕರ್ತರಿಗೆ ರಾಜ್ಯ ಸರ್ಕಾರ ವಿಶ್ರಾಂತಿ ವೇತನ, ಇತ್ಯಾದಿ ಸೌಲಭ್ಯ ನೀಡಿದಂತೆ ಇತರೆ ವಿಭಾಗದ ಉದ್ಯೋಗಿಗಳಿಗೆ ಸರ್ಕಾರದಿಂದ ಸಹಾಯ ಸವಲತ್ತುಗಳನ್ನು ಮಂಜೂರು ಮಾಡುವ ಕುರಿತು.**

– – – – –

**ಶ್ರೀ ಯು.ಬಿ. ವೆಂಕಟೇಶ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ರಾಜ್ಯದ ಪತ್ರಿಕಾ ಸಂಸ್ಥೆಗಳಲ್ಲಿನ ಹಾಲಿ ಮತ್ತು ನಿವೃತ್ತ ಪತ್ರಕರ್ತರಿಗೆ ರಾಜ್ಯ ಸರ್ಕಾರ ನಿಗದಿತ ವಿಶ್ರಾಂತಿ ವೇತನವನ್ನೊಳಗೊಂಡು ವಿವಿಧ ಬಗೆಯ ಸಹಾಯ–ಸೌಲಭ್ಯಗಳನ್ನು ಕಲ್ಪಿಸಿದೆ. ಅಷ್ಟೇ ಅಲ್ಲ. ಪತ್ರಿಕೆಗಳನ್ನು ವಿತರಣೆ ಮಾಡುವ ಏಜೆಂಟರ ಕಲ್ಯಾಣಕ್ಕಾಗಿಯೂ ಈ ಹಿಂದೆ ಸರ್ಕಾರ ತನ್ನ ಮುಂಗಡಪತ್ರದಲ್ಲಿ ದೊಡ್ಡ ಪ್ರಮಾಣದ ಮೊತ್ತವನ್ನು ಮೀಸಲಿರಿಸಿದ್ದು ಗಮನಾರ್ಹ. ಆದರೆ ಪತ್ರಿಕಾ ಕಾರ್ಯಾಲಯಗಳಲ್ಲಿನ ಜಾಹೀರಾತು, ಪ್ರಸಾರಾಂಗ, ಮುದ್ರಣ, ಪ್ಯಾಕಿಂಗ್ ಮೊದಲಾದ ವಿಭಾಗಗಳ ಉದ್ಯೋಗಿಗಳಿಗೆ ಸರ್ಕಾರದಿಂದ ಇದುವರೆಗೂ ಯಾವುದೇ ಬಗೆಯ ಸಹಾಯ ಸವಲತ್ತುಗಳು ಸಿಗದಿರುವುದು ನಿಜಕ್ಕೂ ದುರದೃಷ್ಟಕರ ಸಂಗತಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪತ್ರಿಕಾ ಸಂಸ್ಥೆಗಳು ಕೇವಲ ಪತ್ರಕರ್ತರಿಗೆ ಸೀಮಿತವಲ್ಲ. ಸಂಪಾದಕೀಯ ಎಂಬುದು ವಿವಿಧ ವಿಭಾಗಗಳಲ್ಲಿ ಒಂದಾಗಿದ್ದು ವಸ್ತು ವಿಷಯಗಳನ್ನು ಆಧರಿಸಿ ವರದಿ ಹಾಗೂ ಲೇಖನಗಳನ್ನು ರೂಪಿಸಿ ಪುಟಗಳನ್ನು ಸಿದ್ದಪಡಿಸುವ ಕಾರ್ಯ ನಿರ್ವಹಿಸುತ್ತದೆ. ಪತ್ರಕರ್ತರು ಅದರಲ್ಲಿ ಕಾರ್ಯನಿರ್ವಹಿಸುವ ನೌಕರರಷ್ಟೆ. ಆದರೆ ಪತ್ರಿಕೆ ಮುದ್ರಣಗೊಂಡು ವಿತರಕರ ಕೈಸೇರುವವರೆಗೆ ಪ್ರಸಾರಾಂಗ, ಪುಟವಿನ್ಯಾಸ, ಮುದ್ರಣ ಹಾಗೂ ಪ್ಯಾಕಿಂಗ್ ವಿಭಾಗಗಳ ನೌಕರರ ಪಾತ್ರ ಬಹಳ ಮಹತ್ವದ್ದಾಗಿರುತ್ತದೆ. ಜಾಹೀರಾತು ವಿಭಾಗ ಕೂಡಾ ಪತ್ರಿಕೆಯ ಆದಾಯಕ್ಕೆ ಸಂಬಂಧಿಸಿದ ಪ್ರಮುಖ ಅಂಗವೆನಿಸಿದೆ. ಹೀಗಾಗಿ ಪತ್ರಿಕೆ ಮಾರುಕಟ್ಟೆಗೆ ಬಂದು ಓದುಗರ ಕೈಸೇರುವ ನಿಟ್ಟಿನಲ್ಲಿ ಈ ಎಲ್ಲ ವಿಭಾಗಗಳ ಕೊಡುಗೆ ಕೂಡಾ ಅತಿಮುಖ್ಯವೆನಿಸುತ್ತದೆ. ಹೀಗೆ ಹೇಳಿದ ಮಾತ್ರಕ್ಕೆ ಪತ್ರಕರ್ತರು ಹಾಗೂ ಪತ್ರಿಕಾ ಏಜೆಂಟರಿಗೆ ಸರ್ಕಾರ ಸಹಾಯ-ಸೌಲಭ್ಯ ನೀಡುವುದು ಸರಿಯಲ್ಲ ಎಂಬುದು ಇತರ ವಿಭಾಗಗಳ ಉದ್ಯೋಗಿಗಳ ಅಭಿಪ್ರಾಯವಲ್ಲ. ಪತ್ರಕರ್ತರಿಗೆ ನೀಡುವ ಸಹಾಯ-ಸವಲತ್ತುಗಳನ್ನು ತಮಗೂ ವಿಸ್ತರಿಸಬೇಕು ಎಂಬುದು ಈ ನೌಕರರ ಕಳಕಳಿಯ ಮನವಿ. ಸರ್ಕಾರ ಈ ಕೋರಿಕೆಯನ್ನು ಗಂಭೀರವಾಗಿ ಪರಿಗಣಿಸಿ ಮುಂಬರುವ ಸಪ್ಲಿಮೆಂಟರಿ ಮುಂಗಡ ಪತ್ರದಲ್ಲಿ ಅಗತ್ಯವಾದ ಹಣ ಒದಗಿಸಲಿ ಎಂಬುದು ನನ್ನ ಆಶಯ. ಸದರಿ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಬೇಕೆಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಶ್ರೀ ಯು.ಬಿ. ವೆಂಕಟೇಶ್‌ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸಿದ್ದೇನೆ.

**(ಉತ್ತರವನ್ನು ಲಗತ್ತಿಸಿದೆ)**

**5. ಸದಸ್ಯರುಗಳ ಖಾಸಗಿ ಕಾರ್ಯಕಲಾಪಗಳು**

**ಖಾಸಗಿ ವಿಧೇಯಕ**

**ಕರ್ನಾಟಕ ಅಸಲು ಹಣಕ್ಕಿಂತ ಹೆಚ್ಚು ಬಡ್ಡಿ ವಿಧಿಸುವಿಕೆ ನಿಷೇಧ ವಿಧೇಯಕ-2018**

**(2018ರ ಖಾಸಗಿ ಸದಸ್ಯರ ವಿಧೇಯಕ ಸಂಖ್ಯೆ-1)**

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ಅಸಲು ಹಣಕ್ಕಿಂತ ಹೆಚ್ಚು ಬಡ್ಡಿ ವಿಧಿಸುವಿಕೆ ನಿಷೇಧ ವಿಧೇಯಕ 2018ನ್ನು ದಿನಾಂಕ 14-12-2018ರಂದು ಬೆಳಗಾವಿ ಅಧಿವೇಶನದಲ್ಲಿ ಮಂಡನೆ ಮಾಡಿದ್ದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದರ ವಿಚಾರವಾಗಿ ತುಂಬಾ ಸವಿಸ್ತಾರವಾಗಿ ನಾನು ಇದರ submission ಕೂಡ ಮಾಡಿದ್ದೆ. ಇದರಲ್ಲಿ ಗೌರವಾನ್ವಿತ ಸದಸ್ಯರಾದ, ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಮತ್ತು ಮಾನ್ಯ ಸದಸ್ಯರಾದ ತೇಜಸ್ವಿನಿಯವರು, ಮಾನ್ಯ ಸಂಕನೂರರವರು ಮತ್ತು ಇನ್ನೂ ಇತರ ಸದಸ್ಯರು ಕೂಡ ಇದರಲ್ಲಿ submission ಮಾಡಿದ್ದರು. The Karnataka Prohibition of Charging Exorbitant Interest Act 2004 ಏನಿತ್ತು ಅದರ ಅಡಿಯಲ್ಲಿ ವಿಶೇಷವಾಗಿ ನಾನು ಅದರ ಅರಿವನ್ನು ಇಟ್ಟುಕೊಂಡು ಬಿಟ್ಟು ಕೂಡ ಇದರಲ್ಲಿ ಸೆಕ್ಷನ್ 3, 4 ಮತ್ತು 13 ಬಗ್ಗೆ ಕೂಡ ನಾನು ಗಮನವಿಟ್ಟುಕೊಂಡಿದ್ದೇನೆ. Section 26, 28 of the Karnataka Money-Lenders Act 1961 ಕೂಡ ಗಮನದಲ್ಲಿಟ್ಟಿದ್ದೇನೆ ಮತ್ತು section 4, 5 and 6 of Karnataka *Debt Relief Act 1976* ನ್ನು ಕೂಡ ಗಮನದಲ್ಲಿಟ್ಟು ನಾನು ಈ submission ಮಾಡಬಯಸುತ್ತೇನೆ. ಇದರಲ್ಲಿ ವಿಶೇಷವಾಗಿ ರೈತ ಪಡೆದಿರುವ ಸಾಲದ ಮೇಲೆ exorbitant interest ಅನ್ನು ಹೇರಬಾರದು ಎನ್ನುವ ಉದ್ದೇಶವಾಗಿ ಸಾಕಷ್ಟು ಕಾನೂನುಗಳು ಇವೆ ಎನ್ನುವುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. Money-Lenders Act 1961 ಇರಬಹುದು, section 4, 5 and 6 of Karnataka *Debt Relief Act 1976* ಇರಬಹುದು, Karnataka Prohibition of Charging Exorbitant Interest Act 2004 ಇರಬಹುದು ಆದರೂ ಕೂಡ in spite of these things, my appeal to this House is to protect the interest of the farmers where exorbitant interest is imposed. As a result, it is unable to bear such a force by the money lenders and other local banks, farmers are committing suicide. That is the reason and also my concern is to protect the interest of the farmers. Therefore, I moved this Private Members Bill.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(197) 06–03–2020/ 02–50/ ಕೆಹೆಚ್–ಬಿಎನ್‌ಎಸ್

**(ಸಭಾಪತಿಯವರ ಉಪಸ್ಥಿತಿ)**

**Sri SHARANAPPA MATTUR (contd.):-**

My concern is to protect the interest of farmers. Therefore, I moved this Private Member's Bill. ಆದುದರಿಂದ, ಈ 3 ಕಾಯಿದೆಗಳಿದ್ದರೂ ಕೂಡ . . . ನಮ್ಮ ಮಾನ್ಯ ಸಚಿವರು ಕೂಡ ಈ ಸದನದಲ್ಲಿ ಇದ್ದಾರೆ. Sections 26 and 28 of the Karnataka Money-Lenders Act, 1961 ಈಗಾಗಲೇ ಇದೆ ಎನ್ನುವಂತಹದ್ದು ಅವರು ಹೇಳಬಹುದು. ಅದರಲ್ಲಿ ವಿಶೇಷವಾಗಿ ಮಾನ್ಯ ಸಭಾಪತಿಯವರೇ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದರಲ್ಲಿ Section26 of the Karnataka Money-Lenders Act, 1961 reads thus:

> **26. Power of Court to limit interest recoverable in certain cases.**— Notwithstanding anything contained in any agreement or any law for the time being in force, no Court shall in respect of any loan …."

'any loan' ಎಂದು ಇರುವುದರಿಂದ, ಈಗಾಗಲೇ ಈ ಕಾಯಿದೆ ಇದೆ. ಈ ಒಂದು ಖಾಸಗಿ ವಿಧೇಯಕದ ಅವಶ್ಯಕತೆ ಇಲ್ಲವೆನ್ನುವಂತಹ submission ಬರಬಹುದು ಎಂಬ ಊಹೆಯಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿ ನಾನು ಈಗಾಗಲೇ ಏನು submission ಮಾಡಿದ್ದೇನೆ, ಈ 3 ಕಾಯಿದೆಗಳು ಕೂಡ ರೈತರ ರಕ್ಷಣೆಗೆ ಇದೆ. ವಿಶೇಷವಾಗಿ ರೈತರ ಹೆಸರಿನಲ್ಲಿ ಈ ವಿಧೇಯಕವನ್ನು ತಂದಿದ್ದೇನೆ. ಸದನದಲ್ಲಿ ಮಾನ್ಯ ಸಚಿವರು ಇದ್ದಾರೆ. He is also from legal background and legal fraternity. ವಿಶೇಷವಾಗಿ ಅದಕ್ಕೋಸ್ಕರ ಈ ವಿಧೇಯಕವನ್ನು ರೈತರ ಹೆಸರಿನಲ್ಲಿ ತರಬೇಕೆಂಬುದು ನನ್ನ ಕಾಳಜಿಯಾಗಿದೆ. ಇದಕ್ಕೆ ಸಂಬಂಧಿಸಿದಂತೆ ಯಾವುದೂ ಕಾಯಿದೆ ಇಲ್ಲವೆಂದು ನಾನು ಹೇಳುವುದಿಲ್ಲ. I am not disputing about the existing laws; the Karnataka Money-Lenders Act, 1961, the Karnataka Debt Relief Act, 1976 and the Karnataka Prohibition of Charging Exorbitant Interest Act 2004. ಆದರೂ ಸಹ ಇದೆಲ್ಲವನ್ನೂ ನಾವು ನೋಡುತ್ತಿದ್ದೇವೆ. ಪ್ರತಿ ವರ್ಷ ರೈತರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆತ್ಮಹತ್ಯೆ ಮಾಡಿಕೊಳ್ಳುತ್ತಿರುತ್ತಾರೆ. ಹಾಗಾಗಿ ರೈತರ ಹೆಸರಿನ ಮೇಲೆ ಈ ವಿಶೇಷವಾದಂತಹ ವಿಧೇಯಕವನ್ನು ತರಬೇಕೆಂಬ ಉದ್ದೇಶದಿಂದ ಈ ವಿಧೇಯಕವನ್ನು ನಾನು ಮೂವ್ ಮಾಡಿದ್ದೇನೆ. ಈಗಾಗಲೇ ಈ ವಿಧೇಯಕದಲ್ಲಿ ಇರುವ ಉದ್ದೇಶಗಳು ಮತ್ತು ಕಾರಣಗಳ ಬಗ್ಗೆ ಹೇಳಿದ್ದೇನೆ. "ಈಗಾಗಲೇ ಸಾಲ ಹಾಗೂ ಬಡ್ಡಿ ಹಣಕ್ಕೆ ಸಂಬಂಧಿಸಿದಂತೆ ಹಲವಾರು ವಿಧೇಯಕಗಳು ಜಾರಿಗೊಂಡಿರುತ್ತವೆ. ಆದರೆ, ನಿರ್ದಿಷ್ಟವಾಗಿ ದೇಶದ ಬೆನ್ನೆಲುಬಾದ ಕೃಷಿಕರನ್ನು/ರೈತರನ್ನು ಉದ್ದೇಶಿಸಿ ಈವರೆಗೆ ಯಾವ ವಿಧೇಯಕವೂ ಜಾರಿಗೊಂಡಿರುವುದಿಲ್ಲ. ಕೃಷಿಕರು ತಮ್ಮ ಅತ್ಯಾವಶ್ಯಕ ಅಗತ್ಯತೆಗಳಿಗೆ ಮಾತ್ರ ಸಾಲ ಮಾಡಲು ಬಯಸುತ್ತಾರೆ" ಎನ್ನುವಂತಹ ಉದ್ದೇಶಗಳು ಮತ್ತು ಕಾರಣಗಳನ್ನು ಇಟ್ಟುಕೊಂಡು ಈ ವಿಧೇಯಕವನ್ನು ತಂದಿದ್ದೇನೆ. ಆದುದರಿಂದ ಈ ವಿಚಾರದಲ್ಲಿ ಈ 3 ಕಾಯಿದೆಗಳು ಇದ್ದರೂ ಸಹ ಈ ವಿಧೇಯಕವನ್ನು ತರುವ ಅವಶ್ಯಕತೆ ಇದೆ ಎನ್ನುವ ಮನವಿಯನ್ನು ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ಪಕ್ಷಾತೀತವಾಗಿ ಈ ವಿಧೇಯಕಕ್ಕೆ ಬೆಂಬಲ ಕೊಡಬೇಕು. ರೈತರ ರಕ್ಷಣೆಗಾಗಿ ತಾವು ಬರಬೇಕು ಮತ್ತು ನಾನು ಕೂಡ ವಿಶೇಷವಾಗಿ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರನ್ನು ಅಭಿನಂದಿಸುತ್ತೇನೆ. ಇದರ ಬಗ್ಗೆ ಮುಂದಿನ ದಿನಗಳಲ್ಲಿ ಚರ್ಚೆ ಮಾಡೋಣ. The Hon'ble Minister is having deep knowledge with rich experience and giving good service to the Hon'ble Chief Minister in respect of all the legal issues are concerned. ಇದರಲ್ಲಿ ಕೂಡ, I need the support of the Hon'ble Law Minister to bring this Bill for amendment of Sections 3 and 4 are concerned. With regard to imposing of penalty for contravention of provisions of Section 3 is concerned, ಸೆಕ್ಷನ್-4 ರಲ್ಲಿ ಇನ್ನೊಂದು ಅಮೆಂಡ್‌ಮೆಂಟ್ ಅನ್ನು ತಂದಾಗಲೂ ಕೂಡ, Section 38 of the Karnataka Money-Lenders Act, 1961, ಅದರಲ್ಲಿಯೂ ಸಹ penalty provision ಇದೆ. ಅದನ್ನು ಸಹ ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. More than that, I am particularly requesting the Hon'ble Law Minister to co-operate and to support for bringing amendment to these sections through this Bill. That is all my submission.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, Bill mover has envisaged both provision

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

and contradiction of the Bill. ನಾನು ಹೇಳುವುದಕ್ಕೆ ಮಾನ್ಯ ಸದಸ್ಯರು ಏನೂ ಉಳಿಸಿಲ್ಲ ಎನ್ನುವುದು ನನ್ನ ಭಾವನೆ. ಮಾನ್ಯ ಸದಸ್ಯರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. The Karnataka Money-Lenders Act, 1961 ರಲ್ಲಿ ಈಗಾಗಲೇ ನಾವು ಪ್ರಾವಿಷನ್ ಮಾಡಿದ್ದೇವೆ. Sec.26 of the Karnataka Money-Lenders Act, 1961 reads thus:

> **"26. Power of Court to limit interest recoverable in certain cases.**— Notwithstanding anything contained in any agreement or any law for the time being in force, no Court shall in respect of any loan whether advanced before or after the date on which this Act comes into force, decree, on account of interest, a sum greater than the principal of the loan due on the date of the decree."

So, already there is a law and it is enacted. It is in force. ತಮಗೂ ಸಹ ಅದು ಗೊತ್ತಿದೆ. ಇದನ್ನು ಕೋರ್ಟ್‌ಗಳು ಸಹ ನೋಡಲೇಬೇಕಾಗುತ್ತದೆ ಮತ್ತು ವ್ಯಾಖ್ಯಾನಿಸಲೇಬೇಕಾಗುತ್ತದೆ. Already Law in existence ಇರುವಾಗ, Private Member's Bill ಏತಕ್ಕಾಗಿ ಬೇಕು? ಮಾನ್ಯ ಸದಸ್ಯರೇ ಹೇಳಿದ ಹಾಗೆ Law ಇತ್ತು. ನಾನು ರೈತರಿಗಾಗಿ ಈ ವಿಧೇಯಕವನ್ನು ತರಬೇಕೆಂದು ಮಾಡಿದ್ದೇನೆ ಎಂದು ಹೇಳಿದರು. Banking sectors ಅನ್ನು ತರುವುದಕ್ಕೆ ಹೋಗಿಲ್ಲ. The Member has just brought it for the money lenders only. The Karnataka Prohibition of Charging Exorbitant Interest Act 2004, ಒಂದು ಕಾನೂನು ನಮ್ಮ ರಾಜ್ಯದಲ್ಲಿ ಇದೆ. money lender ಗೆ ಏನೇನು ನಿರ್ಬಂಧ ಮಾಡಬೇಕೆಂಬುದು ಇದೆ. ಮಾನ್ಯ ಸದಸ್ಯರು "ರೈತರ ಅಸಲು ಹಣಕ್ಕಿಂತ ಹೆಚ್ಚು ಬಡ್ಡಿಯನ್ನು ತೆಗೆದುಕೊಳ್ಳುವುದನ್ನು ನಿರ್ಬಂಧ ಮಾಡಿ" ಎನ್ನುವ ಉದ್ದೇಶದಿಂದ ಹೇಳಿದ್ದಾರೆ. It is already in force. ಹಾಗಾಗಿ ಈ ವಿಧೇಯಕಕ್ಕೆ ಯಾವುದೇ ಮಹತ್ವ ಇರುವುದಿಲ್ಲ. It will be an infructuous Bill. ಇದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಂಡು ಈ ಖಾಸಗಿ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. Because, we are not empowered under the Negotiable Instruments Act to bring the Banks in this purview. Money

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

lenders ಸಲುವಾಗಿ ನಾವು ಈಗಾಗಲೇ ಕಾಯಿದೆಯನ್ನು ಮಾಡಿದ್ದೇವೆ. ಯಾರಾದರೂ 15 ಪರ್ಸೆಂಟ್, ಅದಕ್ಕಿಂತ ಜಾಸ್ತಿ ಬಡ್ಡಿಯನ್ನು ಕಲೆಕ್ಟ್ ಮಾಡಿದರೆ, he will be punished under the provisions of the Karnataka Prohibition of Charging Exorbitant Interest Act 2004. ಕರ್ನಾಟಕದಲ್ಲಿ ಈಗಾಗಲೇ ಒಂದು ಕಾಯಿದೆ ಮಾಡಿರುವುದರಿಂದ, ಈ ವಿಧೇಯಕ ಏಕೆ ಬೇಕಾಗಿತ್ತು ಎಂಬುದು ನನಗೆ ಅರ್ಥವಾಗಲಿಲ್ಲ. A law is already there which is enacted already, ಇದಕ್ಕೆ Private Member's Bill ಏತಕ್ಕಾಗಿ ತೆಗೆದುಕೊಂಡು ಬಂದಿದ್ದರೋ, ಇದಕ್ಕೆ ಅಮೆಂಡ್‌ಮೆಂಟ್ ಏಕೆ ಕೇಳುತ್ತಿದ್ದರೋ, ನನಗೆ ಅರ್ಥವಾಗಿಲ್ಲ. ದಯಮಾಡಿ, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಮತ್ತೊಂದು ಸಾರಿ ವಿನಂತಿ ಮಾಡುತ್ತಿದ್ದೇನೆ, otherwise we have to reject this Bill.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, . . .

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಮರಿತಿಬ್ಬೆಗೌಡರೇ ಒಂದು ನಿಮಿಷ. ಮಾನ್ಯ ಶರಣಪ್ಪ ಮಟ್ಟೂರರವರು ಮಾತನಾಡುವುದನ್ನು ಪೂರ್ಣ ಮಾಡಲಿ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸೆಕ್ಷನ್–26 ಅನ್ನು ರೆಫರ್ ಮಾಡುತ್ತಾ ಹೇಳಿದ್ದಾರೆ. In the beginning itself, I did not leave any point expecting the submission of the Hon'ble Minister with regard to the existence of law in the State as well as in the Centre for protecting the interest of the farmers. But, here is the case where, I have specifically mentioned by referring the Debt Relief Act, 1976, the Karnataka Money-Lenders Act, 1961 and the Karnataka Prohibition of Charging Exorbitant Interest Act 2004. Provisions are very clear in all the three Acts. But, on a plain reading of all the three Acts, nowhere it makes out any

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

sense to protect the interest of the farmers. That is the reason why, I brought this Bill in the name of farmers. In know about it. I don’t dispute about the submission of the Hon’ble Minister. But, we both cannot dispute about the existence of law is concerned. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, in the name of farmers Bill ಅನ್ನು ತರಬೇಕು. ಈ 3 ಕಾಯಿದೆಗಳು ಇದ್ದಾಗಲೂ ಕೂಡ, I am aware of Section 26 and Section 38 which deals with penal provision in the Karnataka Money-Lenders Act, 1961. ಅದು ಇದ್ದರೂ ಸಹ, ಇದರೆಲ್ಲದರ ನಡುವೆ 1961 ರಿಂದ ಇಲ್ಲಿಯವರೆಗೂ ಕಾನೂನು ಇದೆ. 2004 ರಿಂದ the Karnataka Prohibition of Charging Exorbitant Interest Act 2004, ಕಾನೂನು ಇದೆ. 1976 ರಿಂದ ಇಲ್ಲಿಯವರೆಗೆ the Karnataka Debt Relief Act ಕಾನೂನು ಇದೆ. ಈ 3 ಕಾನೂನುಗಳು ಇದ್ದಾಗಲೂ ಸಹ ಈ ಬಡ್ಡಿ ವಿಚಾರದಲ್ಲಿ ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತರಿಗೆ ಬ್ಯಾಂಕ್‌ಗಳು ಹೆಚ್ಚಿನ ಲೋನ್‌ಗಳನ್ನು ರಿಕವರಿ ಮಾಡುವುದಕ್ಕೆ ನೊಟೀಸ್‌ನ್ನು ಕೊಟ್ಟಾಗ ಮತ್ತು ಮನೆಗಳನ್ನು ಜಪ್ತಿ ಮಾಡುವುದಕ್ಕೆ ಬಂದಾಗ D.C.C. Bank ಅವರು ಆಗಿರಬಹುದು, private financier ಆಗಿರಬಹುದು. ಈ ರೀತಿ ಎಲ್ಲಾ ಆದಾಗಲೂ ಕೂಡ ಪ್ರತಿ ದಿನ ಪ್ರತಿಯೊಂದು ಸರ್ಕಾರಕ್ಕೆ ಗೊಂದಲಗಳನ್ನು ತಂದಿರುವಂತಹದ್ದನ್ನು ನಾವು ನೋಡಿದ್ದೇವೆ. ಕೇಂದ್ರ ಸರ್ಕಾರದಲ್ಲಿ ಮತ್ತು ರಾಜ್ಯ ಸರ್ಕಾರದಲ್ಲಿ ಇರಬಹುದು, all over the Country ಈ ರೀತಿಯ ಸಮಸ್ಯೆ ಇದೆ. ರೈತರು ಎಷ್ಟು ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಈಗಾಗಲೇ ಕಾನೂನು ಇದೆ. Then, why are they committing suicide and what is the reason behind it? Whether the enforcing Authority has failed to enforce the provisions of law which is existing since 1961? ಏಕೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಅದಕ್ಕೋಸ್ಕರ ಮಾನ್ಯ ಸಚಿವರೇ ತಮಗೆ ಮತ್ತೆ ಹೇಳುತ್ತಿದ್ದೇನೆ. ಹಿರಿಯರಾದ ತಾವು ಈ ಸದನದಲ್ಲಿ ಇದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರು ಸಂಪೂರ್ಣವಾಗಿ ಅಧ್ಯಯನ ಮಾಡಿದ್ದಾರೆ ಎಂದು ಭಾವಿಸುತ್ತೇನೆ ಮತ್ತು ದಿನಾಂಕ:14-12-2018 ರಂದು ಈ ವಿಧೇಯಕವನ್ನು submit ಮಾಡಿದಾಗ ಇದರ ಪ್ರೊಸೀಡಿಂಗ್ಸ್‌ನ್ನು ತಾವು ನೋಡಿದ್ದೀರಿ ಎಂದು ಭಾವಿಸುತ್ತೇನೆ. I know that the

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

Hon'ble Minister is well aware of all the provisions and facts which I had submitted on the previous occasions. He might have gone through it. ಆದರೂ ಸಹ ನನ್ನ appeal ಇಷ್ಟೇ, because my jurisdiction is this. ಈ ರಾಜ್ಯದಲ್ಲಿ ಮತ್ತು ಈ ದೇಶದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಪ್ರತಿಯೊಂದು ರಾಜ್ಯದಲ್ಲಿಯೂ ಮತ್ತು ನಮ್ಮ ರಾಜ್ಯದಲ್ಲಿಯೂ ಕೂಡ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರೈತರ ಬದುಕನ್ನು ರಕ್ಷಣೆ ಮಾಡಬೇಕು. ಇಷ್ಟು ಇದ್ದರೂ ಕೂಡ ರೈತರ ಆತ್ಮಹತ್ಯೆಯನ್ನು ತಡೆಯಬೇಕು. ರೈತನಿಂದ ಹೆಚ್ಚಿನ ಬಡ್ಡಿಯನ್ನು ರಿಕವರಿ ಮಾಡುವ ಉದ್ದೇಶದಿಂದ ರೈತನ ಬದುಕನ್ನು ಹಾಳು ಮಾಡಬಾರದು. ರೈತನ ಆಸ್ತಿಯನ್ನು ಒತ್ತುವರಿ ಮಾಡಿಕೊಳ್ಳಬಾರದು. ರೈತನ ಆಸ್ತಿಯನ್ನು ಹರಾಜು ಹಾಕಬಾರದು. ಆ ರೈತನಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಈ ವಿಧೇಯಕವನ್ನು ತಂದಿದ್ದೇನೆಯೇ ವಿನಃ ಇದರಲ್ಲಿ ಬೇರೆ ಯಾವುದೇ ಉದ್ದೇಶ ಇಲ್ಲ. ಮತ್ತೊಂದು ಬಾರಿ ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೇ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಹೇಳುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ರೈತರ ಹೆಸರಿನಲ್ಲಿ ಈ ವಿಧೇಯಕ ಬರಬೇಕೆಂಬುದು ನನ್ನ ಮನವಿಯಾಗಿದೆ.

(ಮುಂದು)

**(198) 06/03/2020/3:00/ಎಸ್‌ಪಿಆರ್/ಬಿಎನ್‌ಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಈ ಮೊದಲೇ ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. If it pertains to Banks, we have no jurisdiction to bring law in this House or in Assembly. Money lenders ಗೆ ಅಥವಾ ಯಾರಾದರೂ ಖಾಸಗಿ ವ್ಯಕ್ತಿಗಳಿಗೆ ಒಂದು ರೀತಿಯ ಕಾನೂನನ್ನು ಜಾರಿಗೆ ತರಬೇಕೆಂದರೆ, ಇವತ್ತಿನ ದಿವಸ ರಾಜ್ಯದಲ್ಲಿ ಅಂತಹ ಕಾನೂನು ಈಗಾಗಲೇ ಜಾರಿಯಲ್ಲಿದೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಅಂಶಕ್ಕೆ ಸಂಬಂಧಪಟ್ಟಂತೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

The Karnataka Money-Lenders Act, 1961 ರ ಸೆಕ್ಷನ್ 26 ರಡಿ ಅವಕಾಶವಿದೆ. ಮಾನ್ಯ ಸದಸ್ಯರು ಯಾವ ಉದ್ದೇಶವನ್ನಿಟ್ಟುಕೊಂಡು ಈ ವಿಧೇಯಕವನ್ನು ತಂದಿದ್ದಾರೆ; ಆದರೆ, ನಾವು ಈಗಾಗಲೇ ಈ ವಿಚಾರದಲ್ಲಿ ಕಾನೂನನ್ನು ಜಾರಿಗೆ ತಂದಿದ್ದೇವೆ. Why the Member is confining and restricting. ಸಾಲಗಾರ ಎಂದರೆ, ರೈತ, ಬೀದಿಯಲ್ಲಿರುವವರು ಹಾಗೂ ಇತರರೂ ಸಹ ಸಾಲಗಾರರಾಗುತ್ತಾರೆ. Anybody who borrows from a lender can claim this and can approach Court ಎನ್ನುವಂತಹ ಕಾನೂನು ಇದ್ದಾಗ, ಮಾನ್ಯ ಸದಸ್ಯರು 'ರೈತರು ಮಾತ್ರವೇ' ಎಂದು ಪ್ರತ್ಯೇಕವಾಗಿ ಹೇಳುತ್ತಾರೆ. ಒಂದು ವೇಳೆ ರೈತರು ಸಾಲ ತೆಗೆದುಕೊಂಡಿದ್ದರೆ, ಈಗ ಅವರೂ ಸಹ ನ್ಯಾಯಾಲಯದ ಮೊರೆ ಹೋಗಬಹುದು. If anybody borrows loan from a lender, then he is empowered and he can approach Court. ಅವನಿಗೆ ಅಸಲು ಹಣಕ್ಕಿಂತ ಹೆಚ್ಚು ಬಡ್ಡಿಯನ್ನು ವಿಧಿಸಿದ್ದಾರೆ ಎಂದು, The Karnataka Money-Lenders Act- 1961 ರ ಸೆಕ್ಷನ್ 26 ರಡಿ ನ್ಯಾಯಾಲಯದ ಮೊರೆ ಹೋಗಬಹುದು. He can ask the Court to enforce the law. ಕಾನೂನನ್ನು ಜಾರಿಗೊಳಿಸಿ ಎಂದು ಕೇಳದೇ ರೈತ ಆತ್ಮಹತ್ಯೆ ಮಾಡಿಕೊಂಡರೆ, what the Government can do sir? ಸಾಲ ತೆಗೆದುಕೊಂಡಿರುವವರು ನಮ್ಮ ಹತ್ತಿರ ಬರಬಹುದು ಅಥವಾ ನ್ಯಾಯಾಲಯಕ್ಕೆ ಹೋಗಬಹುದು. These are the things, ನಾನು ತೆಗೆದುಕೊಂಡಿರುವ ಸಾಲಕ್ಕೆ ಇಂತಿಷ್ಟು ಬಡ್ಡಿಯನ್ನು ವಿಧಿಸಿದ್ದಾರೆ, this is against law and against the provisions of the Karnataka Prohibition of Charging Exorbitant Interest Act 2004 or the Karnataka Money-Lenders Act – 1961 ಎಂದು ಕೇಳಿ, ಕಾನೂನನ್ನು ಜಾರಿಗೊಳಿಸಿ ಎಂದು ಸರ್ಕಾರವನ್ನು ಕೇಳಿದರೆ, I have no objection. But, there is no need to confine sir. ಯಾವುದೇ ಕಾರಣಕ್ಕೂ restrict ಮಾಡಬೇಡಿ. ಕಾಯ್ದೆಯಲ್ಲಿ 'ಯಾವುದೇ ಸಾಲಗಾರ' ಎಂಬುದಾಗಿ ತಿಳಿಸಲಾಗಿದೆ. ಆದರೆ ಅದನ್ನು ಮಾನ್ಯ ಸದಸ್ಯರು 'ರೈತ' ಎಂದು ಏಕೆ ಕರೆಯುತ್ತಾರೆ. Let everybody enjoy the facility. ಯಾರಾದರೂ ಸರಿ ಸಾಲ ತೆಗೆದುಕೊಂಡಿರುವವರ ಹಕ್ಕನ್ನು ಆ ಕಾಯ್ದೆಯಲ್ಲಿ ಕೇವಲ 'ರೈತನಿಗೆ' ಎಂದು ಮಾಡುವುದು ಎಷ್ಟರ ಮಟ್ಟಿಗೆ ಸರಿ? ಬೇರೆ ಕಾಯ್ದೆಯಲ್ಲಿ ರೈತರ ಬಗ್ಗೆ ಮಾತನಾಡೋಣ. ಮಾನ್ಯ ಸದಸ್ಯರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಯ್ದೆಯ ವ್ಯಾಪ್ತಿಯನ್ನು ಏಕೆ ಕಿರಿದು ಮಾಡಲು ಹೊರಟಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. The Act is clear. Anybody who is a borrower from a lender is empowered under the law. He can approach Court and he can give a complaint. ಯಾರಾದರೂ ದೂರು ನೀಡಿ, ಕಾಯ್ದೆಯನ್ನು ಅಂದರೆ, The Karnataka Money-Lenders Act, 1961 and the Karnataka Prohibition of Charging Exorbitant Interest Act 2004, ಎರಡೂ ರೀತಿಯ ಕಾಯ್ದೆಗಳನ್ನು ಜಾರಿಗೊಳಿಸಿದರೆ, ಕಾಯ್ದೆಯಲ್ಲಿ ಇದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. The Member is very much aware of all the Acts. ಕಾಯ್ದೆಯನ್ನು ಜಾರಿಗೊಳಿಸಿ ಎಂದು ಕೇಳುವುದನ್ನು ಬಿಟ್ಟರೆ, I don't think one more law is required for this. Even, the amendment is also not required. ರೈತ ಎಂಬುದಾಗಿ ಮಾತ್ರವೇ ಪರಿಗಣಿಸಿ ಹಾಲಿ ಇರುವ ಕಾನೂನನ್ನು ನಾವು ಸಂಕುಚಿತ ಮಾಡಲು ಹೊರಟಿದ್ದೇವೆ. ಕಾನೂನಿನಲ್ಲಿರುವ ಅವಕಾಶಗಳನ್ನು ಎಲ್ಲರೂ ಸಹ ಉಪಯೋಗಿಸಿಕೊಳ್ಳಲಿ. When it is for all borrowers, why the Member is confining it to only farmers? ರೈತರು ಮಾತ್ರವಲ್ಲದೇ ಬೇರೆ ಅಮಾಯಕರೂ ಸಹ ಸಾಲವನ್ನು ಪಡೆದುಕೊಂಡಿರುತ್ತಾರೆ. ಬೇರೆಯವರು ಹೊಲವನ್ನು ಅಡವಿಡದೇ, ಒಡವೆ ಹಾಗೂ ಇನ್ನಿತರೆ ವಸ್ತುಗಳನ್ನು ಅಡವಿಟ್ಟಿರಬಹುದು. Let him also enjoy the facility and provisions of law. ಮಾನ್ಯ ಸದಸ್ಯರು ದಯಮಾಡಿ ಈ ವಿಧೇಯಕವನ್ನು ಕೈಬಿಡಬೇಕೆಂದು ನಾನು ಕೋರುತ್ತೇನೆ. The Act is very much wide. Let the Member don't try to restrict the provisions of the Act which is in wider stretch. That is my request.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, I can agree with the valuable suggestions of the Hon'ble Minister to a certain extent. My intention in bringing the said amendments is not to narrow its sense. ರೈತರಿಗೋಸ್ಕರ ಸೀಮಿತಗೊಳಿಸಿ ಎನ್ನುವ ಉದ್ದೇಶಕ್ಕಾಗಿ ಅಲ್ಲ. ರೈತಾಪಿ ಜನ ತಮ್ಮ ಭೂಮಿಯನ್ನು ಅಡವಿಟ್ಟು ಅದರ ಮೇಲೆ ಪಡೆದಿರುವ ಸಾಲದ ಮೇಲೆ ಬೇರೆ ಯಾವುದೇ ಡಿಕ್ರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಥವಾ ಆದೇಶ ಅಥವಾ recovery proceedings ಗಳನ್ನು ತರಬಾರದು ಎನ್ನುವ ಉದ್ದೇಶದಿಂದ ಸೆಕ್ಷನ್ 28 ರಲ್ಲಿದ್ದರೂ ಸಹ ಕೃಷಿಕ ತನ್ನ ಭೂಮಿಯ ಮೇಲೆ ತೆಗೆದುಕೊಂಡ ಸಾಲಕ್ಕೋಸ್ಕರವಾಗಿ ಆಗಬೇಕೆನ್ನುವುದು ನನ್ನ ಉದ್ದೇಶವಾಗಿದೆ. ಆದರೆ, ...

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಂದು ನಿಮಿಷ ಯೀಲ್ಡ್ ಆಗಬೇಕು. ಋಣ ಪರಿಹಾರ ಅಧಿನಿಯಮ–2018 ರಲ್ಲಿ **“ಕರ್ನಾಟಕ ರಾಜ್ಯದಲ್ಲಿರುವ ಸಣ್ಣ ರೈತರು, ಭೂ ರಹಿತ ಕೃಷಿ ಕಾರ್ಮಿಕರು ಮತ್ತು ದುರ್ಬಲ ವರ್ಗದ ಜನರಿಗೆ ಋಣದಿಂದ ಪರಿಹಾರ ಒದಗಿಸಲು ಇದು ಅಧಿನಿಯಮವಾಗಿದೆ”** ಎಂಬುದಾಗಿ ತಿಳಿಸಲಾಗಿದೆ. ಇದರಲ್ಲಿ ರೈತರನ್ನೂ ಸೇರಿಸಿ ಬಹಳ ಸ್ಪಷ್ಟವಾಗಿ ತಿಳಿಸಲಾಗಿದೆ. We have not left the agricultural community out of the purview of this Act. They are included sir. Why the Member is seeking the House to formulate one more law? On behalf of the Government, I request the Member to withdraw the Bill. Already there is an existing law.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಹೇಳುವುದನ್ನು ಸಹ ದಯಮಾಡಿ ಕೇಳಬೇಕು. ಮಾನ್ಯ ಸಚಿವರು ಪ್ರಸ್ತಾಪಿಸಿರುವುದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ‘any loan’ ಎನ್ನುವ ವ್ಯಾಖ್ಯಾನ ಬಂದಾಗ ಎಲ್ಲರೂ ತೆಗೆದುಕೊಂಡಿರುವ ಸಾಲ ಬೇರೆ. ಎಲ್ಲರೂ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ನಾವು ಈ ಸದನದಲ್ಲಿ ವಾದ ಮಾಡುವುದಿಲ್ಲ. ಆದರೆ, ಪ್ರತಿ ಸಲ, ಪ್ರತಿ ವರ್ಷ, ಪ್ರತಿ ಬಾರಿಯೂ ನಾವು ‘ಸಾಲಕ್ಕಾಗಿ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ’ ಎನ್ನುವ ಉದ್ದೇಶವಿರುವುದರಿಂದ ನಾನು ಈ ವಿಧೇಯಕದಲ್ಲಿ ಇನ್ನೂ ಹೆಚ್ಚಿಗೆ ಹೇಳುತ್ತೇನೆ, ಕಾಯ್ದೆಯ ಕಲಂ 13ನ್ನು ನಾನು ನೋಡಿದ್ದೇನೆ; ಇದಕ್ಕೆ ಪ್ರತಿರೋಧ ಮಾಡುವುದಿಲ್ಲ. ಬೇರೆಯವರು ಆತ್ಮಹತ್ಯೆ ಮಾಡಿಕೊಂಡಿರುವುದು ಲಕ್ಷಕ್ಕೆ ಒಬ್ಬರು ಇರಬಹುದು. ಆದರೆ ರೈತಾಪಿ ವರ್ಗದವರ ಪ್ರಕರಣಗಳು ಜಾಸ್ತಿ ಇವೆ. ಹೀಗಾಗಿ ರೈತರು ತಮ್ಮ ಜಮೀನಿನ ಮೇಲೆ ಪಡೆದುಕೊಂಡಿರುವ ಸಾಲದ ಉದ್ದೇಶಕ್ಕಾಗಿ ನಾವು ಈ ವಿಧೇಯಕವನ್ನು ಜಾರಿಗೆ ತರಬೇಕೆನ್ನುವುದು ನನ್ನ ಮನವಿಯಾಗಿದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, enacting law is the Business of the House. ಕಾಯ್ದೆಯನ್ನು ಜಾರಿಗೊಳಿಸಿ ಎಂದು ಸಾಲಗಾರ ಕೇಳದೇ ಆತ್ಮಹತ್ಯೆ ಮಾಡಿಕೊಂಡರೆ, ಸರ್ಕಾರ ಅಥವಾ ವಿರೋಧ ಪಕ್ಷದವರು ಹೇಗೆ ಸಹಾಯ ಮಾಡುವುದಕ್ಕಾಗುತ್ತದೆ?

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, that is true.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, there is already provision in the existing law. Let them seek remedy under existing provisions of law. No new law is required for the State. That is the opinion of the Government.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಶರಣಪ್ಪ ಮಟ್ಟೂರರವರು ಖಾಸಗಿ ಸದಸ್ಯರ ವಿಧೇಯಕವನ್ನು ರೈತರ ಪರವಾಗಿ ಜಾರಿಗೆ ತರಬೇಕು, ಅಸಲಿಗಿಂತ ಹೆಚ್ಚು ಬಡ್ಡಿಯನ್ನು ಪಾವತಿಸಿರುವಂತಹ ಪ್ರಕರಣಗಳನ್ನು ನಿರ್ಬಂಧಿಸಬೇಕೆಂದು ಪ್ರಸ್ತಾಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಪ್ರಸ್ತುತ ವಿಧೇಯಕವನ್ನು ಮಂಡಿಸಿರಬಹುದೆಂದು ನಾನು ಭಾವಿಸುತ್ತೇನೆ. ಈ ವಿಷಯದಲ್ಲಿ ಈಗಾಗಲೇ ಮಾನ್ಯ ಸಚಿವರು ಸಾಕಷ್ಟು ಮಾಹಿತಿಗಳನ್ನು ನೀಡಿದ್ದಾರೆ. ಇದೇ ವಿಚಾರದಲ್ಲಿ ಉದಾಹರಣೆಯೊಂದನ್ನು ನಾನು ಕೊಡಲಿಚ್ಛಿಸುತ್ತೇನೆ. ತಾವೂ ಸಹ ಪ್ರಸ್ತುತ ವಿಧೇಯಕದ ಬಗ್ಗೆ ಹಲವಾರು ಬಾರಿ ಪ್ರಸ್ತಾಪ ಮಾಡಿದ್ದೀರಿ. ಈ ಹಿಂದೆ ರಾಜ್ಯ ಸರ್ಕಾರವು 'ದಾಮ್ ದುಪ್ಪಟ್ಟು' ಎಂಬ ಯೋಜನೆಯನ್ನು ಜಾರಿಗೊಳಿಸಿತ್ತು. KSCARD (Karnataka State Co-operative Agriculture and Rural Development Bank) ಬ್ಯಾಂಕುಗಳಲ್ಲಿ, PICARD (Primary Co-operative Agriculture and Rural Development Bank) ಬ್ಯಾಂಕುಗಳ ವತಿಯಿಂದ ರೈತರು ಪಡೆದ ಅಸಲು ಸಾಲಕ್ಕಿಂತ ಹೆಚ್ಚಿನ ಬಡ್ಡಿಯನ್ನೇ ಪಾವತಿಸಿದ್ದರೂ ಕೂಡ ಆ ಸಾಲಗಳನ್ನು ತೀರಿಸಿರುವ ಬಗ್ಗೆ ತೀರುವಳಿ ದೃಢೀಕರಣ ಪತ್ರವನ್ನು ಕೊಡುತ್ತಿರಲಿಲ್ಲ. ಅದಕ್ಕಾಗಿ ಸರ್ಕಾರವು ಒಮ್ಮೆ 'ದಾಮ್ ದುಪ್ಪಟ್ಟು' ಯೋಜನೆಯನ್ನು ನಿಗದಿತ ಕಾಲದ ಮಿತಿಗೆ ನಿಗದಿಪಡಿಸಿತ್ತು ಹಾಗೂ ಈ ಯೋಜನೆಯಲ್ಲಿ ಎಷ್ಟು ಮಂದಿ ಫಲಾನುಭವಿಗಳು ಒಳಪಡುತ್ತಾರೆ ಎಂಬ ಬಗ್ಗೆ ತೀರ್ಮಾನವನ್ನು ಮಾಡಲಾಗಿತ್ತು. ಇಂತಹ ಯೋಜನೆಯನ್ನು 'ದಾಮ್ ದುಪ್ಪಟ್ಟು' ಯೋಜನೆ ಎಂಬುದಾಗಿ ಕರೆಯಲಾಯಿತು. ಸರ್ಕಾರ ಯಾವ ನಿಗದಿತ ಕಾಲಮಿತಿಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಗದಿಪಡಿಸಿತ್ತೋ, ಆ ನಿಗದಿತ ಅವಧಿಯೊಳಗೆ ಸರ್ಕಾರ ಬ್ಯಾಂಕುಗಳಿಗೆ ಹಣವನ್ನು ಸಂದಾಯ ಮಾಡಲಿಲ್ಲ. ಈಗ ನಮ್ಮ ನಬಾರ್ಡ್ ಸಂಸ್ಥೆಯು ಮುಂದುವರೆದ ಬಡ್ಡಿಯನ್ನು ಪಾವತಿಸಬೇಕು. ದಾಮ್ ದುಪ್ಪಟ್ಟು ಯೋಜನೆಯಲ್ಲಿ ಸರ್ಕಾರವು ಮಾಡಿರುವ ಸಾಲ ಮನ್ನಾಕ್ಕೆ ಮುಂದುವರೆದ ಅವಧಿಗೆ ಬಡ್ಡಿಯನ್ನು ಕೊಡಬೇಕೆನ್ನುವ ದೃಷ್ಟಿಯಿಂದ ಇವತ್ತಿನ ದಿವಸ ಸರ್ಕಾರ ಇನ್ನೂ ಸುಮಾರು 53 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಕೆಲವು ಪ್ರಕರಣಗಳಲ್ಲಿ 'ದಾಮ್ ದುಪ್ಪಟ್ಟು' ಯೋಜನೆಯ ಫಲಾನುಭವಿಗಳು ಯಾರಿದ್ದರೋ ಇವರಿಗೆ ಇನ್ನೂ ಕೂಡ ಅವರ ಸಾಲದ ಬಾಬ್ತಿಗೆ ಕೊಟ್ಟಿದ್ದ ದರಖಾಸ್ತುಗಳು ವಾಪಸ್ಸು ಕೊಟ್ಟಿಲ್ಲ ಹಾಗೂ ಅವರಿಗೆ ತಮ್ಮ ಜಮೀನಿನ ಪತ್ರದ ಆಧಾರದ ಮೇಲೆ ಹೊಸ ಸಾಲಗಳು ಸಹ ಸಿಗುತ್ತಿಲ್ಲ. ಇತ್ತೀಚೆಗೆ ನ್ಯಾಯಾಲಯದ ಮೊರೆ ಹೋದ ಸಂದರ್ಭದಲ್ಲಿ ನ್ಯಾಯಾಲಯದಲ್ಲಿ KSCARD ಹಾಗೂ PICARD ಬ್ಯಾಂಕ್‌ಗಳು ಹಾಗೂ ರೈತರ ಪರವಾಗಿ ತೀರ್ಮಾನವಾಗಿದ್ದರೂ ಸಹ ರಾಜ್ಯ ಸರ್ಕಾರವು ಸದರಿ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದೆ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸುಮಾರು 400 ಕ್ಕೂ ಹೆಚ್ಚು ಕೋಟಿ ರೂಪಾಯಿಗಳಷ್ಟು ರೈತರ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯ ದಿವಸ ಹೇಳಿದ್ದಾರೆ. ಇದನ್ನು ನಾವು ಬಹಳವಾಗಿ ಸ್ವಾಗತಿಸುತ್ತೇವೆ. ಆದರೆ, 'ದಾಮ್ ದುಪ್ಪಟ್ಟು' ಯೋಜನೆಯಲ್ಲಿ ಕಳೆದ ಒಂದು ದಶಕದಿಂದ ಸರ್ಕಾರವು ಬಾಕಿಯಿರುವ 53 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಇದರಿಂದಾಗಿ ರೈತರು ಬಹಳ ಸಂಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಇದುವರೆವಿಗೂ ಸಹ ಅವರು ಬದಲಿ ಸಾಲಗಳನ್ನು ತೆಗೆದುಕೊಳ್ಳಲು ಆಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಶರಣಪ್ಪ ಮಟ್ಟೂರರವರು ವಿಶೇಷವಾಗಿ... ಇಲ್ಲಿ the Karnataka Money-Lenders Act, 1961, ಎಲ್ಲಾ ಕಾಯ್ದೆ ಕಾನೂನುಗಳಲ್ಲಿ ಅವಕಾಶವಿದೆ ಹಾಗೂ ಈಗಾಗಲೇ provision ಮಾಡಿಕೊಟ್ಟಿದ್ದಾಗಿದ್ದರೂ ಸಹ ಎಲ್ಲಿಯೋ ಒಂದು ಕಡೆ ರೈತ ಸಮುದಾಯದವರಿಗೆ ವಿಶೇಷವಾದ ವಿಧೇಯಕವು ಜಾರಿಗೆ ಬರಲಿ ಎನ್ನುವ ಹಿನ್ನೆಲೆಯಲ್ಲಿ ಪ್ರಸ್ತುತ ವಿಧೇಯಕವನ್ನು ಪ್ರಸ್ತಾಪಿಸಿರಬಹುದು. ನಮ್ಮ ರಾಜ್ಯ ಸರ್ಕಾರವೇ ಈ ಹಿಂದೆ ಘೋಷಣೆಯನ್ನು ಮಾಡಿದ್ದರೂ ಸಹ ಸಮಸ್ಯೆಗೆ ಇನ್ನೂ ಪರಿಹಾರ ದೊರೆತಿಲ್ಲ; ಹಾಗೂ ವಿಚಾರವು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. ಹಾಲಿ ಇರುವ ಕಾಯ್ದೆಗಳಲ್ಲಿ ರೈತರಿಗೆ provision ಇದೆ ಎಂದು ರಾಜ್ಯ ಸರ್ಕಾರವು ಹೇಳುತ್ತಿದೆ. ಆದರೆ ಅದೇ ರಾಜ್ಯ ಸರ್ಕಾರವು ನ್ಯಾಯಾಲಯವು ರೈತರ ಪರವಾಗಿ ನೀಡಿದ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದೆ. ಸರ್ಕಾರವು ಜಾರಿಗೆ ತಂದಿರುವ ಯೋಜನೆಯ ಪರವಾಗಿ ಹಿಂಬಾಕಿಯನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದೆ. ಇವತ್ತಿನ ದಿವಸ PICARD ಹಾಗೂ KSCARD ಬ್ಯಾಂಕುಗಳು ನಷ್ಟದಲ್ಲಿವೆ. ಹೀಗಾಗಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಹಿಂದಿನ ಬಾಕಿಯನ್ನು ತುಂಬುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳಿ ಕಾನೂನಿಗೆ ವಿರುದ್ಧವಾಗಿ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದೆ. ಈ ವಿಷಯದಲ್ಲಿ ಸರ್ಕಾರವು ದಯಮಾಡಿ ಗಂಭೀರವಾದ ಚಿಂತನೆಯನ್ನು ಮಾಡಬೇಕು. ಮಾನ್ಯ ಸಚಿವರು ಬಹಳ ಅರ್ಥಪೂರ್ಣವಾದ ಉತ್ತರವನ್ನು ನೀಡಿದ್ದಾರೆ.

**(ಮುಂದು)**

(199)/6-3-2020/3-10/ಎಲ್ಎಂ/ಕೆಎಸ್

**ಶ್ರೀ ಮರಿತಿಬ್ಬೇಗೌಡ**(ಮುಂದು):-

ಈಗಾಗಲೇ ನಾವು ಕಾನೂನಿನಲ್ಲಿ prescribe ಮಾಡಿದ್ದೇವೆ. ಯಾವುದೇ ಸಾಲವನ್ನು ಪಡೆದಿರಲಿ ಅವರೆಲ್ಲರಿಗೂ ಕಾನೂನಿನಲ್ಲಿ ಅವಕಾಶವಿದೆ, ಕ್ಲೇಮ್ ಮಾಡಬಹುದು ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ಶ್ರೀ ಶರಣಪ್ಪ ಮಟ್ಟೂರ ಅವರು ರೈತರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಈ ವಿಶೇಷವಾಗಿ ಖಾಸಗಿ ವಿಧೇಯಕವನ್ನು ತಂದಿದ್ದಾರೆ ಎಂದು ನಾನು ಭಾವಿಸುತ್ತೇನೆ. ಈ ವಿಧೇಯಕ ತರುವುದರಿಂದ ಬೇರೆಯವರಿಗೆ ತೊಂದರೆಯಾಗುತ್ತದೆ ಎನ್ನುವುದಾದರೆ ಸರ್ಕಾರ ಈ ವಿಧೇಯಕವನ್ನು ಒಪ್ಪುವುದು ಬೇಡ. ಒಂದು ವೇಳೆ ಈ ವಿಧೇಯಕವನ್ನು ತರಲು ಅವಕಾಶವಿದ್ದರೆ, ರೈತರಿಗೆ ಇದರಿಂದ ಉಪಯೋಗವಾಗುತ್ತದೆ ಎನ್ನುವುದಾದರೆ ದಯವಿಟ್ಟು ತರಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಿಗೆ ನಾನು convince ಮಾಡಿದ್ದೇನೆ ಎಂದು ತಿಳಿದುಕೊಂಡಿದ್ದೇನೆ. ನೇರವಾಗಿ loans refinanced by Reserve Bank of India or Loans refinanced by NABARD or by nationalized banks, ನಾವು ಆ ರೀತಿ ಮಾಡಲು ಆಗುವುದಿಲ್ಲ. ಇದು ಸ್ಪಷ್ಟವಾದ ವಿಚಾರ. ಮಾನ್ಯ ಶರಣಪ್ಪ ಮಟ್ಟೂರ ಅವರು ಈ ವಿಚಾರದಲ್ಲಿ ಕ್ಲಿಯರ್ ಆಗಿದ್ದಾರೆ. Hon'ble member has not touched that area. ಇಲ್ಲಿ lenders ಯಾರು ಎನ್ನುವುದನ್ನು define ಮಾಡಿದ್ದೇವೆ. KSCORD (Karnataka State Co-operative Agriculture and Rural Development Bank Ltd.) ಅಲ್ಲ. ಬೇರೆ, Nationalized Banks ಅಲ್ಲ. Banking system ಬೇರೆ money lending system ಬೇರೆ. Money Lending ಅನ್ನು regulate ಮಾಡುವುದು ಹಾಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

money lenders ಯಾರು ಅಂತ identify ಮಾಡುವುದು ಹಾಗೂ register ಮಾಡುವುದು ಮತ್ತು ಅವರ ಮೇಲೆ ಕ್ರಮ ತೆಗೆದುಕೊಳ್ಳಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ, we can enact to that extent and that is our jurisdiction. Banks ಗಳದ್ದು ಏನಾಗಿದೆ ಎಂದರೆ, loans refinanced by NABARD or refinanced by Reserve Bank of India ಗಳದ್ದು ನಮಗೆ ಅಧಿಕಾರ ಬರುವುದಿಲ್ಲ Union List ನಲ್ಲಿ ಇರುವ subject ಆಗಿರುವುದರಿಂದ ನಾವು ಏನು ಮಾಡಿದರೂ ಪ್ರಯೋಜನಕ್ಕೆ ಬರುವುದಿಲ್ಲ ಎನ್ನುವುದು ನನ್ನ ಭಾವನೆ. ಈಗ ಮಾನ್ಯ ಸದಸ್ಯರು ಹೇಳಿರುವ ಸಮಸ್ಯೆ ಬಗ್ಗೆ ಕ್ಯಾಬಿನೆಟ್‌ನಲ್ಲಿ ನಾನು ಮತ್ತು ಶ್ರೀ ಬಸವರಾಜ ಬೊಮ್ಮಾಯಿಯವರು ಹಠಮಾಡಿ ಲ್ಯಾಂಡ್ ಬ್ಯಾಂಕ್‌ನ ದೀರ್ಘಾವಧಿ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿಬಡ್ಡಿ ಬಗ್ಗೆ ಮತ್ತು ರೈತರು ತಂದಿರುವ ಟ್ರಾಕ್ಟರ್ ಹರಾಜಿಗೆ ಬರುತ್ತಿದೆ ಎನ್ನುವುದು ತಿಳಿದ ಮೇಲೆ, ನಾವೇ ಕುಳಿತುಕೊಂಡು ಇದಕ್ಕೆ ಒಂದು ಇತಿಶ್ರೀ ಹಾಡಬೇಕೆಂದು, ಈ ಬಡ್ಡಿ ಸುಸ್ತಿಬಡ್ಡಿಯಿಂದ ರೈತರು ಒಂದೇ ಸಾರಿ ತಲೆತೊಳೆದುಕೊಂಡು ಬಿಡಲಿ ಎಂದು ಸರ್ಕಾರದಿಂದ subsidize ಮಾಡಿ ಆ ಸಾಲವನ್ನು ಕ್ಲೀಯರ್ ಮಾಡಿಕೊಳ್ಳಲು ರೈತರಿಗೆ ಅವಕಾಶ ಮಾಡಿಕೊಟ್ಟಿದ್ದೇವೆ. That is not under Law. We are subsidizing it. ತಾವು ಹೇಳುವ ದುಪ್ಪಟ್ಟು ಯೋಜನೆಯಲ್ಲಿ 50 ಕೋಟಿ ರೂ.ಗಳ ಸಾಲವನ್ನು subsidize ಮಾಡಬೇಕು ಎಂದರೆ, I will move with Government. ನಾನು ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಮಾತನಾಡುತ್ತೇನೆ. ಅವತ್ತು ಏನಾದರೂ ಮಾತುಕೊಟ್ಟು ಸರ್ಕಾರ ಕಮಿಟ್ ಆಗಿದ್ದರೆ ಬ್ಯಾಂಕ್‌ಗೆ ಅದನ್ನು ಸೇರಿಸಿ ಕೊಡಿ ಎಂದು ಹೇಳುತ್ತೇನೆ. ಆದರೆ ಈ ಕಾನೂನಿನಲ್ಲಿ, this is enforceable in court of Law. ಸೆಕ್ಷನ್ 26 ಇದು ಯಾರಾದರೂ borrower ಇಂತವನು ಅಸಲಿಗಿಂತ ಬಡ್ಡಿ ಜಾಸ್ತಿ ಸಂಗ್ರಹ ಮಾಡುತ್ತಿದ್ದಾನೆ ಎಂದರೆ, ಇದು ಕಾನೂನು ಬಾಹಿರ ಎಂದು ಕೋರ್ಟ್‌ಗೆ ಹೋಗಿ ಕ್ರಮ ಜರುಗಿಸಲು ರೈತರಿಗೆಂದೇ specific ಆಗಿ ಈ ಕಾನೂನನ್ನು ಮಾಡಿದ್ದಾರೆ. ಇದರಲ್ಲಿ ರೈತನು ಸೇರುತ್ತಾನೆ ಎನ್ನುವುದು ನಮ್ಮ ವಾದ.

**ಶ್ರೀ ಮರಿತಿಬ್ಬೇಗೌಡ:-** KSCARD, ಅಥವಾ ಪೀಕಾರ್ಡ್, ರಾಷ್ಟ್ರೀಕೃತ ಅಥವಾ ನಬಾರ್ಡ್ ಬ್ಯಾಂಕ್ ಇರಬಹುದು. ಇದಕ್ಕೆ ಅನ್ವಯವಾಗುವುದಿಲ್ಲ. ಭೂ ಅಭಿವೃದ್ಧಿಗೆ ರೈತರು ಇವತ್ತು ಸಾಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳುತ್ತಿರುವುದು KSCARD, ನಬಾರ್ಡ್ ಬ್ಯಾಂಕ್‌ನಿಂದ. ಅದಕ್ಕೆ ಅನ್ವಯವಾಗುವಂತೆ ಈ ಕಾನೂನನ್ನು ತೆಗೆದುಕೊಂಡು ಬನ್ನಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಗಳೆ, ಇದಕ್ಕೆ ಅನ್ವಯವಾಗುವಂತೆ ಶಾಸನ ಮಾಡಲು ಈ ಸಭೆಗೆ ಅಧಿಕಾರವಿಲ್ಲ. We have no jurisdiction. It is subject of Union List. Hon'ble member Sri. Sharanappa Mattur is aware of it. ಅವರು ಅದನ್ನು ಟಚ್ ಮಾಡಲಿಲ್ಲ. ನಾನು ಅವರನ್ನು ಗಮನಿಸುತ್ತಿದ್ದೆ, ಅವರು ಅದನ್ನು ಟಚ್ ಮಾಡಲಿಲ್ಲ. ಈ ಸಭೆಗೆ ಶಾಸನ ಮಾಡಲು ಅಧಿಕಾರವಿಲ್ಲ. ನಾನು ಕೈ ಮುಗಿದು ಕೇಳಿಕೊಳ್ಳುತ್ತೇನೆ, ದಯಮಾಡಿ withdraw ಮಾಡಿಕೊಳ್ಳಿ.

**ಸಭಾಪತಿಯವರು:-** ಈಗ ಸಭೆಯು ಮುಕ್ತಾಯಗಾಗಿ ಸೋಮವಾರ ಬೆಳಿಗ್ಗೆ 11-00 ಗಂಟೆಗೆ ಸೇರುವುದು.

**(ಸದನವು ಮಧ್ಯಾಹ್ನ 3 ಗಂಟೆ 14 ನಿಮಿಷಕ್ಕೆ ಮುಕ್ತಾಯಗೊಂಡು, ಪುನ: ದಿನಾಂಕ: 9ನೇ ಮಾರ್ಚ್ ಮಾಹೆ 2020ರ ಸೋಮವಾರದಂದು ಬೆಳಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

~~~~~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~